"ಬೆಂಗಳೂರು ಗ್ರಾಮೀಣ ಜನರ ಭಾಷೆಯ ಸ್ವರೂಪ"

(ಬೆಂಗಳೂರು ಉತ್ತರ ತಾಲ್ಲೂಕನ್ನು ಅನುಲಕ್ಷಿಸಿ)

ಬೆಂಗಳೂರು ವಿಶ್ವವಿದ್ಯಾಲಯ ಪಿಎಚ್.ಡಿ ಪದವಿಗಾಗಿ ಸಲ್ಲಿಸಲಾದ
ಮಹಾಪ್ರಬಂಧ

ಸಂಶೋಧಕರು

ದೇವರಾಜು ಎಂ

ಮಾರ್ಗದರ್ಶಕರು

ಡಾ. ಎಚ್ ಶಶಿಕಲಾ
ಸಹಾಯಕ ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ
ಬೆಂಗಳೂರು ೫೬೦೦೫೬

ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ
ಬೆಂಗಳೂರು ೫೬೦೦೫೬
೨೦೧೯

ದೃಢೀಕರಣ ಪತ್ರ

“ಬೆಂಗಳೂರು ಗ್ರಾಮೀಣ ಜನರ ಭಾಷೆಯ ಸ್ವರೂಪ” (ಬೆಂಗಳೂರು ಉತ್ತರ ತಾಲ್ಲೂಕನ್ನು ಅನುಲಕ್ಷಿಸಿ) ಎಂಬ ವಿಷಯವನ್ನು ಕುರಿತಾದ ಸಂಶೋಧನಾ ಮಹಾಪ್ರಬಂಧವನ್ನು ಬೆಂಗಳೂರು ವಿಶ್ವವಿದ್ಯಾಲಯದ ಪಿಎಚ್.ಡಿ ಪದವಿಗಾಗಿ **ಶ್ರೀ ದೇವರಾಜು ಎಂ** ಅವರು ನನ್ನ ಮಾರ್ಗದರ್ಶನದಲ್ಲಿ ಸ್ವತಂತ್ರ ಅಧ್ಯಯನದ ಮೂಲಕ ಸಿದ್ದಪಡಿಸಿದ್ದಾರೆ. ಈ ಮಹಾಪ್ರಬಂಧವನ್ನು ಮೊದಲು ಯಾವುದೇ ವಿಶ್ವವಿದ್ಯಾಲಯದ ಪದವಿಗೆ ಅಥವಾ ಪ್ರಕಟಣೆಗಾಗಿ ಸಲ್ಲಿಸಿಲ್ಲವೆಂದು ನಾನು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಬೆಂಗಳೂರು

ದಿನಾಂಕ :

ಡಾ. ಎಚ್ ಶಶಿಕಲಾ

ಸಹಾಯಕ ಪ್ರಾಧ್ಯಾಪಕರು

ಕನ್ನಡ ಅಧ್ಯಯನ ಕೇಂದ್ರ

ಬೆಂಗಳೂರು ವಿಶ್ವವಿದ್ಯಾಲಯ

ಜ್ಞಾನಭಾರತಿ

ಬೆಂಗಳೂರು ೫೬೦೦೫೬

ಪ್ರಮಾಣ ಪತ್ರ

"ಬೆಂಗಳೂರು ಗ್ರಾಮೀಣ ಜನರ ಭಾಷೆಯ ಸ್ವರೂಪ" (ಬೆಂಗಳೂರು ಉತ್ತರ ತಾಲ್ಲೂಕನ್ನು ಅನುಲಕ್ಷಿಸಿ) ಎಂಬ ವಿಷಯವನ್ನು ಕುರಿತಾದ ಸಂಶೋಧನಾ ಮಹಾಪ್ರಬಂಧವನ್ನು **ಡಾ. ಎಚ್ ಶಶಿಕಲಾ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸುತ್ತಿದ್ದೇನೆ. ಈ ಮಹಾಪ್ರಬಂಧವನ್ನು ಮೊದಲು ಯಾವುದೇ ವಿಶ್ವವಿದ್ಯಾಲಯದ ಪದವಿಗಾಗಿ ಅಥವಾ ಪ್ರಕಟಣೆಗಾಗಿ ಸಲ್ಲಿಸಿಲ್ಲವೆಂದು ನಾನು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ : ಬೆಂಗಳೂರು **ದೇವರಾಜು ಎಂ**

ದಿನಾಂಕ : (ಸಂಶೋಧನಾ ವಿದ್ಯಾರ್ಥಿ)

ಕೃತಜ್ಞತೆಗಳು

ಪ್ರಸ್ತುತ ಮಹಾಪ್ರಬಂಧವನ್ನು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸುತ್ತಿದ್ದೇನೆ. ಈ ಸಂಶೋಧನೆ ಕೈಗೊಳ್ಳಲು ಮಾರ್ಗದರ್ಶನ ನೀಡಲು ಒಪ್ಪಿ ಪ್ರತಿ ಹಂತದಲ್ಲೂ ನೆರವಾಗಿ ಸಾರ್ಥಕ ರೀತಿಯಲ್ಲಿ ಮಾರ್ಗದರ್ಶನ ನೀಡುತ್ತಾ, ಸಹನೆಯಿಂದ ತಪ್ಪುಗಳನ್ನು ತಿದ್ದುತ್ತಾ, ಕ್ಷೇತ್ರಕಾರ್ಯದ ಬಗ್ಗೆ ವಿವರಣೆ ನೀಡಿ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ನೀಡಿದ ಮಾರ್ಗದರ್ಶಕರಾದ ಡಾ.ಎಚ್ ಶಶಿಕಲಾ, ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಇವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ನನ್ನ ಪಿಎಚ್.ಡಿ ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟ ಕನ್ನಡ ಅಧ್ಯಯನ ಕೇಂದ್ರಕ್ಕೆ ಅಭಾರಿಯಾಗಿದ್ದೇನೆ. ಹಾಗೆಯೆ ಕನ್ನಡ ಅಧ್ಯಯನ ಕೇಂದ್ರದ ಪ್ರಸ್ತುತ ನಿರ್ದೇಶಕರಾದ ಪ್ರೊ.ಡಾ. ಬಿ ಗಂಗಾಧರ ಅವರಿಗೂ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಕನ್ನಡ ಅಧ್ಯಯನ ಕೇಂದ್ರದ ಪ್ರಾಧ್ಯಾಪಕರಾದ ಪ್ರೊ. ಬಸವರಾಜ ಕಲ್ಗುಡಿ, ಪ್ರೊ. ಎಂ ಸುಮಿತ್ರ, ಪ್ರೊ. ಹೊನ್ನುಸಿದ್ದಾರ್ಥ, ಡಾ. ರಾಜಪ್ಪ ದಳವಾಯಿ, ಡಾ. ನಟರಾಜ ಹುಳಿಯಾರ್, ಡಾ. ಚಿತ್ತಯ್ಯ ಪೂಜಾರ್, ಡಾ, ನಾಗಭೂಷಣ, ಹಾಗೂ ಇತರ ಪ್ರಾಧ್ಯಾಪಕರಿಗೂ ಮತ್ತು ಬೋಧಕೇತರ ಸಿಬ್ಬಂದಿವರ್ಗದವರಿಗೂ ಮತ್ತು ಪಿಎಚ್.ಡಿ ವಿಭಾಗದವರಿಗೂ ಹಾಗೂ ಧನಸಹಾಯ ನೀಡಿದ ಯು.ಜಿ.ಸಿ ರವರಿಗೂ ನನ್ನ ವಂದನೆಗಳು.

ಸಂಶೋಧನಾ ಪ್ರಬಂಧದ ರಚನೆಗೆ ಅಗತ್ಯವಾದ ಮಾಹಿತಿಯನ್ನು ನೀಡಿದ ಬೆಂಗಳೂರು ಉತ್ತರ ತಾಲ್ಲೂಕಿನ ವಕ್ತೃಗಳಿಗೆ ನನ್ನ ವಂದನೆಗಳು. ಸಂಶೋಧನೆಯ ಸಂದರ್ಭದ ಹಂತದಲ್ಲಿ ನನ್ನ ಬಹುತೇಕ ಕೆಲಸಗಳಲ್ಲಿ ನೆರವಾದ ತಂದೆ ಶ್ರೀ ಮರಿಯಣ್ಣ, ಅಣ್ಣನಾದ ಶ್ರೀ ಎಂ.ಬಿ ರಮೇಶ್, ಮಾವನವರಾದ ಶ್ರೀ ಕೆಂಪೇಗೌಡ ಹಾಗೂ ನನ್ನ ಬಾಳ ಸಂಗಾತಿ ಶ್ರೀಮತಿ ಸುಶೀಲ ಅವರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಕ್ಷೇತ್ರಕಾರ್ಯದಿಂದ ಮೊದಲ್ಗೊಂಡು ಪ್ರಬಂಧದ ಅಂತ್ಯದವರೆಗೂ ನನ್ನೊಡನಿದ್ದು ಸಹಕಾರ ನೀಡಿ ಹಗಲು ರಾತ್ರಿ ತನ್ನೊಂದಿಗೆ ತಮ್ಮ ಅಮೂಲ್ಯ ಸಮಯವನ್ನು ನೀಡಿದ ಶ್ರೀ ಮೋಹನ್, ಶ್ರೀಮತಿ ಮಾನಸ, ಶ್ರೀ ಬಿ.ಸಿ ಮುತ್ತುರಾಜು, ಶ್ರೀ ಮಂಜುನಾಥ ಟಿ. ಶ್ರೀ ಅರ್ಜುನ್, ಶ್ರೀ ಮುನಿಯಪ್ಪ, ಶ್ರೀ ಮುನಿರಾಜು ಹಾಗೂ ಅನೇಕ ಮಿತ್ರರು ತಮ್ಮ ಸಹಕಾರ ನೀಡಿದ್ದಾರೆ. ಅವರೆಲ್ಲರಿಗೂ ನನ್ನ ವಂದನೆಗಳು.

– ದೇವರಾಜು. ಎಂ

“ಬೆಂಗಳೂರು ಗ್ರಾಮೀಣ ಜನರ ಭಾಷೆಯ ಸ್ವರೂಪ”
(ಬೆಂಗಳೂರು ಉತ್ತರ ತಾಲ್ಲೂಕನ್ನು ಅನುಲಕ್ಷಿಸಿ)

ಪರಿವಿಡಿ

೧. ಅಧ್ಯಯನದ ತಾತ್ವಿಕತೆ ಮತ್ತು ವ್ಯಾಪ್ತಿ ೧–೬
೧.೧ ಅಧ್ಯಯನದ ವಿಧಾನ

೨. ದ್ವಿಭಾಷಿಕ ಮತ್ತು ಬಹುಭಾಷಿಕ ಭಾಷಾ ಪರಿಸರದ ಸ್ವರೂಪ ೭–೧೫

೩. ಭಾಷಿಕ ಬದಲಾವಣೆಯ ನೆಲೆಗಳು: ೧೬–೨೩
೩.೧ ಸಾಮಾಜಿಕ ನೆಲೆ
೩.೨ ಆರ್ಥಿಕ ನೆಲೆ
೩.೩ ಭೌಗೋಳಿಕ ನೆಲೆ
೩.೪ ರಾಜಕೀಯ ನೆಲೆ
೩.೫ ಜನಸಂಪರ್ಕದಿಂದ ಭಾಷೆಯ ಮೇಲಾಗುವ ಬದಲಾವಣೆಯ ಪರಿಣಾಮ : ಪಿಜನ್ ಮತ್ತು ಕ್ರಯೋಲ್

೪. ಬೆಂಗಳೂರು ಉತ್ತರ ತಾಲ್ಲೂಕಿನ ವಿವರಗಳು: ೨೪ – ೪೭
೪.೧ ಭೌಗೋಳಿಕ ವಿವರಗಳು
೪.೧.೧ ಶಾಸನೋಕ್ತ ಮಾಹಿತಿ
೪.೧.೨ ಬೆಂಗಳೂರು ವಿಭಾಗಗಳು
೪.೧.೩. ವ್ಯಾಪಾರ ಸಂಪರ್ಕ ಮತ್ತು ಉದ್ದಿಮೆಗಳು
೪.೨ ಜನಸಂಖ್ಯಾ ವಿವರಗಳು
೪.೨.೧ ಬೆಂಗಳೂರು ಉತ್ತರ ತಾಲ್ಲೂಕಿನ ಜನಸಂಖ್ಯೆ : ವಲಸೆ, ವಲಸೆಯ ಕಾರಣಗಳು
೪.೨.೧.೧ ಬೆಂಗಳೂರು ಉತ್ತರ ತಾಲ್ಲೂಕಿನ ಪ್ರಸ್ತುತ ಜನಸಂಖ್ಯೆಯ ವಿವರಗಳು
೪.೨.೧.೨. ವಲಸೆ : ಬೆಂಗಳೂರು ಉತ್ತರ ತಾಲ್ಲೂಕು
೪.೨.೧.೨.೧ ವಲಸೆಯ ಪ್ರಕ್ರಿಯೆಗಳು
೪.೨.೧.೨.೧ ತಳ್ಳುವ ಕ್ರಿಯೆ
೪.೨.೧.೨.೨ ಸೆಳೆತದ ಕ್ರಿಯೆ
೪.೨.೧.೩. ಬೆಂಗಳೂರಿನ ಉತ್ತರ ತಾಲ್ಲೂಕಿನ ಜನಸಂಖ್ಯೆಯ ಹೆಚ್ಚಳವು ಉಂಟಾದ ಕಾಲಮಾನ ಮತ್ತು ಕಾರಣಗಳು
೪.೨.೧.೩.೧ ಜನಸಂಖ್ಯೆ ಹೆಚ್ಚಳದ ಕಾಲಮಾನ
೪.೨.೧.೩.೨. ಬೆಂಗಳೂರು ಉತ್ತರ ತಾಲ್ಲೂಕಿನ ಜನಸಂಖ್ಯೆ ಹೆಚ್ಚಳದ ಕಾರಣಗಳು
೪.೨.೧.೩.೨.೧. ಬೆಂಗಳೂರು : ಕೈಗಾರಿಕಾ ಸ್ಥಾಪನೆ
೪.೨.೧.೩.೨.೨. ಬೆಂಗಳೂರು : ಶೈಕ್ಷಣಿಕ ಸಂಸ್ಥೆಗಳು
೪.೨.೧.೩.೨.೩ ಬೆಂಗಳೂರಿನಲ್ಲಿನ ವೈದ್ಯಕೀಯ ಸೌಲಭ್ಯ
೪.೨.೧.೩.೨.೪ಬೆಂಗಳೂರು : ಸಂಚಾರ ವ್ಯವಸ್ಥೆ
೪.೨.೧.೩.೨.೫ ಬೆಂಗಳೂರಿನ ನೀರಿನ ವ್ಯವಸ್ಥೆ
೪.೨.೧.೩.೨.೬ ಬೆಂಗಳೂರು ಮಾರುಕಟ್ಟೆಯ ಸ್ಥಾಪನೆ

೪.೨.೧.೩.೨.೭ ಪ್ರಾಕೃತಿಕ ವಿಕೋಪಗಳು : ಈಶ್ವರ ಧಾತು ಕ್ಷಾಮ
೪.೩ ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ದ್ವಿಭಾಷಿಕತೆಯೋ; ಬಹುಭಾಷಿಕತೆಯೋ; ಅಥವಾ ಎರಡೋ?

೫. ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಕನ್ನಡ ಭಾಷೆಯಲ್ಲಿ ಉಂಟಾಗಿರುವ ವ್ಯತ್ಯಾಸಗಳು: ೪೮ – ೧೬೦
೫.೧. ಧ್ವನಿ ವ್ಯತ್ಯಾಸ:
೫.೧.೧ ಸ್ವರಗಳು
೫.೧.೧.೧ ಹ್ರಸ್ವಸ್ವರಗಳು
೫.೧.೧.೨ ದೀರ್ಘಸ್ವರಗಳು
೫.೧.೨ ವ್ಯಂಜನಗಳು
೫.೧.೨.೧ ಅಘೋಷಗಳು
೫.೧.೨.೨ ಘೋಷಗಳು
೫.೧.೩ ಅನುನಾಸಿಕಗಳು
೫.೧.೪ ಅರೆವ್ಯಂಜನಗಳು
೫.೧.೪.೧ ಪಾರ್ಶ್ವಿಕ ವರ್ಣ
೫.೧.೪.೨ ತಾಡಿತ ವರ್ಣ
೫.೧.೪.೩. ವಿರಳ ಘರ್ಷ
೫.೧.೫ ಧ್ವನಿ ವ್ಯತ್ಯಾಸದ ತೌಲನಿಕ ವಿವರ
೫.೨ ಆಕೃತಿಮಾಗಳಲ್ಲಿನ ವ್ಯತ್ಯಾಸ
೫.೨.೧ ನಾಮ ಆಕೃತಿಮಾ
೫.೨.೧.೧ ಲಿಂಗಗಳು
೫.೨.೧.೧.೧ ಪುಲ್ಲಿಂಗ
೫.೨.೧.೧.೨. ಸ್ತ್ರೀಲಿಂಗ
೫.೨.೧.೧.೩. ನಪುಂಸಕಲಿಂಗ
೫.೨.೧.೧ ವಚನಗಳು
೫.೨.೧.೨.೧ ಏಕವಚನ
೫.೨.೧.೨.೨ ಬಹುವಚನ
೫.೨.೧.೨.೩ ಗೌರವಾರ್ಥದಲ್ಲಿ ಏಕವಚನ
೫.೨.೧.೩ ವಿಭಕ್ತಿ ಪ್ರತ್ಯಯಗಳು
೫.೨.೧.೪ ಸರ್ವನಾಮಗಳು
೫.೫.೧.೪.೧ ಪುರುಷ ವಾಚಕ ಸರ್ವನಾಮಗಳು
೫.೫.೧.೪.೨ ಉತ್ತಮ ಪುರುಷ ವಾಚಕ
೫.೫.೧.೪.೩ ಮಧ್ಯಮ ಪುರುಷ ವಾಚಕ
೫.೫.೧.೪.೪ ಪ್ರಥಮ ಪುರುಷ ವಾಚಕ
೫.೨.೧.೫ ನಿರ್ದೇಶಕ ಸರ್ವನಾಮ (ದರ್ಶಕ ಸರ್ವನಾಮ)
೫.೨.೧.೬ ಆತ್ಮಾರ್ಥಕ ಸರ್ವನಾಮ
೫.೨.೧.೭ ಪ್ರಶ್ನಾರ್ಥಕ ಸರ್ವನಾಮಗಳು
೫.೨.೧.೮ ಸಾಪೇಕ್ಷಕ ಸರ್ವನಾಮ
೫.೨.೧.೯ ಪರಿಮಾಣವಾಚಕ ಸರ್ವನಾಮ
೫.೨.೧.೧೦ ಹೊಸಪದಗಳು
೫.೨.೧.೧೧ ಜೋಡಿಪದಗಳು

೫.೨.೧.೧೨ ಸಂಖ್ಯಾ ವಾಚಕಗಳು
೫.೨.೧.೧೨.೧ ಸಂಖ್ಯಾಂಕಗಳು
೫.೨.೧.೧೨.೨ ಕ್ರಮಾಂಕಗಳು
೫.೩ ಕ್ರಿಯಾಪದ
೫.೩.೧. ಕಾಲಸೂಚಕಗಳು
೫.೩.೧.೧ ಭೂತಕಾಲ
೫.೩.೧.೨ ವರ್ತಮಾನ ಕಾಲ
೫.೩.೧.೩ ಭವಿಷ್ಯತ್ ಕಾಲ
೫.೩.೨. ನಿಷೇಧಾರ್ಥಕ ಕ್ರಿಯಾಪದ
೫.೩.೩. ಪ್ರೇರಣಾರ್ಥಕ ರೂಪಗಳು
೫.೩.೪. ವಿಧ್ಯರ್ಥಕ ರೂಪಗಳು
೫.೩.೫. ಸಾಮರ್ಥ್ಯಕ ರೂಪಗಳು
೫.೩.೬. ಕ್ರಿಯಾರ್ಥಕ ಅವ್ಯಯ
೫.೪ ಅವ್ಯಯಗಳು
೫.೪.೧ ಸಾಮಾನ್ಯಾವ್ಯಯ
೫.೪.೨ ಅನುಸರ್ಗಾವ್ಯಯ
೫.೪.೩ ಸಮುಚ್ಚಾಯ ಅವ್ಯಯ (ನಿಪಾತಾವ್ಯಯ)
೫.೪.೪ ಭಾವಸೂಚಕ ಅವ್ಯಯ

೬. ಬೆಂಗಳೂರು ಗ್ರಾಮೀಣ ಜನರ ಭಾಷಾ ಸ್ವರೂಪದಲ್ಲಿ ಉಂಟಾಗಿರುವ ಬದಲಾವಣೆಯ ವಿವೇಚನೆ ೧೬೦ –೧೯೨
೬.೧ ಬೆಂಗಳೂರು ಗ್ರಾಮೀಣ ಕನ್ನಡ ಭಾಷೆಯ ಮೇಲೆ ಉಂಟಾದ ಬದಲಾವಣೆಯ ಸ್ವರೂಪ
೬.೨ ಕನ್ನಡ ಭಾಷೆಯ ಮೇಲೆ ದ್ರಾವಿಡದ ಇತರ ಭಾಷೆಯ ಪ್ರಭಾವದ ಸ್ವರೂಪ
೬.೩ ಕನ್ನಡವು ಇತರ ಭಾಷೆಗಳಿಂದ ಸ್ವೀಕರಿಸಿದ ನೆಲೆಗಳು
೬.೪ ಕನ್ನಡದಿಂದ ಇತರ ಭಾಷೆಗಳು ಸ್ವೀಕರಿಸಿರುವ ನೆಲೆಗಳು
೬.೫ ಯಾವ ಪ್ರದೇಶದಲ್ಲಿ ಹೆಚ್ಚು ಬದಲಾವಣೆಯಾಗಿದೆ, ಏಕೆ?
೬.೬ ಜಾಲ ಭಾಗದಲ್ಲಿ ಪಿಜನ್ ಅವಸ್ಥೆಯ ಪ್ರಾರಂಭಿಕ ಕ್ರಿಯೆಯ ಸುಳಿವು

೭. ಉಪಸಂಹಾರ ೧೯೩ – ೧೯೫

೮. ಅನುಬಂಧ ೧೯೬ – ೨೨೯
೮.೧ ವಕ್ತೃಗಳ ಸಂಭಾಷಣೆಗಳು
೮.೨ ಕಥೆಗಳು
೮.೩. ಕ್ಷೇತ್ರಕಾರ್ಯದಲ್ಲಿ ಕಲೆಹಾಕಿದ ಹಾಡುಗಳು
೮.೪. ಬೆಂಗಳೂರು ಗ್ರಾಮೀಣ ಜನರ ವ್ಯವಸಾಯ ಸಂಬಂಧ ವಿಚಾರಗಳು
೮.೫. ಬೈಗುಳ ಮತ್ತು ಗಾದೆಗಳು
೮.೬. ವಕ್ತೃಗಳ ವಿವರ
೮.೭. ಕ್ಷೇತ್ರಕಾರ್ಯದ ಮಾಹಿತಿ ಚಿತ್ರಗಳು
ಆಧಾರ ಗ್ರಂಥಗಳು ೨೩೦ – ೨೩೨

****

ಅಧ್ಯಾಯ ೧

ಅಧ್ಯಯನದ ತಾತ್ವಿಕತೆ ಮತ್ತು ವ್ಯಾಪ್ತಿ

ಸಮಾಜ ಮತ್ತು ಭಾಷೆಗಳ ಸಂಬಂಧವನ್ನು ಕುರಿತ ಚಿಂತನೆಯು ೧೯ ನೇ ಶತಮಾನದಲ್ಲಿ ಪಾಶ್ಚಾತ್ಯರಲ್ಲಿ ಕಾಣಿಸಿಕೊಂಡಿದ್ದು, ಅದಕ್ಕೆ ನಿಖರವಾಗಿ ಸ್ಪಷ್ಟತೆ ಬಂದದ್ದು ಇದು ಭಾಷಾವಿಜ್ಞಾನದ ಪರಿಧಿಗೆ ಒಳಪಟ್ಟಾಗ ಮಾತ್ರ. ಈ "ಸಾಮಾಜಿಕ ಅಧ್ಯಯನವು ೧೯೬೦ ರಲ್ಲಿ ಭಾಷಾವಿಜ್ಞಾನದ ಪರಿಧಿಯಲ್ಲಿ ಸೇರಿದಾಗ, ಸಂಸ್ಕೃತಿಯ ಅಧ್ಯಯನದ ಅಂಗವಾಗಿ ಈ ಭಾಷೆಗಳ ವಿಶ್ಲೇಷಣೆಗೆ ಮಹತ್ವವು ಬಂದಿದೆ. ಆಗ ಸಾಮಾಜಿಕವಾಗಿ ಜನರ ಆಡುಮಾತು ಸಹ ಅಲ್ಲಿ ಪ್ರಮುಖವಾಯಿತು."[೧] "೨೦ ನೇ ಶತಮಾನದಲ್ಲಿ ವರ್ಣನಾತ್ಮಕ ಭಾಷಾವಿಜ್ಞಾನ ಎಂಬ ಹೆಸರಿನಲ್ಲಿ ರಾಚನಿಕ ವಿಶ್ಲೇಷಣೆಯ ಮಾದರಿಯು ಬಳಕೆಗೆ ಬಂದಿತು. ಆಗ ಲಿಖಿತ ರೂಪಗಳಿಗಿಂತ ಆಡು ಮಾತುಗಳಿಗೆ ಮಾನ್ಯತೆ ದೊರಕಿತು."[೨]

ಭಾಷೆಯ ಆಡುಮಾತನ್ನು ಹೆಚ್ಚು ವಸ್ತುನಿಷ್ಠವಾಗಿ, ವೈಜ್ಞಾನಿಕವಾಗಿ ವರ್ಣಿಸಲು ಮುಂದಾದಾಗ ಭಾಷೆಯು ಏಕರೂಪವನ್ನು ಪಡೆದಿಲ್ಲ ಮತ್ತು ಒಂದು ಸಮಾಜದ ಪ್ರದೇಶ, ವರ್ಗ/ಜಾತಿ, ವ್ಯಕ್ತಿ, ಮತ್ತು ಅವರ ಜೀವನದ ವಿಧಾನಕ್ಕೆ ಅನುಸಾರವಾಗಿ ಅಧ್ಯಯನಕ್ಕೆ ಮುಂದಾಗಿವೆ. ಇದು ಸಾಮಾಜಿಕ ಭಾಷಾವಿಜ್ಞಾನದ ಅಧ್ಯಯನದಲ್ಲಿ ಮುಖ್ಯ ವಿಷಯವಾಗಿದೆ.

ಈಗಾಗಲೇ ಎಲ್ಲರಿಗೂ ತಿಳಿದಿರುವ ಸಂಗತಿಯೆಂದರೆ ಭಾರತವು ಬಹುಭಾಷಿಕ ಪ್ರದೇಶ. ಭಾರತದಲ್ಲಿ ಇಂದು ಇಂಗ್ಲಿಷ್ ಭಾಷೆಯಿಂದ ಪ್ರಾದೇಶಿಕ ಭಾಷೆಗಳಿಗೆ (ಕನ್ನಡ, ತೆಲುಗು, ತಮಿಳು)ಹೆಚ್ಚು ಒತ್ತಡ ಉಂಟಾಗುತ್ತಿದೆ ಎಂಬ ಅನಿಸಿಕೆ ಪ್ರಬಲವಾಗಿದೆ. ಪ್ರಾದೇಶಿಕ ಭಾಷೆಗಳು ಹಿಂದಿ, ಇಂಗ್ಲಿಷ್‌ನಂತಹ ವ್ಯವಹಾರ ಭಾಷೆಗಳಿಂದ ಮುಳುಗುತ್ತಿವೆ, ಈ ಪ್ರಬಲ ಭಾಷೆಗಳು ಬಂದು ಪ್ರಾದೇಶಿಕ ಭಾಷೆಗೆ ಸೇರುತ್ತಿವೆ, ಅದರಿಂದ ಪ್ರಾದೇಶಿಕ ಭಾಷೆಗಳಿಗೆ ಕುತ್ತುಂಟಾಗಿದೆ ಎನ್ನುವ ಈ ಸಂದರ್ಭದಲ್ಲಿ ನಮ್ಮ ದ್ರಾವಿಡ ಭಾಷಾ ಮೂಲದ ಸೋದರ ಭಾಷೆಗಳಾದ ತೆಲುಗು, ಕನ್ನಡ ಭಾಷೆಗಳು ಪರಸ್ಪರ ತನಗರಿವಿಲ್ಲದಂತೆ ಪ್ರಭಾವವನ್ನು ಬೀರುತ್ತಿವೆ. ಇದರ ಸ್ವರೂಪವನ್ನು ತಿಳಿಯಲು ಪ್ರಸ್ತುತ ಅಧ್ಯಯನವನ್ನು ಕೈಗೊಂಡಿದ್ದೇನೆ. ಕನ್ನಡ ಮತ್ತು ತೆಲುಗು ಭಾಷೆಯ ಸಂಪರ್ಕವು ಬೆಂಗಳೂರು ಗ್ರಾಮೀಣ ಜನರಲ್ಲಿ ಉಂಟು ಮಾಡುತ್ತಿರುವ ಬದಲಾವಣೆಗಳನ್ನು ಕುರಿತು ಅಧ್ಯಯನ ಮಾಡುವ ಉದ್ದೇಶದಿಂದ ಈ ಅಧ್ಯಯನವನ್ನು ನಡೆಸಿದ್ದೇನೆ. ನನ್ನ ಅಧ್ಯಯನವು

ಬೆಂಗಳೂರು ಉತ್ತರ ಭಾಗದ ಗ್ರಾಮೀಣ ಪ್ರದೇಶದಲ್ಲಿನ ಜನರಾಡುವ ಆಡುನುಡಿಯಲ್ಲಿನ ವ್ಯತ್ಯಾಸವನ್ನು ಕುರಿತದ್ದಾಗಿದೆ.

ತೆಲುಗು ಮತ್ತು ಕನ್ನಡ ಭಾಷೆಗಳು ದ್ರಾವಿಡ ಭಾಷೆಗಳಾಗಿದ್ದು, ಒಂದೇ ಭಾಷಾವಂಶಕ್ಕೆ ಸೇರಿದ ಭಾಷೆಯಾಗಿವೆ. ಇವು ಹಿಂದಿನಿಂದಲೂ ಹೆಚ್ಚು ಸಂಪರ್ಕದಲ್ಲಿರುವ ಭಾಷೆಗಳೂ ಆಗಿವೆ. ಬೆಂಗಳೂರು ಉತ್ತರ ಗ್ರಾಮೀಣ ಪ್ರದೇಶದಲ್ಲಿ ಕನ್ನಡವು ಆಡುಮಾತಾಗಿದೆ. ಕನ್ನಡದ ಮೇಲೆ ಉಂಟಾಗುತ್ತಿರುವ ಅನ್ಯ ಭಾಷೆಯ ಪ್ರಭಾವವನ್ನು ಎಣಿಸುವಾಗ ಹೆಚ್ಚಾಗಿ ಆತಂಕಕ್ಕೆ ಒಳಗಾಗುವುದು ಇಂಗ್ಲಿಷ್ ಮತ್ತು ಹಿಂದಿ ಭಾಷೆಯನ್ನು ಕುರಿತದ್ದಾಗಿದೆ. ಆದರೆ ದ್ರಾವಿಡದ ಸಹೋದರ ಭಾಷೆಯಾದ ತೆಲುಗು ಭಾಷೆಯು ಕನ್ನಡದ ಮೇಲೆ ಪ್ರಭಾವವನ್ನು ಬೀರುತ್ತಿರುವುದನ್ನು ನಾವು ಹೆಚ್ಚು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಶೈಕ್ಷಣಿಕ ನೆಲೆಯಲ್ಲಿ ನಡೆಯುವ ಇಂಗ್ಲೀಷ್ ಮತ್ತು ಹಿಂದಿಯ ನಡುವೆಯಿರುವ ಸಂಪರ್ಕಕ್ಕಿಂತ ಹೆಚ್ಚಾಗಿ ದಿನನಿತ್ಯದ ವ್ಯವಹಾರಿಕ ನೆಲೆಯಲ್ಲಿ ಕನ್ನಡ ಮತ್ತು ತೆಲುಗು ನಡುವಿನ ಸಂಪರ್ಕವು ಹೆಚ್ಚಿನ ಪ್ರಮಾಣದಲ್ಲಿ ಕನ್ನಡದ ಗಡಿ ಭಾಗವಾದ ಬೆಂಗಳೂರು ಉತ್ತರ ತಾಲ್ಲೂಕಿನ ಜಾಲ ಭಾಗದಲ್ಲಿ ಉಂಟಾಗುತ್ತಿದೆ. ಈ ಎರಡು ಭಾಷೆಗಳ ಸಂಪರ್ಕದಿಂದ ಉಂಟಾಗುತ್ತಿರುವ ಬಿಕ್ಕಟ್ಟಿನ ಸ್ವರೂಪವು ಅನೇಕ ನೆಲೆಗಳಲ್ಲಿ ಬಹಳ ಮಹತ್ವದ್ದು. ಎರಡು ಭಾಷೆಗಳ ಸಂಪರ್ಕವು ಭಾಷೆಯ ಯಾವ ನೆಲೆಗಳಲ್ಲಿ ಬದಲಾವಣೆಯನ್ನು ಉಂಟು ಮಾಡುತ್ತಿದೆ ಮತ್ತು ಹೊಸ ಭಾಷೆಯ ಸೃಷ್ಟಿಯಲ್ಲಿ ಇಂತಹ ಸಂಪರ್ಕವು ವಹಿಸುವ ಪಾತ್ರದ ಸ್ವರೂಪವನ್ನು ಅರಿಯುವ ಒಂದು ಅವಕಾಶವನ್ನು ಒದಗಿಸುತ್ತದೆ. ಬಹುಭಾಷಿಕ ನಾಡಾದ ಭಾರತದ ಜನ ಸಮುದಾಯದ ಅಂತರಾಳದಲ್ಲಿ ನಡೆಯುತ್ತಿರುವ ಭಾಷಿಕ ಪ್ರಕ್ರಿಯೆಯನ್ನು ಅರಿಯಲು ಈ ಅಧ್ಯಯನವು ಒಂದು ಪ್ರಮುಖ ಹೆಜ್ಜೆಯಾಗಿದೆ. ಗಡಿ ಭಾಗಗಳಲ್ಲಿ ಒಂದು ಭಾಷೆ ಇನ್ನೊಂದು ಭಾಷೆಯ ಮೇಲೆ ಪ್ರಭಾವ ಬೀರುತ್ತಾ ಗಡಿಯಿಂದ ಮುಂದೆ ಸರಿದು ಗಡಿಯೊಳಗಿರುವ ಭಾಷೆಯ ಮೇಲೆ ಪ್ರಭಾವ ಬೀರುತ್ತಲೇ ಇನ್ನೊಂದು ಭಾಷೆಯನ್ನು ತನ್ನ ಅಗತ್ಯಕ್ಕೆ ತಕ್ಕಂತೆ ಬದಲಾಯಿಸುತ್ತಿರುತ್ತದೆ. ಈ ಬದಲಾವಣೆಯ ಸ್ವರೂಪವನ್ನು ಹಲವು ಹಂತಗಳಲ್ಲಿ ಗುರುತಿಸಲು ಸಾಧ್ಯವಿದೆ. ಸಾಮಾಜಿಕ ಸಂಪರ್ಕದ ಸಾಧನವಾದ ಭಾಷೆಯು ಪರಸ್ಪರ ಸಂಪರ್ಕದಿಂದ ಬದಲಾವಣೆಗೆ ಒಳಗಾಗುವ ಹಂತದಲ್ಲಿ ನಡೆಸುವ ಪರಸ್ಪರ ಕೊಡುಕೊಳುವನ್ನು ರಾಚನಿಕ ನೆಲೆಯಲ್ಲಿ ಅಧ್ಯಯನ ನಡೆಸಿದರೂ, ಈ ಕೊಡು ಕೊಳುವಿನ ಕಾರಣದ ಹಿನ್ನಲೆಯಲ್ಲಿ ಯಾವ ಕ್ಷೇತ್ರದಲ್ಲಿ ಯಾರು ಹೆಚ್ಚು ಪ್ರಬಲರಾಗಿರುತ್ತಾರೋ, ಅದಕ್ಕೆ ತಕ್ಕಂತೆ ಭಾಷಿಕ ರಚನೆಗಳು ಬದಲಾವಣೆಗಾಗುತ್ತವೆ. ಯಾವ ಕ್ಷೇತ್ರವೆಂದರೆ ಸಾಮಾಜಿಕ ಆಚರಣೆ, ನಂಬಿಕೆ, ಆರ್ಥಿಕ, ಶೈಕ್ಷಣಿಕ ಕ್ಷೇತ್ರಗಳಾಗಿವೆ. ಇವುಗಳಲ್ಲಿ ಕನ್ನಡದ ಗಡಿಯನ್ನು

ಪ್ರವೇಶಿಸಿರುವ ತೆಲುಗು ಭಾಷೆಯ ಜನರು ಕನ್ನಡವನ್ನು ಬದಲಾಯಿಸಿ ಬಳಸುತ್ತಿರುವ ಕ್ಷೇತ್ರ ಮತ್ತು ಅದರ ಹಿಂದಿನ ಕಾರಣದ ಸ್ವರೂಪವನ್ನು ಹುಡುಕುವ ಅಧ್ಯಯನವನ್ನು ಆ ಸಂಶೋಧನೆಯು ಒಳಗೊಂಡಿದೆ.

೧.೧ ಅಧ್ಯಯನ ವಿಧಾನ ಮತ್ತು ವ್ಯಾಪ್ತಿ:

ಭಾಷೆಯ ಅಧ್ಯಯನದಲ್ಲಿ ವಿವರಣಾತ್ಮಕ ಅಧ್ಯಯನಗಳು ಹೆಚ್ಚಾಗಿವೆ. ಇಲ್ಲಿ **ಬೆಂಗಳೂರು ಗ್ರಾಮೀಣ ಜನರ ಭಾಷೆಯ ಸ್ವರೂಪ** ಎಂಬ ಶೀರ್ಷಿಕೆಯಡಿಯಲ್ಲಿ ಬೆಂಗಳೂರು ಉತ್ತರ ತಾಲ್ಲೂಕಿನ ಜನರ ಆಡುನುಡಿಯನ್ನು ಆಧರಿಸಿ ವಿವರಣಾತ್ಮಕ ಅಧ್ಯಯನದೊಡನೆ ವಿಶ್ಲೇಷಣಾತ್ಮಕ ಅಧ್ಯಯನವನ್ನು ಒಳಪಡಿಸಿಕೊಂಡಿದ್ದೇನೆ. ಮಾಹಿತಿಯನ್ನು ಕ್ಷೇತ್ರಕಾರ್ಯದಿಂದ ವಿವರವಾಗಿ ಸಂಗ್ರಹಿಸಿ, ಹೀಗೆ ಸಂಗ್ರಹಿಸಿದ ಮಾಹಿತಿಯನ್ನು ಆಧರಿಸಿ ಭಾಷಿಕ ಬದಲಾವಣೆಯ ಹಿಂದಿನ ಕಾರಣಗಳನ್ನು ಅರಿಯುವ ಇರಾದೆಯನ್ನು ಹೊಂದಿದ್ದೇನೆ.

ನನ್ನ ಅಧ್ಯಯನದ ಭಾಗವಾದ ಬೆಂಗಳೂರು ಉತ್ತರ ತಾಲ್ಲೂಕು ಕೆಲವು ನಗರ ಪ್ರದೇಶವನ್ನು ಹಾಗೂ ಕೆಲವು ಗ್ರಾಮೀಣ ಪ್ರದೇಶವನ್ನು ಒಳಗೊಂಡಂತೆ ತನ್ನ ವಿಸ್ತೀರ್ಣವನ್ನು ಒಳಗೊಂಡಿದೆ. ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಐದು ಹೋಬಳಿಗಳಿವೆ. ಅವು ದಾಸನಪುರ, ಹೆಸರಘಟ್ಟ, ಯಶವಂತಪುರ. ಯಲಹಂಕ ಮತ್ತು ಜಾಲ ಪ್ರದೇಶವಾಗಿದೆ. ಇವುಗಳು ನಗರ, ಗ್ರಾಮೀಣ ಮತ್ತು ಅರೆನಗರಗಳಾಗಿ ವೃದ್ಧಿಯಾಗುತ್ತಿವೆ. ಈ ಪ್ರದೇಶಗಳಲ್ಲಿ ನಗರೀಕರಣದ ಪ್ರಭಾವವು ಇಲ್ಲಿನ ಜೀವನ ವ್ಯವಸ್ಥೆಯನ್ನು ಬದಲಾಯಿಸುತ್ತಿದೆ. ಅಲ್ಲಿನ ಜನರ ಮಾತಿನಲ್ಲೂ ನಾವು ಈ ಬದಲಾವಣೆಯನ್ನು ಕಾಣಬಹುದು. ಬದಲಾವಣೆಯನ್ನು ಗುರುತಿಸಲು ಮುಂದಾದಾಗ ಬೆಂಗಳೂರು ಗ್ರಾಮೀಣ ಜನರ ಆಡುನುಡಿಯಲ್ಲಿ ಬಹಳ ವ್ಯತ್ಯಾಸಗಳು ಕಂಡುಬಂದವು. ಅವುಗಳನ್ನು ವಿವರವಾಗಿ ಅಧ್ಯಯನ ಮಾಡುವ ಉದ್ದೇಶವನ್ನು ಈ ಪ್ರಬಂಧವು ಒಳಗೊಂಡಿದೆ.

ಬೆಂಗಳೂರು ಗ್ರಾಮೀಣ ಭಾಗದಲ್ಲಿ ಕನ್ನಡವೇ ಪ್ರಮುಖ ಭಾಷೆಯಾಗಿದೆ. ದಾಸನಪುರ, ಹೆಸರಘಟ್ಟ, ಯಶವಂತಪುರ ಭಾಗಗಳಲ್ಲಿ ಕನ್ನಡವೆ ಬಳಕೆಯಲ್ಲಿದೆ. ಆದರೆ ಜಾಲ ಮತ್ತು ಯಲಹಂಕ ಪೂರ್ವಭಾಗದ ಹಳ್ಳಿಗಳಲ್ಲಿ ಕನ್ನಡದೊಂದಿಗೆ ಕೆಲವು ತೆಲುಗು ಪದಗಳು ಅವರ ಆಡುಮಾತಿನಲ್ಲಿ ಸೇರಿಸಿಕೊಂಡು ಕನ್ನಡದ ಪದವೇ ಎಂಬಂತೆ ಬಳಕೆಯಾಗುತ್ತಿವೆ. ಅವುಗಳನ್ನು ನನ್ನ ಅಧ್ಯಯನದಲ್ಲಿ ಗುರುತಿಸುತ್ತಾ, ಆಡುನುಡಿಯ ಬಳಕೆಯ ಸ್ವರೂಪ, ವ್ಯತ್ಯಾಸ, ಬಳಸುವ ರೀತಿ ಮತ್ತು ಅವುಗಳು ಬಂದು ನಮ್ಮ ಜನರಲ್ಲಿ ಸೇರಿಕೊಂಡ ಕಾರಣಗಳನ್ನು ವಿಶ್ಲೇಷಿಸುವ ನಿಟ್ಟಿನಲ್ಲಿ ಈ ಅಧ್ಯಯನವು ಬೆಳೆದು ಬಂದಿದೆ.

೧.೨ ಅಧ್ಯಯನದ ಸ್ವರೂಪ

ಬೆಂಗಳೂರು ಗ್ರಾಮೀಣ ಜನರ ಆಡುನುಡಿಯನ್ನು ಆಧರಿಸಿ

೧. ಮಾಹಿತಿ ಸಂಗ್ರಹಣೆ

೨. ವಿವರಣಾ ನೆಲೆ

೩. ವಿಶ್ಲೇಷಣಾ ನೆಲೆ - ಈ ಮಾದರಿಯಲ್ಲಿ ಅಧ್ಯಯನ ನಡೆಸಿದ್ದೇನೆ.

ಮಾಹಿತಿಯನ್ನು ಶಾಲಾ ಕಾಲೇಜು ಆವರಣದಲ್ಲಿ, ವ್ಯವಸಾಯ ಭೂಮಿಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ, ಹಳ್ಳಿಯ ಹೋಟೆಲುಗಳಲ್ಲಿ, ದನ–ಕುರಿಗಾಹಿಗಳಲ್ಲಿ, ಕಮ್ಮಾರಸಾಲೆಗಳ ಸಂಭಾಷಣೆಯಲ್ಲಿ– ಹೀಗೆ ಭಾಷಾಬಳಕೆಯ ಆವರಣಗಳಲ್ಲಿ ಮಾಹಿತಿಯನ್ನು ಕಲೆ ಹಾಕಿದ್ದೇನೆ. ಮಾಹಿತಿಯನ್ನು ಪ್ರಶ್ನಾವಳಿಗಳು, ಸಂದರ್ಶನದ ಮೂಲಕ, ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಜನರ ಗುಂಪಿನಲ್ಲಿ ಮಾತನಾಡಿದನ್ನು ಅವರೇ ಮಾತನಾಡುವುದನ್ನು ಗೌಪ್ಯವಾಗಿ ದಾಖಲಿಸಿಕೊಳ್ಳುವ ಮೂಲಕ ಮಾಹಿತಿಯನ್ನು ಪಡೆದಿದ್ದೇನೆ. ಇದಲ್ಲದೆ ಒಂದು ಸಮುದಾಯದ ಸಂಸ್ಕೃತಿಯ ಭಾಗವಾಗಿ ದೊರಕುವ ಸಾಹಿತ್ಯವಾದ ಜಾನಪದ, ಕಥೆ, ಹಾಡು, ಸಂಭಾಷಣೆಗಳನ್ನು ಆಕರವಾಗಿ ಮಾಡಿಕೊಂಡು ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

ವಕ್ತೃ ಮತ್ತು ಪ್ರತಿವಕ್ತೃಗಳ ಮೂಲಕ ಸಂಗ್ರಹಿಸಿದ ಸಾಮಗ್ರಿಯನ್ನು ಈ ಕೆಳಗಿನಂತೆ ವಿಂಗಡಿಸಿಕೊಂಡಿದ್ದೇನೆ. ವಕ್ತೃ ಮತ್ತು ಪ್ರತಿವಕ್ತೃಗಳ ವಯಸ್ಸು, ಲಿಂಗ, ಜಾತಿ, ಧರ್ಮ, ಅಂತಸ್ತು, ಕೆಲಸ(ವೃತ್ತಿ) ವಿದ್ಯಾವಂತ, ಭಾಷೆ (ದ್ವಿಭಾಷೆ/ಏಕಭಾಷೆ) ಮೂಲವಾಸವನ್ನು ಆಧರಿಸಿ ಮಾಹಿತಿಯ ವರ್ಗೀಕರಣವನ್ನು ಮಾಡಿಕೊಂಡಿದ್ದೇನೆ.

ಭಾಷಾ ಪರಿಸರದಲ್ಲಿ ಭಾಷೆಯ ಬಳಕೆಯು ಬೇರೆ ಬೇರೆ ಹಂತಗಳಲ್ಲಿ ವ್ಯಕ್ತವಾಗುತ್ತದೆ. ಉದಾ: ದ್ವಿಭಾಷಿಕರನ್ನು ಅರಿಯುವಾಗ ಭಾಷಿಕನ ದ್ವಿಭಾಷಿಕ ಪೂರ್ವಸ್ಥಿತಿಯನ್ನು ತಿಳಿಯಬೇಕಾಗುತ್ತದೆ. ಭಾಷಿಕರು ಚಿಕ್ಕವಯಸ್ಸಿನಿಂದಲೆ ದ್ವಿಭಾಷಿಕರೆ, ನಡುವಯಸ್ಸಿನಲ್ಲಿ ದ್ವಿಭಾಷಿಕರೆ ಎಂಬುವ ಪ್ರಮುಖ ಮೂರು ನೆಲೆಯಲ್ಲಿ ಗುರುತಿಸಲಾಗಿದೆ. ಹೀಗೆ ಭಾಷಿಕರು ಯಾವ ಹಂತದಲ್ಲಿ ಭಾಷೆಯನ್ನು ಆಡುತ್ತಾರೆ ಎಂಬುದು ಮುಖ್ಯವಾಗುತ್ತದೆ. ಕೆಲಸ ಮಾಡುವಾಗ ಪರಿಚಿತರೊಡನೆ ಮಾತನಾಡುವ ರೀತಿ ಯಾವುದು, ಅಪರಿಚಿತರೊಡನೆ ಮಾತನಾಡುವಾಗ ಯಾವ ಭಾಷೆಯನ್ನು ಬಳಸುತ್ತಾರೆ ಮತ್ತು ಅವರ ವಯಸ್ಸಿನ ಅಂತರವೂ ಮುಖ್ಯವಾಗುತ್ತದೆ. ವರ್ಗದ ವಿಚಾರಕ್ಕೆ ಬಂದಾಗ ಭಾಷೆಯ ಬಳಕೆಯು ಭಿನ್ನವಾಗುತ್ತದೆ. ಜಾಲ

ಭಾಗದಲ್ಲಿ ಮರಸು ವಕ್ಕಲಿಗರು ಮಾತನಾಡುವ ತೆಲುಗು ಮಿಶ್ರಿತ ಕನ್ನಡಕ್ಕೂ ಮತ್ತು ನಾಯಕ ಜಾತಿಯವರ ಭಾಷೆಯಲ್ಲಿರುವ ಪದಗಳ ಬಳಕೆಯಲ್ಲಿ ವ್ಯತ್ಯಾಸವಾಗುವುದನ್ನು ಗಮನಿಸಬಹುದು.

ಈ ಅಧ್ಯಯನದಲ್ಲಿ ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಭಾಷಿಕರ ಆಡುಮಾತನ್ನು ಅನುಸರಿಸಿ ಅಧ್ಯಯನ ಕೈಗೊಂಡಿದ್ದೇನೆ. ಇಲ್ಲಿ ಪ್ರಮುಖವಾಗಿ ಒಂದು ಭಾಷಿಕ ಪರಿವರ್ತನೆಗಳು ಹೇಗೆ ಉಂಟಾಗುತ್ತಿವೆ ಎಂಬುದನ್ನು ತಿಳಿಸಲಾಗಿದೆ. ಒಂದು ಭಾಷೆಯ ಸ್ಥಿತಿಯ ಬದಲಾವಣೆ ಹೇಗಾಗುತ್ತಿದೆ, ಯಾರಿಂದ ಬದಲಾಗುತ್ತಿದೆ, ಯಾವಾಗ ಬದಲಾಗುತ್ತಿದೆ, ಈ ಬದಲಾವಣೆಯು ಪ್ರದೇಶದಿಂದ ಪ್ರದೇಶಕ್ಕೆ ಹರಡಿರುವಂತದ್ದೆ, ಅಥವಾ ಸಮಾಜದಿಂದ ಸಮಾಜಕ್ಕೆ ಹರಡುವಂತದ್ದೆ, ಎಂದು ತಿಳಿಯುವ ನಿಟ್ಟಿನಲ್ಲಿ ಅಧ್ಯಯನ ಕೈಗೊಂಡಿದ್ದೇನೆ. ಈ ರೀತಿಯಲ್ಲಿ ಕೂಡಿ ಹಾಕಿದ ಮಾಹಿತಿಯನ್ನು ಧ್ವನಿರಚನೆ, ಪದರಚನೆಗಳಲ್ಲಿ ಉಂಟಾಗಿರುವ ವ್ಯತ್ಯಾಸಗಳನ್ನು ಗುರುತಿಸಲು ಬಳಸಿಕೊಂಡಿದ್ದೇನೆ.

ಭಾಷೆಯ ಬಳಕೆಯ ಸಂದರ್ಭದಲ್ಲಿ ವ್ಯಕ್ತಿಯ ಭಾಷಿಕ ಪ್ರವೃತ್ತಿ ಮತ್ತು ಅವನು ಬಳಸುವ ಸಾಮಾಜಿಕ ಸಂದರ್ಭ ಎಂತಹದ್ದು ಎಂದು ತಿಳಿಯಬೇಕಾಗುತ್ತದೆ. ಭಾಷಿಕನು ಬಳಸುವ ಭಾಷೆಯು ಸಾಮಾಜಿಕ ನಿಯಂತ್ರಣಕ್ಕೊಳಗಾಗುತ್ತಿದ್ದೆಯೆ, ಭಿನ್ನ ವ್ಯಕ್ತಿಗಳಲ್ಲಿ ಭಾಷಿಕ (ಹೇಳುಗ–ಕೇಳುಗ) ಪ್ರಕ್ರಿಯೆ ಹೇಗೆ ನಡೆಯುತ್ತಿದೆ ಎಂಬುದು ಮುಖ್ಯವಾಗುತ್ತದೆ. ಇದನ್ನು ಭಾಷಾ ಹಾಗೂ ಭಾಷೇತರ ಸಂದರ್ಭಗಳಲ್ಲಿ ಸನ್ನಿವೇಶಗಳಿಗೆ ಅಗತ್ಯವಾಗಿ ಅರ್ಥೈಸಿಕೊಳ್ಳಬೇಕಾಗುತ್ತದೆ. ಇದಲ್ಲದೆ ಇನ್ನು ಕೆಲವು ಸಾಮಾಜಿಕ ಘಟಕಗಳ ಮೂಲಕವು ಅಧ್ಯಯನವನ್ನು ಮಾಡಲಾಗಿದೆ. ಅವುಗಳೆಂದರೆ:

ಹೇಳುಗ ಕೇಳುಗ : ಬೆಂಗಳೂರು ಭಾಷಿಕರ ವಲಯದಲ್ಲಿ ಭಾಷೆ ಬಳಸುವವನು ಯಾರು ಅದನ್ನು ಕೇಳುತ್ತಿರುವವರಾರು ಹಾಗೂ ಅದಕ್ಕೆ ಪ್ರತಿಕ್ರಿಯೆಯನ್ನು ನೀಡುವವರು ಯಾರು ಎಂಬುದನ್ನು ತಿಳಿಯಬೇಕು ಆ ಭಾಷಿಕರ ಹಿನ್ನಲೆ ಎಂತಹದ್ದು, ಅವರ ವಯಸ್ಸು, ಲಿಂಗ, ಅವರ ವಿದ್ಯಾಭ್ಯಾಸದ ಮಟ್ಟ, ಅವರು ಏಕ ಭಾಷಿಕರೆ, ದ್ವಿಭಾಷಿಕರೆ, ಬಹುಭಾಷಿಕರೆ ಎಂಬುದನ್ನು ತಿಳಿಯಬೇಕಾಗುವುದು. ಅದರ ಮೂಲಕ ಅವರ ಭಾಷೆಯ ಸಾಮರ್ಥ್ಯ ಎಂತಹದ್ದು ಎಂದು ಅರಿಯಲು ಸಾಧ್ಯವಾಗುತ್ತದೆ.

ಭಾಷಾ ಬಳಕೆಯ ವಲಯ : ಭಾಷಿಕನು ಭಾಷೆಯನ್ನು ಎಲ್ಲಿ ಬಳಸುತ್ತಿದ್ದಾನೆ. ಮನೆಯಲ್ಲೊ, ಸಂತೆಯಲ್ಲೊ. ಶಾಲಾವಲಯದಲ್ಲೊ, ದನಕಾಯುವಲ್ಲೊ, ಮೈದಾನದಲ್ಲೊ, ಕಾರ್ಖಾನೆಯಲ್ಲೊ, ಬಸ್ಸಿನಲ್ಲೋ ಎಂಬುವ ವಿಚಾರ ವಲಯಗಳ ಬಗ್ಗೆ ತಿಳಿದು, ಭಿನ್ನ ವಲಯಗಳಲ್ಲಿ ವಿಭಿನ್ನವಾಗಿ ಹೇಗೆ ಭಾಷೆಯು ವ್ಯಕ್ತವಾಗುವುದು ಎಂದು ತಿಳಿಯಲಾಗಿದೆ.

ಮಾತನಾಡುವ ವಿಷಯ : ಭಾಷಿಕನು ಮಾತನಾಡುವ ವಸ್ತುವನ್ನು ಗಮನಿಸಲಾಗಿದೆ.

ಬಳಕೆಯ ನಿಯೋಗಗಳು: ಭಾಷಿಕನು ಮಾತನಾಡುವ ಮಾತಿನ ಕ್ರಿಯೆಯ ಸ್ವರೂಪವನ್ನು ಗುರುತಿಸಲಾಗಿದೆ.

ಸಾಮಾಜಿಕ ಅಂತರ – ಭಾಷಿಕನ ಸಾಮಾಜಿಕ ಸ್ಥಾನಮಾನವು ಸಾಮಾಜಿಕ ಅಧ್ಯಯನದಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

ಸ್ಥಾನಮಾನ ಮತ್ತು ಬಳಕೆಯ ಶೈಲಿ : ಭಾಷಿಕರ ನಡುವಿನ ಅಂತರದ ಜೊತೆಗೆ ಭಾಷಿಕರು ಹೆಣ್ಣೊ, ಗಂಡೊ, ವ್ಯತ್ಯಾಸಕ್ಕೆ ಲಿಂಗವೆ ಕಾರಣವೆ, ಅವರ ವಯೋಮಾನ ಮತ್ತು ಉದ್ಯೋಗಗಳನ್ನು ತಿಳಿದು ಭಾಷಿಕ ಬಳಕೆಯಲ್ಲಿ ಭಿನ್ನತೆಯಿದೆಯೇ ಎಂದು ಗುರುತಿಸಲಾಗಿದೆ.

ಔಪಚಾರಿಕತೆ : ಭಾಷಿಕನು ಬಳಸುವ ಭಾಷೆಯು ಔಪಚಾರಿಕವಾದದ್ದೆ, ಅನೌಪಚಾರಿಕವಾಗಿ ಹಿನ್ನಲೆಯಿಂದ ಬಳಸಿದ್ದಾನೆಯೆ ಎಂಬುದನ್ನು ಅರಿಯಬೇಕಾಗಿದೆ. ಅರಿತು ಯಾವ ರೀತಿಯಲ್ಲಿ ಭಾಷೆಯನ್ನು ಬಳಸುತ್ತಾರೆ ಎಂಬುದನ್ನು ತಿಳಿಯಬಹುದಾಗಿದೆ.

ಹೀಗೆ ಸಾಮಾಜಿಕ ಘಟಕಗಳನ್ನು ಬಳಸಿಕೊಂಡು ಅಧ್ಯಯನವು ಸಾಗಿದೆ. ಇವುಗಳ ಹಿನ್ನೆಲೆಯಲ್ಲಿ ಬೆಂಗಳೂರು ಗ್ರಾಮೀಣ ಜನರ ಆಡುನುಡಿಯ ಭಾಷೆಯಲ್ಲಿನ ಬದಲಾವಣೆಯ ಸ್ವರೂಪ ಹೇಗಿದೆ ಎಂಬುದನ್ನು ಗುರುತಿಸಲಾಗಿದೆ.

ಕೊನೆ ಟಿಪ್ಪಣಿಗಳು

೧. ಡಾ. ಕೃಷ್ಣಪರಮೇಶ್ವರ ಭಟ್ಟ, ೨೦೧೨, *ಸಾಮಾಜಿಕ ಸಂದರ್ಭ*, ಪುಟ ೧.

೨. ಡಾ. ಕೃಷ್ಣಪರಮೇಶ್ವರ ಭಟ್ಟ, ೨೦೧೨, *ಸಾಮಾಜಿಕ ಸಂದರ್ಭ*, ಪುಟ ೨.

****

ಅಧ್ಯಾಯ – ೨

ದ್ವಿಭಾಷಿಕ ಮತ್ತು ಬಹುಭಾಷಿಕ ಭಾಷಾ ಪರಿಸರದ ಸ್ವರೂಪ

ಒಂದು ಭಾಷಾ ಪರಿಸರದಲ್ಲಿ ಮಾತೃಭಾಷೆಯ ಜೊತೆಗೆ ಮತ್ತೊಂದು ಭಾಷೆಯನ್ನು ಕಲಿಯುವುದು ದ್ವಿಭಾಷಿಕತೆ ಎಂದೂ, ಕಲಿತವರನ್ನು 'ದ್ವಿಭಾಷಿಕರು' ಎಂದೂ ಹೇಳಲಾಗುವುದು. ಅದೇ ಭಾಷಾಪರಿಸರದಲ್ಲಿ ಎರಡಕ್ಕಿಂತ ಹೆಚ್ಚು ಭಾಷೆಯನ್ನು ಬಲ್ಲವರನ್ನು 'ಬಹುಭಾಷಿಕರು' ಎಂದು ಕರೆಯಲಾಗುತ್ತದೆ. ದ್ವಿಭಾಷಿಕತೆ ಎಂಬುದು ಕೇವಲ ಎರಡು ಭಾಷೆಗಳು ಒಂದೆಡೆ ಸೇರುವುದು ಮಾತ್ರವಲ್ಲ; ಎರಡು ಭಾಷೆಗಳು ಪರಸ್ಪರ ಒಂದರ ಮೇಲೆ ಇನ್ನೊಂದು ಪ್ರಭಾವ ಬೀರುತ್ತಾ, ಭಾಷೆಯ ಸಂರಚನೆಯನ್ನು ಹಲವು ನೆಲೆಗಳಲ್ಲಿ ಬದಲಾಯಿಸುತ್ತಿರುವುದಾಗಿದೆ. ಇಂತಹ ಬದಲಾವಣೆಗಳ ಕಾರಣವನ್ನು ಆ ಸಾಮಾಜಿಕ ಪರಿಸರವನ್ನು ಅಧ್ಯಯನ ಮಾಡುವ ಮೂಲಕ ಗುರುತಿಸಬಹುದು. ಇಂತಹ ಅಧ್ಯಯನವೇ ಸಾಮಾಜಿಕ ಅಧ್ಯಯನವಾಗಿದೆ.

ದ್ವಿಭಾಷಿಕರು ಎರಡು ಅಥವಾ ಎರಡಕ್ಕಿಂತ ಹೆಚ್ಚು ಭಾಷೆಗಳನ್ನು ತಿಳಿದುಕೊಂಡು ಬಳಸುವುದರಿಂದ ದ್ವಿಭಾಷಿಕರ ವರ್ತನೆಯಲ್ಲಿ ಬದಲಾವಣೆಯು ಸಹಜವಾಗಿ ಭಿನ್ನವಾಗಿರುತ್ತದೆ. ಒಂದು ಭಾಷೆಯನ್ನು ಮಾತನಾಡುವಾಗ ಮತ್ತೊಂದು ಭಾಷೆಯ ಶಬ್ದವನ್ನು ಅಥವಾ ಪದ ಸಮುಚ್ಚಯಗಳನ್ನು ಮಧ್ಯದಲ್ಲಿ ಸೇರಿಸಿ ಬಳಸುವಂತಹ ಸನ್ನಿವೇಶಗಳು ಒದಗುತ್ತವೆ. ಹೀಗಾಗಿ ದ್ವಿಭಾಷಿಕ ಪರಿಸರದಲ್ಲಿ ಸ್ವೀಕರಣದ ಪ್ರಕ್ರಿಯೆಯು ಮುಖ್ಯವಾಗುವುದು. ಎರಡು ಅಥವಾ ಹೆಚ್ಚು ಭಾಷೆಗಳನ್ನು ಕಲಿತು ಬಳಸುವುದರಿಂದ ದ್ವಿಭಾಷಿಕರ ಆಡುಮಾತಿನಲ್ಲಿ ಮತ್ತು ವರ್ತನೆಯಲ್ಲಿ ಹೆಚ್ಚು ವ್ಯತ್ಯಾಸಗಳು ಸಹಜವಾಗಿ ಕಾಣಿಸುತ್ತವೆ. ದ್ವಿಭಾಷಿಕನಾದವನು ಆ ಭಾಷೆಯನ್ನು ಮಾತನಾಡುವ ಸಂದರ್ಭದಲ್ಲಿ ಮತ್ತೊಂದು ಭಾಷೆಯ ಶಬ್ದಗಳನ್ನು ಅಥವಾ ಪದಕಂತೆಗಳನ್ನು ವಾಕ್ಯ ಅಥವಾ ವಾಕ್ಯ ಸಮುಚ್ಚಯಗಳ ಮಧ್ಯದಲ್ಲಿ ಸೇರಿಸಿ ಬಳಸುತ್ತಾನೆ. ಈ ರೀತಿಯ ನುಡಿಮಿಶ್ರಣವು ದ್ವಿಭಾಷಿಕ ಪರಿಸರದ ನಿರ್ಮಾಣದಲ್ಲಿ ಕಂಡುಬರುತ್ತದೆ.

ಈ ರೀತಿಯ ಭಾಷಾ ಮಿಶ್ರಣವನ್ನು ಎರಡು ರೀತಿಯಲ್ಲಿ ವಿಂಗಡಿಸಿಕೊಳ್ಳಬಹುದು. "ಒಂದು ಭಾಷಾ ವಾಕ್ಯದೊಳಗೆ ಬೇರೊಂದು ಭಾಷೆಯ ಪದ, ಪದಪುಂಜಗಳನ್ನು ಸೇರಿಸಿ ಮಾತನಾಡುವುದನ್ನು ಕಾಣಬಹುದು. ಇಂತಹವುಗಳನ್ನು 'ನುಡಿಬೆರಕೆ' ಅಥವಾ 'ನುಡಿಮಿಶ್ರಣ' ಎಂದು ಕರೆಯಲಾಗುವುದು."[೧] ಉದಾ– ನಾನು ಏಮು ಚೇಸ್ತಾನು. (ಕನ್ನಡ ವಾಕ್ಯದಲ್ಲಿ ತೆಲುಗು ಶಬ್ದದ ಬಳಕೆ) ಎರಡನೆಯದು, ಒಬ್ಬ ಭಾಷಿಕನು ಒಂದು ಭಾಷಾ ವಾಕ್ಯದ ಜೊತೆಜೊತೆಗೆ ಮತ್ತೊಂದು ಭಾಷಾ ವಾಕ್ಯಗಳ ಬಳಕೆಯನ್ನು ಮಾಡುತ್ತಿರುತ್ತಾರೆ. ಅದನ್ನು

‘ನುಡಿಪಲ್ಲಟ’ ಅಥವಾ ‘ನುಡಿಜಿಗಿತ’ ಎಂದು ಕರೆಯಲಾಗುವುದು. ಉದಾ– ನಿಂಕ ಎನ್‌ಬೇಕಾ, ನಾಕಿ ಏಮೀ ಲೇದೂ. (ನಿನಗೆ ಏನು ಬೇಕು, ನಂಗೇನೂ ಬೇಡ) ಎಂದು ಕನ್ನಡ ವಾಕ್ಯದೊಂದಿಗೆ ತೆಲುಗು ವಾಕ್ಯವನ್ನು ಸೇರಿಸುತ್ತಾ ಬಳಕೆ ಮಾಡುತ್ತಾರೆ. ಈ ರೀತಿಯಲ್ಲಿ ಕನ್ನಡ ಮತ್ತು ತೆಲುಗು ಮಿಶ್ರಿತ ವಾಕ್ಯಗಳು ಜಾಲ ಭಾಗದಲ್ಲಿ ಬಳಕೆಯಾಗುತ್ತವೆ. ಇವು ದ್ವಿಭಾಷಿಕ ಪರಿಣಾಮಗಳಿಂದ ನಡೆಯುವಂತಹ ಕ್ರಿಯೆಗಳಾಗಿವೆ. ನುಡಿ ಬೆರಕೆ ಮತ್ತು ನುಡಿ ಮಿಶ್ರಣ ಕ್ರಿಯೆಗಳು ಪ್ರಮುಖವಾಗಿ ದ್ವಿಭಾಷಿಕ ವ್ಯಕ್ತಿಯು ಮಾತನಾಡುವ ಭಾಷಾ ಸಾಮರ್ಥ್ಯಕ್ಕನುಗುಣವಾಗಿ ನಡೆಯುತ್ತಿರುತ್ತದೆ. ಅಂದರೆ “ಮಾತೃಭಾಷೆಯ ಜೊತೆಗೆ ಮತ್ತೊಂದು ಭಾಷೆಯ ಪದಬಳಕೆಯನ್ನು ಮಾಡುತ್ತಿರುವ ಭಾಷಿಕನು ಅತಿಥಿ ಭಾಷೆಯನ್ನು ಎಷ್ಟರ ಮಟ್ಟಿಗೆ ಬಳಸುತ್ತಿದ್ದಾನೆ, ಅವರಿಗೆ ಆ ಭಾಷೆಯ ಅರಿವು ಯಾವ ಮಟ್ಟದಲ್ಲಿದೆ ಎಂಬುದು ಮುಖ್ಯವಾಗುತ್ತದೆ. ಇಲ್ಲಿ ‘ಅತಿಥಿ ಭಾಷೆ’ ಎಂದರೆ, ನಮ್ಮ ಮಾತೃಭಾಷೆಯ ಜೊತೆಗೆ ಉಪಯೋಗಿಸುವ ಬೇರೊಂದು ಭಾಷೆಯಾಗಿದೆ. ಇದು ಒಬ್ಬ ವ್ಯಕ್ತಿಯು ಮಾತನಾಡುತ್ತಿರುವಾಗ ಅವನ ಎದುರಿಗೆ ಮಾತನಾಡುವ ಮತ್ತೊಬ್ಬ ವ್ಯಕ್ತಿಯ ಪ್ರೇರಣೆಯಿಂದಲು ಬಳಕೆಯಾಗುವ ಸಾಧ್ಯತೆಗಳು ಹೆಚ್ಚಿರುತ್ತವೆ.”[೨]

ದ್ವಿಭಾಷಿಕ ಕ್ರಿಯೆಯು ಸಮಾಜ ಮತ್ತು ಸಂಬಂಧವನ್ನು ಕುರಿತದ್ದಾಗಿದೆ. ಸಾಮಾಜಿಕ ಸಂಘರ್ಷ, ವಿನಿಮಯ ಸನ್ನಿವೇಶಗಳು ಹಾಗೂ ಸಾಮಾಜಿಕ ವಿದ್ಯಮಾನಗಳಿಂದ ದ್ವಿಭಾಷಿಕ ಕ್ರಿಯೆಯು ನಡೆಯುತ್ತವೆ ಎಂಬುದು ಒಂದು ವಿಷಯವಾದರೆ, ದ್ವಿಭಾಷಿಕರ ಭಾಷಿಕ ರಚನಾ ವ್ಯವಸ್ಥೆಗಳು ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಕಾರಣಗಳಿಂದಲೂ ನಿರ್ಮಾಣವಾಗುತ್ತವೆ ಎಂಬುದು ಇತ್ತೀಚಿನ ಭಾಷಿಕ ಅಧ್ಯಯನದಿಂದ ತಿಳಿದುಬಂದಿವೆ. “ಈ ರೀತಿಯ ದ್ವಿಭಾಷಿಕತೆಯ ಸ್ವರೂಪ ಮತ್ತು ಪರಿಣಾಮಗಳ ಬಗ್ಗೆ ಕಂಗಸ್, ಮೇಕ್ಕೈ ಪಿಶ್ಮನ್ ಎಂಬ ಪಾಶ್ಚಾತ್ಯ ಭಾಷಾ ವಿದ್ವಾಂಸರು ಹೆಚ್ಚು ಅಧ್ಯಯನಗಳನ್ನು ನಡೆಸಿದ್ದಾರೆ.”[೩] ಅವರುಗಳ ಅಧ್ಯಯನದಲ್ಲಿ ತಿಳಿದು ಬರುವ ಸಂಗತಿಯೆಂದರೆ– ದ್ವಿಭಾಷಿಕ ಪರಿಸರದ ನಿರ್ಮಾಣದಲ್ಲಿ ಒಂದು ದ್ವಿಭಾಷಾ ಕುಟುಂಬದಿಂದ ಬಂದಂತಹ ಮಕ್ಕಳು, ಅವರ ಅಂತಸ್ತು, ವರ್ಗ ಮುಖ್ಯವಾಗುತ್ತದೆ. ಇದಲ್ಲದೆ ಅಲ್ಪಸಂಖ್ಯಾತರು ಮತ್ತು ಅವರ ಮಕ್ಕಳಿಂದ ಹೊಸ ಸಮಾಜದ ವಲಯಗಳು ನಿರ್ಮಾಣವಾಗುತ್ತವೆ. ಅವುಗಳಿಂದ ದ್ವಿಭಾಷಿಕ ಪರಿಸರ ನಿರ್ಮಾಣವು ವಿವಿಧ ಸ್ತರಗಳಲ್ಲಿ ನಡೆಯುತ್ತಿವೆ ಎಂದು ತಿಳಿಸಿದ್ದಾರೆ. ಅವರ ಅಧ್ಯಯನದ ಮಾದರಿಗಳು ಬೆಂಗಳೂರು ಉತ್ತರ ತಾಲೂಕಿನ ದ್ವಿಭಾಷಿಕತೆಯ ಪರಿಣಾಮದ ನೆಲೆಯ ಸ್ವರೂಪಕ್ಕಿಂತ ಭಿನ್ನವೇ ಎಂಬುದನ್ನು ಅಧ್ಯಯನದಿಂದ ಗುರುತಿಸಿಕೊಳ್ಳಲು ಪ್ರಯತ್ನಿಸಿರುತ್ತೇನೆ.

ದ್ವಿಭಾಷಿಕತೆಯು ನಿರ್ಮಾಣವಾಗಲು ಕಾರಣವಾದ ಕೆಲವು ಸಾಧ್ಯತೆಗಳನ್ನು ಗುರುತಿಸಲಾಗಿದೆ. ದ್ವಿಭಾಷಿಕನಾದವನು ಬಳಸುವ ಭಾಷೆಯು, ಭಿನ್ನ ಸಂದರ್ಭದಲ್ಲಿ ಬೇರೆ ಬೇರೆ ಕಾರ್ಯಗಳಿಗೆ ತಕ್ಕಂತೆ ಇರುತ್ತದೆ. ಅಂದರೆ ಮನೆಯವರೊಡನೆ ಮಾಡುವ ಸಂಭಾಷಣೆಗಳು, ಪರಿಚಿತ ಅಥವಾ ಅಪರಿಚಿತರೊಡನೆ ಮಾತನಾಡುವ ಸಂದರ್ಭಗಳಲ್ಲಿ ಭಿನ್ನವಾಗಿರುವವು. ಉದ್ಯೋಗ ಕ್ಷೇತ್ರದಲ್ಲಿ, ಶೈಕ್ಷಣಿಕ ಸಂದರ್ಭದಲ್ಲಿ, ವ್ಯಾಪಾರ ವಲಯಗಳಲ್ಲಿ ಭಿನ್ನವಾಗಿಯೇ ಬಳಕೆಯಾಗುತ್ತಿರುತ್ತದೆ. ಒಂದು ಭಾಷಿಕ ಗಡಿ, ನೆರೆಯ ಸೋದರ ರಾಜ್ಯದ ಗಡಿಯ ಪ್ರಭಾವದಿಂದಲೂ ಭಾಷೆಯು ಭಿನ್ನವಾಗಿ ರೂಪುಗೊಳ್ಳುವುದು. ಈ ಮೇಲಿನ ಎಲ್ಲ ಅಂಶಗಳನ್ನು ಬೆಂಗಳೂರು ಗ್ರಾಮೀಣ ಗಡಿ ಪ್ರದೇಶದಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

"ಒಂದು ಪ್ರದೇಶವನ್ನು ಗೆದ್ದು ಮೊದಲಿನ ಭಾಗಕ್ಕೆ ಸೇರಿಸುವುದು ಮತ್ತು ಒಂದು ಪ್ರದೇಶವನ್ನು ಆಡಳಿತ ಕಾರಣಕ್ಕೆ ಮತ್ತೊಂದು ಭಾಗಕ್ಕೆ ಸೇರಿಸುವುದು, ಹಾಗೂ ತಮ್ಮ ಜನರ ಪುನರ್ವಸತಿ ಮತ್ತು ಇತರೆ ರಾಜಕೀಯ ಅಂಶಗಳು ಭಾಷಿಕ ಬದಲಾವಣೆಗೆ ಕಾರಣವಾಗುತ್ತವೆ"[೪] ಹಾಗೂ "ಒಂದು ದೇಶದೊಳಗಿರುವ ದುರ್ಬಲ ಮಾನವಿಕ ಗುಂಪುಗಳಿಗೆ ಅವಕಾಶಗಳನ್ನು ಹಾಗೂ ಪ್ರೋತ್ಸಾಹಗಳನ್ನು ಕೊಟ್ಟರೆ ಸಾಮಾನ್ಯವಾಗಿ ಪ್ರಬಲ ಗುಂಪಿನ ಭಾಷೆಗೆ ಬದಲಾಗುತ್ತದೆ. ಅಥವಾ ಪಲ್ಲಟಗೊಳ್ಳುತ್ತದೆ"[೫] ಕನ್ನಡದ ಪ್ರದೇಶಗಳಾದ ಚಿಕ್ಕಬಳ್ಳಾಪುರ ಹಾಗೂ ಕೋಲಾರವು ತೆಲುಗು ನಾಡಾದ ಆಂಧ್ರಪ್ರದೇಶದ ಗಡಿಯನ್ನು ಹಂಚಿಕೊಂಡುದುದರ ಫಲವಾಗಿ ಅಲ್ಲಿನ ಸಾಮಾಜಿಕರು ಸಾಮಾನ್ಯವಾಗಿಯೇ ದ್ವಿಭಾಷಿಕರಾಗಿ, ದ್ವಿಭಾಷಿಕ ಸಮಾಜ ನಿರ್ಮಾಣವಾಗುವುದಕ್ಕೆ ಕಾರಣವಾಗಿದೆ.

ದ್ವಿಭಾಷಿಕರು ಒಂದು ಪ್ರದೇಶದಲ್ಲಿ ನೆಲೆಸಿದ್ದಾರೆಂದು ತಿಳಿದ ಮೇಲೆ ಅಲ್ಲಿನ ದ್ವಿಭಾಷಿಕರ ಸಂಖ್ಯಾಪ್ರಮಾಣ, ಸಾಮಾಜಿಕ ಧೋರಣೆಗಳು, ಸಾಮಾಜಿಕ–ರಾಜಕೀಯ ಆರ್ಥಿಕ ಸ್ಥಾನಮಾನಗಳು ಮತ್ತು ವಲಸೆಯ ಧೋರಣೆಗಳಿಂದ ಭಾಷಿಕ ಸಮಾಜವು ನಗರವೇ, ಪಟ್ಟಣವೇ ಅಥವಾ ಗ್ರಾಮೀಣ ಸಮಾಜವೇ ಎಂಬಂತಹ ಸಂಗತಿಗಳು ಮುಖ್ಯವಾಗುತ್ತವೆ. ಇಲ್ಲಿನ ದ್ವಿಭಾಷಿಕರು ಮೂಲ ಭಾಷೆಯೊಂದಿಗೆ ಅತಿಥಿ ಭಾಷೆಯಿಂದ ಶಬ್ದ ಸ್ವೀಕಾರವನ್ನು ಮಾಡುತ್ತಿರುತ್ತಾರಾದರೂ, ಮೂಲ ಭಾಷೆಯ ಉಚ್ಚಾರಣೆ ಹಾಗೂ ಅರ್ಥವನ್ನು ಬಹು ಮಟ್ಟಿಗೆ ಉಳಿಸಿಕೊಂಡು ಬರುತ್ತಿರುತ್ತಾರೆ.

ಸಾಮಾಜಿಕ ಪರಿಸರಗಳಿಗೆ ಅನುಗುಣವಾಗಿ ಭಾಷಿಕನಲ್ಲಿ ಭಾಷೆಯ ಆಯ್ಕೆಯು ನಡೆಯುತ್ತಿರುತ್ತದೆ. ಸಮಾಜದಲ್ಲಿ ಒಂದಕ್ಕಿಂತ ಹೆಚ್ಚು ಭಾಷೆಯನ್ನು ಸಾಮಾಜಿಕರು ಶಿಕ್ಷಣದ ಅಂಗವಾಗಿ ಕಲಿತು ವ್ಯಾಪಾರದಲ್ಲಿ ಅಥವಾ ಇನ್ನಿತರ ಸಂಬಂಧದಲ್ಲಿ ಸಂಪರ್ಕಕ್ಕಾಗಿ ಬಳಸುತ್ತಿರುತ್ತಾರೆ. ಅನ್ಯಪ್ರದೇಶವಾಸಿಯಾಗಿದ್ದರೆ ಹಲವು

ವ್ಯವಹಾರ ಭಾಷೆಗಳನ್ನು ಬಳಸುವುದು ಸಾಮಾನ್ಯವಾದುದೂ ಹಾಗೂ ಅದು ಅನಿವಾರ್ಯವಾದುದೂ ಆಗಿರುತ್ತದೆ.

ದ್ವಿಭಾಷಿಕತೆಯಲ್ಲಿ ಸ್ವೀಕರಣವು ಒಂದು ಪ್ರಧಾನವಾದ ಪರಿಸರದಿಂದ ವಲಸೆ ಹೋಗಿ, ಬೇರೊಂದು ಸಮುದಾಯದ ನೆಲೆಯೊಂದಿಗೆ ನೆಲೆಸಿದಾಗ ಅಲ್ಪಸ್ವಲ್ಪ ವ್ಯತ್ಯಾಸದೊಡನೆ ನಡೆಯುತ್ತದೆ. "ಒಂದು ಪ್ರದೇಶವನ್ನು ಗೆದ್ದು ರಾಜಕೀಯವಾಗಿ ಅದನ್ನು ಮೊದಲಿನ ಭಾಗಕ್ಕೆ ಸೇರಿಸುವುದು, ತಮ್ಮ ಜನರ ಪುರ್ನವಸತಿ ಮತ್ತು ಇತರೆ ರಾಜಕೀಯ ಕಾರಣದಿಂದ ಜನರನ್ನು ಸೇರಿಸುವುದರ ಪರಿಣಾಮ ಆ ಸಮಾಜದ ಭಾಷೆಯ ಮೇಲೆ ಪರಿಣಾಮವನ್ನು ತೋರಿಸುತ್ತವೆ."[೬] ಇದರಂತೆ ಬೆಂಗಳೂರಿಗೆ ವಿಜಯನಗರ ಮತ್ತು ಕೆಂಪೇಗೌಡರ ಕಾಲದಲ್ಲಿ ಹಲವು ತೆಲುಗು ಭಾಷಿಕರು ತಮ್ಮ ನೆಲೆಗಾಗಿ ಬೆಂಗಳೂರಿನ ಯಲಹಂಕ ಮತ್ತು ಜಾಲ ಭಾಗವನ್ನು ಒಂದು ಸೇರಿರುವುದು ಆ ಪ್ರದೇಶದ ಭಾಷೆ ಭಿನ್ನವಾಗಲು ಕಾರಣವಾಗಿದೆ.

ಅಂತೆಯೇ ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಜನರಲ್ಲಿ ಇಂತಹ ವಲಸೆಯಿಂದ ಭಾಷೆಯು ವ್ಯತ್ಯಾಸವಾಗುವುದನ್ನು ಗುರುತಿಸಲಾಗಿದೆ. "ಪ್ರವಾಹಗಳು ಮತ್ತು ಲಾವವನ್ನು ಹೊರಚೆಲ್ಲುವ ಜ್ವಾಲಾಮುಖಿಗಳು ಮತ್ತು ಬರಗಾಲ ಕ್ಷಾಮಗಳು ಇತರೆ ಇಂತಹ ಘಟನೆಗಳು ಹೆಚ್ಚು ಜನರನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಒಯ್ಯಲು ಕಾರಣವಾಗುತ್ತದೆ. ಆಗ ಹೊಸ ಭಾಷಾ ಸಂಪರ್ಕ ಸನ್ನಿವೇಶಗಳು ಹುಟ್ಟಿಕೊಳ್ಳುತ್ತವೆ."[೭] ಅಂತೆಯೆ ೧೯ನೇ ಶತಮಾನದಲ್ಲಿ ಬೆಂಗಳೂರು ನಗರ ಭಾಗದಲ್ಲಿ ಇದ್ದ ತೆಲುಗು ಭಾಷಿಕರು ಈಶ್ವರಧಾತು ಕ್ಷಾಮ ಮತ್ತು ಬರಗಾಲ ಉಂಟಾದ ಕಾರಣಗಳಿಂದ ಬೆಂಗಳೂರು ಗ್ರಾಮೀಣ ಭಾಗವಾದ ಉತ್ತರ ತಾಲ್ಲೂಕಿನ ಜಾಲ ಮತ್ತು ಯಲಹಂಕ ಪೂರ್ವ ಭಾಗಗಳಿಗೆ ಬಂದು ನೆಲೆಸಿದರು. ಹೀಗೆ ಬೆಂಗಳೂರಿನಿಂದ ಜಾಲ ಮತ್ತು ಯಲಹಂಕ ಭಾಗಗಳಿಗೆ ಹೆಚ್ಚು ಬಂದವರು ತೆಲುಗು ಭಾಷಿಕರಾಗಿದ್ದಾರೆ. ಹೀಗೆ ವಲಸೆಯ ಕಾರಣದಿಂದ ಬೆಂಗಳೂರಿನ ಗ್ರಾಮೀಣ ಪ್ರದೇಶ ಜಾಲ ಮತ್ತು ಯಲಹಂಕ ಭಾಗದಲ್ಲಿ ದ್ವಿಭಾಷಿಕ ಪರಿಸರ ನಿರ್ಮಾಣವಾಗಿತು.

"ಒಂದು ಸಮಾಜದ ಜನರು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೋದಾಗ ಒಂದು ಪ್ರದೇಶದ ಭಾಷೆಯ ಮೇಲೆ ಪ್ರಭಾವ ಬೀರುತ್ತದೆ. ಏಕೆಂದರೆ ಎರಡೂ ಗುಂಪುಗಳೂ ಬೇರೆ ಬೇರೆ ಅನುಭವ ಮತ್ತು ಆಲೋಚನೆಗಳೂ ಒಂದು ಹಂತದಲ್ಲಿ ಧ್ವನಿ ಮತ್ತು ಶಬ್ದಕೋಶದ ಬದಲಾವಣೆಗೆ ಕಾರಣವಗುತ್ತಲೆ ವೃತ್ತಿಗಳು ಪರಸ್ಪರ ಸಂಪರ್ಕಕ್ಕೆ ಬಂದಾಗ ಭಾಷೆಯೂ ಒಂದರ ಜೊತೆ ಇನ್ನೊಂದು ಬೆರೆಯುತ್ತದೆ"[೮] ಹೀಗೆ ವಲಸೆ ಬಂದು ದ್ವಿಭಾಷೆಯನ್ನು ಕಲಿಯುವ ಜನರು ಅನ್ಯಭಾಷೆಯ ಮೂಲ ಶಬ್ದಗಳನ್ನು, ಉಚ್ಚಾರಣೆಯನ್ನು ಮತ್ತು

ಅರ್ಥವನ್ನು ಬಹುಪಾಲು ಉಳಿಸಿಕೊಂಡು ತಮ್ಮ ಆಡು ಭಾಷೆಯಲ್ಲಿ ಬಳಸಿಕೊಂಡಿದ್ದಾರೆ. ಉದಾಹರಣೆಗೆ ಅವಾಡ್ಕು ಒಬ್ನು ರಾಜ್ನು ಉಂಡೇದೀ. (ಅಲ್ಲಿ ಒಬ್ಬ ರಾಜನು ಇದ್ದನು) ಮೊದ್ಲುಕಾ ಅತ್ರುಕಾ ಪೋತುಂದಿ. (ಮೊದಲು ಹತ್ತಿರಕ್ಕೆ ಹೋಗುತ್ತದೆ) ಮಗ್ನು ಪೆಟ್ಗೇನಾ ತೆರ್ಚಿ ಚೂಸ್ತಾನು (ಮಗನು ಪೆಟ್ಟಿಗೆಯನ್ನು ತೆರೆದು ನೋಡಿದನು) ಹೀಗೆ ಭಾಷೆಯನ್ನು ಬಳಸುವಾಗ ಜಾಲ ಮತ್ತು ಯಲಹಂಕ ಭಾಗದ ಜನರು ಕನ್ನಡದೊಡನೆ ತೆಲುಗಿನ ಪದಗಳನ್ನು ಬಳಸುತ್ತಿದ್ದಾರೆ. ಹೀಗೆ ಬಳಸಿಕೊಂಡ ಅನ್ಯಭಾಷಾ ಶಬ್ದಗಳು ಸ್ಥಳೀಯ ಭಾಷಾಶಬ್ದಗಳ ಪರಿಸರಕ್ಕೆ ತಕ್ಕಂತೆ ಬಳಕೆಗೊಂಡಿವೆ. ಉದಾಹರಣೆಗೆ 'ನುಗ್ಗೆಕಾಯಿ' ಎಂಬ ಕನ್ನಡ ಪದವನ್ನು 'ಮುಗ್ಕಾಯಿ' ಎಂದು ಬಳಸುತ್ತಾರೆ. ಇದನ್ನು ತೆಲುಗಿನಲ್ಲಿ 'ಮುಲ್ಕಾಯಿ' ಎಂದು ಬಳಕೆಯಲ್ಲಿದೆ. 'ಕೂರಿಗೆ' ಎಂಬ ಕನ್ನಡಪದವು ಜಾಲ ಭಾಗದಲ್ಲಿ 'ಕೂಡ್ಗೆ' ಎಂದಾಗಿ ಬಳಸುತ್ತಿದ್ದಾರೆ. ಇದು ತೆಲುಗಿನಲ್ಲಿ 'ಕೂಡಿಗ' ಎಂದು ಬಳಕೆಯಲ್ಲಿದೆ. 'ವ್ಯಾಜ್ಯ' ಎಂಬ ಪದವನ್ನು ಬೆಂಗಳೂರು ಗ್ರಾಮೀಣದ ದಾಸನಪುರ ಭಾಗದಲ್ಲಿ 'ಯಾಜ್ಯ' ಎಂದು ಬಳಸುತ್ತಾರೆ. ಅದನ್ನು ಜಾಲ ಭಾಗದಲ್ಲಿ 'ಯಾಜ್ಗ' ಎಂದು ಬಳಸುತ್ತಾರೆ. ಇದು ತೆಲುಗಿನಲ್ಲಿ 'ವಾಜಿಗ' ಎಂದು ಬಳಕೆಯಲ್ಲಿದೆ.

ಬೆಂಗಳೂರು ಗ್ರಾಮೀಣ 'ಜಾಲ' ಭಾಗದಲ್ಲಿ ಕೆಲವು ತೆಲುಗು ಪದಗಳನ್ನು ಬಳಸಿಕೊಂಡು ಕ್ರಮೇಣ ತಮ್ಮದೇ ಆದ ಪದವೆಂಬಂತೆ ಕನ್ನಡದ ಜೊತೆ ಜೊತೆಯಲ್ಲಿಯೆ ಬಳಕೆ ಮಾಡುತ್ತಿದ್ದಾರೆ. ಉದಾಹರಣೆಗೆ– ಕನ್ನಡಿ ಎಂಬ ಕನ್ನಡ ಪದದ ಬದಲು 'ಅದ್ದ' ಎಂದು ಬಳಕೆಯಲ್ಲಿದೆ. ಇದು ತೆಲುಗಿನಲ್ಲಿ 'ಅದ್ದಮು' ಎಂದು ಬಳಕೆಯಲ್ಲಿದೆ. 'ಏರು' ಎಂಬ ಕನ್ನಡದ ಪದವನ್ನು ಜಾಲ ಭಾಗದಲ್ಲಿ 'ಎಕ್ಕು' ಎಂದು ಬಳಸುತ್ತಿದ್ದಾರೆ. ತೆಲುಗಿನಲ್ಲಿ 'ಎಕ್ಕು' ಎಂದೇ ಈ ಪದಬಳಕೆಯಲ್ಲಿದೆ. 'ಗಿಳಿ' ಎಂಬ ಪದವನ್ನು ಬೆಂಗಳೂರು ಗ್ರಾಮೀಣ ಭಾಗವಾದ ದಾಸನಪುರದಲ್ಲಿ 'ಗಿಣಿ' ಎಂದು ಬಳಸಿದರೆ ಜಾಲ ಭಾಗದಲ್ಲಿ 'ಸಿಲ್ಕುಲು' ಎಂದು ಬಳಸುತ್ತಿದ್ದಾರೆ. ಇದು ತೆಲುಗಿನಲ್ಲಿ 'ಚಿಲುಕ' ಎಂದು ಬಳಕೆಯಾಗುತ್ತಿದೆ. ಈ ರೀತಿಯಲ್ಲಿ ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ದ್ವಿಭಾಷಿಕತೆಯ ಪರಿಸರವು ನಿರ್ಮಾಣವಾಗಿದೆ.

"ಕೆಲವು ಪರಿಸರಗಳಲ್ಲಿ ಅಲ್ಪಸಂಖ್ಯಾತರ ಮಾತೃಭಾಷೆಗಳು ಒಂದೆಡೆ ಹಾಗೇ ಉಳಿದಿದ್ದು ಸಮಾಜದ ಹೊರಗಿನ ಸಂಪರ್ಕಕ್ಕಾಗಿ ಬಹುಸಂಖ್ಯಾತರ ಅಥವಾ ಪ್ರತಿಷ್ಠಿತ ಸಮಾಜದ ಭಾಷೆಯೊಡನೆ ಕಸಿಮಾಡಿದ ಬೇರೆ ಬೇರೆ ರೀತಿಯ ಮಿಶ್ರಭಾಷೆಗಳನ್ನು ಸಂಪರ್ಕ ಭಾಷೆಯನ್ನಾಗಿ ಬಳಸಲಾಗುತ್ತಿದೆ."[6] ಈ ರೀತಿಯ ಬದಲಾವಣೆಗಳು ಬೆಂಗಳೂರು ಗ್ರಾಮೀಣ ಜಾಲ ಭಾಗದಲ್ಲಿ ಉಂಟಾಗುತ್ತಿವೆ. ಇವು ದ್ವಿಭಾಷಾ ಪರಿಸರದಲ್ಲಿ ಸಾಮಾನ್ಯವಾಗಿ ಕಂಡು ಬರುತ್ತವೆ.

"ಜಗತ್ತಿನ ಅರ್ಧಕ್ಕೂ ಹೆಚ್ಚು ಸಂಖ್ಯೆಯ ಜನ ಬಹುಭಾಷಿಕರು ಯೂರೋಪ್ ಏಷ್ಯಾ ಅದರಲ್ಲೂ ಭಾರತದಲ್ಲಿ ಬಹುಭಾಷಿಕ ಪರಿಸರಗಳು ಸಾಮಾನ್ಯವಾಗಿವೆ. ಶಿಕ್ಷಣದ ಅಂಗವಾಗಿ ಎರಡೋ, ಮೂರೋ ಭಾಷೆಗಳು ವ್ಯಾಪಾರ ಅಥವಾ ಸಂಪರ್ಕಕ್ಕಾಗಿ ಪರಿಸರದ ಒಂದೋ ಎರಡೋ ಭಾಷೆಗಳು ಇವುಗಳ ಜೊತೆಗೆ ಅನ್ಯಪ್ರದೇಶದಲ್ಲಿ ವಾಸವಾಗಿದ್ದರೆ ಮನೆಯ ಭಾಷೆ ಹೀಗೆ ಮೂರ್ನಾಲ್ಕು ಭಾಷೆಗಳನ್ನು ತಕ್ಕಮಟ್ಟಿಗಾದರೂ ಕಲಿತು ವ್ಯವಹರಿಸುವುದು ಸಾಮಾನ್ಯವಾದ ಸಂಗತಿಯಾಗಿದೆ."[೧೦]

ದ್ವಿಭಾಷಿಕ ಅಧ್ಯಯನವು ಇಂದು ಸಾಮಾಜಿಕ ಮತ್ತು ಮನೋವಿಶ್ಲೇಷಣಾ ನೆಲೆಯಲ್ಲಿಯೂ ನಡೆದಿದೆ. ದ್ವಿಭಾಷಿಕ ಕ್ರಿಯೆಯು ಭಾಷಿಕನ ಮನೋಸ್ಥಿತಿಗೆ ಸಂಬಂಧಿಸಿದ್ದಾಗಿರುತ್ತದೆ. ಈ ರೀತಿಯ ಅಧ್ಯಯನಗಳು ಇತ್ತೀಚೆಗೆ ಹೆಚ್ಚಾಗುತ್ತಿವೆ. "ಭಾಷಾ ಸಾಮರ್ಥ್ಯವು ವ್ಯಕ್ತಿಯಲ್ಲಿ ಉಂಟಾಗಲು ಸಾಮಾಜಿಕ ಪರಿಸರವು ಕೇವಲ ನೆಪ ಮಾತ್ರವಾಗುತ್ತದೆ. ಭಾಷೆಯೆಂಬುದು ಭಾಷಿಕನ ಮೆದುಳಿನ ಉತ್ಪನ್ನ ಹಾಗೂ ವ್ಯಕ್ತಿ ತನ್ನ ಇಚ್ಛೆಯಂತೆ ವಾಕ್ಯವನ್ನು ರಚಿಸಬಲ್ಲನು ಹಾಗೂ ಅದು ಭಾಷಿಕನ ವೈಯಕ್ತಿಕ ವಿಷಯವಾಗಿರುವುದು."[೧೧] ಅಂದರೇ ತೆಲುಗು ಭಾಷಿಕನು ಮಾತನಾಡುವ ಸಂದರ್ಭದಲ್ಲಿ ಬೇರೊಬ್ಬ ಕನ್ನಡ ಭಾಷಿಕನು ಬಂದಾಗ ಅವನ ಮಾತಿನಲ್ಲಿ ಹೆಚ್ಚು ತೆಲುಗು ಪದಗಳೊಡನೆ ಕನ್ನಡ ಪದಗಳನ್ನು ಬಳಸುತ್ತಾನೆ. ಆದರೆ ವ್ಯಕ್ತಿಯು ತಾನು ತನ್ನ ಪರಿಸರದಲ್ಲಿ ಕಲಿತದ್ದನ್ನು ಸಾಮಾಜಿಕ ವಲಯದಲ್ಲಿ ಸಂಭಾಷಣೆಯ ರೂಪದಲ್ಲಿ ಇತರ ವ್ಯಕ್ತಿಗಳೊಂದಿಗೆ ಬಳಸುತ್ತಾನೆ. ಹೀಗೆ ಬಳಸಿದ ಪದಬಳಕೆಯು ಎಂತಹ ವ್ಯತ್ಯಾಸವನ್ನು ದ್ವಿಭಾಷಿಕತೆಯಲ್ಲಿ ಉಂಟುಮಾಡುತ್ತಿದೆ ಎಂಬುದನ್ನು ಗುರುತಿಸುವ ಪ್ರಯತ್ನ ಮಾಡಿದ್ದೇನೆ.

ಸಾಮಾಜಿಕ ಸಂದರ್ಭದಲ್ಲಿ ಭಾಷೆಯನ್ನು ಬಳಸುವ ಸಂದರ್ಭಗಳಲ್ಲಿ ಆ ಭಾಷೆಯು ಹಲವು ಬಗೆಯಲ್ಲಿ ನಿಯಂತ್ರಣಗಳನ್ನು ಅನುಸರಿಸುತ್ತಿರುತ್ತದೆ. "ಒಬ್ಬ ಸಾಮಾಜಿಕನು ಮಾತನಾಡುವ ಸಂದರ್ಭದಲ್ಲಿ ನಿರ್ದಿಷ್ಟ ವ್ಯಕ್ತಿಗೆ ಬದಲಾಗಿ ಒಂದು ಸಮೂಹವಾಗಿ ಭಾಗವಹಿಸುವುದರಿಂದ ಹಾಗೂ ಮಧ್ಯೆ ಮಧ್ಯೆ ಪ್ರತಿಕ್ರಿಯೆ ನೀಡುವ ಅವಕಾಶ/ಅವಶ್ಯಕತೆ ಸಾಮಾನ್ಯವಾಗಿ ಇರುವುದಿಲ್ಲವಾದರಿಂದ ಮಾತನಾಡುವ ವ್ಯಕ್ತಿಯ ಭಾಷೆಯ ಮೇಲೆ ಒಟ್ಟಾರೆ ನಿಯಂತ್ರಣವಿರುತ್ತದೆ."[೧೨] ಹೀಗೆ ಕೆಲವನ್ನು ಸಾಮಾಜಿಕನು ಆಡುಮಾತಿನಿಂದ ಹೊರ ಹಾಕುತ್ತಿದ್ದರೆ, ಕೆಲವು ಮೆದುಳಿನ ಗ್ರಹಿಕೆಯಲ್ಲಿಯೇ ಉಳಿಯುತ್ತವೆ. ಇವು ಭಾಷಿಕನು ಮಾತನಾಡುವ ಸನ್ನಿವೇಶವನ್ನು ಅವಲಂಬಿಸಿರುತ್ತದೆ. ಇವುಗಳು ದ್ವಿಭಾಷಿಕತೆಯನ್ನು ನಿರ್ಧರಿಸುವ ಸಂಗತಿಗಳಾಗಿವೆ. ಒಂದು ಭಾಷಾ ಪ್ರದೇಶದಲ್ಲಿ ಅನ್ಯಭಾಷೆಗಳ ಸಂಪರ್ಕ ಹೆಚ್ಚಿದಂತೆಲ್ಲಾ ಆ ಜನರ ಭಾಷೆಯಲ್ಲಿ ವ್ಯತ್ಯಾಸಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾಣಿಸಿಕೊಳ್ಳುತ್ತವೆ. "ಸಾಮಾನ್ಯವಾಗಿ ಬೇರೆ ಬೇರೆ ಭಾಷೆಗಳ ಸಂಪರ್ಕ ಅಥವಾ ಪ್ರಭಾವ

ಒಂದು ನಿರ್ದಿಷ್ಟ ಪ್ರದೇಶದ ಮೇಲೆ ಉಂಟಾಗುವುದರಿಂದ ಒಂದೊಂದು ಪ್ರದೇಶದ ಭಾಷೆಯಲ್ಲಿಯೂ ವ್ಯತ್ಯಾಸ ಉಂಟಾಗಬಹುದು."[೧೩] ಕನ್ನಡದ ವಿಷಯಕ್ಕೆ ಬಂದಾಗ ತಮಿಳು, ತೆಲುಗು, ಮರಾಠಿ ಮುಂತಾದ ಅನ್ಯ ಭಾಷೆಗಳ ಸಂಪರ್ಕದಿಂದ ಕನ್ನಡದ ಬೇರೆ ಬೇರೆ ಭಾಷಾ ಪ್ರಭೇದಗಳು ಉಂಟಾಗುತ್ತವೆ. ಬೆಂಗಳೂರು ಉತ್ತರ ತಾಲ್ಲೂಕಿನ ಜಾಲ ಮತ್ತು ಯಲಹಂಕ ಪೂರ್ವ ಭಾಗದಲ್ಲಿ ತೆಲುಗು ಭಾಷಿಕರ ಸಂಪರ್ಕದಿಂದ ಅಲ್ಲಿನ ಭಾಷೆಯಲ್ಲಿ ವ್ಯತ್ಯಾಸಗಳು ಉಂಟಾಗುತ್ತಿವೆ. ಜಾಲ ಭಾಗದಲ್ಲಿ ಕನ್ನಡ ಮಾತೃ ಭಾಷೆಯನ್ನು ಹೊಂದಿದ ಭಾಷಿಕರಲ್ಲೂ ಸಾಕಷ್ಟು ವ್ಯತ್ಯಾಸಗಳು ಉಂಟಾಗುತ್ತಿವೆ. ಜಾಲದ ಹಳ್ಳಿಯಂತಹ ಗ್ರಾಮೀಣ ಪರಿಸರದಲ್ಲಿ ಹೆಚ್ಚು ವ್ಯವಸಾಯ ಹೈನುಗಾರಿಕೆಯನ್ನು ಮಾಡುತ್ತಿರುವ ಅವಿದ್ಯಾವಂತರಲ್ಲೂ ಕನ್ನಡದ ಜೊತೆಗೆ ಸಾಕಷ್ಟು ತೆಲುಗು ಪದಗಳು ಸೇರಿಕೊಂಡಿರುವುದು ಕಂಡು ಬರುತ್ತಿವೆ. ಜಾಲ ಭಾಗದಲ್ಲಿ ತೆಲುಗು ಭಾಷಿಕರಿದ್ದು ತೆಲುಗು ಭಾಷೆಯ ಜೊತೆಗೆ ಕನ್ನಡವನ್ನು ಸಮಾನವಾಗಿ ಸ್ವೀಕರಿಸುವ ಕಾರ್ಯವು ನಡೆಯುತ್ತಿದೆ. "ಉದ್ಯೋಗಾನ್ವೇಷಣೆಯಲ್ಲಿ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳಲು ಬಹಳ ಜನರು ಇಂದು ಕಡೆಯಿಂದ ಮತ್ತೊಂದು ಕಡೆ ಹೋಗಿ ನೆಲೆಸಿ ಸಂಪರ್ಕವನ್ನು ಹೊಂದುತ್ತಾ ಭಾಷೆಯ ಭಿನ್ನತೆಗೆ ಕಾರಣವಾಗುತ್ತದೆ"[೧೪] ಹೀಗೆ ನೆಲೆಸಿದ ಬೆಂಗಳೂರು ಗ್ರಾಮೀಣ ಭಾಗದ ಸಾಮಾಜಿಕರು ಹೆಚ್ಚು ಹೆಚ್ಚು ಔದ್ಯೋಗಿಕ ವಲಯಗಳಾದ ವ್ಯವಸಾಯ, ಕಳೆತೆಗೆಯುವ ಸಂದರ್ಭ, ಉಳುಮೆಯ ಸಂದರ್ಭ, ಸಾರ್ವಜನಿಕ ಸ್ಥಳಗಳಲ್ಲಿ ಗಮನಾರ್ಹವಾಗಿ ಕನ್ನಡ ಭಾಷೆಯ ಜೊತೆಜೊತೆಗೆ ತೆಲುಗು ಭಾಷಿಕ ಪದಗಳು ಕನ್ನಡವೇ ಎಂಬಂತೆ ಪ್ರಯೋಗವಾಗುತ್ತಿವೆ. ಉದಾ : ಯೋ ಅವುನ್ಕ್ ಕರ್ದ್ ಒಂದಾಸ್ ಆ ಪ್ಯಪಾರ್ನ್ ಈಸ್ಕಿ ಈವಯ್ಯಾ (ಯೋ ಅನನನ್ನು ಕರೆದು ಒಂದಷ್ಟು ಪೇಪರ್ ಅನ್ನು ಪಡೆದುಕೊಳ್ಳಯ್ಯಾ) ಎಂದು ಹೇಳುವಾಗ ಅಂಗಡಿಯ ಪರಿಸರದಲ್ಲಿ ಕೆಳವರ್ಗದವರು ಬಳಸುವ ತೆಲುಗಿನಲ್ಲೇ ಮಾತನಾಡುವುದನ್ನು ಕಾಣಬಹುದು. ಈ ತೆರನಾಗಿ ಭಾಷೆಯಲ್ಲಿ ಶಬ್ದಗಳ ರೂಪದಲ್ಲಿ, ವ್ಯಕ್ತಿ ನೆಲೆಯಲ್ಲಿ ಆರಂಭವಾಗುವ ಭಾಷಾವ್ಯತ್ಯಾಸ ಕಾಲ ಕ್ರಮೇಣ ಭಾಷೆಯ ಇನ್ನಿತರ ಅಂಶಗಳ ವ್ಯತ್ಯಾಸಕ್ಕೂ ಕಾರಣವಾಗುತ್ತವೆ.

ನೈಸರ್ಗಿಕ ಪರಿಸರದಂತೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಿಸರಗಳು ಕೂಡ ಒಂದು ಭಾಷೆಯಲ್ಲಿ ಇತರ ಭಾಷಾ ಪ್ರಭೇದಗಳು ಕಾಣಿಸಿಕೊಳ್ಳಲು ಬಹು ಮುಖ್ಯವಾದ ಪಾತ್ರ ವಹಿಸುತ್ತವೆ. ಮನುಷ್ಯ ಸಮಾಜ ಜೀವಿಯಾದ ಕಾರಣ ತಾನು ಯಾವ ಸಾಮಾಜಿಕ ಪರಿಸರದಲ್ಲಿ ಬೆಳೆಯುತ್ತಾನೋ ಅಂತಹ ಸಮಾಜದ ಭಾಷೆಯನ್ನು ಅವನು ಅಳವಡಿಸಿಕೊಳ್ಳುತ್ತಾನೆ. ಆದ ಕಾರಣ ಅವರ ಅಂತಸ್ತು, ಜಾತಿ, ವಿದ್ಯೆ, ಸಂಸ್ಕೃತಿ ಮುಂತಾದ ಸಾಮಾಜಿಕ ಅಂಶಗಳು ಭಾಷೆಯ ಬದಲಾವಣೆಯಾಗಿ ದ್ವಿಭಾಷಿಕ ಪರಿಸರ ಉಂಟಾಗಲು ಕಾರಣವಾಗಬಹುದು. ಸುಸ್ಥಿತಿಯಲ್ಲಿದ್ದವರು ಹೆಚ್ಚು ಕನ್ನಡ ಭಾಷೆ ಮತ್ತು ಇಂಗ್ಲೀಷ್ ಪದಗಳ

ಬಳಕೆಯಾಗುತ್ತಿದ್ದರೆ, ಅವಿದ್ಯಾವಂತರು ಮತ್ತು ಆರ್ಥಿಕವಾಗಿ ಹಿಂದುಳಿದವರು ಬೈಯುವಾಗ ತೆಲುಗು ಕನ್ನಡ ಭಾಷೆಯ ಬಳಕೆಯನ್ನು ಮಾಡುತ್ತಿರುವ ಪ್ರಯೋಗಗಳು ಅಲ್ಲಲ್ಲಿ ಕಂಡುಬರುತ್ತಿವೆ. ಹೀಗೆ ಜಾಲ ಭಾಗದ ಜನರಲ್ಲಿ ಸಾಮಾಜಿಕ ಅಂತಸ್ತು ಭಾಷಾ ಬದಲಾವಣೆಗೆ ಎಡೆಮಾಡಿಕೊಡುತ್ತಿವೆ. “ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಉತ್ತಮವಾಗಿರುವ ವ್ಯಕ್ತಿಯು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ವ್ಯಕ್ತಿಯು ನಿಮ್ನ ವರ್ಗಕ್ಕೆ ಮತ್ತು ಇವೆರಡರ ಮಧ್ಯದವರು ಮಧ್ಯಮ ವರ್ಗಕ್ಕೆ ಸೇರುತ್ತಾರೆ.”[೧೫] ಜಾಲ ಭಾಗದಲ್ಲಿ ಇವರುಗಳ ಮಾತುಗಳಲ್ಲಿ ಹೆಚ್ಚು ವ್ಯತ್ಯಾಸಗಳು ಕಾಣಿಸುತ್ತವೆ. ಮೇಲ್ವರ್ಗದವರು ಈ ‘ಇವತ್ ಸಂತ್ಗೋಗಿ ಎಲ್ಲೂ ಹಗ್ಗಾನ್ ತರ್ಬೇಕಾ, ಅಲ್ ಅಡ್ಕೆ ಗೋಟಾಗಿರ್ತವೆ’ ಎಂದು ಬಳಸಿದರೆ, ಕೆಳವರ್ಗದವರಲ್ಲಿ ‘ಯ್ಯಾ, ಇಂದ್ಕ ಸಂತ್ಯಾಗ್ ಹೋಗಿದ್ನಿ, ಇಂದಾ ಇಷ್ಕ ಸರೀಗಾ ಬ್ಯಾಸಿಲ್ರ, ಪೋಡ್ ಅಡ್ಕೆ ಸಿಕ್ವು ಚೂಸೀ’ ಎಂದು ಬಳಕೆಯಾಗುತ್ತಿದೆ. ಹೀಗೆ ಕೆಳವರ್ಗದವರಲ್ಲಿ ಹೆಚ್ಚು ತೆಲುಗು ಭಾಷೆಯ ಪ್ರಭಾವ ಕಾಣಿಸುತ್ತದೆ. ಮೇಲ್ವರ್ಗದವರಲ್ಲಿ ವಿರಳವಾಗಿ ವ್ಯಕ್ತವಾಗುವುದು ಕಾಣಿಸುತ್ತದೆ. ಇದರ ಕಾರಣವನ್ನು ಅರಿಯಬೇಕಾಗಿದೆ.

ಪ್ರಸ್ತುತವಾಗಿ ಜಾಲಭಾಗದ ಜನರ ಆಡುಮಾತಿನಲ್ಲಿ ಕನ್ನಡ ಮತ್ತು ತೆಲುಗು ಭಾಷೆಯನ್ನು ಸಮಾನವಾಗಿ ಸ್ವೀಕರಿಸಿ ದ್ವಿಭಾಷಿಕ ಪರಿಸರ ಉಂಟಾಗಿದೆ. ಈ ಒಂದು ಪ್ರಕ್ರಿಯೆಯು ಯಾವ ಯಾವ ಕಾರಣಗಳಿಂದ ಉಂಟಾಗಿದೆ ಎಂಬುದನ್ನು ಅಧ್ಯಯನಕ್ಕೆ ಒಳಪಡಿಸುವ ಅಗತ್ಯವಿದೆ.

ಈ ಮೇಲಿನ ಸಂಗತಿಗಳು ದ್ವಿಭಾಷೆ ಮತ್ತು ಬಹುಭಾಷಿಕ ಸಂಗತಿಗಳನ್ನು ನಿರ್ಧರಿಸುವಲ್ಲಿ ಮಹತ್ವದ ಸಂಗತಿಗಳಾಗುತ್ತವೆ. ದ್ವಿಭಾಷಿಕ ಭಾಷಾ ಬಳಕೆಯಲ್ಲಿನ ಉಚ್ಚಾರಣೆ, ಶಬ್ದಬಳಕೆಗಳಲ್ಲಿ ಕಾಣುವ ಭಿನ್ನತೆಯನ್ನು ವಿವರವಾಗಿ ಗುರುತಿಸಿ, ಹೀಗೆ ಗುರುತಿಸಲಾದ ಭಾಷಾ ಭಿನ್ನತೆಗೆ ಅನುಗುಣವಾಗಿ ಯಾವ ಯಾವ ಸಾಮಾಜಿಕ ಸಂಗತಿಗಳಲ್ಲಿ ಇಂತಹ ವ್ಯತ್ಯಾಸವಾಗುವುದು ಎಂಬುದನ್ನು ತಿಳಿಯುವುದು ಮುಖ್ಯವಾದದ್ದು. ಅದರೊಂದಿಗೆ ಅವುಗಳ ನಡುವೆ ಇರಬಹುದಾದ ಕ್ರಿಯೆ ಮತ್ತು ಕಾರಣಗಳ ಸಂಬಂಧಗಳನ್ನು ತಿಳಿಯುವುದು ದ್ವಿಭಾಷಿಕ ಪರಿಸರವನ್ನು ಅರಿಯಲು ಮುಖ್ಯವಾಗುತ್ತದೆ. ಇವೆಲ್ಲಾ ಸಂಗತಿಗಳನ್ನು ಬೆಂಗಳೂರಿನ ಗ್ರಾಮೀಣ ಜನರ ಭಾಷೆಯಲ್ಲಿ ಅರಿಯುವ ಪ್ರಯತ್ನವು ಈ ಅಧ್ಯಯನವು ಒಳಗೊಂಡಿದೆ.

ಕೊನೆ ಟಿಪ್ಪಣಿಗಳು

೧. ಡಾ.ಕೃಷ್ಣಪರಮೇಶ್ವರ ಭಟ್ಟ, ೨೦೧೩, ಸಾಮಾಜಿಕ ಸಂಧರ್ಭ, ಪುಟ ೧೦೪

೨. ಅದೇ, ಪುಟ ೧೦೪

೩. ಅದೇ, ಪುಟ ೧೦೫

೪. ಡಾ. ಕೆ.ವಿ. ನಾರಾಯಣ(ಸಂ), ಭಾಷೆ(ವಿಶ್ವಕೋಶ ೧), ಪುಟ ೩೩೭

೫. ಡಾ. ಕೆ. ಕೆಂಪೇಗೌಡ, ಸಾಮಾನ್ಯ ಭಾಷಾ ವಿಜ್ಞಾನ, ಪುಟ ೭೬

೬. ಡಾ. ಕೆ.ವಿ. ನಾರಾಯಣ(ಸಂ), ಭಾಷೆ(ವಿಶ್ವಕೋಶ ೧), ಪುಟ ೩೩೭

೭. ಅದೇ, ಪುಟ ೩೩೬.

೮. ಅದೇ, ಪುಟ ೨೯೭.

೯. ಡಾ. ಕೃಷ್ಣಪರಮೇಶ್ವರ ಭಟ್ಟ, ತೆಲುಗು–ಕನ್ನಡ ದ್ವಿಭಾಷಿಕ ಅಧ್ಯಯನ. ೧೯೯೫, ಪುಟ ೪.

೧೦. ಡಾ.ಕೃಷ್ಣಪರಮೇಶ್ವರ ಭಟ್ಟ, ೨೦೧೩, ಸಾಮಾಜಿಕ ಸಂಧರ್ಭ, ಪುಟ ೫೭.

೧೧. ಅದೇ, ಪುಟ ೩.

೧೨. ಅದೇ, ಪುಟ ೬.

೧೩. ಅದೇ, ಪುಟ ೧೦೩.

೧೪. ಡಾ. ಕೆ.ವಿ. ನಾರಾಯಣ(ಸಂ), ಭಾಷೆ(ವಿಶ್ವಕೋಶ ೧), ಪುಟ ೩೩೬.

೧೫. ಡಾ. ಕೆ. ಕೆಂಪೇಗೌಡ, ಸಾಮಾನ್ಯ ಭಾಷಾ ವಿಜ್ಞಾನ, ಪುಟ ೪೧೪.

****

ಅಧ್ಯಾಯ – ೩

ಭಾಷಿಕ ಬದಲಾವಣೆಯ ನೆಲೆಗಳು

ಒಂದು ಭಾಷೆಯ ಬದಲಾವಣೆಯ ಸ್ಥಿತಿಯು ಹೇಗೆ ಉಂಟಾಗುವುದು ಎಂದೂ, ನಿಶ್ಚಿತವಾಗಿ ಹೀಗೆ ಬದಲಾಗಿದೆ ಎಂದೂ, ಯಾವಾಗ ಯಾರಿಂದ ಏಕೆ ಬದಲಾವಣೆಯಾಗಿದೆ ಎಂದು ಹೇಳುವುದು ಕ್ಲಿಷ್ಟವೇ ಆಗಿದೆ. ಆದರೆ ಈ ಬದಲಾವಣೆಯು ಪ್ರದೇಶದಿಂದ ಪ್ರದೇಶಕ್ಕೆ, ಸಮಾಜದಿಂದ ಸಮಾಜಕ್ಕೆ ಭಿನ್ನವಾಗಿ ಬದಲಾಗುವುದನ್ನು ಕಾಣಬಹುದಾಗಿದೆ. ಇದು ಭಾಷಾಬಳಕೆಯ ಸಂದರ್ಭದಲ್ಲಿ ಉಂಟಾಗುವ ವ್ಯತ್ಯಾಸವಾಗಿದೆ. ಆದರೆ ಭಾಷೆಯ ಬದಲಾವಣೆಯನ್ನು ತಿಳಿಯಲು ಮುಂದಾದಾಗ ಸಾಮಾಜಿಕವಾಗಿ ಒಂದು ಭಾಷೆಯ ಬದಲಾವಣೆಯು ಹಲವು ನೆಲೆಗಳಲ್ಲಿ ಕಂಡುಬರುತ್ತದೆ.

ಬೆಂಗಳೂರು ಉತ್ತರ ತಾಲ್ಲೂಕಿನ ವಿವಿಧ ಹೋಬಳಿಗಳನ್ನು ಗಮನಿಸಿದಾಗ ಆ ಜನರಾಡುವ ಆಡುಭಾಷೆಯು ಹಲವು ನೆಲೆಗಳಲ್ಲಿ ಬದಲಾಗಿರುವುದನ್ನು ಗುರುತಿಸಿದ್ದೇನೆ. ಅಂತಹ ಪ್ರಮುಖವಾದ ಬದಲಾವಣೆಗಳೆಂದರೆ – ಸಾಮಾಜಿಕ, ರಾಜಕೀಯ, ಆರ್ಥಿಕ, ಭೌಗೋಳಿಕ ನೆಲೆಗಳಾಗಿರುವುದನ್ನು ಗುರುತಿಸಿದ್ದೇನೆ.

೩.೧ ಸಾಮಾಜಿಕ ನೆಲೆ

ಆಡುಭಾಷೆಯೆಂದ ಕೂಡಲೇ ಆಡುವವರು ಯಾವ ಸಾಮಾಜಿಕ ಪರಿಸರದಲ್ಲಿ ಭಾಷೆಯನ್ನು ಬಳಸುತ್ತಿದ್ದಾರೆ ಎಂಬುದನ್ನು ತಿಳಿಯಬೇಕಾಗುತ್ತದೆ. ಸಮಾಜ ಎಂದರೆ, ಹಿನ್ನಲೆಯಲ್ಲಿ ಪ್ರದೇಶ, ವರ್ಗ, ಜಾತಿ ಎಂಬುದಾಗಿದೆ. ಇಲ್ಲಿ ಭಾಷಿಕರ ಜನಾಂಗೀಯ ಹಿನ್ನಲೆಯು ಮುಖ್ಯವಾಗುತ್ತದೆ. ಬೆಂಗಳೂರು ಗ್ರಾಮೀಣ ಜನರ ಸಾಮಾಜಿಕ ನೆಲೆಗಳನ್ನು ವಿವಾಹ, ಸ್ವೀಕರಣ, ವಲಸೆಯ ಅಂಶಗಳ ಮೂಲಕ ತಿಳಿಯಬಹುದು.

ಸಾಮಾಜಿಕ ಸ್ತರ/ಅಂತಸ್ತು : ಒಂದು ಸಮಾಜದ ವ್ಯಕ್ತಿಗೆ ಮತ್ತೊಂದು ಸಮಾಜದೊಂದಿಗೆ ವಿವಿಧ ಕಾರಣಗಳಿಗೆ ಸಂಪರ್ಕವು ಏರ್ಪಡುತ್ತದೆ. ಆಗ ಇಬ್ಬರು ಪರಸ್ಪರ ಬೆರೆತು ಭಾಷಿಕವಾಗಿ ಸಂಪರ್ಕವನ್ನು ಸಾಧಿಸುತ್ತಾರೆ. ಇದು ದ್ವಿಭಾಷೆ ಅಥವಾ ಬಹುಭಾಷಿಕತೆಯು ನಿರ್ಮಾಣವಾಗಲು ಕಾರಣವಾಗುತ್ತದೆ. ಸಮಾಜದ ವಿವಿಧ ವಲಯಗಳಾದ ಶಾಲೆ, ಮಾರ್ಕೆಟ್, ಬಸ್ ಪ್ರಯಾಣದಲ್ಲಿ, ಕೆಲಸ ನಿರ್ವಹಿಸುವ ಸ್ಥಳಗಳಲ್ಲಿ ಪರಸ್ಪರ ಸಂಪರ್ಕದಿಂದ ಭಾಷಿಕ ಬದಲಾವಣೆಗಳುಂಟಾಗುತ್ತವೆ. ಮಾತೃಭಾಷಿಕನು ಬೇರೊಂದು ಸಮಾಜದವರಲ್ಲಿ ವ್ಯವಹರಿಸುತ್ತಾ ಅವರಾಡುವ ಭಾಷೆಯನ್ನು ಕಲಿಯಲು ಮುಂದಾಗಿ ತನ್ನ ಮೂಲ

ಭಾಷೆಯನ್ನು ಕೆಲವು ವ್ಯತ್ಯಾಸಗಳೊಂದಿಗೆ ಬಳಸುತ್ತಾನೆ. ಇಲ್ಲಿ ಜಾತಿ ಮತ್ತು ವರ್ಗವು ಪ್ರಮುಖ ಕಾರಣವಾಗುತ್ತದೆ. ಉದಾ – ಬೆಂಗಳೂರಿನ 'ಜಾಲ' ಭಾಗದ ವಕ್ಕಲಿಗರಲ್ಲಿ ಹೆಚ್ಚು ತೆಲುಗು ಮಾತನಾಡುವವರಿದ್ದಾರೆ. ಅವರು 'ಮರಸು' ವಕ್ಕಲಿಗರಾಗಿದ್ದು, ಅವರ ಮೂಲವು ಆಂಧ್ರವಾಗಿದೆ. ಹೀಗಾಗಿ ಅವರಿಗೆ ತೆಲುಗು ಮೂಲ ಭಾಷೆಯಾಗಿತ್ತು. ತದನಂತರ ಬೆಂಗಳೂರಿನತ್ತ ಧಾವಿಸಿದಂತಹ ತೆಲುಗು ಸಮಾಜದವರು ಕನ್ನಡವನ್ನು ಕಲಿತು ಕನ್ನಡಿಗರಾಗಿಯೇ ಈ ಸಮಾಜದಲ್ಲಿ ವ್ಯವಹರಿಸುವುದನ್ನು ಕಾಣಬಹುದು. ಉದಾಹರಣೆಗೆ– ಜಾಲದಲ್ಲಿ ನಾಯಕ ಜಾತಿಯವನು 'ಏನೋ ನಿಂದ್ ಕತೆ, ಇದೇನಾ ನೀನ್ ಸ್ಕೂಲ್ಕ ವೋಗ್ ಕಲ್ಯಾದು' ಎಂದು ಬಳಸಿದರೇ ಮರಸು ವಕ್ಕಲಿಗರಾದವನು 'ಏನ್ಲೊ ನಿನ್ ಕತಾ, ಇದ್ಯಾ ನಿನ್ಕ ಸ್ಕೂಲ್ನಾಕ್ ವೋಗ್ ಕಲ್ತಿ' ಎಂದು ಬಳಸುತ್ತಾನೆ. ಇಲ್ಲಿ ಬದಲಾವಣೆಗೆ ಪ್ರಮುಖವಾಗಿ ತೆಲುಗು ಮೂಲದವರಾಗಿರುವುದು ಕಾರಣವಾಗಿದೆ. ಹೀಗೆ ತೆಲುಗು ಮತ್ತು ಕನ್ನಡ ಮಾತನಾಡುವಂತಹ ದ್ವಿಭಾಷಿಕರು ವೈವಾಹಿಕ ಸಂಬಂಧವನ್ನು ಪರಸ್ಪರ ಬೆಳೆಸಿದ್ದಾರೆ. ಇನ್ನೊಂದು ವ್ಯತ್ಯಾಸಕ್ಕೆ ಕಾರಣ ಜಾತಿಯಾಗಿದೆ. ಮೇಲ್ಜಾತಿ ಮತ್ತು ಕೆಳಜಾತಿಯವರು ಮಾತನಾಡುವ ರೀತಿಯು ಭಿನ್ನವಾಗಿರುತ್ತದೆ. ಉದಾಹರಣೆಗೆ 'ಏನ್ ಇವುನ್ಕ ಇರೋ ಕೊಬ್ಬ್' ಎಂದು ಬಳಸಿದರೇ ಕೆಳವರ್ಗದವರು 'ಏಸ್ ಅಯ್ತ್ ಚರ್ಬು ಇವ್ನ್ಕ' ಎಂದು ಬಳಸುತ್ತಾರೆ. ಇಲ್ಲಿ ಮೇಗ್ವರ್ಗದ ಜನರು ಕನ್ನಡ ಪದ ಬಳಕೆಯನ್ನು ಹೆಚ್ಚು ಬಳಸುತ್ತಿದ್ದರೆ, ಕೆಳವರ್ಗದ ಜನರು ತೆಲುಗು ಪದಗಳನ್ನು ಹೆಚ್ಚು ಬಳಸುತ್ತಾರೆ. ಅದರಲ್ಲೂ ಸ್ತ್ರೀ–ಪುರುಷರು ಆಡುವ ಮಾತುಗಳು. ವಯಸ್ಸು ಎಲ್ಲವೂ ಸಾಮಾಜಿಕ ನೆಲೆಯಲ್ಲಿ ಮುಖ್ಯವಾಗುತ್ತವೆ.

ವಿವಾಹ: ವಿವಾಹ ಸಂಬಂಧಗಳಿಂದ ದ್ವಿಭಾಷಿಕ ಪರಿಸರವು ಉಂಟಾಗುತ್ತದೆ. ಬೆಂಗಳೂರು ಉತ್ತರ ತಾಲ್ಲೂಕಿನ ಜಾಲ ಭಾಗದ ತೆಲುಗು ಬಲ್ಲವರು ವಿವಾಹ ಸಂಬಂಧವನ್ನು ಭಿನ್ನ ಭಾಷಿಕರೊಡನೆ ನಡೆಸುವುದರಿಂದಾಗಿ ಭಾಷೆಯಲ್ಲಿ ಬದಲಾವಣೆಯು ಸಹಜವಾಗಿ ನಡೆಯುತ್ತದೆ. ಜಾಲ ಭಾಗದಲ್ಲಿ ವಿವಾಹವಾಗಲು ಬಯಸುವವರು ತಾವಾಡುವ ಭಾಷೆಯು ಪರಸ್ಪರರಿಗೆ ಗೊತ್ತಿರಬೇಕು ಎಂದು ತೀರ್ಮಾನಿಸಿ ಮದುವೆ ಮಾಡಿಕೊಳ್ಳುತ್ತಿರುವುದನ್ನು ಗುರುತಿಸಲಾಗಿದೆ. ಇದನ್ನು ಸಂದರ್ಶನದ ವೇಳೆಯಲ್ಲಿ ವ್ಯವಸಾಯವನ್ನು ಮಾಡಿಕೊಂಡು ಜೀವನ ನಿರ್ವಹಿಸಿರುವ ಸುಮಾರು ೫೮ ವಯಸ್ಸುಳ್ಳ ಹಿರಿಯರಾದ ಶಾನುಭೋಗನಹಳ್ಳಿಯ ಶ್ರೀಯುತ ರಾಮಣ್ಣನವರು ಮಾಹಿತಿಯನ್ನು ತಿಳಿಸಿದರು. ಜಾಲ ಭಾಗದಲ್ಲಿ ವಿವಾಹಿತನಾದ ಗಂಡು ಅಥವಾ ಹೆಣ್ಣು ಪರಸ್ಪರ ತೆಲುಗು ಕನ್ನಡ ಭಾಷೆಯು ಗೊತ್ತಿರಬೇಕು. ಮದುವೆಯಾದವರಿಗೆ ಮನೆಯಲ್ಲಿ ಪರಸ್ಪರ

ವ್ಯವಹರಿಸಲು ಎರಡೂ ಭಾಷೆಯನ್ನು ಕಲಿತಿರಬೇಕು, ಅಂತವರೊಂದಿಗೆ ವಿವಾಹ ಸಂಬಂಧವನ್ನು ಮಾಡುತ್ತಾರೆ. ಹೀಗೆ ಜಾಲ ಮತ್ತು ಯಲಹಂಕ ಪೂರ್ವಭಾಗದಲ್ಲಿ ನಡೆಯುವ ವಿವಾಹವು ಭಾಷಿಕ ಬದಲಾವಣೆಯ ಕ್ರಿಯೆಯಲ್ಲಿ ಮುಖ್ಯವೆನಿಸುತ್ತದೆ.

ವಲಸೆ: ಆಂಧ್ರ ಮತ್ತು ತೆಲುಗು ಬಲ್ಲ ಗಡಿಪ್ರದೇಶಗಳನ್ನು ಹೊಂದಿದ ಪ್ರದೇಶಗಳಲ್ಲಿನ ಜನರು ಉದ್ಯೋಗ, ವಿದ್ಯಾಭ್ಯಾಸ ಮತ್ತಿತರ ಉದ್ದೇಶಗಳ ಸಂದರ್ಭಗಳಲ್ಲಿ ವಲಸೆ ಬಂದು ಭಾಷಿಕವಾಗಿ ಸಂಪರ್ಕವನ್ನು ಹೊಂದಿರುವುದು ಭಾಷಿಕ ಬದಲಾವಣೆಗೆ ಕಾರಣವಾಗಿದೆ.

ಒಂದು ಪ್ರಧಾನ ಭಾಷೆಯ ಪರಿಸರದ ಮಧ್ಯೆ ವಲಸೆಹೋಗಿ ನೆಲೆಸಿ, ದ್ವಿಭಾಷಿಕವಾದ ಸಮಾಜದೊಡನೆ ನೆಲೆಸಿ ಅಲ್ಲಿ ಅಲ್ಪಸ್ವಲ್ಪ ವ್ಯತ್ಯಾಸದೊಡನೆ ನೇರವಾಗಿ ಭಾಷೆಯು ಸ್ವೀಕರಣಗೊಳ್ಳುತ್ತದೆ. ಅಂತೆಯೇ ಬೆಂಗಳೂರು ಉತ್ತರ ತಾಲ್ಲೂಕಿನ ಜಾಲ ಭಾಗದಲ್ಲಿ ತೆಲುಗು ಬಲ್ಲವರು ನೆಲೆಸಿ ಕನ್ನಡವನ್ನು ಕಲಿತು ಅಲ್ಪಸ್ವಲ್ಪ ವ್ಯತ್ಯಾಸದೊಡನೆ ಸ್ವೀಕರಿಸುತ್ತಿದ್ದಾರೆ.

೩.೨. ಆರ್ಥಿಕ ನೆಲೆ

ಒಂದು ಸಮಾಜದಲ್ಲಿರುವ ಜನರು ಆರ್ಥಿಕವಾಗಿ ಪ್ರಬಲವಾಗಿದ್ದಾರೆಯೇ ಅಥವಾ ದುರ್ಬಲರಾಗಿದ್ದಾರೆಯೇ ಎಂಬುದನ್ನು ಅವರಾಡುವ ಭಾಷೆಯಿಂದಲೂ ನೋಡಬಹುದು. ಒಂದು ಸಮಾಜದಲ್ಲಿ ಪ್ರಬಲವಾದ ಭಾಷೆಯು ಸುಸಂಸ್ಕೃತ ರೀತಿಯಲ್ಲಿ ಮೇಲ್ವರ್ಗದವರ ಮಾತಿನಲ್ಲಿ ಕಂಡುಬರುತ್ತದೆ. ಕೆಳವರ್ಗದವರು ಹೆಚ್ಚು ಸ್ಥಳೀಯವಾಗಿ ಉಚ್ಚಾರಣೆಯಲ್ಲಿ ಅನೌಪಚಾರಿಕ ವಿಧಾನವನ್ನು ಅನುಸರಿಸಿದರೆ, ಮೇಲ್ವರ್ಗದವರ ಉಚ್ಚಾರಣೆಯಲ್ಲಿ ಹೆಚ್ಚು ಔಪಚಾರಿಕತೆ ಇರುತ್ತದೆ. ಕೃಷಿ ಚಟುವಟಿಕೆಯಲ್ಲಿ ಯಜಮಾನ ಕೂಲಿಕಾರ್ಮಿಕರ ನಡುವೆ ನಡೆಯುವ ಭಾಷಿಕ ಕ್ರಿಯೆಯಲ್ಲೂ ಈ ವ್ಯತ್ಯಾಸವನ್ನು ಕಾಣಬಹುದು. ಉದಾ ಜಾಲ ಭಾಗದಲ್ಲಿ– ಮೇಲ್ವರ್ಗದ ವ್ಯಕ್ತಿ 'ಹೊಲ್ಕ ಗೊಬ್ರ ಆಕ್ಬಾರ್ಲ ನಾರಾಯ್ಣಿ' ಎಂದು ಕೆಲಸ ಹೇಳಿದರೆ, ಅದೇ ಕೆಳವರ್ಗದ ವ್ಯಕ್ತಿಯು 'ಹೊಲ್ಕ ಲಾಗೋಡ್ ತಗೊಂಟ್ ಅಟ್ ಬಾರ್ಲ' ಎಂದು ಹೇಳುತ್ತಾರೆ. ಈ ಎರಡು ಭಾಷಿಕ ಸಂಬೋಧನೆಯ ಅರ್ಥವು ಒಂದೇ ಆಗಿದ್ದರೂ ಆ ಹೇಳಿಕೆಗೆ ಬಳಸುವ ಪದಗಳು ಬೇರೆ ಬೇರೆಯಾಗಿವೆ. ಹೀಗೆ ಅಂತಸ್ತು/ ವರ್ಗವೂ ಭಾಷಿಕ ಬದಲಾವಣೆಗೆ ಕಾರಣವಾಗುತ್ತವೆ. ಹಾಗೆಯೇ ಆರ್ಥಿಕತೆ ಮತ್ತು ವಿದ್ಯಾಭ್ಯಾಸಗಳು ದ್ವಿಭಾಷಿಕತೆಗೆ ಮುಖ್ಯವಾಗುತ್ತವೆ. ಹಣವಂತರು ಹಲವು ಸಾಮಾಜಿಕ ಕ್ಷೇತ್ರದ ವ್ಯವಹಾರಗಳಿಗೆ ಮಾತೃಭಾಷೆಯ ಜೊತೆಗೆ ಹಲವು ಭಾಷೆಗಳನ್ನು ಕಲಿತು ಬಳಸಲು ಮುಂದಾಗುತ್ತಾರೆ. ಅದು ಕೆಲವೊಮ್ಮೆ ಪ್ರತಿಷ್ಠೆಯ ಪ್ರಶ್ನೆಯೂ ಆಗುತ್ತದೆ. ಶ್ರೀಮಂತರು ಶ್ರೀಮಂತರ ನಡುವಿನ ಸಂಬಂಧಗಳಿಗಾಗಿ,

ಹಲವು ರೀತಿಯ ಭಾಷೆಯನ್ನು ಕಲಿಯಬೇಕೆಂಬ ಹಂಬಲದಿಂದ ಭಾಷೆಯನ್ನು ಕಲಿಯಲು ಮುಂದಾದಾಗ ದ್ವಿಭಾಷಿಕ ಪರಿಸರವು ಉಂಟಾಗುತ್ತದೆ. ಆದರೇ ತನ್ನ ಮೂಲ ಭಾಷಾಸ್ವರೂಪವನ್ನು ಆಳವಡಿಸಿಕೊಂಡೆ ಭಾಷಿಕನು ಕಲಿಯಲು ಮುಂದಾಗುತ್ತಾನೆ. ಮತ್ತೊಂದು, ನಗರೀಕರಣ ಪ್ರಕ್ರಿಯೆಯು ಬೆಳೆದಂತೆಲ್ಲಾ ಗ್ರಾಮೀಣ ಪ್ರದೇಶಗಳೆಲ್ಲಾ ನಗರದ ಶ್ರೀಮಂತ ಜೀವನವನ್ನು ಅಳವಡಿಸಿಕೊಳ್ಳಲು ಬಯಸುತ್ತಾರೆ. ಕೃಷಿಯ ಭೂಮಿಯನ್ನು ಮಾರುವುದರ ಮೂಲಕ ಹಣಗಳಿಸುತ್ತಾರೆ. ಹೀಗೆ ಆರ್ಥಿಕವಾಗಿ ಪ್ರಬಲವಾದಾಗ ಅವರ ಜೀವನ ಶೈಲಿಯಲ್ಲಿ ಬದಲಾವಣೆಗಳಾಗುತ್ತಿವೆ. ಅಂದರೆ ಗುಡಿಸಲು ಬಂಗಲೆಗಳಾಗಿ, ಕೃಷಿಭೂಮಿಯು ಕಾರ್ಖಾನೆಗಳಾಗುತ್ತಿವೆ. ಜಮೀನಿಲ್ಲದವರು ಗುಡಿಸಲುಗಳಲ್ಲಿ ವಾಸಿಸುತ್ತಿದ್ದರೆ, ಇರುವವರು ಮಾರಿ ಬಂಗಲೆಗಳನ್ನು ಕಟ್ಟಿಸಿಕೊಂಡು ಜೀವನ ನಡೆಸುತ್ತಿದ್ದಾರೆ. ಇದು ಹೆಚ್ಚು ಜಾಲ, ಯಲಹಂಕ ಭಾಗಗಳಲ್ಲಿ ನಡೆಯುತ್ತಿದೆ. ಹೀಗಾಗಿ ಅವರ ಜೀವನ ಶೈಲಿಯೊಂದಿಗೆ ಅವರಾಡುವ ಭಾಷೆಯಲ್ಲೂ ಭಿನ್ನತೆಯುಂಟಾಗುತ್ತಿದೆ.

ವಿದ್ಯಾಭ್ಯಾಸವು ಕೂಡ ಭಾಷಿಕ ಬದಲಾವಣೆಗೆ ಕಾರಣವಾಗುತ್ತದೆ. ಆರ್ಥಿಕವರ್ಗದಂತೆಯೇ ವಿದ್ಯೆಯ ಮಟ್ಟದಲ್ಲಿನ ವ್ಯತ್ಯಾಸವು ಭಾಷಾಭಿನ್ನತೆಗೆ ಕಾರಣವಾಗುತ್ತದೆ. ವಿದ್ಯಾಭ್ಯಾಸದ ದೃಷ್ಟಿಯಿಂದ ಹಲವು ಭಾಷೆಗಳ ಅಧ್ಯಯನವನ್ನು ಮಾಡಿ, ತನ್ನ ಮಾತೃಭಾಷೆಯ ಸ್ವರೂಪವನ್ನು ಬೆರೆಸಿ ಬಳಕೆಯನ್ನು ಮಾಡುತ್ತಾರೆ. ಹೀಗಾಗಿ ವಿದ್ಯಾಭ್ಯಾಸ ಮತ್ತು ವೃತ್ತಿಯು ಭಾಷಿಕ ಬದಲಾವಣೆಗೆ ಕಾರಣವಾಗುತ್ತವೆ.

ಉದ್ಯೋಗದ ನೆಲೆ: ವೃತ್ತಿ ಪರಿಸರದ ನೆಲೆಗಳಲ್ಲಿ ಒಂದು ಭಾಷೆಯನ್ನು ಆಡುವ ಜನರಲ್ಲಿ ಬೇರೊಂದು ಸಾಮಾಜಿಕರ ಸಂಪರ್ಕದಿಂದ ಭಾಷೆಯಲ್ಲಿ ಬದಲಾವಣೆಯಾಗುತ್ತಿವೆ. ಒಬ್ಬ ವ್ಯಕ್ತಿಯು ಕೈಗಾರಿಕೆ ಅಥವಾ ಕೂಲಿಕೆಲಸ ಮಾಡುವಾಗ ಆ ವಲಯಗಳಲ್ಲಿ ಭಿನ್ನ ಭಾಷಿಕರ ಸಂಪರ್ಕವನ್ನು ಹೊಂದುವರು. ಅವರಾಡುವ ನುಡಿಗಳ ಅನುಕರಣೆ ಮತ್ತು ಪದಬಳಕೆಯನ್ನು ತಮಗರಿವಿಲ್ಲದಂತೆ ತಿಳಿದು ಮಾತನಾಡಲು ಮುಂದಾಗುತ್ತಾರೆ. ಇಂತಹ ಕಾರ್ಯಗಳಲ್ಲಿ ಸ್ತ್ರೀ ಪುರುಷರು ಇಬ್ಬರೂ ಭಿನ್ನವಾಗಿ ಭಾಷೆ ಬಳಸುವುದನ್ನು ಕಾಣಬಹುದು. ಕೆಲಸವನ್ನು ಅರಸುತ್ತಾ ಬಂದವರು ಸಹ ಭಾಷಾ ಬದಲಾವಣೆಗೆ ಕಾರಣವಾಗುತ್ತಾರೆ. ಬೆಂಗಳೂರು ಉತ್ತರ ತಾಲ್ಲೂಕಿನ ಜಾಲ ಮತ್ತು ಯಲಹಂಕ ಪೂರ್ವಭಾಗದ ಹಳ್ಳಿಗಳಲ್ಲಿ ಈ ರೀತಿಯ ಬದಲಾವಣೆಗಳು ಹೆಚ್ಚಾಗಿವೆ. "**೧೮೯೩**ರಿಂದ **೧೯೬೨** ರವರೆಗೆ ಬೆಂಗಳೂರಿನಿಂದ ಪ್ರಮುಖ ನಗರಗಳಿಗೆ ರೈಲ್ವೆಮಾರ್ಗಗಳನ್ನು ನಿರ್ಮಿಸಲಾಯಿತು. ಅದರಲ್ಲಿ ಬೆಂಗಳೂರು ಜೋಲಾರಪೇಟೆಗೆ ಮಾರ್ಗ ಮಾಡಿ ಮದ್ರಾಸ್ ಬಂದರಿಗೆ ಸಂಪರ್ಕ ಕಲ್ಪಿಸಲಾಗಿತ್ತು."[೧] ಅದಕ್ಕೆ ಸಾಕಷ್ಟು ಕನ್ನಡಿಗರಲ್ಲದೆ, ತಮಿಳು, ತೆಲುಗಿನವರು ಕೆಲಸ ಮಾಡಿದರು. ಹೀಗೆ ಆರ್ಥಿಕ ವಲಯದಲ್ಲಿ ವೃತ್ತಿಯ ಮೂಲಕ ಸಂಪರ್ಕವು ಏರ್ಪಟ್ಟಿದ್ದು ಭಾಷಾ ಭಿನ್ನತೆಗೆ ಕಾರಣವಾಗಿರುತ್ತದೆ.

೩.೩ ಭೌಗೋಳಿಕ ನೆಲೆ

ಒಂದು ಪ್ರದೇಶವು ಮತ್ತೊಂದು ಪ್ರದೇಶದ ವ್ಯಕ್ತಿಗಳೊಂದಿಗೆ ಸಂಪರ್ಕಗೊಂಡಾಗ ಭಾಷಿಕ ಬದಲಾವಣೆಗೆ ಕಾರಣವಾಗುತ್ತದೆ. ಆಯಾ ನೆಲದಲ್ಲಿ ಭಿನ್ನ ಭಿನ್ನ ಭಾಷೆಯಾಡುವ ಜನರಿದ್ದು ಭಿನ್ನ ಪ್ರದೇಶದ ಜನರು ಪರಸ್ಪರ ಕೊಡುಕೊಳ್ಳುವ ವ್ಯವಹಾರ, ವಲಸೆ, ವೃತ್ತಿ ಅರಸಿ ಹೋಗುವ ಕಾರಣಗಳೊಂದಿಗೆ ಒಬ್ಬೊಬ್ಬರ ಭಾಷಿಕ ವ್ಯವಹಾರಗಳು ನಡೆಯುತ್ತವೆ. ಆಗ ಪ್ರಧಾನ ಭಾಷೆಯನ್ನು ಅಧೀನ ಭಾಷಿಕರು ಕಲಿಯಲು ಮುಂದಾಗುತ್ತಾರೆ. ಕೆಲವು ಸಂದರ್ಭಗಳಲ್ಲಿ ಅಧೀನ ಭಾಷೆಯನ್ನು ಪ್ರಧಾನ ಭಾಷಿಕರು ಕಲಿಯಲು ಮುಂದಾಗುತ್ತಾರೆ. ಕ್ರಮೇಣ ಈ ರೀತಿಯಲ್ಲಿ ನಡೆಯುವ ಕ್ರಿಯೆಯು ಭಾಷಿಕ ಭಿನ್ನತೆಯುಂಟು ಮಾಡುತ್ತದೆ. ವಲಸೆ ಬಂದ ತೆಲುಗು ಭಾಷಿಕನು ಮಾತನಾಡುವ ಸಂದರ್ಭದಲ್ಲಿ ಬೇರೊಬ್ಬ ತೆಲುಗು ಭಾಷಿಕನೊಡನೆ ವ್ಯವಹರಿಸುವಾಗ ಅವನ ಮಾತಿನಲ್ಲಿ ಹೆಚ್ಚು ತೆಲುಗು ಪದಗಳೊಡನೆ ಕನ್ನಡ ಪದಗಳನ್ನು ಬಳಸುತ್ತಾನೆ. ಆದರೆ ಕನ್ನಡ ಭಾಷಿಕನೊಡನೆ ಮಾತನಾಡುವಾಗ ಹೆಚ್ಚು ಕನ್ನಡವನ್ನು ಬಳಸುತ್ತಿರುವುದನ್ನು ಜಾಲ ಭಾಗಗಳಲ್ಲಿ ಕಂಡುಬರುತ್ತದೆ. ಉದಾ: 'ಸೂಡಪ್ಪ ನನ್ಕ ಪೆಂಡ್ಲಿ ವದ್ದೋದ್ದನ್ನ ಶೇಸ್ತಾರು, ಏಮಪ್ಪ ಚೇಸೇದಿ' (ನೋಡಪ್ಪ ನನಗೆ ಮದುವೆ ಬೇಡ ಅಂದರೂ ಮಾಡುತ್ತಾರೆ, ಏನಪ್ಪ ಮಾಡೋದು) ಎಂದು ತೆಲುಗಿನವರ ಜೊತೆ ಭಾಷೆಯು ಬಳಕೆಯಾದರೆ. ಕನ್ನಡದವರೊಡನೆ 'ಏನಯ್ಯಾ ಇವ್ಕ ಬಂದೀರೋದ್ ನಮ್ಕ ಒಂದ್ ಸೊಸ್ನ ಕಟ್ಕಂಡ್ ಬರಾನಂದ್ರು ಇವ್ಕ ಏಮ್ ಚೇಸೇದೀ ನೋಡ್' ಎಂದು ಬಳಸುತ್ತಾರೆ. ಏಕಕಾಲದಲ್ಲಿ ತೆಲುಗು ಮತ್ತು ಕನ್ನಡಿಗರ ಜೊತೆ ಎರಡು ಭಾಷೆಯಲ್ಲಿ ವ್ಯವಹಾರವನ್ನು ನಡೆಸುತ್ತಾರೆ. ಹೀಗೆ ಜಾಲ ಭಾಗದಲ್ಲಿ ಭಾಷೆಯು ಬಳಸುತ್ತಿದ್ದಾರೆ.

ಪ್ರಾದೇಶಿಕ ಗಡಿ ಸಂಪರ್ಕಗಳು: ಒಂದು ಪ್ರದೇಶದ ಗಡಿಯವರು ಮತ್ತೊಂದು ಪ್ರದೇಶದ ಗಡಿಯಲ್ಲಿರುವ ವ್ಯಕ್ತಿಗಳೊಂದಿಗೆ ಸಂಪರ್ಕಗೊಂಡಾಗ ಭಾಷಿಕ ಬದಲಾವಣೆಯು ಉಂಟಾಗುತ್ತದೆ. ಬೆಂಗಳೂರು ಗ್ರಾಮೀಣ ಜನರ ಭಾಷೆಯಲ್ಲಿ ಜಾಲ ಭಾಗದಲ್ಲಿ ಇತರ ಹೋಬಳಿಗಳಿಗಿಂತ ಭಿನ್ನವಾದ ಪದ ಬಳಕೆಯಾಗುತ್ತಿವೆ. ಅದಕ್ಕೆ ಕಾರಣ ಬೆಂಗಳೂರು ಉತ್ತರ ತಾಲ್ಲೂಕು ಭಾಗವು ದೇವನಹಳ್ಳಿ, ನೆಲಮಂಗಲ, ದೊಡ್ಡಬಳ್ಳಾಪುರಕ್ಕೆ ಹೊಂದಿಕೊಂಡಿದ್ದು, ಹೆಚ್ಚು ವ್ಯಾಪಾರಕ್ಕಾಗಿ ಜಾಲ ಮತ್ತು ಯಲಹಂಕ ಪ್ರದೇಶಗಳ ನಿಕಟ ಸಂಪರ್ಕವನ್ನು ಹೊಂದಿದೆ. "೧೯೮೩ ರಲ್ಲಿ ದೇವನಹಳ್ಳಿ ತಾಲ್ಲೂಕಿಗೆ ಒಳಪಟ್ಟ ಜಾಲ ಹೋಬಳಿಯನ್ನು ಬೆಂಗಳೂರು ಉತ್ತರ ತಾಲ್ಲೂಕಿಗೆ ಸೇರಿಸಲಾಗಿದೆ."[೨] ಇದರಿಂದ ಕನ್ನಡ ಮತ್ತು ತೆಲುಗು ಬಲ್ಲವರಾದ ಇವರ ಆಡುಮಾತಿನಲ್ಲಿ ಉತ್ತರ ತಾಲ್ಲೂಕಿನ ಬೇರೆ ಹೋಬಳಿಗಳಿಗಿಂತ (ದಾಸನಪುರ, ಹೆಸರಘಟ್ಟ, ಯಶವಂತಪುರ)

ಭಿನ್ನವಾದ ಭಾಷಾ ಪ್ರಯೋಗಗಳು ಬಳಕೆಯಲ್ಲಿವೆ. ಅದರಲ್ಲಿ ಅಲ್ಲಿನ ಭಾಷೆಯಲ್ಲಿ ಬದಲಾವಣೆಯಾದ ಅಂಶಗಳನ್ನು ಜಾಲ ಭಾಗದ ಧ್ವನಿ ಮತ್ತು ಪದಗಳಲ್ಲಿ ಗುರುತಿಸಲಾಗಿದೆ. ದೇವನಹಳ್ಳಿಯು ಕೋಲಾರಕ್ಕೆ ಸಮೀಪವಾಗಿದ್ದು, ಇಲ್ಲಿನ ಜನರು ತೆಲುಗು ಮತ್ತು ಕನ್ನಡ ಭಾಷೆಗಳನ್ನು ಬಲ್ಲವರಾಗಿದ್ದಾರೆ. ಅವರ ನಿಕಟ ಸಂಪರ್ಕದಿಂದ ಜಾಲ ಹೋಬಳಿಗಳ ಮೇಲೆ ಕ್ರಮೇಣ ಅವರ ಆಡುಮಾತಿನ ಪ್ರಭಾವವು ಉಂಟಾಗಿದೆ. ಒಂದು ಸಮಾಜದಲ್ಲಿ ಜನರು ವಲಸೆ ಬಂದ ಪ್ರಾರಂಭದಲ್ಲಿ ಉಳಿದ ಜನರ ಜೊತೆಗೆ ಸಂಪರ್ಕದ ಕೊರತೆಯಿರುತ್ತದೆ, ಕ್ರಮೇಣ ಸಂಪರ್ಕಜಾಲಗಳು ಏರ್ಪಟ್ಟಾಗ ಸಂಪರ್ಕವು ಒಬ್ಬರಿಗೊಬ್ಬರಿಗೆ ಆಗುವುದು. ಆಗ ಆ ಎರಡು ಸಮಾಜದ ಜನರಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾದ ಸಂಪರ್ಕವು ಏರ್ಪಡುವುದು. ಉದಾ– ಸಂತೆ, ಸ್ಥಳ, ಹೋಬಳಿ, ತಾಲ್ಲೂಕು ಪ್ರದೇಶಗಳಲ್ಲಿ ಸಂಪರ್ಕ ಏರ್ಪಡುವುದು. ಅಲ್ಲಿ ವ್ಯವಹರಿಸುವಾಗ ಸಂಪರ್ಕದಿಂದಾಗಿ ಭಾಷಾ ಭಿನ್ನತೆಯುಂಟಾಗುತ್ತದೆ.

೩.೪ ರಾಜಕೀಯ ನೆಲೆ

ಆಡಳಿತ ಕಾರಣದಿಂದಾಗಿ ರಾಜರು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಜನರನ್ನು ಕರೆತರುವುದು ಕಂಡುಬರುತ್ತದೆ. ಇದು ಕ್ರಮೇಣ ರಾಜಕೀಯವಾಗಿ ವಲಸೆ ಬಂದ ಜನರು ಇನ್ನೊಂದು ಪ್ರದೇಶದ ಭಾಷೆಯ ಮೇಲೆ ಪ್ರಭಾವ ಬೀರುತ್ತಾರೆ. ವಲಸೆ ಬಂದ ಜನರು ಆಡಳಿತಕ್ಕೆ ಅನುಕೂಲವಾದ ಭಾಷೆಯನ್ನು ಕಲಿಯಲು ಮುಂದಾದಾಗ ದ್ವಿಭಾಷಿಕ ಸಮಾಜವು ನಿರ್ಮಾಣವಾಗುತ್ತದೆ. ಪ್ರಾಚೀನ ಕಾಲದಲ್ಲಿ ರಾಜರುಗಳು ಬೇರೆಡೆಯಿಂದ ಬೆಂಗಳೂರಿಗೆ ಕರೆತಂದ ಜನರಿಂದಲೂ ದ್ವಿಭಾಷಿಕ ಸಮಾಜವು ನಿರ್ಮಾಣವಾಗಿದೆ. ಉದಾ – "ವಿಜಯನಗರದ ಆಳ್ವಿಕೆಯ ಕಾಲದಲ್ಲಿ ಆಂಧ್ರದಲ್ಲಿ ಬರಗಾಲ ಬಂದು, ದೊಡ್ಡಸಂಖ್ಯೆಯಲ್ಲಿ ರೈತರು, ನೇಕಾರರು ಬೆಂಗಳೂರಿಗೆ ಬಂದರು"[೩] ಹಾಗೂ "೧೮೩೧ ರಲ್ಲಿ ಬೆಂಗಳೂರು ರಸ್ತೆಗಳ ಜಾಲ ಬೆಳೆದು ಹೊಸಪೇಟೆಗಳು ಉದಯಿಸಿದವು. ವಲಸಿಗರ ಸಂಖ್ಯೆ ಹೆಚ್ಚಿದವು, ಗುಡಿಕೈಗಾರಿಕೆಗಳು ಹೆಚ್ಚಿದವು. ಸಮಗಾರ, ಬಡಗಿ, ತಮಿಳಿನ ಹೂಬೆಳೆಯುವವರು, ತಡಿಕೆ ತಯಾರಕರು ಜಟ್ಟಿಗಳನ್ನು ಬೆಂಗಳೂರಿಗೆ ಕರೆತರಲಾಯಿತು'[೪] ಹೀಗೆ ಜಾಲ ಭಾಗದಲ್ಲಿ ಬದಲಾವಣೆ ಉಂಟಾಗಿವೆ. ಹೀಗೆ ಆಡಳಿತಾತ್ಮಕ ನೆಲೆಗಟ್ಟಿನ ಕಾರಣದಿಂದಾಗಿ ಭಾಷಿಕ ಬದಲಾವಣೆಗಳು ನಡೆಯುತ್ತವೆ.

ಸಾಮಾಜಿಕ ನೆಲೆಯಲ್ಲಿ ಅಂತಸ್ತು ಮತ್ತು ಜಾತಿಯ ಕಾರಣಗಳಿಂದ ಭಾಷಾ ಬಳಕೆಯಲ್ಲಿ ವ್ಯತ್ಯಾಸ ಉಂಟಾದರೆ, ವಿವಾಹದ ವಿಚಾರದಲ್ಲಿ ಬೆಂಗಳೂರಿನ ಜಾಲ ಭಾಗದ ಜನರಲ್ಲಿ ಕೆಲವರು ತೆಲುಗು ಭಾಷೆಯನ್ನು ಆಡುವವರನ್ನೇ ಹುಡುಕಿ ವಿವಾಹ ಸಂಬಂಧವನ್ನು ಬೆಳೆಸುತ್ತಿದ್ದಾರೆ. ಮತ್ತು ಆರ್ಥಿಕವಾಗಿ

ಪ್ರಬಲರಾಗಿರುವ ತೆಲುಗಿನವರು ಕನ್ನಡವನ್ನು ಅಚ್ಚುಕಟ್ಟಾಗಿ ಮಾತನಾಡುತ್ತಿದ್ದಾರೆ. ಅದರೊಂದಿಗೆ ಕನ್ನಡದ ಜೊತೆಗೆ ಹಲವು ತೆಲುಗು ಭಾಷಿಕ ಪದಗಳನ್ನು ಆಡುಮಾತಿನಲ್ಲಿ ಬಳಕೆ ಮಾಡುತ್ತಿದ್ದಾರೆ. ರಾಜಾಳ್ವಿಕೆಯಲ್ಲಿಯೂ ಸಹ ಅನೇಕ ಜನರು ವಲಸಿಗಾರಾಗಿ ಬೆಂಗಳೂರಿಗೆ ಬಂದು ನೆಲೆಸಿದ್ದಾರೆ. ವಿಜಯನಗರದ ಕಾಲ ಮತ್ತು ಕೆಂಪೇಗೌಡರ ರಾಜ್ಯಾಳ್ವಿಕೆ ಕಾಲದಲ್ಲಿ ಹೆಚ್ಚು ತೆಲುಗು ಸಂಪರ್ಕವುಂಟಾಗಿರುವುದು ಇತಿಹಾಸವನ್ನು ತಿಳಿಯುವುದರಿಂದ ಅರಿವಾಗುತ್ತದೆ. ಅದಲ್ಲದೇ ಗಡಿ ಭಾಗಗಳ ವಿಭಜನೆಯಿಂದಲೂ ಭಾಷಿಕ ವ್ಯತ್ಯಾಸಗಳು ಉಂಟಾದವು. ಬೆಂಗಳೂರಿಗೆ ಸಂಬಂಧಿಸಿದಂತೆ ದೇವನಹಳ್ಳಿಯಿಂದ ಜಾಲ ಭಾಗವನ್ನು ಬೆಂಗಳೂರಿಗೆ ಸೇರಿಸಲಾಗಿದೆ. ಇವುಗಳ ನೆಲೆಗಳಿಂದ ಬೆಂಗಳೂರು ಗ್ರಾಮೀಣ ಜನರ ಭಾಷೆಯಲ್ಲಿ ವ್ಯತ್ಯಾಸಗಳು ಉಂಟಾಗುತ್ತಿವೆ.

೩.೫ ಜನಸಂಪರ್ಕದಿಂದ ಭಾಷೆಯ ಮೇಲಾಗುವ ಬದಲಾವಣೆಯ ಪರಿಣಾಮ : ಪಿಜನ್ ಮತ್ತು ಕ್ರಿಯೋಲ್‌ಗಳು

ಒಂದು ಭಾಷೆಯ ಬೇರೆ ಬೇರೆ ಪ್ರಬೇಧಗಳು ಅಥವಾ ಬೇರೆ ಬೇರೆ ಭಾಷಾ ಸಮುದಾಯಗಳು ಸಾಂಧರ್ಭಿಕವಾಗಿ ಬಹುಭಾಷಿಕರು ಅಥವಾ ದ್ವಿಭಾಷಿಕ ನೆಲೆಯಲ್ಲಿ ಒಳಗಾಗಿರುತ್ತಾರೆ. ಒಂದು ಪ್ರದೇಶದಲ್ಲಿ ಬೇರೆ ಬೇರೆ ಭಿನ್ನ ಮಾತೃಭಾಷಿಕರಿದ್ದು ಆ ಭಿನ್ನ ಭಾಷಿಕರ ನಡುವೆ ಪರಸ್ಪರ ವ್ಯವಹಾರಕ್ಕಾಗಿ ಬೇರೊಂದು ಭಾಷೆಯನ್ನು ಅರಿಯುವುದು ಸಂಪರ್ಕಭಾಷೆಯಾದರೇ ಈ ಸಂಪರ್ಕದಿಂದ ಏರ್ಪಟ್ಟಂತಹ ಭಾಷೆಗಳಲ್ಲಿ ಮಿಶ್ರಗೊಳಿಸಿ ಮತ್ತೊಂದು ಭಾಷೆಯ ಅಸ್ಥಿತ್ವಕ್ಕೆ ಕಾರಣವಾಗುತ್ತದೆ. ದ್ವಿಭಾಷಿಕ ಮತ್ತು ಬಹುಭಾಷಿಕ ಸಮಾಜವು ಸಾಂಧರ್ಭಿಕ ಒತ್ತಡಗಳಿಂದ ತಾವು ಬಳಸುತ್ತಿರುವ ಭಾಷೆಯನ್ನು ಬೇರೆ ಬೇರೆ ಹೊಸಭಾಷೆಗಳೊಂದಿಗೆ ಮಿಶ್ರಗೊಳಿಸಿ ಬಳಸುತ್ತಾರೆ. ಅವು ಹೊಸ ಭಾಷೆಯು ಹುಟ್ಟಲು ಕಾರಣವಾಗಿರುತ್ತವೆ. ಇಂತಹ ಹೊಸ ಹೊಸ ಭಾಷೆಯ ಸೃಷ್ಟಿಗೆ ಕಾರಣವಾದ ಅವಸ್ಥೆಗಳನ್ನು ಪಿಜನ್ ಮತ್ತು ಕ್ರಿಯೋಲ್ ಗಳೆಂಬ ಎರಡು ಭಾಷಿಕ ಅವಸ್ಥೆಗಳ ಮೂಲಕ ಗುರುತಿಸಲಾಗುವುದು.

ಕೊನೆ ಟಿಪ್ಪಣಿಗಳು

೧. ಸೂರ್ಯನಾಥ ಕಾಮತ್, *ಬೆಂಗಳೂರು ಗೆಜೆಟಿಯರ್,* ಪುಟ ೮೫

೨. ಡಾ. ಎಂ ವಿಜಯ ಮತ್ತು ಎಂ.ಎಚ್ ಕೃಷ್ಣಯ್ಯ(ಸಂ), *ಬೆಂಗಳೂರು ದರ್ಶನ ೧,* ಪುಟ ೫

೩. ರಾಂ.ನಂ. ಚಂದ್ರಶೇಖರ, *ಚಳುವಳಿ ನೆಲೆ–ಬೆಲೆ,* ಪುಟ ೫

೪. ಸೂರ್ಯನಾಥ ಕಾಮತ್, *ಬೆಂಗಳೂರು ಗೆಜೆಟಿಯರ್,* ಪುಟ ೮೫

****

ಅಧ್ಯಾಯ – ೪

ಬೆಂಗಳೂರು ಉತ್ತರ ತಾಲ್ಲೂಕಿನ ವಿವರಗಳು

೪.೧ ಭೌಗೋಳಿಕ ವಿವರಗಳು

ಬೆಂಗಳೂರು ಉತ್ತರ ತಾಲ್ಲೂಕು ಪ್ರದೇಶವು ಬೆಂಗಳೂರು ನಗರದ ಉತ್ತರ ಭಾಗದಲ್ಲಿದ್ದು, ತಾಲ್ಲೂಕಿನ ಉತ್ತರ ಭಾಗದಲ್ಲಿ ದೊಡ್ಡಬಳ್ಳಾಪುರ ಮತ್ತು ದೇವನಹಳ್ಳಿ, ಪಶ್ಚಿಮದಲ್ಲಿ ನೆಲಮಂಗಲ, ಪೂರ್ವ ಮತ್ತು ದಕ್ಷಿಣಭಾಗದಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕುಗಳಲ್ಲಿ ತನ್ನ ಗಡಿಭಾಗವನ್ನು ಹೊಂದಿಕೊಂಡಿದೆ. ಕ್ಷೇತ್ರಾಧ್ಯಯನದ ಮೂಲಕ ಕಲೆ ಹಾಕಿದ ಮಾಹಿತಿಯಂತೆ ಬೆಂಗಳೂರು ಉತ್ತರ ತಾಲ್ಲೂಕು **ದಾಸನಪುರ, ಹೆಸರಘಟ್ಟ, ಯಶವಂತಪುರ, ಯಲಹಂಕ, ಜಾಲ** ಎಂಬ ಐದು ಹೋಬಳಿಗಳನ್ನು ಒಳಗೊಂಡಿದೆ. ಇವುಗಳಲ್ಲಿ ದಾಸನಪುರ, ಹೆಸರಘಟ್ಟ, ಯಶವಂತಪುರ ಹೋಬಳಿಗಿಂತ ಭಿನ್ನವಾಗಿ ಜಾಲ ಮತ್ತು ಯಲಹಂಕ ಹೋಬಳಿಗಳು ಹೆಚ್ಚು ನಗರ ಪ್ರದೇಶವನ್ನು ಹೊಂದಿವೆ. ಹೆಸರಘಟ್ಟ ಹೋಬಳಿಯು ಸಂಪೂರ್ಣ ಗ್ರಾಮೀಣ ಪ್ರದೇಶವನ್ನು ಹೊಂದಿದೆ. ಉಳಿದ ದಾಸನಪುರ, ಜಾಲ ಹೋಬಳಿಯ ಕೆಲವು ಗ್ರಾಮೀಣ ಪ್ರದೇಶಗಳು ನಗರದ ಪ್ರಭಾವಕ್ಕೆ ಒಳಗಾಗುತ್ತಿರುವುದನ್ನು ಪ್ರಸಕ್ತದಲ್ಲಿ ಕಾಣುತ್ತೇವೆ. ತಾಲ್ಲೂಕಿನ ಪೂರ್ವ ಭಾಗದ ಹೋಬಳಿಗಳಾದ ಜಾಲ ಮತ್ತು ಯಲಹಂಕವು ಕನ್ನಡದೊಂದಿಗೆ ತೆಲುಗು ಮಾತನಾಡುವ ದ್ವಿಭಾಷಿಕರನ್ನು ಒಳಗೊಂಡಿದೆ. ಬೆಂಗಳೂರು ಉತ್ತರ ತಾಲ್ಲೂಕಿನ ದಕ್ಷಿಣ ನೈರುತ್ಯ ಭಾಗವು ಬಹುತೇಕ ನಗರ ಪ್ರದೇಶವಾಗಿದೆ.

ಬೆಂಗಳೂರು ಉತ್ತರ ತಾಲ್ಲೂಕು ಸಮತಟ್ಟಾದ ಭೂಭಾಗವನ್ನು ಹೊಂದಿದ್ದು, ಕೃಷಿಗೆ ಯೋಗ್ಯವಾದ ಭೂಮಿಯನ್ನು ಹೊಂದಿದೆ. ಸಂಪೂರ್ಣ ಜಿಲ್ಲೆಯು ಹೆಚ್ಚು ಮಳೆಯನ್ನು ಆಧರಿಸಿದೆ. **ಅರ್ಕಾವತಿ** ಎಂಬ ನದಿಯು ಮಳೆಗಾಲದಲ್ಲಿ ಹರಿಯುವುದು, ಇತ್ತೀಚೆಗೆ ವ್ಯವಸಾಯಕ್ಕೆ ಕೆಲವು ನೀರಾವರಿ ಭೂಮಿಗಳು ಬಾವಿ, ಕೊಳವೆಬಾವಿಯನ್ನು ಅವಲಂಬಿಸಿದರೆ, ಕೆಲವು ಚಿಕ್ಕ ಗುಡ್ಡಗಳಲ್ಲಿ ಒಣಸಾಗುವಳಿ ಬೇಸಾಯವನ್ನು ಮಾಡುತ್ತಿದ್ದಾರೆ. ಕ್ಷೇತ್ರಾಧ್ಯಯನದ ಮೂಲಕ ಬೆಂಗಳೂರು ಗ್ರಾಮೀಣ ಜನರದ್ದು ವ್ಯವಸಾಯಗಾರರ ನೆಲೆಯೆಂದು ತಿಳಿದಿದ್ದೇನೆ. ಬೆಂಗಳೂರು ಗ್ರಾಮೀಣ ಭಾಗದಲ್ಲಿ ಮಳೆಯಾಧಾರಿತವಾಗಿ ಹೆಚ್ಚು ರಾಗಿಯನ್ನು ಬೆಳೆಯುತ್ತಿದ್ದಾರೆ. ಇದರೊಂದಿಗೆ ಜೋಳ, ಉರುಳಿ, ತೊಗರಿ, ಅವರೆಯನ್ನು ಬೆಳೆಯುತ್ತಿದ್ದಾರೆ. ಕೊಳವೆಬಾವಿಯ ಮೂಲವನ್ನು ಹೊಂದಿದವರು ತರಕಾರಿಗಳನ್ನು ಬೆಳೆಯುತ್ತಿದ್ದಾರೆ. ಜಾಲ ಭಾಗದಲ್ಲಿ ಮಿಸುಕಿನ ಜೋಳ, ರಾಗಿ, ದ್ರಾಕ್ಷಿ, ಸೀಬೆ ಹಣ್ಣನ್ನು ಹೆಚ್ಚಾಗಿ ಬೆಳೆಯುತ್ತಿದ್ದಾರೆ. ಈ ಗ್ರಾಮೀಣ ಭಾಗದಲ್ಲಿ ಹೆಚ್ಚು

ವಯಸ್ಕರು ಬೇಸಾಯವನ್ನೆ ಅವಲಂಬಿಸಿ ಬದುಕುತ್ತಿದ್ದಾರೆ. ಆದರೇ ಇತ್ತಿಚಿನ ಕಾಲಘಟ್ಟದಲ್ಲಿ ಬೆಂಗಳೂರು ಗ್ರಾಮೀಣ ಭಾಗದ ಸುತ್ತ ಕೈಗಾರಿಕೆಗಳು ಸ್ಥಾಪನೆಯಾಗಿವೆ. ಈ ಕೈಗಾರಿಕೆಗಳಲ್ಲಿ ಯುವಕ ಮತ್ತು ಯುವತಿಯರು ಕೆಲಸ ಮಾಡಲು ಮುಂದಾಗುತ್ತಿದ್ದಾರೆ. ಕೃಷಿಯನ್ನು ಮಾಡುವುದು ಕಷ್ಟದ ಕೆಲಸವೆಂದು ಅರಿತು ಎಲ್ಲರು ಕೈಗಾರಿಕೆಗಳ ಮೊರೆ ಹೋಗುತ್ತಿದ್ದಾರೆ. ಇನ್ನು ಕೃಷಿ ಭೂಮಿಯನ್ನು ಹೆಚ್ಚು ಹಣದ ಆಸೆಗೆ ಮಾರಿಕೊಂಡು ಕೃಷಿ ಮಾಡಲು ಜಮೀನಿಲ್ಲದೆ ಕೈಗಾರಿಕೆಯ ಮೊರೆ ಹೋಗುವವರು ಇಂದು ಹೆಚ್ಚಾಗಿದ್ದಾರೆ. ಉದಾಹರಣೆಗೆ: ದೇವನಹಳ್ಳಿಯಲ್ಲಿ ವಿಮಾನನಿಲ್ದಾಣವು ನಿರ್ಮಾಣವಾದ ಸಂದರ್ಭದಲ್ಲಿ ಜಾಲ ಮತ್ತು ರಾಜಾನುಗುಂಟೆಯ ಭಾಗದಲ್ಲಿ ಹೆಚ್ಚು ಜನರು ತಮ್ಮ ಜಮೀನುಗಳನ್ನು ಮಾರಾಟ ಮಾಡಿದರು. ನಿಗಧಿಗಿಂತ ಹೆಚ್ಚು ಹಣವನ್ನು ಕೈಗಾರಿಕೆಗಳು, ಅಪಾರ್ಟ್‌ಮೆಂಟುಗಳು, ಸೈಟುಗಳ ನಿರ್ಮಾಣದವರು ಆ ಭಾಗದ ಜನರಿಗೆ ಕೊಟ್ಟು ಕೃಷಿ ಭೂಮಿಯನ್ನು ಕೊಂಡು ಕೊಂಡರು. ಹೀಗೆ ಮಾರಿದವರು ಮಳೆ ಆಧಾರಿತ ವ್ಯವಸಾಯ ಮಾಡುವ ರೈತರುಗಳಾಗಿದ್ದಾರೆ. ಇವರು ಮಧ್ಯಮವರ್ಗದವರಾಗಿದ್ದಾರೆ. ಹೀಗೆ ಕೆಲವು ಬೆಂಗಳೂರು ಗ್ರಾಮೀಣ ಭಾಗಗಳಲ್ಲಿ ಕೃಷಿ ಭೂಮಿಯು ಕೈಗಾರಿಕೆ ಮತ್ತು ಸೈಟುಗಳಾಗಿ ನಿರ್ಮಾಣವಾಗುತ್ತಿವೆ. ಕೊನೆಗೆ ಈ ಜನರು ತಮ್ಮ ಭೂಮಿಯಲ್ಲಿ ತಾವೇ ಊಳಿಗದವರಾಗುವ ಸ್ಥಿತಿಯನ್ನು ಅನುಭವಿಸುತ್ತಿದ್ದಾರೆ. ಇನ್ನೂ ಕೆಲವರು ಹಸುಗಳನ್ನು ಸಾಕಿ ಹಾಲನ್ನು ಹಾಕುವುದರಿಂದ ತಮ್ಮ ಜೀವನವನ್ನು ನಿರ್ವಹಿಸುತ್ತಿದ್ದಾರೆ. ಈ ರೀತಿಯ ಹೈನುಗಾರಿಕೆಯ ಜೀವನ ನಿರ್ವಹಣೆಯಲ್ಲಿ ಸ್ತ್ರೀಯರು ಹೆಚ್ಚು ಪಾಲ್ಗೊಳ್ಳುತ್ತಿದ್ದಾರೆ.

೪.೧.೧ ಶಾಸನೋಕ್ತ ಮಾಹಿತಿ

ಬೆಂಗಳೂರಿನ ತಾಲ್ಲೂಕನ್ನು ಒಳಗೊಂಡಂತೆ ಬೆಂಗಳೂರಿಗೆ ಸಂಬಂಧಿಸಿದ ૩೦೦ ಕ್ಕೂ ಹೆಚ್ಚು ಶಾಸನಗಳು ನಮಗೆ ದೊರೆತಿವೆ. "ದೊರೆತಿರುವ ಶಾಸನಗಳಲ್ಲಿ ಬೆಂಗಳೂರಿನ ಮಾಹಿತಿಯು ಸು. ಕ್ರಿ. ಶ ೮೯೦ರ ಗಂಗರ ಕಾಲದ ಬೇಗೂರು ಶಾಸನದಿಂದ ತಿಳಿದುಬರುತ್ತದೆ"[೧] ನಂತರ "ಜಾಲಹಳ್ಳಿ, ಚಿಕ್ಕಜಾಲ, ಹುರಳಿಚಿಕ್ಕನಹಳ್ಳಿಯಲ್ಲಿ ದೊರೆತ ಶಾಸನಗಳಲ್ಲಿ ಹೆಚ್ಚು ಮಾಹಿತಿಗಳಿವೆ. ಇವುಗಳಲ್ಲಿ ಗಂಗರ ಕಾಲದಲ್ಲಿನ ಶಾಸನದಲ್ಲಿ ಕೆಲವು ಆಡಳಿತ ಪ್ರದೇಶಗಳ ಉಲ್ಲೇಖಗಳಿವೆ. ಅವುಗಳೆಂದರೆ ಬೆಂಗಳೂರಿನ ಕರಿಕನಾಡು (ಯಲಹಂಕ ಮತ್ತು ಯಶವಂತಪುರ) ಬೆಂಪೂರು–೧೨ (ಬೇಗೂರು), ಕುಕ್ಕಲನಾಡು (ದಾಸರಹಳ್ಳಿ) ಹೆಬ್ಬಾಳ, ಎಲಹಂಕ ಎಂಬ ಆಡಳಿತ ಪ್ರದೇಶದ ಉಲ್ಲೇಖಗಳಿವೆ."[೨] "ಚೋಳರು ಆಳಿದ ಇಲೈಪಾಕವು ಯಲಹಂಕವಾಗಿದೆ."[೩] "ಮಾಗಡಿ ಕೆಂಪೇಗೌಡರು ಕೋಲಾರ, ದೇವನಹಳ್ಳಿ, ಯಲಹಂಕ, ಮಾಗಡಿ ಪ್ರದೇಶವನ್ನು ಆಳ್ವಿಕೆ ನಡೆಸಿದ್ದರು. ಮೈಸೂರು ૩ನೇ ಕೃಷ್ಣರಾಜ ಒಡೆಯರವರು ಆಳಿದ ಮೈಸೂರಿಗೆ

ಬೆಂಗಳೂರು ಉತ್ತರ ತಾಲ್ಲೂಕು ಮತ್ತು ದೇವನಹಳ್ಳಿ ಪ್ರದೇಶಗಳು ಸೇರಿದ್ದವು. ವಿಜಯನಗರ ಸಾಮ್ರಾಜ್ಯವು ದೇವನಹಳ್ಳಿ ಸೇರಿದಂತೆ ಯಲಹಂಕ ಭಾಗಗಳನ್ನು ಒಳಗೊಂಡಿದ್ದವು."[೪] "ಚೋಳರ ಕಾಲದ ಶಾಸನಗಳಲ್ಲಿ ಸೋಮಿದೇವನಹಳ್ಳಿ (ಸೋಲದೇವನಹಳ್ಳಿ) ಕಾಳಿತಮ್ಮನಳ್ಳಿ (ಕಾಳತಮ್ಮೇನಹಳ್ಳಿ) ಶಿಂಗಿನಾಯ್ಕನಹಳ್ಳಿ (ಸಿಂಗನಾಯಕನಹಳ್ಳಿ) ಎಶವಂತಪುರ (ಯಶವಂತಪುರ) ಪ್ರದೇಶದ ಕನ್ನೆಲ್ಲಿ (ಕನ್ನಲ್ಲಿ) ಗದ್ದೆಬೆದ್ದಲ ಚತುಸ್ಸೀಮೆಗಳಾಗಿದ್ದುವೆಂದು ಶಾಸನಗಳಿಂದ ತಿಳಿಯಬಹುದು"[೫] "ಗಂಗರ ಕಾಲದಲ್ಲಿ ದೊರೆತ ಬೇಗೂರು ಶಾಸನದಲ್ಲಿ 'ನಾಗತ್ತರನ ಮನೆಮಗಂ ಬುಟ್ಟಣಶೆಟ್ಟಿ ಬೆಂಗಳೂರ ಕಾಳಗದೊಳ್ ಸತ್ತಂ' ಎಂದಿದೆ."[೬] ಇವೆಲ್ಲ ಮಾಹಿತಿಯನ್ನು ಅನುಸರಿಸಿದರೆ "ಹಳೇ ಬೆಂಗಳೂರು ಎಂಬ ಗ್ರಾಮವು ಹೆಬ್ಬಾಳ, ಕೊಡಿಗೇನಹಳ್ಳಿ ಪರಿಸರದಲ್ಲಿ ಇದ್ದು, ಅದೇ ಶಾಸನೋಕ್ತ ಬೆಂಗಳೂರು ತಾವರೆಕೆರೆಯವರೆಗೆ ಹಬ್ಬಿತ್ತು"[೭] "ಕೆಂಪೇಗೌಡರ ಕಾಲದಲ್ಲಿ ಬಳೇಪೇಟೆಯ ಸುಗ್ರೀವ ವೆಂಕಟರಮಣ ಸ್ವಾಮಿ ದೇವಾಲಯದಲ್ಲಿನ ತಾಮ್ರ ಶಾಸನದಲ್ಲಿ ಬೆಂಗಳೂರಿನ ಬಗ್ಗೆ ಮಾಹಿತಿಯನ್ನು ಒಳಗೊಂಡಿದೆ. ಈ ತಾಮ್ರ ಶಾಸನವು ತೆಲುಗು ಭಾಷೆಯಲ್ಲಿದೆ. ಆದರೇ ಈ ಶಾಸನದ ಲಿಪಿಯು ಕನ್ನಡವಾಗಿದೆ."[೮] "೧೦೩೩ ರಲ್ಲಿ ಬೆಂಗಳೂರಿನ ಹೆಸರಘಟ್ಟ ಭಾಗಕ್ಕೆ ಸೇರಿದ ಪ್ರದೇಶವಾದ ಐವರುಕಂಡಪುರವು ಕುಲೋತ್ತುಂಗ ಚೋಳನ ಆಳ್ವಿಕೆಗೆ ಒಳಪಟ್ಟಿತ್ತು."[೯] ಅಲ್ಲಿ ಚೋಳರ ಕಾಲದಲ್ಲಿ ನಿರ್ಮಿಸಿದ ದೇವಾಲಯವಾದ ಸಿದ್ದೇಶ್ವರ ದೇವಾಲಯವು ಇಂದಿಗೂ ಪೂಜೆ ಉತ್ಸವಗಳ ಮೂಲಕ ಕಾರ್ಯಚಟುವಟಿಕೆಯಲ್ಲಿದೆ. ಇವುಗಳೆಲ್ಲವು ಪ್ರಸ್ತುತ ಬೆಂಗಳೂರು ಉತ್ತರ ತಾಲ್ಲೂಕಿಗೆ ಸಂಬಂಧಿಸಿದ ಮಾಹಿತಿಯನ್ನು ಒಳಗೊಂಡಿವೆ. ಈ ಆಧಾರಗಳ ಮೂಲಕ ಬೆಂಗಳೂರು ಉತ್ತರ ಭಾಗದ ಗ್ರಾಮೀಣ ಜನರ ಹಿನ್ನೆಲೆ ಅರಿಯಲು ಸಹಾಯಕವಾಗಿದೆ.

ಬೆಂಗಳೂರಿಗೆ ಸಂಬಂಧಿಸಿದಂತೆ ದೊರೆತಿರುವ ಹಲವು ಶಾಸನಗಳು ಲಿಪಿಯಲ್ಲಿ ಕನ್ನಡವಾಗಿದ್ದು, ಶಾಸನದ ಭಾಷೆಯಾಗಿ ತೆಲುಗು ಭಾಷೆಯನ್ನು ಬಳಕೆಯನ್ನು ಮಾಡಿದ್ದಾರೆ. ಉದಾಹರಣೆಗೆ

"**ಶಾಸನ ದೊರೆತ ಸ್ಥಳ**: ಬಳ್ಳಾಪುರಪೇಟೆ ರಂಗನಾಥ ದೇವಾಲಯದಲ್ಲಿ ನೆಟ್ಟ ಕಲ್ಲು

ತಾಲ್ಲೂಕು: ಬೆಂಗಳೂರು. **ಲಿಪಿ**: ಕನ್ನಡ **ಭಾಷೆ**: ತೆಲುಗು

ರಾಜವಂಶ: ಯಲಹಂಕ ನಾಡಪ್ರಭು **ಶಾಸನೋಕ್ತ ರಾಜ**: ಇಮ್ಮಡಿ ಕೆಂಪೇಗೌಡ.

ಕಾಲ: ಶಕ ೧೫೪೯, ಪ್ರಭವ, ಮಾಘ ಶುದ್ದ ೧೩ ಆ[ಂಗೀರಸವಾರ] ಕ್ರಿ.ಶ ೭-೨-೧೬೨೮, ಗುರುವಾರ

ಶಾಸನದ ವಿಷಯ – ವೀರ ರಾಮದೇವರಾಯನು ಪೃಥ್ವಿರಾಜ್ಯವನ್ನು ಆಳುತ್ತಿದ್ದಾಗ ಅಣೇಕ ಮಂದಿ ಬೇರೆ ಬೇರೆ ಪ್ರದೇಶದ ವರ್ತಕರು ಯಲಹಂಕ ನಾಡಪ್ರಭು ಕೆಂಪೇಗೌಡನ ಮೊಮ್ಮಗ ಕೆಂಪೇಗೌಡನ ಮಗ ಇಮ್ಮಡಿ ಕೆಂಪೇಗೌಡನ ಗಮನಕ್ಕೆ ತಂದು 'ಮುತ್ಯಾಲಪೇಟೆ' ರಂಗನಾಥಸ್ವಾಮಿಯ ಪೂಜೆ ಮುಂತಾದವುಗಳಿಗೆ ನೀಡಿದ ದಾನಶಾಸನ. ಈ ಶಾಸನದಲ್ಲಿ ೧೫ ನೇ ಸಾಲಿನಲ್ಲಿ 'ಬೆಂಗಳೂರಿನ ಪೇಟ' ಎಂದಿದೆ. ೨೩ ನೇ ಸಾಲಿನಲ್ಲಿ ಬೆಂಗುಳೂರು ಎಂದಿದೆ. ೨೯ ನೆಯ ಸಾಲಿನಲ್ಲಿ 'ಬೆಂಗಳೂರಿ ಮುತ್ಯಾಲ ಪೇಟೆ' ಎಂದಿದೆ. (ಮುತ್ಯಾಲ ಪೇಟೆ ಎಂಬುದು ಬಳೇಪೇಟೆಯಾಗಿದೆ)"[೧೦]

"**ಶಾಸನ ದೊರೆತ ಸ್ಥಳ**: ಬಳೇಪೇಟೆಯಲ್ಲಿ ದೊರೆತ ಸುಗ್ರೀವ ವೆಂಕಟರಮಣ ಸ್ವಾಮಿ ದೇವಾಲಯದಲ್ಲಿರುವ ತಾಮ್ರಶಾಸನ

ತಾಲ್ಲೂಕು: ಬೆಂಗಳೂರು. **ಲಿಪಿ:** ಕನ್ನಡ **ಭಾಷೆ:** ತೆಲುಗು

ರಾಜವಂಶ: ಮೈಸೂರು ಒಡೆಯರ್ **ಶಾಸನೋಕ್ತ ರಾಜ:** ಮುಮ್ಮಡಿ ಕೃಷ್ಣರಾಜ ಒಡೆಯರ್

ಕಾಲ: ಶಕ ೧೭೫೨, ವಿರೋಧಿ, ಪಾಲ್ಗುಣ ಶುದ್ಧ ೩ [ಕ್ರಿ.ಶ ೧೩-೨-೧೮೩೦ ಬುಧವಾರ]

ಶಾಸನದ ವಿಷಯ: ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ರಾಜ್ಯವಾಳುತ್ತಿರುವ ಸಮಯದಲ್ಲಿ ಸುಗ್ರೀವ ವೆಂಕಟರಮಣ ಸ್ವಾಮಿಯ ಪೂಜಾದಿಗಳು ಮತ್ತು ಉತ್ಸವಗಳಿಗೆ ಕೊಟ್ಟ ದಾನಶಾಸನವಾಗಿದೆ. ಇದರಲ್ಲಿ 'ಬೆಂಗಳೂರ ವಾರು' ಎಂಬ ಉಲ್ಲೇಖವಿದೆ."[೧೧]

೪.೧.೨ ಬೆಂಗಳೂರು ವಿಭಾಗಗಳು–

"ಬೆಂಗಳೂರು ೧೮೬೩ರಲ್ಲಿ ಒಂದು ಜಿಲ್ಲೆಯಾಗಿ ಮಾರ್ಪಟ್ಟಿತು."[೧೨] "೧೯೪೮ರಲ್ಲಿ ಬೆಂಗಳೂರು ಜಿಲ್ಲೆಯು ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ ಎಂದು ಎರಡು ಜಿಲ್ಲೆಗಳಾದವು. ಅವುಗಳನ್ನು ೧೯೬೨ರಲ್ಲಿ ಆಡಳಿತ ದೃಷ್ಟಿಯಿಂದ ಬೆಂಗಳೂರು ನಗರ ಜಿಲ್ಲೆ ಮತ್ತು ಗ್ರಾಮಾಂತರವನ್ನು ಪುನಃ ಒಗ್ಗೂಡಿಸಲಾಯಿತು."[೧೩] ೧೯೮೬ರಲ್ಲಿ ಕಂದಾಯ ಮತ್ತು ಆಡಳಿತದ ಅನುಕೂಲ ದೃಷ್ಟಿಯಿಂದ ಪುನಃ ವಿಭಾಗಿಸಿದರು. ಆಗ ಬೆಂಗಳೂರು ನಗರ ಜಿಲ್ಲೆಯನ್ನು ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ದಕ್ಷಿಣ ತಾಲ್ಲೂಕು, ಆನೇಕಲ್ಲು ತಾಲ್ಲೂಕು ಎಂಬ ಮೂರು ತಾಲ್ಲೂಕುಗಳನ್ನಾಗಿ ವಿಭಾಗಿಸಲಾಯಿತು.


Hunnenahalli
A.Kere
Avalahalli
Jarakbandekaval
Ramagondanahalli
Ananthapura
Veerasagara
Atturu
Puttanahalli
Yelahanka
Venkatala
Kogilu
Srinivasapura
Bellahalli
Agrahara
Shamarajapura
Vaderahalli
Doddabettahalli
Chikkabommasandra
Thindlu
Allalasandra
Chikkabettahalli
Singapura
Jarakbandekaval
Narasipura
Kodigehalli Plantation
Jakkuru Plantation
Jakkuru
Sampigehalli
Chokkanahalli
Venkateshapura
Sreerampura
Amruthalli
Ramachandrapura
Doddabommasandra
Shivanahalli
Thirumalenahalli
Heroohalli
Vasudevapura

ಯಲಹಂಕ ಹೋಬಳಿ

ದಾಸನಪುರ ಹೋಬಳಿ



ಹೆಸರಘಟ್ಟ ಹೋಬಳಿ

ಯಶವಂತಪುರ ಹೋಬಳಿ

ಜಾಲ ಹೋಬಳಿ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನಿಂದ ಜಾಲ ಹೋಬಳಿಯನ್ನು, ನೆಲಮಂಗಲ ತಾಲ್ಲೂಕಿನಿಂದ ದಾಸನಪುರ ಹೋಬಳಿಯನ್ನು ಬೆಂಗಳೂರು ಉತ್ತರ ತಾಲ್ಲೂಕಿಗೆ ಸೇರಿಸಿ ಐದು ಹೋಬಳಿಗಳನ್ನಾಗಿ ಮಾಡಲಾಗಿದೆ. ಅವುಗಳು ಇಂತಿವೆ:

೧. ಯಶವಂತಪುರ – ೩೨

೨. ಹೆಸರಘಟ್ಟ – ೫೭

೩. ಯಲಹಂಕ – ೪೩

೪. ದಾಸನಪುರ – ೭೩

೫. ಜಾಲ – ೫೦

ಹೀಗೆ ಒಟ್ಟು "ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಐದು ಹೋಬಳಿಗಳಿವೆ. ಈ ಐದು ಹೋಬಳಿಗಳಲ್ಲಿ ಒಟ್ಟು ೨೫೫ ಹಳ್ಳಿಗಳಿವೆ. ಹಾಗೂ ೬ ಕಸಬಾಗಳು ೬೫ ಪಂಚಾಯ್ತಿಗಳನ್ನು ಒಳಗೊಂಡಿದೆ."[೧೪] ೧೯೮೬ ರಲ್ಲಿ ಬೆಂಗಳೂರಿನ ನಗರ ಪ್ರದೇಶದ ಉತ್ತರ ತಾಲ್ಲೂಕಾಗಿ ಬೆಂಗಳೂರು ಗ್ರಾಮೀಣ ಪ್ರದೇಶವಾದ ಜಾಲವನ್ನು ಮತ್ತು ದಾಸನಪುರವನ್ನು ಸೇರಿಸಿದ್ದರಿಂದ ಈ ಭಾಗಗಳ ಜನರು ಬೆಂಗಳೂರಿನ ನಗರದ ಸಂಪರ್ಕವನ್ನು ಹೆಚ್ಚು ಪಡೆದರು. ನೆಲಮಂಗಲ ದೇವನಹಳ್ಳಿಯಲ್ಲಿ ನಡೆಯುವ ವ್ಯವಹಾರವು ಬೆಂಗಳೂರಿನ ಭಾಗಗಳಲ್ಲಿ ನಡೆಸಲು ಮುಂದಾದರು.

೪.೧.೩. ವ್ಯಾಪಾರ ಸಂಪರ್ಕ ಮತ್ತು ಉದ್ದಿಮೆಗಳು

ಬೆಂಗಳೂರು ಉತ್ತರ ತಾಲ್ಲೂಕಿನ ಯಲಹಂಕ ಮಾರುಕಟ್ಟೆಯು ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು. ೧೬೨೮ ರಲ್ಲಿ ದೊರೆತ ಬಳೇಪೇಟೆ ರಂಗನಾಥ ದೇವಾಲಯದ ಶಾಸನಗಳು, ಬೇಗೂರು ಶಾಸನ, ಸುಗ್ರೀವ ವೆಂಕಟರಮಣ ಸ್ವಾಮಿ ದೇವಾಲಯದಲ್ಲಿ ದೊರೆತ ಶಾಸನಗಳ ಹಿನ್ನಲೆ ಮಾಹಿತಿಯಂತೆ ಬೆಂಗಳೂರು ಪ್ರದೇಶವು ೧೭ ಮತ್ತು ೧೮ ನೇ ಶತಮಾನದಿಂದಲೇ ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು ಎಂಬುದು ತಿಳಿದು ಬರುತ್ತದೆ. ಬೆಂಗಳೂರಿಗೆ ೧೬ ಮತ್ತು ೧೭ ನೇ ಶತಮಾನದಲ್ಲಿ ನಗರವಾಗಿದ್ದು, ಅಲ್ಲಿಗೆ ಅನೇಕ ವರ್ತಕರು ಬಂದು ವ್ಯವಹಾರವನ್ನು ಮಾಡುತ್ತಿದ್ದರು. "ಮೇಜರ್ ಡಿಕ್ಸನ್ ರವರು ಸಂಗ್ರಹಿಸಿದ ತಾಮ್ರಶಾಸನದ ಪ್ರತಿಯಲ್ಲಿ ಬೆಂಗಳೂರು ವರ್ತಕರ ಕೇಂದ್ರಗಳಲ್ಲಿ ಒಂದಾಗಿತ್ತು ಎಂಬುದರ ಉಲ್ಲೇಖವಿದೆ."[೧೫] ಈ ತಾಮ್ರಶಾಸನವು ವರ್ತಕರಿಗೆ ಸಂಬಂಧಿಸಿದ ಶಾಸನವಾಗಿದ್ದು, ಅದರಲ್ಲಿ ಅಯ್ಯಾವಳೆ ಸ್ಥಳಗಳ ಜೊತೆಗೆ 'ಬೆಂಗಳೂರು' ವರ್ತಕರ ಸ್ಥಳವಾಗಿರುವ ಮಾಹಿತಿಯನ್ನು ಒಳಗೊಂಡಿದೆ. ಇಂದು ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ದಾಸನಪುರ ಹೆಸರಘಟ್ಟ ಭಾಗಗಳಿಗೆ ನೆಲಮಂಗಲವು ವ್ಯಾಪಾರ ಕೇಂದ್ರವಾಗಿದ್ದರೆ, ಜಾಲ

ಮತ್ತು ಯಲಹಂಕ ಭಾಗಗಳ ಗ್ರಾಮೀಣ ಭಾಗಗಳಿಗೆ ಯಲಹಂಕ ವು ವ್ಯಾಪಾರ ಸ್ಥಳವಾಗಿದೆ. ದೊಡ್ಡಬಳ್ಳಾಪುರ ಮತ್ತು ದೇವನಹಳ್ಳಿ ಭಾಗಗಳಿಗೆ ಯಲಹಂಕ ಮತ್ತು ಜಾಲ ಭಾಗವು ನಿಕಟವಾದ ವ್ಯಾಪಾರ ಸಂಪರ್ಕವನ್ನು ಹೊಂದಿವೆ.

"ಬೆಂಗಳೂರು ೧೯೭೭ ರಲ್ಲಿ ದಾಸನಪುರ ಹೋಬಳಿಯ ವಡ್ಡರಪಾಳ್ಯದಲ್ಲಿ ಮತ್ತು ೧೯೮೫ – ೮೬ ರಲ್ಲಿ ಯಶವಂತಪುರದ ಚಿಕ್ಕಬಾಣವಾರದಲ್ಲಿ ಕಲ್ಲುಗಣಿಗಾರಿಕೆಯನ್ನು ಮಾಡಲಾಗುತ್ತಿತ್ತು."[೧೬] "ಯಲಹಂಕದಲ್ಲಿ ೧೯೮೪ ರಲ್ಲಿ ರೈಲ್ವೆಗಾಲಿ ಕಾರ್ಖಾನೆಯನ್ನು ಪ್ರಾರಂಭಿಸಲಾಗಿದೆ. ದಾಸನಪುರ ಹೋಬಳಿಯಲ್ಲಿ ಸರ್ಕಾರಿ ನರ್ಸರಿಯನ್ನು ಮಾಡಲಾಗಿದೆ. ೧೯೧೭ ರಲ್ಲಿ ಮೈಸೂರು ಸೋಪು ಕೈಗಾರಿಕೆಯನ್ನು ಮತ್ತು ೧೮೮೭ ರಲ್ಲಿ ಸಿಲ್ಕ್, ಹತ್ತಿ ಬಟ್ಟೆ ಕೈಗಾರಿಕೆಯನ್ನು ಸ್ಥಾಪಿಸಲಾಗಿದೆ. ೧೯೩೬ ರಲ್ಲಿ ಮೈಸೂರು ಲ್ಯಾಂಪ್ ಕೈಗಾರಿಕೆಯನ್ನು ಮಾಡಲಾಗಿದೆ. ೧೮೫೯ ರಿಂದ ೧೯೬೩ ರವರೆಗೆ ರೈಲ್ವೆ ಮಾರ್ಗಗಳ ನಿರ್ಮಾಣ ಕಾರ್ಯಗಳು ನಡೆದವು"[೧೭] ಈ ಕೈಗಾರಿಕೆ ಸ್ಥಾಪನೆಯಾಗಿದ್ದು ಅಂದಿನ ಕಾಲದಲ್ಲಿ ಜನರನ್ನು ಹೆಚ್ಚು ಕೈಗಾರಿಕೆಯಲ್ಲಿ ದುಡಿಮೆಗಾರರನ್ನಾಗಿ ಮಾಡಿದವು. ಇಂದಿಗೂ ಸಹ ಬೆಂಗಳೂರಿನ ಗ್ರಾಮೀಣ ಭಾಗಗಳ ಜನರು ಈ ಕೈಗಾರಿಕೆಗಳಲ್ಲಿ ದುಡಿಯುತ್ತಿದ್ದಾರೆ. ಇತ್ತೀಚಿಗೆ ಯಲಹಂಕ, ಯಶವಂತಪುರ ಭಾಗವು ನಗರೀಕರಣದಿಂದ ಮುಂದುವರೆದು ಪ್ರಮುಖವಾದ ಬೃಹತ್ ನಗರಗಳಿಗೆ ಹೆದ್ದಾರಿಗಳನ್ನು ನಿರ್ಮಿಸುವಷ್ಟು ಬೃಹತ್ತಾಗಿ ಬೆಳೆದಿವೆ. ಹಲವಾರು ಕೈಗಾರಿಕೆ ಮತ್ತು ಜಾಗತಿಕ ಉದ್ದಿಮೆಗಳು ಪ್ರಾರಂಭವಾಗಿವೆ. ಹೆಸರಘಟ್ಟವು ಹೈನುಗಾರಿಕೆ, ಕೋಳಿಉದ್ಯಮ, ತರಕಾರಿ ಹಣ್ಣಿನ ಉದ್ಯಮ ಸಂಸ್ಥೆಗಳನ್ನು ಭಾರತ ಸರ್ಕಾರವು ನಡೆಸುತ್ತದೆ. ಇದರಿಂದ ಅಲ್ಲಿನ ಸಾಕಷ್ಟು ಜನರು ಉದ್ಯೋಗವನ್ನು ಹೊಂದಿದ್ದಾರೆ. ಹೀಗೆ ಬೆಂಗಳೂರು ಉದ್ದಿಮೆಗಳಲ್ಲಿ ಕಂಡುಕೊಂಡ ಯಶಸ್ಸು ನೆರೆಹೊರೆಯ ಜನರು ಉದ್ಯೋಗ, ವ್ಯಾಪಾರ ಅರಸಿ ಬಂದು ಇಲ್ಲೇ ನೆಲೆಸಿ ಇಲ್ಲಿಯ ಭಾಷೆಯೊಂದಿಗೆ ಸಂಬಂಧವನ್ನು ಹೊಂದಲು ಸಾಧ್ಯವಾಗಿದೆ.

ಬೆಂಗಳೂರಿನ ಉತ್ತರ ತಾಲ್ಲೂಕು ಭಾಗವಾದ ಯಲಹಂಕ ಪ್ರದೇಶಗಳಲ್ಲಿ ಹೆಚ್ಚು ಕೈಗಾರಿಕೆಗಳು ಅಭಿವೃದ್ಧಿಯಾದವು. ಅದರಂತೆ "೧೮೮೪ರಲ್ಲಿ ಹಬೆಶಕ್ತಿ ಬಳಸಿ ಆರಂಭಿಸಿದ ಬಿನ್ನಿಮಿಲ್ಲಿನಲ್ಲಿ ಅನೇಕ ತಮಿಳರು, ತೆಲುಗಿನವರು ಉದ್ಯೋಗ ಪಡೆದಿದ್ದರು ಯಲಹಂಕ ಭಾಗದಲ್ಲಿನ ಬಟ್ಟೆ ಉದ್ದಿಮೆಗಳು ಪ್ರಾರಂಭವಾದವು."[೧೮] ಹೀಗೆ ಯಲಹಂಕ ಭಾಗದಲ್ಲಿ ಅಭಿವೃದ್ಧಿಯಾದ ಕೈಗಾರಿಕ ಉದ್ದಿಮೆಗಳು ಹಾಗೂ ಸುಲಭ ಸಂಪರ್ಕದ ಹೆದ್ದಾರಿಗಳು ನಿರ್ಮಾಣವಾದದ್ದು ಹಲವು ಜನರನ್ನು ಸೆಳೆದವು. ಹೀಗೆ ವಲಸೆ ಬಂದ ಜನರು ಜಾಲ ಮತ್ತು ಯಲಹಂಕ ಭಾಗದಲ್ಲಿ ಬಂದು ನೆಲೆಸಿದರು.

೪.೨ ಜನಸಂಖ್ಯಾ ವಿವರಗಳು

ಜನಸಂಖ್ಯೆಯು ಒಂದು ಪ್ರದೇಶದ ಜನರ ಭಾಷೆಯನ್ನು ಅರಿಯಲು ಪ್ರಮುಖಾಂಶವಾಗಿದೆ. ಬೆಂಗಳೂರು ಉತ್ತರ ತಾಲ್ಲೂಕಿನ ಭಾಗದ ಜನಸಂಖ್ಯೆಯು ಇಂತಿದೆ. ಜನಗಣತಿ ೨೦೧೧ ರಂತೆ ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಜನಸಂಖ್ಯೆ ೩,೫೨,೪೨೦ ಇದ್ದು ೧,೮೫,೯೮೭ ಪುರುಷರು ೧,೬೬,೪೪೨ ಮಹಿಳೆಯರು ಇದ್ದಾರೆ. ಲಿಂಗಾನುಪಾತತೆಯು ೮೯೫ ಇದೆ. ಇಂದು ಗ್ರಾಮೀಣ ಭಾಗದಲ್ಲಿ ನೆಲೆಸಿರುವವರು ಶೇಕಡಾ ೨೩.೩% ಆದರೆ ನಗರ ಜನಸಂಖ್ಯೆ ೭೬.೭% ಆಗಿದೆ. ನಗರದ ಲಿಂಗಾನುಪಾತ ೯೦೭, ಗ್ರಾಮೀಣ ಲಿಂಗಾನುಪಾತ ೮೫೬ ಆಗಿದೆ. ಪುರುಷ–ಸ್ತ್ರೀಯರ ಅನುಪಾತ ೧೦೦೦ ಕ್ಕೆ ೯೬೮ ರಷ್ಟು ಆಗಿತ್ತು. ಅಂತೆಯೇ ಹಿಂದಿನ ೧೯೬೧ ರಿಂದ ೧೯೮೧ ರವರೆಗಿನ ಬೆಂಗಳೂರು ಉತ್ತರ ತಾಲ್ಲೂಕಿನ ಜನಗಣತಿಯ ವರದಿಯ ದತ್ತಾಂಶವನ್ನು ನೋಡಿದಾಗ

ವರ್ಷ	ನಗರ	ಗ್ರಾಮೀಣ	ಒಟ್ಟು
೧೯೬೧	೮೪,೬೨೦	೮೪,೮೦೧	೧,೬೯,೪೨೧
೧೯೭೧	೬೪,೪೪೩	೧,೭೭,೯೫೩	೨,೪೨,೩೯೬
೧೯೮೧	೨,೨೪,೨೧೯	೧,೮೩.೮೭೧	೪,೦೮,೦೯೦
೨೦೧೧	೩.೩೫,೯೭೮	೨.೧೬.೪೪೨	೫.೫೨.೪೨೦

(ಅಂಕಿ ಅಂಶಗಳ ಇಲಾಖೆ(ಬೆಂಗಳೂರು) ಕರ್ನಾಟಕ ಸರ್ಕಾರ, ಇಲಾಖೆಯಿಂದ ಪಡೆದ ದತ್ತಾಂಶವನ್ನು ಅನುಸರಿಸಿದ ಮಾಹಿತಿ)

ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ೧೯೬೧, ೧೯೭೧, ೧೯೮೧ ರಲ್ಲಿ ಇದ್ದ ಜನಸಂಖ್ಯೆಯನ್ನು ನೋಡಿದಾಗ ಶೇ ೧೬ ರಷ್ಟು ಜನಸಂಖ್ಯೆ ಏರಿಕೆಯಾಗಿದೆ. ಈ ವರದಿಯಂತೆ ೧೯೭೧ ರಲ್ಲಿ ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಭಾಗದಲ್ಲಿ ಜನಸಂಖ್ಯೆ ಹೆಚ್ಚಾಗಿ, ನಂತರದ ದಶಕದಲ್ಲಿ ನಗರವನ್ನು ಹೆಚ್ಚು ಅವಲಂಬಿಸಿರುವುದನ್ನು ಕಾಣಬಹುದು. ೨೦೧೧ ಕ್ಕೆ ಬಂದಾಗ ಬೆಂಗಳೂರು ಉತ್ತರ ತಾಲ್ಲೂಕಿನ ಜನಸಂಖ್ಯೆಯು ಐದು ಲಕ್ಷಕ್ಕೂ ಮೀರಿದೆ. ಜನಸಂಖ್ಯೆಯು ಬೆಂಗಳೂರು ಗ್ರಾಮೀಣ ಪ್ರದೇಶದಲ್ಲಿ ಮತ್ತು ಬೆಂಗಳೂರು ನಗರಪ್ರದೇಶದಲ್ಲಿ ಸಮಾನವಾಗಿ ಹೆಚ್ಚಿರುವುದನ್ನು ಅಂಕಿಅಂಶಗಳ ಮೂಲಕ ಕಾಣಬಹುದು.

೪.೨.೧ ಬೆಂಗಳೂರು ಉತ್ತರ ತಾಲ್ಲೂಕಿನ ಜನಸಂಖ್ಯೆ : ವಲಸೆ, ವಲಸೆಯ ಕಾರಣಗಳು:

೪.೨.೧.೧ ಬೆಂಗಳೂರು ಉತ್ತರ ತಾಲ್ಲೂಕಿನ ಪ್ರಸ್ತುತ ಜನಸಂಖ್ಯೆ :

ಬೆಂಗಳೂರಿನ ಗ್ರಾಮೀಣ ಜನಸಂಖ್ಯೆಯ ಮಾಹಿತಿಯನ್ನು ತಿಳಿಯುವುದರಿಂದ ಒಂದು ಪ್ರದೇಶದ ಜನರ ಭಾಷೆಯಲ್ಲಿ ಆಗುವ ವ್ಯತ್ಯಾಸವನ್ನು ತಿಳಿಯಬಹುದಾಗಿದೆ. ಇದು ಜನರ ಭಾಷಿಕ ವ್ಯತ್ಯಾಸವನ್ನು ಅರಿಯಲು ಪ್ರಮುಖಾಂಶವಾಗಿದೆ. ಉದಾಹರಣೆ: ಅನ್ಯಭಾಷಿಕನು ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಒಂದು ಪ್ರದೇಶವನ್ನು ಸೇರುತ್ತಾನೆ ಎಂದರೆ ಆ ಪ್ರದೇಶ ಜನಸಂಖ್ಯೆ ಹೆಚ್ಚಳವಾಗುವುದರ ಜೊತೆಗೆ ಅಲ್ಲಿ ಜನರ ಭಾಷೆಯ ಮೇಲೂ ಪರಿಣಾಮ ಬೀರುತ್ತದೆ.

ಬೆಂಗಳೂರು ಉತ್ತರ ತಾಲ್ಲೂಕಿನ ಭಾಗದ ಜನಸಂಖ್ಯೆಯು ಇಂತಿದೆ. ಜನಗಣತಿ ೨೦೧೧ ರಂತೆ ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಜನಸಂಖ್ಯೆಯು ೩,೫೨,೪೨೦ ಇದ್ದು, ೧,೮೫,೯೮೭ ಪುರುಷರು ೧,೬೬,೪೪೨ ಮಹಿಳೆಯರು ಇದ್ದಾರೆ. ಲಿಂಗಾನುಪಾತತೆಯು ಪ್ರತಿ ೧೦೦೦ಕ್ಕೆ ೮೯೫ ಇದೆ. ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಭಾಗದಲ್ಲಿ ನೆಲೆಸಿರುವವರು ಶೇಕಡಾ ೨೩.೩% ಆದರೆ ನಗರ ಜೀವಿಗಳು ೭೬.೭% ಆಗಿದ್ದಾರೆ. ಬೆಂಗಳೂರು ಉತ್ತರ ತಾಲ್ಲೂಕಿನ ಲಿಂಗಾನುಪಾತದಲ್ಲಿ ಗ್ರಾಮೀಣಕ್ಕಿಂತ ನಗರದಲ್ಲಿ ಭಾಗದ ಲಿಂಗಾನುಪಾತ ಹೆಚ್ಚಾಗಿದೆ. ನಗರದ ಲಿಂಗಾನುಪಾತ ೯೦೭, ಗ್ರಾಮೀಣ ಲಿಂಗಾನುಪಾತ ೮೫೬ ಆಗಿದೆ.

ಅಂತೆಯೇ ಹಿಂದಿನ ೧೯೬೧ ರಿಂದ ೧೯೮೧ ರವರೆಗಿನ ಬೆಂಗಳೂರು ಉತ್ತರ ತಾಲ್ಲೂಕಿನ ಜನಗಣತಿಯ ವರದಿಯ ದತ್ತಾಂಶವನ್ನು ನೋಡಿದಾಗ

ವರ್ಷ	ನಗರ	ಗ್ರಾಮೀಣ	ಒಟ್ಟು
೧೯೬೧	೮೪,೬೨೦	೮೪,೮೦೧	೧,೬೯,೪೨೧
೧೯೭೧	೬೪,೪೪೩	೧,೭೭,೯೫೩	೨,೪೨,೩೯೬
೧೯೮೧	೨,೨೪,೨೧೯	೧,೮೩.೮೭೧	೪,೦೮,೦೯೦
೨೦೧೧	೩.೩೫,೯೭೮	೨.೧೬.೪೪೨	೫.೫೨.೪೨೦

ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ೧೯೬೧, ೧೯೭೧. ೧೯೮೧ ರಲ್ಲಿ ಇದ್ದ ಜನಸಂಖ್ಯೆಯನ್ನು ನೋಡಿದಾಗ ಶೇ ೧೬ ರಷ್ಟು ಜನಸಂಖ್ಯೆ ಏರಿಕೆಯಾಗಿದೆ. ಈ ವರದಿಯಂತೆ ಜನಸಂಖ್ಯೆಯ ಆಧಾರದಲ್ಲಿ ಬೆಂಗಳೂರು ಉತ್ತರ ತಾಲ್ಲೂಕನ್ನು ೧೯೭೧ ರಲ್ಲಿ ಗ್ರಾಮೀಣ ಭಾಗದಲ್ಲಿ ಜನಸಂಖ್ಯೆ ಹೆಚ್ಚಾಗಿ, ನಂತರ ದಶಕದಲ್ಲಿ ನಗರವನ್ನು ಹೆಚ್ಚು ಅವಲಂಬಿಸಿರುವುದು ಕಾಣಬಹುದು. ನಂತರ ೨೦೧೧ ರಲ್ಲಿ ಆ ಜನಸಂಖ್ಯೆ ಪ್ರಮಾಣವು ೫.೫೨.೪೨೦ ಆಗಿದ್ದು ಮೂರು ಲಕ್ಷಕ್ಕೂ ಹೆಚ್ಚು ಜನರು ನಗರವನ್ನು ಅವಲಂಬನೆ ಮಾಡಿರುವುದನ್ನು ಕಾಣಬಹುದು.

೪.೨.೧.೨. ವಲಸೆ : ಬೆಂಗಳೂರು ಉತ್ತರ ತಾಲ್ಲೂಕು

ವಲಸೆಯೆಂದರೆ ಕೆಲವು ನಿರ್ದಿಷ್ಟ ಕಾರಣ ಮತ್ತು ಹತಾಶೆಗಳನ್ನು ಇಟ್ಟುಕೊಂಡು ಬೇರೆಡೆಗೆ ಹೋಗಿ ನೆಲೆಸುವುದಾಗಿದೆ. ವಲಸೆಯ ಪ್ರಮಾಣವು ಸ್ಥಳದಿಂದ ಸ್ಥಳಕ್ಕೆ ಭಿನ್ನವಾಗಿರುತ್ತವೆ. ಹೆಚ್ಚು ಅನೂಕೂಲತೆಯ ಪ್ರದೇಶಗಳೆ ವಲಸಿಗರ ಆಯ್ಕೆಯಾಗಿರುವುದು. ವಲಸಿಗರಿಗೆ ತಾವು ಜೀವಿಸಲು ಬೇಕಾದ ಸೌಲಭ್ಯಗಳು ಎಲ್ಲಿ ದೊರೆಯುತ್ತವೊ ಅಂತಹ ಪ್ರದೇಶಗಳಿಗೆ ಗುಳೆ ಹೋಗುವರು. ಹೀಗೆ ಬೆಂಗಳೂರಿನಲ್ಲಿ ಇದ್ದ ಅನುಕೂಲಕರವಾದ ಸೌಲಭ್ಯಗಳು ಮತ್ತು ಸವಲತ್ತುಗಳು ವಲಸಿಗರನ್ನು ಆಕರ್ಷಿಸಿ ಬರುವಂತೆ ಮಾಡಿದವು. ವಲಸೆಯು ಎರಡು ಪ್ರಕ್ರಿಯೆಯಲ್ಲಿ ನಡೆಯುತ್ತವೆ. “ವಲಸೆಯು ತಳ್ಳುವ ಮತ್ತು ಸೆಳೆತದ ಎರಡು ಪ್ರಕ್ರಿಯೆಯಲ್ಲಿ ನಡೆಯುತ್ತವೆ.”[೧೯] ಬೆಂಗಳೂರಿನ ಉತ್ತರ ತಾಲ್ಲೂಕಿನಲ್ಲಿಯೂ ಸಹ ಈ ಪ್ರಕ್ರಿಯೆಯಲ್ಲಿ ವಲಸೆಯು ಉಂಟಾಗಿದೆ.

೪.೨.೧.೨.೧ ವಲಸೆಯ ಪ್ರಕ್ರಿಯೆಗಳು

ವಲಸೆಯು ಎರಡು ಪ್ರಕ್ರಿಯೆಯಲ್ಲಿ ನಡೆಯುತ್ತದೆ.

೧. ತಳ್ಳುವ ಕ್ರಿಯೆ

೨. ಸೆಳೆತದ ಕ್ರಿಯೆ

೪.೨.೧.೨.೧ ತಳ್ಳುವ ಕ್ರಿಯೆ

ತಳ್ಳುವ ಕ್ರಿಯೆ ಎಂದರೆ, ಆಡಳಿತದಲ್ಲಿರುವವರು ಜನರನ್ನು ಒಂದು ಪ್ರದೇಶದಿಂದ ಒತ್ತಾಯವಾಗಿ ಬೇರೆಡೆಗೆ ಹೋಗಿ ನೆಲೆಸುಂತೆ ಮಾಡುವುದಾಗಿದೆ.

“ಬೆಂಗಳೂರಿನಲ್ಲಿ ಹೈದರಾಲಿಯು ಸೈನ್ಯವನ್ನು ಬಲಪಡಿಸಲು ಆಂಧ್ರಪ್ರದೇಶದಿಂದ ಹಲವು ಸೈನಿಕರನ್ನು ಕರೆತಂದು, ಬೆಂಗಳೂರಿನಲ್ಲಿ ಬೃಹತ್ ಕೋಟೆಯನ್ನು ನಿರ್ಮಾಣ ಮಾಡಿಸಿದನು. ೧೮೯೮ ರ ಸಂದರ್ಭದಲ್ಲಿ ದಕ್ಷಿಣ ಆಫ್ರಿಕಾ ಮತ್ತು ಚೀನಾದೇಶಗಳಿಗೆ ಹಲವು ಬೆಂಗಳೂರಿನ ಸೈನಿಕರನ್ನು ಕಳುಹಿಸಿದರು”.[೨೦] ಇಂತಹ ಘಟನೆಗಳು ಕೆಲಸ ನಿರ್ವಹಿಸಲು ಬಲವಂತವಾಗಿ ಬೇರಡೆಗೆ ಹೋಗುವಂತೆ ತಳ್ಳುವುದಾಗಿದೆ. ಹೀಗೆ ಜನರನ್ನು ಬಲವಂತವಾಗಿ ಬೇರೆಡೆಗೆ ಕರತರುವುದು, ದಾಳಿ ಮತ್ತು ದಬ್ಬಾಳಿಕೆಗಳನ್ನು ಮಾಡುತ್ತಾ ಬೇರೆಡೆಗೆ ಹೋಗುವಂತೆ ಮಾಡುವುದು ತಳ್ಳುವ ಕ್ರಿಯೆಗಳಾಗಿವೆ.

೪.೨.೧.೨.೨ ಸೆಳೆತದ ಕ್ರಿಯೆ

ಸೆಳೆತವು ಉತ್ತಮ ಔದ್ಯೋಗಿಕರಣ, ಶಿಕ್ಷಣ, ವೈದ್ಯಕೀಯ, ಉತ್ತಮ ವಾತಾವರಣ, ಸಾರಿಗೆ ಸಂಪರ್ಕ, ಉತ್ತಮ ಜನಜೀವನದಿಂದ ಆಕರ್ಷಿತರಾಗಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವಲಸೆ ಬರುವುದಾಗಿದೆ. ಈ ಎರಡೂ ಕೂಡ ಬೆಂಗಳೂರಿನ ಜನಸಂಖ್ಯೆಯ ಹೆಚ್ಚಳಕ್ಕೆ ಕಾರಣಗಳಾಗಿವೆ.

ಸೆಳೆತದ ಕ್ರಿಯೆಗಳನ್ನು ಗುರುತಿಸುವುದಾದರೆ ಬೆಂಗಳೂರಿನಲ್ಲಿ ೧೮ ಮತ್ತು ೧೯ ನೆ ಶತಮಾನದಲ್ಲಿ ಆರಂಭವಾದ ಬೃಹತ್ ಕೈಗಾರಿಕೆಗಳು, ಉತ್ತಮ ಶೈಕ್ಷಣಿಕ ಸಂಸ್ಥೆಗಳು, ಬೌರಿಂಗ್, ವಾಣಿವಿಲಾಸ, ವಿಕ್ಟೋರಿಯಾದಂತಹ ವೈದ್ಯಕೀಯ ಸಂಸ್ಥೆಗಳ(ಆಸ್ಪತ್ರೆಗಳು) ಪ್ರಾರಂಭ, ಸರಾಗವಾಗಿ ಬಂದುಹೋಗಲು ಸಾರಿಗೆ ವ್ಯವಸ್ಥೆ (ಬಸ್ಸು ಮತ್ತು ರೈಲ್ವೆ ಸಾರಿಗೆ ಸಂಚಾರ) ಗಳ ನಿರ್ಮಾಣ, ಉದ್ಯಮಕ್ಕೆ ತಕ್ಕ ಮಾರುಕಟ್ಟೆಗಳು (ಕೃಷ್ಣರಾಜ ಮಾರುಕಟ್ಟೆ, ರಸೆಲ್ ಮಾರುಕಟ್ಟೆ, ಯಲಹಂಕ ಸಂತೆ ಮಾರುಕಟ್ಟೆ) ಸ್ಥಾಪನೆಯಾದವು. ಇವುಗಳು ಅನ್ಯ ಭಾಷಿಕ ಜನರನ್ನು ಆಕರ್ಷಕವಾಗಿ ಕಂಡು ಸೆಳೆತವುಂಟು ಮಾಡಿವೆ. ಈ ಸೆಳೆತದ ಕ್ರಿಯೆಯಿಂದ ಹಲವು ಅನ್ಯ ಭಾಷಿಕರು ತಮ್ಮ ಸುಲಭ ಜೀವನ ನಿರ್ವಹಣೆಯನ್ನು ಸಾಗಿಸಲು ಬೆಂಗಳೂರು ಗ್ರಾಮೀಣ ಪ್ರದೇಶವನ್ನು ನೆಲೆಯಾಗಿಸಿ ಕೊಂಡಿದ್ದಾರೆ. ಇಂದು ಗ್ರಾಮೀಣ ಪ್ರದೇಶದ ನಿವಾಸಿಗಳಾಗಿಯೇ ನೆಲೆಸಿದ್ದಾರೆ.

೪.೨.೧.೩. ಬೆಂಗಳೂರಿನ ಉತ್ತರ ತಾಲ್ಲೂಕಿನ ಜನಸಂಖ್ಯೆಯ ಹೆಚ್ಚಳವು ಉಂಟಾದ ಕಾಲಮಾನ ಮತ್ತು ಕಾರಣಗಳು:

೪.೨.೧.೩.೧ ಜನಸಂಖ್ಯೆ ಹೆಚ್ಚಳದ ಕಾಲಮಾನ : ೧೯೬೧ ರಿಂದ ೧೯೮೧ ರವರೆಗಿನ ಬೆಂಗಳೂರು ಉತ್ತರ ತಾಲ್ಲೂಕಿನ ಜನಗಣತಿಯ ವರದಿಯ ದತ್ತಾಂಶವನ್ನು ನೋಡಿದಾಗ ಶೇ ೧೬ ರಷ್ಟು ಜನಸಂಖ್ಯೆ ಏರಿಕೆಯಾಗಿದೆ. ಈ ವರದಿಯಂತೆ ೧೯೭೧ ರಲ್ಲಿ ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಭಾಗದಲ್ಲಿ

ಜನಸಂಖ್ಯೆಯು ಹೆಚ್ಚಾಗಿದೆ. ಅನಂತರ ೧೯೮೧ ರ ಕಾಲ ಘಟ್ಟದಲ್ಲಿ ನಗರದ ಜನಸಂಖ್ಯೆ ಗ್ರಾಮೀಣ ಜನಸಂಖ್ಯೆಗಿಂತ ಹೆಚ್ಚಾಗಿ ಬೆಳವಣಿಗೆಯಾಗಿದೆ. ೧೯೬೧ ರಿಂದ ೧೯೮೧ ರ ಎರಡು ದಶಕಗಳ ಕಾಲದಲ್ಲಿ ಗ್ರಾಮೀಣ ಪ್ರದೇಶವನ್ನು ಜನರು ಅವಲಂಬಿಸಿದರು. ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ೧೯೮೧ ರ ಕಾಲ ನಂತರದ ದಶಕದಲ್ಲಿ ಜನರು ಹೆಚ್ಚು ನಗರವನ್ನು ಅವಲಂಬಿಸಿದ್ದಾರೆ.

ವರ್ಷ	ನಗರ	ಗ್ರಾಮೀಣ	ಒಟ್ಟು
೧೯೬೧	೮೪,೬೨೦	೮೪,೮೦೧	೧,೬೯,೪೨೧
೧೯೭೧	೬೪,೪೪೩	೧,೭೭,೯೫೩	೨,೪೨,೩೯೬
೧೯೮೧	೨,೨೪,೨೧೯	೧,೮೩,೮೭೧	೪,೦೮,೦೯೦

೪.೨.೧.೩.೨. ಬೆಂಗಳೂರು ಉತ್ತರ ತಾಲ್ಲೂಕಿನ ಜನಸಂಖ್ಯೆ ಹೆಚ್ಚಳದ ಕಾರಣಗಳು

ಬೆಂಗಳೂರು ಉತ್ತರ ತಾಲ್ಲೂಕಿನ ಜನಸಂಖ್ಯೆ ಹೆಚ್ಚಳದ ಕಾರಣಗಳು ಈ ರೀತಿಯಲ್ಲಿವೆ.

೧. ೮೦ರ ದಶಕದವರೆಗೆ ಹೆಚ್ಚು ಫಲವತ್ತತೆಯಿಂದ ಬೆಳೆಯ ಉತ್ಪಾದನೆಯಲ್ಲಾದ ಹೆಚ್ಚಳ.

೨. ಉತ್ತಮ ವೈದ್ಯಕೀಯ ಚಿಕಿತ್ಸೆ ಮತ್ತು ಆಸ್ಪತ್ರೆಗಳ ನಿರ್ಮಾಣಗಳಿಂದ ಇಳಿಕೆಯಾದ ಸಾವಿನ ಸಂಖ್ಯೆ.

೩. ನಗರೀಕರಣದಿಂದ ಬೆಂಗಳೂರಿನ ಸುತ್ತಲಿನ ಹೊಸ ಪ್ರದೇಶಗಳು ಸೇರಿ ವಿಸ್ತೀರ್ಣ ಹೆಚ್ಚಾಗಿರುವುದು.

೪. ವಲಸಿಗರು ಹೆಚ್ಚಳವಾಗಿರುವುದು.

೫. ಪ್ರಾಕೃತಿಕ ವಿಕೋಪಗಳು.

ಇವುಗಳಲ್ಲಿ ಹೆಚ್ಚಾಗಿ ವಲಸೆಯೇ ಮುಖ್ಯ ಕಾರಣವಾಗಿ ಜನಸಂಖ್ಯೆ ಮತ್ತು ಜೀವನ ನಿರ್ವಹಣೆಯ ಮೇಲೆ ಪ್ರಭಾವ ಬೀರಿದೆ.

೪.೨.೧.೩.೨.೧. ಬೆಂಗಳೂರು : ಕೈಗಾರಿಕಾ ಸ್ಥಾಪನೆ

ಬೆಂಗಳೂರು ೧೮೩೧ ರಲ್ಲಿ ಬ್ರಿಟಿಷ್ ಕಮೀಷನರ್ ಅವರ ಆಡಳಿತಕ್ಕೆ ಒಳಪಟ್ಟಿತ್ತು. ಆಗ ಮೈಸೂರಿನಲ್ಲಿದ್ದ ಕಛೇರಿಗಳನ್ನು ಬೆಂಗಳೂರಿಗೆ ಸ್ಥಳಾಂತರಿಸಿದರು. ೧೮೮೧ರ ವೇಳೆಗೆ ಆಡಳಿತ ಅರಸರದಾಗಿದ್ದರೂ ಕಾರ್ಯಾಡಳಿತವು ಬೆಂಗಳೂರಿನ ಕಛೇರಿಗಳಿಂದಲೇ ನಡೆಯುತ್ತಿದ್ದವು. ಈ ಸಂಗತಿಗಳಿಂದ ಬೆಂಗಳೂರು

ಪರಿಸರದಲ್ಲಿ ಉದ್ಯಮಗಳ ಸ್ಥಾಪನೆಗೆ ಹೆಚ್ಚು ಅವಕಾಶವಾದವು. ಅದರಲ್ಲೂ ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಉದ್ಯಮಗಳು ಹೆಚ್ಚು ಸ್ಥಾಪನೆಯಾಗಿದ್ದವು. ೧೮೮೪ರಲ್ಲಿ ಮೈಸೂರು ಸ್ಪಿನ್ನಿಂಗ್ ಆಂಡ್ ಮ್ಯಾನುಫ್ಯಾಕ್ಚರಿಂಗ್ ಮಿಲ್, ೧೮೮೭ರಲ್ಲಿ ಬೆಂಗಳೂರು ಉಲ್ಲನ್ ಕಾಟನ್ ಮಿಲ್ ಹತ್ತಿಗಿರಣಿಗಳು ಸ್ಥಾಪನೆಯಾದವು. ೧೯೧೬ರಲ್ಲಿ ಕರ್ನಾಟಕ ಸೋಪ್ ಆಂಡ್ ಡಿಟರ್ಜೆಂಟ್ ಲಿಮಿಟೆಡ್ ಕಾರ್ಖಾನೆ ಯಶವಂತಪುರದಲ್ಲಿದ್ದು ಮೈಸೂರು ಗಂಧದ ಸಾಬೂನು ಮತ್ತು ಎಣ್ಣೆಯನ್ನು ತಯಾರಿಸುತ್ತಿದೆ. ೧೯೫೨ ರಲ್ಲಿ ಹೆಸರಘಟ್ಟದಲ್ಲಿ ಕೇಂದ್ರೀಯ ಪಶು ಸಂತಾನೋತ್ಪತಿ ಕೇಂದ್ರ, ೧೯೬೨ರಲ್ಲಿ ಶೀತ ವಿರ್ಯೋತ್ಪಾದನಾ ತರಬೇತಿ ಕೇಂದ್ರ, ೧೯೫೯–೬೦ರಲ್ಲಿ ಕೇಂದ್ರ ಕುಕ್ಕುಟ ಸಂತಾನೋತ್ಪತಿ ಕೇಂದ್ರ. ಸೆಂಟ್ರಲ್ ಡಕ್ ಬ್ರೀಡಿಂಗ್ ಫಾರ್ಮ್, ೧೯೭೨ರಲ್ಲಿ ಕೇಂದ್ರ ಕುಕ್ಕುಟೋಧ್ಯಮ ತರಬೇತಿ ಕೇಂದ್ರ, ೧೯೮೮ ಮಲ್ಲೇಶ್ವರಂನಲ್ಲಿ ಮರ ವಿಜ್ಞಾನ ಸಂಸ್ಥೆ, ೧೯೮೪ರಲ್ಲಿ ರೈಲ್ವೆ ಗಾಲಿ ಕಾರ್ಖಾನೆಯು ಯಲಹಂಕದಲ್ಲಿ ಸ್ಥಾಪನೆಯಾಗಿದೆ. ೧೯೫೩ರಲ್ಲಿ ಹಿಂದೂಸ್ಥಾನ್ ಮೆಷಿನ್ ಟೂಲ್ಸ್ ಸ್ಥಾಪನೆಯಾಯಿತು. ೧೯೫೪ರಲ್ಲಿ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್– ಹೀಗೆ ಆರಂಭವಾದ ಉದ್ಯಮಗಳು ಸ್ಥಳೀಯರನ್ನಲ್ಲದೆ ನೆರೆಹೊರೆಯ ಪ್ರದೇಶದ ಉದ್ಯೋಗಾಕಾಂಕ್ಷಿಗಳನ್ನು ಸೆಳೆದವು. ಬೆಂಗಳೂರಿನ ಉತ್ತರ ತಾಲ್ಲೂಕು ಭಾಗವಾದ ಯಲಹಂಕ ಪ್ರದೇಶಗಳಲ್ಲಿ ಹೆಚ್ಚು ಕೈಗಾರಿಕೆಗಳು ಅಭಿವೃದ್ಧಿಯಾದವು. ಅದರಂತೆ "೧೮೮೪ರಲ್ಲಿ ಹಬೆಶಕ್ತಿ ಬಳಸಿ ಆರಂಭಿಸಿದ ಬಿನ್ನಿಮಿಲ್ಲಿನಲ್ಲಿ ಅನೇಕ ತಮಿಳರು, ತೆಲುಗಿನವರು ಉದ್ಯೋಗ ಪಡೆದಿದ್ದರು ಯಲಹಂಕ ಭಾಗದಲ್ಲಿನ ಬಟ್ಟೆ ಉದ್ದಿಮೆಗಳು ಪ್ರಾರಂಭವಾದವು."[೨೧] ಹೀಗೆ ಯಲಹಂಕ ಭಾಗದಲ್ಲಿ ಅಭಿವೃದ್ಧಿಯಾದ ಕೈಗಾರಿಕ ಉದ್ದಿಮೆಗಳು ಹಾಗೂ ಸುಲಭ ಸಂಪರ್ಕದ ಹೆದ್ದಾರಿಗಳಿಂದ ಆಕರ್ಷಿತರಾಗಿ ಜಾಲ ಮತ್ತು ಯಲಹಂಕ ಭಾಗದಲ್ಲಿ ಹಲವಾರು ಜನರು ವಲಸೆ ಬಂದು ನೆಲೆಸಿದರು.

೪.೨.೧.೩.೨.೨ ಬೆಂಗಳೂರು : ಶೈಕ್ಷಣಿಕ ಸಂಸ್ಥೆಗಳು

ಬೆಂಗಳೂರಿನಲ್ಲಿ ಉತ್ತಮ ಶೈಕ್ಷಣಿಕ ಸಂಸ್ಥೆಗಳು ಆರಂಭವಾದವು. "೧೮೨೦ರಲ್ಲಿ ವೆಸ್ಲಿ ಶಿಕ್ಷಣ ಸಂಸ್ಥೆ, ೧೮೫೭ರಲ್ಲಿ ಶಿಕ್ಷಣ ಇಲಾಖೆ ಸ್ಥಾಪನೆ, ೧೮೮೨ರಲ್ಲಿ ಸೆಂಟ್ ಜೋಸೆಪ್ ಕಾಲೇಜು ಆರಂಭವಾಯಿತು. ೧೯೧೨ರಲ್ಲಿ ಎಸ್.ಎಸ್.ಎಲ್.ಸಿ ಮಂಡಳಿ ರಚನೆಯಾಯಿತು. ೧೮೪೦ರಲ್ಲಿ ಹುಡುಗಿಯರಿಗಾಗಿಯೇ ಮೊದಲ ಕನ್ನಡ ಶಾಲೆಯನ್ನು ಆರಂಭಿಸಲಾಯಿತು".[೨೨]

೪.೨.೧.೩.೨.೩ ಬೆಂಗಳೂರಿನಲ್ಲಿನ ವೈದ್ಯಕೀಯ ಸೌಲಭ್ಯ

ವೈದ್ಯಕೀಯ ವ್ಯವಸ್ಥೆಯಲ್ಲಿ, "ಅಲೋಪತಿ ವೈದ್ಯ ಪದ್ಧತಿಯು ೧೮೩೩ರಲ್ಲಿ ಸಾರ್ವಜನಿಕವಾಗಿ ಕಂಟೋನ್ಮೆಂಟಿನ ಪ್ರದೇಶದಲ್ಲಿ ನಡೆಯುತ್ತಿದ್ದವು. ನಂತರ ಅದು ಪೇಟೆವೈದ್ಯವೆಂದೆ ಹೆಸರಾಗಿತ್ತು. ಅದು ೧೮೬೬ರಲ್ಲಿ ಬೌರಿಂಗ್ ಆಸ್ಪತ್ರೆಯಾಗಿ ಮುಂದುವರೆದುಕೊಂಡು ಬಂದಿದೆ"[೨೩] ೧೮೮೬ರಲ್ಲಿ ಸೆಂಟ್ ಮಾರ್ಥಸ್ ಆಸ್ಪತ್ರೆ, ೧೯೦೦ರಲ್ಲಿ ವಿಕ್ಟೋರಿಯಾ ಆಸ್ಪತ್ರೆಗಳು ಸ್ಥಾಪನೆಯಾದವು. ೧೯೫೯–೪೦ರಿಂದ ವಾಣಿವಿಲಾಸ ಮತ್ತು ಮಿಂಟೋ ಆಸ್ಪತ್ರೆಯು ಸಾರ್ವಜನಿಕರ ಚಿಕಿತ್ಸೆಯಲ್ಲಿ ತೊಡಗಿವೆ.

೪.೨.೧.೩.೨.೪ ಬೆಂಗಳೂರು : ಸಂಚಾರ ವ್ಯವಸ್ಥೆ

ಸಂಚಾರ ವ್ಯವಸ್ಥೆಗಾಗಿ ೧೮೫೯ರಲ್ಲಿ ಬೆಂಗಳೂರಿನಿಂದ ಜೋಲಾರಪೇಟೆಗೆ ರೈಲುಮಾರ್ಗ ಮೊದಲು ಆರಂಭವಾಯಿತು. "೧೮೭೭ ರಲ್ಲಿ ಬೆಂಗಳೂರಿನಲ್ಲಿ ಬಾರಿ ಬರಗಾಲ ಬಂದಾಗ ಉದ್ಯೋಗ ಕಲ್ಪಿಸಲು ಬೆಂಗಳೂರಿನಿಂದ ಮೈಸೂರಿನವರೆಗೆ ರೈಲ್ವೆ ಕಾಮಗಾರಿಯನ್ನು ಆರಂಭಿಸಿದರು."[೨೪]

೪.೨.೧.೩.೨.೫ ಬೆಂಗಳೂರಿನ ನೀರಿನ ವ್ಯವಸ್ಥೆ

ಬೆಂಗಳೂರು ಪ್ರದೇಶಗಳಿಗೆ ನೀರು ಸರಬರಾಜು ಮಾಡುವ ಅತಿ ದೊಡ್ಡ ಕೆರೆಯೆಂದರೆ ಹೆಸರಘಟ್ಟ ಕೆರೆಯಾಗಿದೆ. ಇದು ೪೯೦ ಚ. ಕೀಮೀ ವ್ಯಾಪ್ತಿಯನ್ನು ಹೊಂದಿದೆ. ಈ ಕೆರೆಗೆ ಮಧುರೆ ಕೆರೆ, ಶಿವಕೋಟೆ ಕೆರೆಗಳಿಂದ ಹೊರ ಬರುವ ನೀರನ್ನು ಸಂಗ್ರಹಿಸಲಾಗುವುದು. "೧೮೯೬ರಲ್ಲಿ ಹೆಸರಘಟ್ಟದಿಂದ ಕುಡಿಯುವ ನೀರನ್ನು ಸರಬರಾಜು ಮಾಡಲಾಯಿತು."[೨೫] ತರಬನಹಳ್ಳಿಯ ಹತ್ತಿರ ನೀರನ್ನು ಪಂಪು ಮಾಡುವ ಘಟಕವನ್ನು ಸ್ಥಾಪಿಸಲಾಗಿತ್ತು. ಇದರ ಮೂಲಕ ಬೆಂಗಳೂರಿನ ಹಲವು ಭಾಗಗಳಿಗೆ ನೀರಿನ ಪೂರೈಕೆಯನ್ನು ಮಾಡಲಾಗುತ್ತಿತ್ತು. ಇದರ ನಿರ್ಮಾಣದ ಜವಬ್ದಾರಿಯನ್ನು ಸರ್.ಎಂ.ವಿಶ್ವೇಶ್ವರಯ್ಯನವರು ಹೊತ್ತಿದ್ದರು. ಇದರ ನಿರ್ಮಾಣದ ಯಶಸ್ಸು ಮೈಸೂರು ಅರಸರಿಗೆ ಸಲ್ಲುತ್ತದೆ. ಇದಕ್ಕೆ ಹೆಸರುಘಟ್ಟದ ಪ್ರದೇಶದ ಜನರಲ್ಲಿ ಒಂದು ನುಡಿಯಿದೆ. 'ಆರ್ ಕೆರೆ ಬಂದ್ರೆ ಅದ್ಲುಸ್ತಿನಿ. ಮೂರ್ ಕೆರೆ ಬಂದ್ರೆ ಮುಗ್ರೀಸ್ತೀನಿ, ಮದ್ರಮ್ಮ ಬಂದ್ರೆ ತಡ್ಯಾಕಗಲ್ಲ' ಈ ನುಡಿಯು ಹೆಸರಘಟ್ಟದ ಕೆರೆಯ ವಿಶಾಲತೆಯನ್ನು ತಿಳಿಸುತ್ತದೆ.

೪.೨.೧.೩.೨.೬ ಬೆಂಗಳೂರು ಮಾರುಕಟ್ಟೆಯ ಸ್ಥಾಪನೆ

"೧೯೨೭ರಲ್ಲಿ ರಸೆಲ್ ಮಾರುಕಟ್ಟೆ ಮತ್ತು ೧೯೨೮ರಲ್ಲಿ ಕೃಷ್ಣರಾಜೇಂದ್ರ ಮಾರುಕಟ್ಟೆ ಆರಂಭಿಸಲಾಯಿತು."[೨೬] ಮಾರುಕಟ್ಟೆಯ ನಿರ್ಮಾಣದ ಮೂಲಕ ಬೆಂಗಳೂರು ಗ್ರಾಮೀಣ ಜನರಿಗೆ ಮತ್ತು ವ್ಯವಸಾಯಗಾರರಿಗೆ

ಉತ್ತಮ ಮಾರುಕಟ್ಟೆಗಳ ನಿರ್ಮಾಣ ಮಾಡಿದಂತಾಯಿತು. ಹೀಗೆ ತಾವು ಬೆಳೆದ ಬೆಳೆಗೆ ಮಾರುಕಟ್ಟೆಯ ನಿರ್ಮಾಣವಾಗಿದ್ದು ಜನರಿಗೆ ಅನುಕೂಲವಾಯಿತು. ಹೀಗೆ ಜನವಸತಿಯು ಹೆಚ್ಚಾಗಲು ಕಾರಣವಾಗಿತು. ಅಂದಿನ ವರ್ತಕರ ವ್ಯಾಪಾರಕ್ಕೆ ಅನುಕೂಲವಾಗುವ ವಾತವರಣವು ನಿರ್ಮಾಣವಾಗಿತು, ಹೀಗೆ ಮಾರುಕಟ್ಟೆಯ ನಿರ್ಮಾಣವಾದದ್ದು ಬೆಂಗಳೂರು ಸುತ್ತಲಿನ ಬೇರೆ ಭಾಗದ ವಲಸಿಗರನ್ನು ಸೆಳೆದವು. ಹೀಗೆ ಬೇರೆ ಅನ್ಯಪ್ರದೇಶದವರು ಅಥವಾ ಅನ್ಯಭಾಷಿಕರನ್ನು ಆಕರ್ಷಿಸುವುದರೊಂದಿಗೆ ಇಲ್ಲಿಯೆ ಬಂದು ನೆಲೆಸುವಂತಾಯಿತು. ಹೀಗೆ ನೆಲೆಸಿದವರಲ್ಲಿ ಬೆಂಗಳೂರಿನ ಜನರ ಜೀವನ ಶೈಲಿಯೊಂದಿಗೆ ಭಾಷೆಯಲ್ಲೂ ಬದಲಾವಣೆಗಳು ಉಂಟಾದವು. ಹೀಗೆ ಕ್ರಮೇಣ ನಗರದ ಭಾಗದ ಜನಸಂಖ್ಯೆ ಹೆಚ್ಚಾದಂತೆಲ್ಲಾ ಆ ಅನ್ಯಭಾಷಿಕರು ಗ್ರಾಮೀಣ ಪ್ರದೇಶಗಳಿಗೆ ಬಂದು ನೆಲೆಸಿದರು. ಹೀಗೆ ಬಂದವರಲ್ಲಿ ತೆಲುಗಿನವರು ಬೆಂಗಳೂರು ಉತ್ತರ ತಾಲ್ಲೂಕಿನ ಯಲಹಂಕ ಮತ್ತು ಜಾಲ ಭಾಗಗಳಿಗೆ ಬಂದು ಸೇರಿದವರಾಗಿದ್ದಾರೆ, ಇದರ ಕಾರಣದಿಂದ ಬೆಂಗಳೂರು ಗ್ರಾಮೀಣ ಜನರ ಭಾಷೆಯಲ್ಲಿ ಅದರಲ್ಲೂ ಜಾಲ ಭಾಗದಲ್ಲಿ ಇತರ ಹೋಬಳಿಗಳಿಗಿಂತ ಭಿನ್ನವಾದ ಪದಬಳಕೆಯಾಗುತ್ತಿವೆ. ಅಂತಹ ಬದಲಾವಣೆಯನ್ನು ಅಧ್ಯಯನದಲ್ಲಿ ಗುರುತಿಸಿದ್ದೇನೆ.

೪.೨.೧.೩.೨.೭ ಗಡಿ ಸಂಪರ್ಕ ಮತ್ತು ಗಡಿ ವಿಭಜನೆ

ಬೆಂಗಳೂರು ಉತ್ತರ ತಾಲ್ಲೂಕು ಜಾಲ ಮತ್ತು ಯಲಹಂಕ ಪ್ರದೇಶದ ಭಾಗಗಳು ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರಕ್ಕೆ ಗಡಿಪ್ರದೇಶವನ್ನು ಹೊಂದಿಕೊಂಡಿವೆ. ನೆಲಮಂಗಲವನ್ನು ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರ ಮತ್ತು ಯಲಹಂಕ ಭಾಗವು ಹೊಂದಿಕೊಂಡಿವೆ. ಈ ಜಾಲ ಮತ್ತು ಯಲಹಂಕ ಪ್ರದೇಶಗಳು ಹೆಚ್ಚು ವ್ಯಾಪಾರಕ್ಕಾಗಿ ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರ ಪ್ರದೇಶಗಳ ಜೊತೆಗೆ ನಿಕಟವಾದ ಸಂಪರ್ಕವನ್ನು ಹೊಂದಿವೆ. ದೇವನಹಳ್ಳಿಯು ಕೋಲಾರಕ್ಕೆ ಸಮೀಪವಾಗಿದ್ದು, ಇಲ್ಲಿನ ಜನರು ತೆಲುಗು ಮತ್ತು ಕನ್ನಡ ಭಾಷೆಗಳನ್ನು ಬಲ್ಲವರಾಗಿದ್ದಾರೆ. ಈ ದೇವನಹಳ್ಳಿಯವರ ನಿಕಟ ಸಂಪರ್ಕದಿಂದ ಜಾಲ ಹೋಬಳಿಗಳ ಜನರು ಆಡುಮಾತಿನ ಮೇಲೆ ಕ್ರಮೇಣ ತೆಲುಗಿನ ಪ್ರಭಾವವು ಉಂಟಾಗುತ್ತಿದೆ.

೧೯೮೬ರಲ್ಲಿ ದೇವನಹಳ್ಳಿ ತಾಲ್ಲೂಕಿಗೆ ಒಳಪಟ್ಟ ಜಾಲ ಹೋಬಳಿಯನ್ನು ಬೆಂಗಳೂರು ಉತ್ತರ ತಾಲ್ಲೂಕಿಗೆ ಸೇರಿಸಲಾಗಿದೆ. ಹೀಗೆ ತೆಲುಗು ಪ್ರದೇಶದ ಸಂಪರ್ಕ ಹೊಂದಿದ್ದ ದೇವನಹಳ್ಳಿಯಿಂದ ಜಾಲ ಭಾಗವನ್ನು ಬೇರ್ಪಡಿಸಿ ಬೆಂಗಳೂರು ಉತ್ತರ ತಾಲ್ಲೂಕಿಗೆ ಸೇರಿಸಿದ್ದರಿಂದ ಜಾಲ ಭಾಗದ ಜನರ ಭಾಷೆಯಲ್ಲೂ ಬದಲಾವಣೆ ಉಂಟಾಗಿವೆ. ಇದರಿಂದ ಕನ್ನಡ ಮತ್ತು ತೆಲುಗು ಬಲ್ಲವರಾದ ಜಾಲ

ಭಾಗದವರ ಆಡುಮಾತಿನಲ್ಲಿ ಉತ್ತರ ತಾಲ್ಲೂಕಿನ ಬೇರೆ ಹೋಬಳಿಗಳಿಗಿಂತ (ದಾಸನಪುರ, ಹೆಸರಘಟ್ಟ, ಯಶವಂತಪುರ) ಭಿನ್ನವಾದ ಭಾಷಾಪ್ರಯೋಗಗಳು ಬಳಕೆಯಾಗುತ್ತಿವೆ. ಇದರಿಂದ ಯಾವ ರೀತಿಯಲ್ಲಿ ಜಾಲ ಭಾಷಿಕರು ಉಳಿದ ಭಾಷಿಕ ಪ್ರದೇಶಗಳಿಗಿಂತ ಭಿನ್ನವಾಗಿ ಭಾಷೆಯನ್ನು ಬಳಸುತ್ತಿದ್ದಾರೆ ಎಂಬುದನ್ನು ಅಧ್ಯಯನದಲ್ಲಿ ಗುರುತಿಸಿದ್ದೇನೆ.

೪.೨.೧.೩.೨.೮ ವರ್ತಕರ ಸಂಪರ್ಕ ಮಾರ್ಗಗಳು

"೧೯೬೨ ರಿಂದ ೧೮೯೩ ರವರೆಗಿನ ಅವಧಿಯಲ್ಲಿ ಬೆಂಗಳೂರಿನಿಂದ ಪ್ರಮುಖ ನಗರ ಪ್ರದೇಶಕ್ಕೆ ರೈಲ್ವೆಮಾರ್ಗಗಳನ್ನು ನಿರ್ಮಿಸಲಾಯಿತು. ಅದರಲ್ಲಿ ಬೆಂಗಳೂರಿನಿಂದ ಜೋಲಾರಪೇಟೆಗೆ ಮಾರ್ಗ ತಯಾರಿಸಿ ಮದ್ರಾಸ್ ಬಂದರಿಗೆ ಸಂಪರ್ಕವನ್ನು ಕಲ್ಪಿಸಲಾಗಿತ್ತು. ಈ ರೈಲ್ವೆ ಮಾರ್ಗ ನಿರ್ಮಾಣ ಕಾರ್ಯದಲ್ಲಿ ಸಾಕಷ್ಟು ಕನ್ನಡಿಗರಲ್ಲದೆ, ತಮಿಳು, ತೆಲುಗಿನವರು ಉದ್ಯೋಗ ಪಡೆದರು"[೨೭]

ಬುಕನನ್‌ರವರು "ಬೆಂಗಳೂರು ಪರಿಸರದಲ್ಲಿ ಈ ಪಟ್ಟಣದ ಜೊತೆಸಂಪರ್ಕವುಳ್ಳ ಅಗರ, ಹೆಸರುಘಟ್ಟ, ಹಲಸೂರು, ವರ್ತೂರು, ಕೆಂಗೇರಿಗಳು ಇಲ್ಲಿನ ವಾಣಿಜ್ಯಕ್ಕೆ ನೆರವಾಗುತ್ತಿವೆ"[೨೮] ಎಂದು ಹೇಳಿರುವುದು ವ್ಯಾಪಾರ, ಸಂಪರ್ಕದಲ್ಲಿ ಜನರು ತೊಡಗಿದ ರೀತಿಯನ್ನು ತಿಳಿಸುತ್ತದೆ.

"ವಿಜಯನಗರದ ಆಳ್ವಿಕೆಯ ಕಾಲದಲ್ಲಿ ಆಂಧ್ರದಲ್ಲಿ ಬರಗಾಲ ಬಂದು, ದೊಡ್ಡ ಸಂಖ್ಯೆಯಲ್ಲಿ ರೈತರು, ನೇಕಾರರು ಬೆಂಗಳೂರಿಗೆ ಬಂದರು."[೨೯] "೧೮೩೧ರಲ್ಲಿ ಬೆಂಗಳೂರು ರಸ್ತೆಗಳ ಜಾಲ ಬೆಳೆದು ಹೊಸಪೇಟೆಗಳು ಉದಯಿಸಿದವು. ವಲಸಿಗರ ಸಂಖ್ಯೆ ಹೆಚ್ಚಿದವು, ಗುಡಿಕೈಗಾರಿಕೆಗಳು ಹೆಚ್ಚಿದವು. ಕೆಂಪೇಗೌಡರ ಕಾಲದಲ್ಲಿ ಪೇಟೆಗಳ ನಿರ್ಮಾಣವನ್ನು ಮಾಡಲಾಗಿತು. ಈ ಪೇಟೆಗಳಿಗೆ ಸಮಗಾರ, ಬಡಗಿ, ತಮಿಳಿನ ಹೂ ಬೆಳೆಯುವವರು, ತಡಿಕೆ ತಯಾರಕರು ಜಟ್ಟಿಗಳನ್ನು ಬೆಂಗಳೂರಿಗೆ ಕರೆತರಲಾಯಿತು"[೩೦]

೪.೨.೧.೩.೨.೯ ಪ್ರಾಕೃತಿಕ ವಿಕೋಪಗಳು :

ಪ್ರಾಕೃತಿಕ ವಿಕೋಪಗಳಾದ ಬರಗಾಲ, ಕ್ಷಾಮಗಳು ಬಂದಾಗ ಮೂಲ ನಿವಾಸಿಗಳು ಬೇರೆಡೆಗೆ ಹೋಗಿ ನೆಲೆಸುವುದು ಸಾಮಾನ್ಯವಾದ ಸಂಗತಿಯಾಗಿದೆ. ಅದರಂತೆ ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಈ ರೀತಿ ಬರಗಾಲ ಮತ್ತು ಕ್ಷಾಮದಿಂದ ಬಂದಂತಹ ಎರಡು ಸಂಗತಿಗಳಿವೆ.

"ವಿಜಯನಗರದ ಆಳ್ವಿಕೆಯ ಕಾಲದಲ್ಲಿ ಆಂಧ್ರದಲ್ಲಿ ಬರಗಾಲ ಬಂದು, ದೊಡ್ಡ ಸಂಖ್ಯೆಯಲ್ಲಿ ರೈತರು, ನೇಕಾರರು ಬೆಂಗಳೂರಿಗೆ ಬಂದರು"[೩೧] ಇಲ್ಲಿ ಆಂಧ್ರಪ್ರದೇಶದಲ್ಲಿ ಬರಗಾಲ ಬಂದಾಗ ವಿಜಯ ನಗರದ ಆಳ್ವಿಕೆಗೆ ಒಳಪಟ್ಟಂತಹ ದೇವನಹಳ್ಳಿ ಭಾಗಗಳಿಗು ತೆಲುಗು ಭಾಷಿಕರು ಬಂದಿರುವುದು ತಿಳಿಯುತ್ತದೆ. ಬೆಂಗಳೂರಿನ ನೇಕಾರರು ಮತ್ತು ಬಳೆವ್ಯಾಪಾರಿಗಳು ತೆಲುಗಿನವರೇ ಹೆಚ್ಚಾಗಿದ್ದರು. ಈ ರೀತಿಯಲ್ಲಿ ಬೆಂಗಳೂರು ಮತ್ತು ದೇವನಹಳ್ಳಿ ಭಾಗಕ್ಕೆ ತೆಲುಗು ಭಾಷಿಕರ ಪ್ರವೇಶವನ್ನು ಪಡೆದರು.

ಈಶ್ವರ ಧಾತು ಕ್ಷಾಮ

"೧೮೭೬-೭೮ ರಲ್ಲಿ ಮೈಸೂರು ರಾಜ್ಯ ಎರಡು ವರ್ಷ ಭೀಕರ ಕ್ಷಾಮವಾಗಿ ೯ ಲಕ್ಷ ಜನರು ಸಾವನ್ನಪ್ಪಿದರು. ಕೋಲಾರ, ತುಮಕೂರು ಭಾಗದಿಂದ ಸಾವಿರಾರು ಜನರು ಬೆಂಗಳೂರಿಗೆ ಬಂದರು."೩೨ ಬೆಂಗಳೂರಿನಿಂದ ರೈಲ್ವೆ ಸಂಚಾರ ಕಲ್ಪಿಸಿದ ಕೋಲಾರ ಮತ್ತು ತುಮಕೂರು ಭಾಗಗಳಿಗೂ ಪ್ಲೇಗ್ ಮಹಾಮಾರಿ ಹರಡಿತ್ತು. ಅವರು ಚಿಕಿತ್ಸೆಗಾಗಿ ಬೆಂಗಳೂರಿಗೆ ಬಂದಿದ್ದರು. ಹೀಗೆ ಬಂದವರಿಗೆ "ಭಿನ್ನಮಂಗಲ, ಯಲಹಂಕ, ಕಂಟೋನ್ಮೆಂಟ್, ಕೆ.ಆರ್.ಪುರಂ ಪ್ರದೇಶಗಳಲ್ಲಿ ಗಂಜಿಕೇಂದ್ರಗಳನ್ನು ತೆರೆಯಲಾಗಿತ್ತು. ೧೮೭೬ರ ಜುಲೈ ತಿಂಗಳಲ್ಲಿ ೮೮೪ ಮತ್ತು ಆಗಸ್ಟ್‌ನಲ್ಲಿ ೧೧೮೫ ಮತ್ತು ಸೆಪ್ಟಂಬರ್‌ನಲ್ಲಿ ೨೨೫ ಜನರು ಸತ್ತರು"[೩೩] ಹೀಗೆ ಪ್ಲೇಗ್ ಮಹಾಮಾರಿಯಿಂದ ಕಂಗಾಲಾದವರು ಬೆಂಗಳೂರಿನ ಇತರೆ ಗ್ರಾಮೀಣ ಭಾಗಗಳಿಗೆ ವಲಸೆ ಹೋಗಿ ನೆಲೆಸಲು ಮುಂದಾದರು. ಹೀಗೆ ನೆಲೆಸಲು ಮುಂದಾದ ತೆಲುಗು ಭಾಷಿಕರು ದೇವನಹಳ್ಳಿ. ದೊಡ್ಡಬಳ್ಳಾಪುರದ ಕಡೆಹೋಗಿ ಜಾಲ ಪ್ರದೇಶದಲ್ಲಿ ನೆಲೆಸಿದರೆ, ತಮಿಳು ಭಾಷಿಕರು ಹೊಸಕೋಟೆ ಮತ್ತು ಆನೇಕಲ್ಲು ಭಾಗಗಳಿಗೆ ಹೋಗಿ ನೆಲೆಸಿದರು.

೪.೩ ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ದ್ವಿಭಾಷಿಕತೆಯೋ; ಬಹುಭಾಷಿಕತೆಯೋ; ಅಥವಾ ಎರಡೋ?

ಬೆಂಗಳೂರು ಉತ್ತರ ತಾಲೂಕಿನಲ್ಲಿ ಮಾತೃಭಾಷೆಯ ಸಂಖ್ಯಾದೃಷ್ಟಿಯಿಂದ ಕನ್ನಡ, ತಮಿಳು, ತೆಲುಗು, ಉರ್ದು, ಮಲೆಯಾಳಂ ಭಾಷೆಗಳು ಮುಖ್ಯವಾಗಿವೆ. ೧೯೭೧ರ ಜನಗಣತಿಯ ವರದಿಯಂತೆ ತಾಲ್ಲೂಕಿನಲ್ಲಿ ಕನ್ನಡ ಭಾಷೆಯನ್ನಾಡುವವರು ಪ್ರತಿಶತ ೧,೪೨,೩೮೫ (೩೮.೮೯%)ರಷ್ಟಿದ್ದು, ತೆಲುಗು ಭಾಷಿಕರು ಪ್ರತಿಶತ ೪೫,೮೯೩ (ನಗರದಲ್ಲಿ ೩೩.೪೨೪, ಗ್ರಾಮೀಣದಲ್ಲಿ ೧೨.೪೬೯) ರಷ್ಟಿದ್ದಾರೆ.

ಕನ್ನಡ	ತಮಿಳು	ತೆಲುಗು	ಮಲೆಯಾಳಂ	ಉರ್ದು	ಬೆಂಗಾಳಿ	ಹಿಂದಿ
೧,೪೨,೩೮೫	೬೩.೩೨೦	೪೫.೮೯೩	೯೬೦೨	೪೧೨೯೨	೭೨೬	೪೭೭೩

ಬೆಂಗಳೂರು ಉತ್ತರ ತಾಲ್ಲೂಕು ಮೇಲ್ನೋಟಕ್ಕೆ ಬಹುಭಾಷಿಕ ಪರಿಸರದಿಂದ ಕೂಡಿದೆಯಾದರೂ, ಗ್ರಾಮೀಣ ಭಾಗಗಳಲ್ಲಿ ಕನ್ನಡವೇ ಹೆಚ್ಚು ಪ್ರಾಶಸ್ತ್ಯವನ್ನು ಪಡೆದಿದೆ. ಆದರೆ ಜಾಲ ಭಾಗಗಳಲ್ಲಿ ಮತ್ತು ಯಲಹಂಕದ ಪೂರ್ವಭಾಗದ ಹಳ್ಳಿಗಳಲ್ಲಿ ತೆಲುಗು ಮತ್ತು ಕನ್ನಡ ಭಾಷಿಕರು ಹೆಚ್ಚಾಗಿದ್ದು, ದ್ವಿಭಾಷಿಕ ಪರಿಸರವನ್ನು ಒಳಗೊಂಡಿದೆ. ಇದು ಮೇಲಿನ ಅಂಕಿ–ಅಂಶಗಳಲ್ಲೂ ತಿಳಿಯುವುದು. ಹೆಚ್ಚು ಮರಸು ವಕ್ಕಲಿಗರು ಮತ್ತು ನಾಯಕ ಜಾತಿಯವರು ತೆಲುಗು ಬಲ್ಲವರಾಗಿದ್ದಾರೆ, ಮೂಲತಃ ಮರಸು ವಕ್ಕಲಿಗರು ಆಂಧ್ರ ಪ್ರದೇಶದ ನೆಲೆಯುಳ್ಳವರಾಗಿದ್ದಾರೆ. ಅವರು ಭಿನ್ನ ಕಾರಣಗಳಿಗಾಗಿ ಇಲ್ಲಿ ಬಂದು ನೆಲೆಸುದುದರ ಫಲವೇ ಈ ಭಾಗದಲ್ಲಿ ದ್ವಿಭಾಷಿಕರು ಸೇರಲು ಕಾರಣವಾಗಿದೆ.

ಇತ್ತಿಚಿಗೆ ೨೦೧೧ರಲ್ಲಿ ಭಾಷಾ ಜನಗಣತಿಯನ್ನು ಮಾಡಲಾಗಿದ್ದು, ಅದು ಸಕಾಲದಲ್ಲಿ ಸರಿಯಾದ ಮಾಹಿತಿಯನ್ನು ನೀಡಿಲ್ಲ. ಆದ್ದರಿಂದ ಆ ಅಂಕಿ–ಅಂಶಗಳನ್ನು ನಾವು ಅಧ್ಯಯನದಲ್ಲಿ ಬಳಸಿಕೊಂಡಿಲ್ಲ. ಆದರೇ ಜಾಲ ಭಾಗಗಳಲ್ಲಿ ತೆಲುಗು ಮಾತನಾಡುವವರ ಸಂಖ್ಯೆಯು ಹೇರಳವಾಗಿದೆ. ಇದನ್ನು ಕ್ಷೇತ್ರಾಧ್ಯಯನದ ಮೂಲಕ ಅರಿತಿದ್ದೇನೆ. ಇಲ್ಲಿ ಕೊನೆಕೊನೆಗೆ ಹೊಸಕೋಟೆಗೆ ಹೊಂದಿಕೊಂಡ ಭಾಗಗಳಲ್ಲಿ ತಮಿಳು ಭಾಷಿಕರ ಸಂಖ್ಯೆಯು ಹೆಚ್ಚಾಗಿದೆ. ಅದಕ್ಕೆ ಕಾರಣ ಅಲ್ಲಿ ಹೆಚ್ಚು ಕಲ್ಲಿನ ಗಣಿಗಾರಿಕೆಯು ನಡೆಯುತ್ತಿರುವುದಾಗಿದೆ. ಅಲ್ಲಿ ಕಲ್ಲು ಬಂಡೆಯಲ್ಲಿ ಕೆಲಸ ಮಾಡುವವರು ಹೆಚ್ಚು ಹೊಸೂರು ಭಾಗದಿಂದ ಬಂದಂತಹ ಜನರಾಗಿದ್ದು ಅವರು ಇಲ್ಲಿ ನೆಲೆ ಕಂಡುಕೊಂಡಿರುವ ಕಾರಣವಾದಿಂದ ಕೆಲವು ತಮಿಳು ಪ್ರಭಾವವು ಜಾಲ ಮತ್ತು ಯಲಹಂಕ ಪೂರ್ವ ಭಾಗಗಳಲ್ಲಿ ಕಾಣಿಸುತ್ತಿದೆ. ಉದಾಹರಣೆಗೆ 'ಅವನಿಗೆ' ಎಂಬ ಕನ್ನಡ ಪದವು ಬೆಂಗಳೂರು ದಾಸನಪುರ, ಹೆಸರಘಟ್ಟ, ಯಶವಂತಪುರ ಭಾಗಗಳಲ್ಲಿ 'ಅವನ್ಗೆ' ಎಂದು ಬಳಕೆಯಾಗುತ್ತಿದೆ. ಆ ಪದವು ಬೆಂಗಳೂರಿನ ಜಾಲ ಭಾಗದಲ್ಲಿ 'ಅವುನ್ಕ' ಎಂದು ಬಳಕೆಯಾಗುತ್ತಿದೆ. ಇದು ತಮಿಳಿನಲ್ಲಿ 'அவன்க்' ಎಂದು ಬಳಕೆಯಾಗುತ್ತಿದೆ.

ಈ ಮೇಲಿನ ಸಂಗತಿಗಳನ್ನು ತಿಳಿದಾಗ ಬೆಂಗಳೂರು ಗ್ರಾಮೀಣ ಪ್ರದೇಶದ ಜಾಲ ಮತ್ತು ಯಲಹಂಕ ಭಾಗಗಳ ತೆಲುಗು ಮತ್ತು ಕನ್ನಡ ಭಾಷೆಯ ದ್ವಿಭಾಷಿಕತೆಯ ಪ್ರದೇಶವಾಗಿವೆ ಎಂಬುದು ತಿಳಿಯುತ್ತದೆ. ದಾಸನಪುರ, ಹೆಸರುಘಟ್ಟ ಪ್ರದೇಶವು ಕನ್ನಡ ಭಾಷೆಯ ಪ್ರದೇಶಗಳಾಗಿವೆ. ಯಶವಂತಪುರವು ಹೆಚ್ಚು ನಗರದ ವ್ಯಾಪ್ತಿಯನ್ನು ಒಳಗೊಂಡಿದೆ. ಯಶವಂತಪುರ ಹೋಬಳಿಯ ಕೆಲವು ಹಳ್ಳಿಗಳು ಕನ್ನಡ ಭಾಷಿಕರನ್ನೇ ಒಳಗೊಂಡಿದೆ.

ಕೊನೆ ಟಿಪ್ಪಣಿಗಳು .

೧. ಸೂರ್ಯನಾಥ ಕಾಮತ್, *ಬೆಂಗಳೂರು ಗೆಜೆಟೇರಿಯರ್,* ಪುಟ ೧೫

೨. ಅದೇ, ಪುಟ ೪೮

೩. ಅದೇ, ಪುಟ ೪೮

೪. ಅದೇ, ಪುಟ ೪೮

೫. ಅದೇ, ಪುಟ ೪೯

೬. ಎಂ. ಎಚ್. ಕೃಷ್ಣಯ್ಯ ಮತ್ತು ವಿಜಯ(ಸಂ) *ಬೆಂಗಳೂರು ದರ್ಶನ ೧,* ಪುಟ ೫

೭. ಸೂರ್ಯನಾಥ ಕಾಮತ್, *ಬೆಂಗಳೂರು ಗೆಜೆಟೇರಿಯರ್,* ಪುಟ ೪೯

೮. ಕೆ.ಆರ್.ಗೋಪಾಲ್, *ಬೆಂಗಳೂರು ಇತಿಹಾಸ ಮತ್ತು ಪುರಾತತ್ವ,* ಪುಟ ೫೪೫

೯. ಸೂರ್ಯನಾಥ ಕಾಮತ್, *ಬೆಂಗಳೂರು ಗೆಜೆಟೇರಿಯರ್,* ಪುಟ ೪೯

೧೦. ಕೆ.ಆರ್.ಗೋಪಾಲ್, *ಬೆಂಗಳೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ,* ಪುಟ ೫೪೬

೧೧. ಅದೇ, ಪುಟ ೫೪೬

೧೨. ಸೂರ್ಯನಾಥ ಕಾಮತ್, *ಬೆಂಗಳೂರು ಗೆಜೆಟೇರಿಯರ್,* ಪುಟ ೧೦

೧೩. ಅದೇ, ಪುಟ ೧೦

೧೪. ಅದೇ, ಪುಟ ೧೦

೧೫. ಅದೇ, ಪುಟ ೪

೧೬. ಅದೇ, ಪುಟ ೪

೧೭. ಅದೇ, ಪುಟ ೪

೧೮. ಎಂ. ಎಚ್ ಕೃಷ್ಣಯ್ಯ ಮತ್ತು ವಿಜಯ(ಸಂ) *ಬೆಂಗಳೂರು ದರ್ಶನ ೧,* ಪುಟ ೫

೧೯. ಕೆ.ಆರ್. ಗೋಪಾಲ್, *ಬೆಂಗಳೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ,* ಪುಟ ೫೪೬

೨೦. ಎಂ. ಎಚ್ ಕೃಷ್ಣಯ್ಯ ಮತ್ತು ವಿಜಯ(ಸಂ) *ಬೆಂಗಳೂರು ದರ್ಶನ ೧,* ಪುಟ ೪೨

೨೧. ಅದೇ, ಪುಟ ೫

೨೨. ಎಂ. ಎಚ್. ಕೃಷ್ಣಯ್ಯ ಮತ್ತು ವಿಜಯ(ಸಂ) *ಬೆಂಗಳೂರು ದರ್ಶನ ೧,* ಪುಟ ೧೦೮

೨೩. ಅದೇ, ಪುಟ ೧೦೩

೨೪. ಅದೇ, ಪುಟ ೧೦೪

೨೫.	ಸೂರ್ಯನಾಥ ಕಾಮತ್, *ಬೆಂಗಳೂರು ಗೆಜೆಟೀರಿಯರ್,* ಪುಟ ೧೬

೨೬.	ಅದೇ, ಪುಟ ೯೦

೨೭.	ಎಂ. ಎಚ್ ಕೃಷ್ಣಯ್ಯ ಮತ್ತು ವಿಜಯ(ಸಂ) *ಬೆಂಗಳೂರು ದರ್ಶನ ೧,* ಪುಟ ೫

೨೮.	ಅದೇ, ಪುಟ ೬.

೨೯.	ಅದೇ, ಪುಟ ೮೬.

೩೦.	ಅದೇ, ಪುಟ ೮೬.

೩೧.	ಅದೇ ಪುಟ ೫.

೩೨.	ಸೂರ್ಯನಾಥ ಕಾಮತ್, *ಬೆಂಗಳೂರು ಗೆಜೆಟೀರಿಯರ್,* ಪುಟ ೧೬

೩೩.	ಸೂರ್ಯನಾಥ ಕಾಮತ್, *ಬೆಂಗಳೂರು ಗೆಜೆಟೀರಿಯರ್,* ಪುಟ ೧೬

****

ಅಧ್ಯಾಯ – ೫

ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಕನ್ನಡ ಭಾಷೆಯಲ್ಲಿ ಉಂಟಾಗಿರುವ ವ್ಯತ್ಯಾಸಗಳು

ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಕನ್ನಡವೇ ಪ್ರಧಾನವಾದ ಭಾಷೆಯಾಗಿದೆ. ಬೆಂಗಳೂರು ಉತ್ತರ ತಾಲ್ಲೂಕು ಭಾಗವು ಹೆಚ್ಚು ಗ್ರಾಮೀಣ ಪ್ರದೇಶದಿಂದ ಕೂಡಿದೆ. ಇಲ್ಲಿ ವ್ಯವಸಾಯ ಮತ್ತು ಹೈನುಗಾರಿಕೆ ಪ್ರಧಾನವಾದ ಉದ್ಯೋಗವಾಗಿದೆ. ಇತ್ತೀಚಿನ ನಗರ ಬೆಳವಣಿಗೆಯಿಂದ ಹಲವರು ಜನರು ಕೃಷಿಯಿಂದ ಕೈಗಾರಿಕೆಗಳ ನೆರವನ್ನು ಪಡೆದು ಉದ್ಯೋಗವನ್ನು ಹೊಂದಿದ್ದಾರೆ. ಕನ್ನಡವನ್ನೆ ಪ್ರಧಾನವಾದ ಭಾಷೆಯನ್ನು ಹೊಂದಿದ ಬೆಂಗಳೂರಿನ ಗ್ರಾಮೀಣ ಭಾಗದ ಜನರಲ್ಲಿ ಭಾಷಿಕವಾಗಿ ಕೆಲವು ಬದಲಾವಣೆಗಳು ನಡೆಯುತ್ತಿವೆ. ಅವುಗಳು ಯಾವ ನಿಟ್ಟಿನಲ್ಲಿ ನಡೆಯುತ್ತಿವೆ ಎಂಬುದನ್ನು ಈ ಅಧ್ಯಾಯದಲ್ಲಿ ಗುರುತಿಸಲಾಗಿದೆ. ಬೆಂಗಳೂರು ಗ್ರಾಮೀಣ ಜನರ ಭಾಷೆಯಲ್ಲಿ ಉಂಟಾಗುವ ಬದಲಾವಣೆಯನ್ನು ಜನರ ಆಡುಮಾತನ್ನು ಆಧರಿಸಿ ಧ್ವನಿ ವ್ಯತ್ಯಾಸ ಮತ್ತು ಪದವ್ಯತ್ಯಾಸಗಳ ಮೂಲಕ ಗುರುತಿಸಿದ್ದೇನೆ.

೫.೧ ಧ್ವನಿ ವ್ಯತ್ಯಾಸ:

ಭಾಷೆಯ ಅತಿ ಚಿಕ್ಕ ಘಟಕವು 'ಧ್ವನಿಮಾ' ಆಗಿದೆ. ಭಾಷೆಯಲ್ಲಿ ಉಂಟಾಗುವ ಧ್ವನಿಗಳಿಗೆ ಸಂಬಂಧಿಸಿದ ವ್ಯತ್ಯಾಸಗಳೇ ಧ್ವನಿ ವ್ಯತ್ಯಾಸಗಳಾಗಿವೆ. ಧ್ವನಿ ಬದಲಾವಣೆಗಳು ಪ್ರಮುಖವಾಗಿ ಪದಾರಂಭ, ಪದಮಧ್ಯ ಮತ್ತು ಪದಾಂತ್ಯಗಳಲ್ಲಿ ಉಂಟಾಗುತ್ತವೆ. ಹೀಗೆ ಬದಲಾವಣೆಯನ್ನು ಹೊಂದುತ್ತಾ ಪ್ರತ್ಯೇಕ ಶಬ್ದ ನಿರ್ಮಾಣವನ್ನು ಮಾಡಿಕೊಳ್ಳುವುದು ಧ್ವನಿವ್ಯತ್ಯಾಸವಾಗಿದೆ. ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಜನರಲ್ಲಿ ಈ ಧ್ವನಿ ವ್ಯವಸ್ಥೆಯಲ್ಲಿ ವ್ಯತ್ಯಾಸಗಳು ಹೇಗೆ ನಡೆಯುತ್ತಿವೆ ಎಂಬುದನ್ನು ಈ ಅಧ್ಯಾಯದಲ್ಲಿ ಗುರುತಿಸಲಾಗಿದೆ. ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಜನರ ಆಡುಮಾತಿನಲ್ಲಿ ಬಳಕೆಯಾಗುತ್ತಿರುವ ಧ್ವನಿ ವ್ಯತ್ಯಾಸಗಳನ್ನು ಗುರುತಿಸಲು, ಧ್ವನಿಗಳನ್ನು 'ಸ್ವರ ಧ್ವನಿಮಾಗಳು' ಮತ್ತು 'ವ್ಯಂಜನ ಧ್ವನಿಮಾ'ಗಳು ಎಂಬ ಎರಡು ರೀತಿಯಲ್ಲಿ ವಿಭಾಗಿಸಿಕೊಂಡು ಅಧ್ಯಯನ ನಡೆಸಿದ್ದೇನೆ. ಇದರ ಜೊತೆಗೆ ಅನುನಾಸಿಕ ಧ್ವನಿ ಮತ್ತು ಅರೆವ್ಯಂಜನಗಳಲ್ಲೂ ಬದಲಾವಣೆಯನ್ನು ಗುರುತಿಸಿದ್ದೇನೆ.

೫.೧.೧ ಸ್ವರಗಳು

ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಭಾಗದ ಜನರ ಆಡುಮಾತಿನಲ್ಲಿ ಬಳಕೆಯಾಗುವ ಸ್ವರಗಳನ್ನು, ಹ್ರಸ್ವಸ್ವರಗಳು ಮತ್ತು ದೀರ್ಘಸ್ವರಗಳು ಎಂದು ವಿಭಾಗಿಸಿಕೊಂಡು ವ್ಯತ್ಯಾಸವನ್ನು ಗುರಿತಿಸಿದ್ದೇನೆ.

೫.೧.೧.೧ ಹ್ರಸ್ವಸ್ವರಗಳು

'ಅ' ವರ್ಣದ ಬಳಕೆ

ಶಿಷ್ಟಪದ	**ದಾಸನಪುರ**	**ಹೆಸರಘಟ್ಟ**	**ಯಶವಂತಪುರ**	**ಯಲಹಂಕ**	**ಜಾಲ**
ಅವನು	ಅವ್ನು	ಅವ್ನು	ಅವ್ನು	ಆತ್ನು	ಆತ್ನು
ಅಷ್ಟು	ಅಸ್ಟು	ಅಸ್ಟು	ಅಸ್ಟು	ಆಸು	ಆಸು
ಅಮ್ಮ	ಅಮೌ/ಮೋ	ಅಮೌ/ಮೋ	ಅಮೌ/ಮೋ	ದೌ/ದಮೋ/ದೋ	ದೌ/ದಮೋ/ದೋ
ಅಪ್ಪ	ಅಪೊ/ಅಪ	ಅಪ	ಅಪ	ಪೋ	ಪೋ
ಗದ್ದಿಗೆ	ಗದ್ಗೆ	ಗದ್ಗೆ	ಗದ್ಗೆ	ಗಾದಿ	ಗಾದಿ

(ಮುಂದಿನ ಬರಹದಲ್ಲಿ ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಐದು ಹೋಬಳಿಗಳಿದ್ದು, ದಾಸನಪುರವನ್ನು **ದಾ**. ಹೆಸರಘಟ್ಟ ವನ್ನು **ಹೆ**. ಯಶವಂತಪುರವನ್ನು **ಯ**. ಜಾಲ ಭಾಗವನ್ನು **ಜಾ**. ಯಲಹಂಕ ಭಾಗವನ್ನು **ಯಲ** ಎಂದು ಸೂಚಿಸಿ ವ್ಯತ್ಯಾಸವನ್ನು ಗುರುತಿಸಿದ್ದೇನೆ)

ಕನ್ನಡದ ಶಿಷ್ಟಪದವಾದ 'ಅವನು' ಎಂಬ ಪದವನ್ನು ಬೆಂಗಳೂರು ಗ್ರಾಮೀಣ ಭಾಗವಾದ ದಾ.ಹೆ.ಯಶ ಭಾದದಲ್ಲಿ 'ವನು' ಎಂಬ ವರ್ಣಗಳು 'ವ್ನು' ಎಂದು ವಿರಳ ಘರ್ಷದೊಂದಿಗೆ ಅನುನಾಸಿಕ 'ನ್' ದ್ವಿತ್ವವಾಗಿ ಬಳಕೆಯಾಗುತ್ತಿದೆ. ಆದರೆ ಬೆಂಗಳೂರಿನ ಉಳಿದ ಯಲಹಂಕ ಮತ್ತು ಜಾಲ ಭಾಗದಲ್ಲಿ ದಂತ್ಯವರ್ಣ ಅಘೋಷ 'ತ್' ಧ್ವನಿಯ ಜೊತೆಗೆ 'ನ್' ಅನುನಾಸಿಕ ಧ್ವನಿಯು ದ್ವಿತ್ವವಾಗಿ (**ಅವ್ನು** > **ಆತ್ನು**) ಬಳಕೆಯಾಗುತ್ತಿದೆ. 'ಅವ್ನು' ಎಂಬುದು 'ಆತ್ನು' ಎಂದಾಗುವ ಪದದಲ್ಲಿ ಪದಾರಂಭದ 'ಅ' ಹ್ರಸ್ವಸ್ವರವು 'ಆ' ದೀರ್ಘಸ್ವರವಾಗಿ ಬಳಕೆಯಾಗುತ್ತಿದೆ. 'ಅಷ್ಟು' ಎಂಬ ಶಿಷ್ಟಪದವು ದಾ.ಹೆ.ಯಶ ಭಾಗದಲ್ಲಿ 'ಅ' ಸ್ವರದ

ಮುಂದೆ ವಿಜಾತೀಯ ದ್ವಿತ್ವಯುಕ್ತ ಪದ **'ಷ್ಟ'** ಎಂಬು ಜಾಲ ಭಾಗಗಳಲ್ಲಿ ದ್ವಿತ್ವವು ಲೋಪವಾಗಿ ಹಿಂದಿನ ಧ್ವನಿ **'ಆ'** ದೀರ್ಘವಾಗಿ **(ಅಷ್ಟು** > **ಆಸು)** ಬಳಕೆಯಾಗುತ್ತಿದೆ. ಇಲ್ಲಿ ಪ್ರಸ್ತುತಪಡಿಸಿರುವ ಪದಗಳಾದ **ಅವನು** ಎಂಬುದನ್ನು ತೆಲುಗು ಭಾಷೆಯಲ್ಲಿ **ಅತಡು** ಎಂದು ಬಳಸಲಾಗುತ್ತಿದೆ, ತೆಲುಗಿನ ಸಂಪರ್ಕದಿಂದ ಜಾಲ ಭಾಗಗಳಲ್ಲಿ 'ಅವನು' ಎಂಬ ಪದವನ್ನು **ಆತ್ನು** ಎಂದು ಬಳಸುತ್ತಿದ್ದಾರೆ. **ಅಷ್ಟು** ಎಂಬ ಪರಿಮಾಣವಾಚಿಯು ಕನ್ನಡದ **ಅಂತಷ್ಟು** ಎಂಬ ಅರ್ಥದಂತೆ ತೆಲುಗಿನಲ್ಲಿ **ಅಂತೇಸು** ಎಂದು ಬಳಕೆಯಾಗುತ್ತಿದೆ. ಹೀಗೆ ತೆಲುಗಿನ ಪ್ರಭಾವದಿಂದ ಜಾಲ ಭಾಗದಲ್ಲಿ **ತ** ಧ್ವನಿಯನ್ನು ಲೋಪವಾಗಿಸಿ, ಅನುಸ್ವಾರದಿಂದ ಕೂಡಿದ ವರ್ಣವು **ಆ** ದೀರ್ಘ ವಾಗಿ **ಆಸು** ಎಂದು ಬಳಕೆಯಾಗುತ್ತಿದೆ.

ಅಮ್ಮ ಎಂಬ ಶಿಷ್ಟನುಡಿಯ ಬಳಕೆಯಲ್ಲಿ ದಾ.ಹೆ.ಯಶ ಭಾಗದಲ್ಲಿ ಅನುನಾಸಿಕ ಧ್ವನಿಯೊಡನೆ **ಔ(ಸಂಧ್ಯಾಕ್ಷರ)** ಅಥವಾ **ಓ(ಓಷ್ಠ್ಯ ಧ್ವನಿ)** ಬಳಕೆಯಾದರೆ, ಜಾ,ಯಲ, ಭಾಗದಲ್ಲಿ ದಂತ್ಯವರ್ಣ **'ದ'** ಧ್ವನಿಗೆ **ಓ (ಓಷ್ಠ್ಯಧ್ವನಿ)** ಅಥವಾ **ಔ(ಸಂಧ್ಯಾಕ್ಷರ)** ಬಳಕೆಯಾಗುತ್ತಿವೆ. ಕೆಲವೊಮ್ಮೆ ಆದಿ ವರ್ಣ **'ಅ'** ಬದಲು ದಂತ್ಯ ವರ್ಣ **'ದ'** ನಂತರ ಅನುನಾಸಿಕ **'ಮ'** ಧ್ವನಿಯೊಂದಿಗೆ **ಔ(ಸಂಧ್ಯಾಕ್ಷರ)** ಸೇರಿಸಿ ಬಳಸುತ್ತಿದ್ದಾರೆ. ಅದರಲ್ಲೂ ಮಧ್ಯಮವರ್ಗದ ಮಕ್ಕಳಲ್ಲಿ 'ದೌ/ದೋ' ಏಕವರ್ಣಪದವಾಗಿ ಬಳಕೆಯಾಗುತ್ತಿವೆ. ಅಂತೆಯೇ 'ಅಪ್ಪ' ಎಂಬ ಪದ ಬಳಕೆಯಲ್ಲಿ ದಾ.ಹೆ.ಯಶ ಭಾಗದಲ್ಲಿ 'ಅಪ' ಎಂಬ ಸೌಲಭ್ಯವನ್ನು ಪಡೆದರೆ, ಜಾಲ ಭಾಗದಲ್ಲಿ 'ಅ' ಸ್ವರವು ಲೋಪವಾಗುವುದು. 'ಗದ್ದಿಗೆ' ಎಂಬ ಪದವನ್ನು 'ಅ' ಹ್ರಸ್ವಸ್ವರವು 'ಆ' ದೀರ್ಘವಾಗಿ ಜಾಲ ಭಾಗದಲ್ಲಿ ಬಳಸುತ್ತಿದ್ದಾರೆ. ತೆಲುಗಿನಲ್ಲಿ 'ಗಾದಿ' ಎಂಬ ಪದವೇ ಬಳಕೆಯಲ್ಲಿದೆ. ಇಲ್ಲಿ ಸ್ವರವು ದೀರ್ಘವಾಗಿ ಬದಲಾಗಿ ಬಳಕೆಯಾಗುತ್ತಿದೆ. ಕೆಲವೊಂದು ಪದ ಬಳಕೆಯಲ್ಲಿ 'ಅ'ಸ್ವರವು ಲೋಪವಾಗಿ 'ಆ'ಸ್ವರವಾಗಿ ಬಳಕೆಯಾಗುತ್ತಿದೆ.

'ಇ' ವರ್ಣದ ಬಳಕೆ

ಶಿಷ್ಟಪದ	**ದಾಸನಪುರ**	**ಹೆಸರಘಟ್ಟ**	**ಯಶವಂತಪುರ**	**ಯಲಹಂಕ**	**ಜಾಲ**
ಇನ್ನು	ಇನ್ನ	ಇನ್ನ	ಇನ್ನ	ಇಂಕ	ಇಂಕ
ಅವನಿಗೆ	ಅವುನ್ಗೆ	ಅವುನ್ಗೆ	ಅವುನ್ಗೆ	ಅವುಂಕ	ಅವುಂಕ
ಮಗುವಿಗೆ	ಮಗಿಗೆ	ಮಗಿಗೆ	ಮಗಿಗೆ	ಮಗುಕ	ಮಗುಕ

ಬೆಂಗಳೂರು ಗ್ರಾಮೀಣ ಜನರಲ್ಲಿ ಆಡುಮಾತಿನಲ್ಲಿ ಕೆಲವು ಇ ಧ್ವನಿಯುಕ್ತ ಪದ ಬಳಕೆಯನ್ನು ಗಮನಿಸಿದಾಗ ವ್ಯತ್ಯಾಸವಾಗಿರುವುದನ್ನು ಗಮನಿಸಬಹುದು. ಕನ್ನಡದ ಶಿಷ್ಟಪದ **ಇನ್ನು** ಎಂಬ ಪದ ಬಳಕೆಯನ್ನು ದಾ.ಹೆ.ಯಶ ಭಾಗದಲ್ಲಿ ಇನ್ನ ಎಂಬ ಪದ ಬಳಕೆಯಾಗುತ್ತಿದೆ. ಇ ಸ್ವರದ ಪೂರ್ವದಲ್ಲಿ ಬರುವ ದಂತ್ಯ ಅನುನಾಸಿಕ ಸಜಾತೀಯ ದ್ವಿತ್ವವು ಯಲ. ಜಾಲ ಭಾಗಗಳಲ್ಲಿ ಇ ಸ್ವರದ ಮುಂದಿನ ಅನುನಾಸಿಕವು ದ್ವಿತ್ವವು ಲೋಪವಾಗಿ ಪದಮಧ್ಯದಲ್ಲಿ ಅನುನಾಸಿಕ ನ್ ಧ್ವನಿಯು ಬಂದು ಸೇರುತ್ತಿದೆ. ಪೂರ್ವ ಧ್ವನಿಯು ಕಂಠ್ಯ ಅಘೋಷ ವರ್ಣವಾದ ಕ್ ಧ್ವನಿಯು **(ಇನ್ನ>ಇಂಕ)** ಪೂರ್ವದಲ್ಲಿ ಅನುನಾಸಿಕಬಳಕೆಯಲ್ಲಿದೆ. ಹಾಗೆಯೇ ಮಗುವಿಗೆ ಎಂಬ ಪದವನ್ನು ದಾ.ಹೆ.ಯಶ ಭಾಗದಲ್ಲಿ ಮಗಿಗೆ ಎಂದು ಬಳಸುತ್ತಿದ್ದಾರೆ. ಬೆಂಗಳೂರಿನ ಜಾಲ ಮತ್ತು ಯಲಹಂಕ ಭಾಗದಲ್ಲಿ ಪೂರ್ವ ಧ್ವನಿ ಕಂಠ್ಯವಾಗಿದ್ದಾಗ ಅದರ ಹಿಂದಿನ ಧ್ವನಿಯಾದ ಇ ಕಾರವು **ಉ** ಕಾರವಾಗಿ **(ಮಗಿಗೆ>ಮಗುಕ)** ಬಳಕೆಯಾಗುತ್ತಿದೆ. **ಅವನಿಗೆ** ಪದವನ್ನು **ನ್** ಅನುನಾಸಿಕವು ಇ ಕಾರವು ದಾ.ಹೆ.ಯಶ ಭಾಗದಲ್ಲಿ ಹಿಂದಿನ ವರ್ಣವು **ಉ** ಕಾರ ವಾಗಿ ಅನುನಾಸಿಕವು **ಎ** ಕಾರಗೊಂಡು ಕಂಠ್ಯಧ್ವನಿಯೊಡನೆ ವಿಜಾತೀಯ ದ್ವಿತ್ವವಾಗಿ ಬಳಕೆಯಾಗುತ್ತಿದೆ, ಜಾಲ ಯಲಹಂಕದ ಭಾಗಗಳಲ್ಲಿ **ನ್** ಅನುನಾಸಿಕವು ದ್ವಿತ್ವವು ಲೋಪವಾಗಿ ಇ ಸ್ವರದ ನಂತರದಲ್ಲಿ ಬಳಕೆಯಾಗುತ್ತಿದೆ.

ಇಲ್ಲಿ **ಇನ್ನು** ಎಂಬ ನಾಮಪದವನ್ನು ಜಾಲ ಭಾಗದಲ್ಲಿ ಬಳಕೆಯಾಗುತ್ತಿರುವ **ಇಂಕ** ಪದದಂತೆಯೇ, ತೆಲುಗು ಭಾಷೆಯಲ್ಲಿ ಇಂಕ ಎಂಬುವ ಪದಬಳಕೆಯಿದೆ. ತೆಲುಗು ಭಾಷೆಯಲ್ಲಿ ಇಂಕ ಎಂದರೆ **ಇನ್ನು, ಮತ್ತೆ** ಎಂಬರ್ಥವನ್ನು ಪಡೆದು ಬಳಕೆಯಾಗುತ್ತಿದೆ. **ಅವನಿಗೆ** ಎಂಬ ಸರ್ವನಾಮವು ಜಾಲ ಭಾಗದಲ್ಲಿ **ಅವುಂಕ** ಎಂದು ಬಳಕೆಯಾಗುತ್ತಿದೆ. ಈ ಪದವು ತಮಿಳು ಭಾಷೆಯಲ್ಲಿ **'ಅವನುಕ್''ಅವನ್ಕ್'** ಎಂದು ಬಳಕೆಯಲ್ಲಿದೆ. ಆ ಪದದಲ್ಲಿ ಅನುನಾಸಿಕ ಧ್ವನಿ **ನ್** ವು ಸ್ವರದ ನಂತರದಲ್ಲಿ (ವುಂ) ಬದಲಾವಣೆಗೊಂಡು ಬಳಸುತ್ತಿದ್ದಾರೆ. **ಮಗುವಿಗೆ** ಎಂಬುದು ಜಾಲ ಭಾಗದ ಜನರಲ್ಲಿ ಏಕವಚನದಲ್ಲಿ ಮಗುಕ ಎಂದು ಬಳಕೆಯಾಗುತ್ತಿದೆ. **ಮಗು** ಕನ್ನಡಪದಕ್ಕೆ ಪ್ರತ್ಯಯ **ಗ್** ವು ತಮಿಳು ಭಾಷಾ ಪರಿಸರದ ಪ್ರಭಾವದಿಂದ **ಗ** ಕಾರವು **ಕ** ಕಾರವಾಗಿ ಬಳಕೆಯಾಗುತ್ತಿದೆ. ಆದರೆ ಇಲ್ಲಿ ಬಹುವಚನದಲ್ಲಿ ಬಳಕೆಯಾಗುವಾಗ **ಮಕ್ಕಳ್** ಎಂದು ಬಳಸುತ್ತಾರೆ. ಇಲ್ಲಿ ಏಕವಚನದಲ್ಲಿ ಬಳಕೆಯಾಗುವ **ಮಗು** ಎಂಬುದು **ಮಕ್ಕ** ಎಂದು ಬಳಕೆಯಾಗಿ ನಂತರ ವ್ಯತ್ಯಾಸಗೊಂಡಿದೆ. ಅದನ್ನೆ ಜಾಲ ಭಾಗದಲ್ಲಿ ಅಂತ್ಯವರ್ಣ **ಗ್** ಧ್ವನಿಯ ಬದಲು **ಕ್** ಧ್ವನಿಯಾಗಿ ಇ ಕಾರವು **ಉ** ಕಾರವಾಗಿ (ಇ>**ಉ**) ಬಳಕೆಯಾಗುತ್ತಿದೆ.

ಉ ವರ್ಣದ ಬಳಕೆ

ಶಿಷ್ಟಪದ	ದಾಸನಪುರ	ಹೆಸರಘಟ್ಟ	ಯಶವಂತಪುರ	ಯಲಹಂಕ	ಜಾಲ
ಕುಡುಗೋಲು	ಕುಡ್ಲು	ಕುಡ್ಲು	ಕುಡ್ಲು	ಕುಡೋಲು	ಕುಡೋಲು
ಪೈರು	ಪಯ್ರು	ಪಯ್ರು	ಪಯ್ರು	ಪೈರ	ಪೈರ
ಗುಳ	ಗುಳ	ಗುಳ	ಗುಳ	ಕುಳ	ಕುಳ
ಕುಲುಮೆ	ಕುಲ್ಮೆ	ಕುಲ್ಮೆ	ಕುಲ್ಮೆ	ಕೊಲಮಿ	ಕೊಲಮಿ

ಕುಡುಗೋಲು ಎಂಬ ಶಿಷ್ಟಪದವನ್ನು ದಾ. ಯ. ಹೆ ಭಾಗದ ಜನರು **ಕುಡ್ಲು** ಎಂದು, **ಗ್ ಮತ್ತು ಒ** (ಗೋ) ಕಂಠ್ಯೋಷ್ಠ್ಯ ಧ್ವನಿಯನ್ನು ಲೋಪಗೊಳಿಸಿ ದಂತ್ಯ ವರ್ಣ **ಲ್** ಕಾರ ದ್ವಿತ್ವವಾಗಿಸಿ ಬಳಸುತ್ತಿದ್ದಾರೆ. ಆದರೇ ಜಾ. ಯಲ. ದ ಭಾಗದಲ್ಲಿ **ಲ್** ದ್ವಿತ್ವವು ಲೋಪವಾಗಿ **ಓ** (ಸಂವೃತ್ತ ಓಷ್ಠ್ಯ) ಧ್ವನಿಯನ್ನು ಮೂರ್ಧನ್ಯ ಧ್ವನಿ **ಡ** ದೊಡನೆ ಸೇರಿಸಿಕೊಂಡು ಬಳಸುತ್ತಿದ್ದಾರೆ. ದಾಸನಪುರ ಭಾಗದಲ್ಲಿ ದ್ವಿತವಾದ ಡ್ಲು ಪದವು ಜಾಲ ಭಾಗದಲ್ಲಿ **ಲ್** ಧ್ವನಿಯು ಅಂತ್ಯ ವರ್ಣವಾಗಿ ಬಳಕೆಯಾಗುತ್ತಿದೆ. ಶಿಷ್ಟಪದ **ಪೈರು** ಎಂಬುದನ್ನು ಬೆಂಗಳೂರು ಗ್ರಾಮೀಣ ಭಾಗವಾದ ದಾ(ದಾಸನಪುರ). ಹೆ(ಹೆಸರಘಟ್ಟ). ಯ(ಯಶವಂತಪುರ) ಭಾಗದ ಜನರು **ಪೈರ್** ಎಂದು ವ್ಯಂಜನಾಂತದಲ್ಲಿ, ಕೆಲವೊಮ್ಮೆ **ಪಯ್ರು** ಎಂದು **ಉ** ಕಾರಾಂತ (ರ್/ಉ) ಬಳಸಿದರೆ, ಜಾ(ಜಾಲ) ಯಲ(ಯಲಹಂಕ) ಭಾಗದ ಜನರು **ಪೈರ/ಪಯ್ರ** ಎಂದು **ಅ** ಕಾರಾಂತವನ್ನು ಬಳಸುತ್ತಿದ್ದಾರೆ. **ಗುಳ**ವು **ಕುಳ**ವಾಗಿ **ಗ್** ಕಾರವು **ಕ್** ಕಾರವಾಗಿ ಬಳಕೆಯಾಗುತ್ತಿದೆ.

ಜಾಲ ಮತ್ತು ಯಲಹಂಕ ಭಾಗದ ಜನರಲ್ಲಿ ಧ್ವನಿ ವ್ಯತ್ಯಾಸದಿಂದ ಭಿನ್ನವಾಗಿ ಬಳಕೆಯಾಗುತ್ತಿರುವ ಪದಗಳನ್ನು ಗಮನಿಸಿದಾಗ ಅವು ತೆಲುಗಿನ ಪ್ರಭಾವದಿಂದ ಬದಲಾಗುತ್ತಿರುವುದನ್ನು ಗಮನಿಸಬಹುದು. ಕನ್ನಡದ ಕುಡ್ಲು, ಪೈರು, ಗುಳ ಎಂಬ ಪದವನ್ನು ತೆಲುಗು ಭಾಷೆಯಲ್ಲಿ **ಕುಡೋಲಿ, ಪಯಿರ್, ಕುಳ** ಎಂದು ಬಳಕೆಯಲ್ಲಿವೆ. ತೆಲುಗಿನ **ಕುಡೋಲಿ**ಯು ಜಾಲ ಭಾಗದಲ್ಲಿ **ಕುಡೋಲು** ಎಂದು **ಉ** ಕಾರಾಂತವಾಗಿ ಬಳಕೆಯಾಗುತ್ತಿದೆ. **ಪಯಿರ್** ಎಂಬ ತೆಲುಗು ನಾಮಪದವು **ಪಯ್ರ** ಎಂದು **ಅ** ಕಾರಾಂತವಾಗಿ ಬಳಕೆಯಲ್ಲಿದೆ. **ಗುಳ** ಎಂಬ ವ್ಯವಸಾಯ ಸಂಬಂಧಿತ ನಾಮಪದವನ್ನು ತೆಲುಗಿನಲ್ಲಿ **ಕುಳ** ಎಂದು ಬಳಸುತ್ತಿದ್ದಾರೆ. ಅದೇ ರೀತಿಯಲ್ಲಿ ಆದಿವರ್ಣ **ಗ್** ಕಾರವು **ಕ್** ಕಾರವಾಗಿ ಜಾಲ ಮತ್ತು ಯಲಹಂಕದವರಲ್ಲಿ ಬಳಕೆಯಾಗುತ್ತಿದೆ.

ಕುಲುಮೆ ಎಂಬ ಪದವು ದಾ.ಹೆ.ಯಶ ಭಾಗಗಳಲ್ಲಿ **ಕುಲ್ಮೆ** ಎಂಬ ಸೌಲಭ್ಯವನ್ನು ಪಡೆದರೆ, ಜಾಲ ಭಾಗದಲ್ಲಿ **ಕೊಲಮಿ** ಎಂದು **ಉ** ಕಾರವು **ಒ** ಕಾರವಾಗಿ ಪರಿವರ್ತನೆಯಾಗಿ ಬಳಕೆಯಾಗುತ್ತಿದೆ. ತೆಲುಗಿನಲ್ಲಿ **ಕೊಲಿಮೆ** ಎಂದು ಬಳಕೆಯಾಗುತ್ತಿದೆ. ಈ ಪದದ ಪ್ರಭಾವವು ಜಾಲ ಭಾಗದ ಜನರ ಮೇಲುಂಟಾಗಿ ಭಿನ್ನವಾಗಿ ಬಳಕೆಯಾಗುತ್ತಿವೆ.

'ಎ' ವರ್ಣದ ಬಳಕೆ

ಶಿಷ್ಟಪದ	**ದಾಸನಪುರ**	**ಹೆಸರಘಟ್ಟ**	**ಯಶವಂತಪುರ**	**ಯಲಹಂಕ**	**ಜಾಲ**
ಬೆಳ್ಳಗೆ	ಬೆಳ್ಗೆ	ಬೆಳ್ಗೆ	ಬೆಳ್ಗೆ	ತೆಳ್ಗ	ತೆಳ್ಗ
ನನಗೆ	ನಂಗೆ	ನಂಗೆ	ನಂಗೆ	ನಂಕ	ನಂಕ
ಯಾರಿಗೆ	ಯಾರ್ಗೆ	ಯಾರ್ಗೆ	ಯಾರ್ಗೆ	ಯಾರ್ಕ	ಯಾರ್ಕ

ಶಿಷ್ಟಪದ **ಬೆಳ್ಳಗೆ** ಎಂಬ ವಿಶೇಷಣ ಪದದಲ್ಲಿ ಅಂತ್ಯ ವರ್ಣವಾದ ಕಂಠ್ಯಧ್ವನಿ **ಎ** ಕಾರವು, ದಾ.ಹೆ.ಯ ದಲ್ಲಿ ಮೂರ್ಧನ್ಯ ಘೋಷ ಧ್ವನಿ **ಳ್** ಗೆ ಕಂಠ್ಯ ಧ್ವನಿ **ಗ್** ವು ದ್ವಿತ್ವವಾಗಿ ಸೇರಿ **ಎ** ಕಾರವಾಗಿ ಬಳಕೆಯಾದರೆ, ಜಾ.ಯಲ ಭಾಗಗಳಲ್ಲಿ ಮೂರ್ಧನ್ಯ ಧ್ವನಿ **ಬ್** ವರ್ಣದ ಬದಲು ದಂತ್ಯ ಅಘೋಷ **ತ್** ಧ್ವನಿಯನ್ನುಬಳಸುತ್ತಾರೆ. ಅಂತ್ಯ ವರ್ಣದಲ್ಲಿ **ಏ** ಕಾರವು **ಅ** ಕಾರವಾಗಿ (ಳ್ಗೆ>ಳ್ಗ) ಬಳಕೆಯಾಗುತ್ತಿದೆ. ಹೀಗೆ **ನನಗೆ** ಎನ್ನುವುದರಲ್ಲಿ ಅನುನಾಸಿಕವು ನಂತರ ಕಂಠ್ಯ ಧ್ವನಿ **ಗ್** ವು **ಎ** ಕಾರವಾಗಿ ಬಳಕೆಯಾದರೆ, ಜಾಲದಲ್ಲಿ **ಅ** ಕಾರವಾಗುತ್ತದೆ. ಇಲ್ಲಿ ಏತಕ್ಕೆ, ಯಾರಿಗೆ ಪದಗಳಲ್ಲಿ **ಎ** ಕಾರಾಂತಗಳು **ಅ** ಕಾರಾಂತವಾಗಿ ಬಳಕೆಯಾಗುತ್ತವೆ.

ಇಲ್ಲಿ **ಬೆಳ್ಗೆ** ಎಂಬ ಪದವು ಜಾಲದಲ್ಲಿ **ತೆಳ್ಗೆ** ಎಂದು ಬಳಕೆಯಲ್ಲಿದೆ. ತೆಲುಗಿನಲ್ಲಿ **ತೆಲ್ಲಗ** ಎಂದು **ಬಿಳಿಯದು** ಎಂಬ ಅರ್ಥದಲ್ಲಿ ಬಳಕೆಯಾಗುತ್ತಿದೆ. ಈ ಪದವೇ **ತೆಳ್ಗೆ** ಎಂದು **ಲ್** ಕಾರ **ಳ್** ಕಾರವಾಗಿ ಕನ್ನಡದಲ್ಲಿ ಸೇರಿಕೆಯಾಗಿ ಜಾಲ ಭಾಗದಲ್ಲಿ ಬಳಸುತ್ತಿದ್ದಾರೆ. **ನನಗೆ** ಎಂಬ ಸರ್ವನಾಮವು ಜಾಲ ಭಾಗದಲ್ಲಿ **ನಂಕ** ಎಂದಾಗಿ ಬಳಕೆಯಾಗುತ್ತಿದೆ. ಈ ಪದವನ್ನು ತೆಲುಗಿನಲ್ಲಿ **ನಾಕಿ.** ತಮಿಳಿನಲ್ಲಿ **ಎನಕ** ಎಂದು ಬಳಕೆಯಲ್ಲಿದೆ. ಜಾಲದಲ್ಲಿ ತೆಲುಗಿನ **ನಾಕಿ** ಎಂಬುದರಲ್ಲಿನ ಆದಿವರ್ಣ **ನ್** ಅನುನಾಸಿಕವು ದೀರ್ಘದ ಬದಲು ಅನುಸ್ವಾರವಾಗಿ ಅಂತ್ಯವರ್ಣವು **ಇ** ಕಾರದ ಬದಲು **ಅ** ಕಾರವಾಗಿ ಬಳಕೆಯಲ್ಲಿದೆ. **ಯಾರಿಗೆ** ಎಂಬ

ಪದವನ್ನು ತಮಿಳಿನಲ್ಲಿ **ಯಾರ್ಕ್** ಎಂದು ಬಳಕೆಯಲ್ಲಿದೆ. ಅದರಿಂದ ಜಾಲ ಮತ್ತು ಯಲಹಂಕದ ಭಾಗದ ಜನರಲ್ಲಿ **ಯಾರ್ಕ** ಎಂದು ಈ ಪದಬಳಕೆ ಮಾಡುತ್ತಿದ್ದಾರೆ.

'ಒ' ವರ್ಣದ ಬಳಕೆ

ಶಿಷ್ಟಪದ	**ದಾಸನಪುರ**	**ಹೆಸರಘಟ್ಟ**	**ಯಶವಂತಪುರ**	**ಯಲಹಂಕ**	**ಜಾಲ**
ಓಸಗೆ	ಒಸ್ಗೆ	ಒಸ್ಗೆ	ಒಸ್ಗೆ	ವಸ್ಗೆ	ವಸ್ಗೆ
ಡೊಂಕು	ಡೊಂಕ	ಡೊಂಕ	ಡೊಂಕ	ದಂಕ	ದಂಕ
ಕೊಳಾಯಿ	ಕೊಳಾಯಿ	ಕೊಳಾಯಿ	ಕೊಳಾಯಿ	ಕುಳಾಯಿ	ಕುಳಾಯಿ
ಅನಗೊನ್ನೆ	ಅನ್ಗೊಗನೆ	ಅನ್ಗೊಗನೆ	ಅನ್ಗೊಗನೆ	ಅನ್ಕನೆ	ಅನ್ಕನೆ

ಬೆಂಗಳೂರು ಗ್ರಾಮೀಣ ಜನರಾಡುವ ಓ ಧ್ವನಿಯುಕ್ತ ಪದಗಳನ್ನು ಗಮನಿಸಿದಾಗ **ಓಸಗೆ** ನಾಮಪದವನ್ನು ದಾ.ಹೆ.ಯಶ ಭಾಗದಲ್ಲಿ ಆರಂಭ ವರ್ಣ **ಓ** ಧ್ವನಿಯು ಹ್ರಸ್ವ **ಒ** ಧ್ವನಿಯಾಗಿ ಬಳಕೆಯಾದರೆ, ಜಾ. ಯಲ ದಲ್ಲಿ ಘರ್ಷ ವರ್ಣ **ವ್** ಬಳಕೆಯಾಗುತ್ತದೆ. ಹಾಗೇಯೆ **ಅನಗನ್ನೆ** ಎಂಬ ಶಿಷ್ಟಪದವು ದಾ.ಹೆ.ಯ ದಲ್ಲಿ **ನ್** ಅನುನಾಸಿಕವು ಕಂಠ್ಯಧ್ವನಿ **ಗ್** ವು ದ್ವಿತ್ವವಾಗಿ **ಓ** ಕಾರಗೊಂಡು ಬಳಕೆಯಾದರೆ, ಜಾಲದಲ್ಲಿ **ನ್** ಅನುನಾಸಿಕವು **ಕ್** ಧ್ವನಿಯು ದ್ವಿತ್ವವಾಗಿ **ಅ** ಕಾರವಾಗಿ ಬಳಕೆಯಾಗುತ್ತದೆ.(ಅನ್ಗೊಗನೆ > ಅನ್ಕನೆ)

ಡೊಂಕು ಪದವನ್ನು ಮೂರ್ಧನ್ಯ ವರ್ಣವಾದ **ಡ್** ವು **ಒ** ಕಾರವಾಗಿ ಬಳಕೆಯಾದರೆ, ಜಾಲ, ಯಲಹಂಕದಲ್ಲಿ ದಂತ್ಯ ವರ್ಣ **ದ್** ಧ್ವನಿಯೊಡನೆ **ಅ** ಕಾರವು ಬಳಕೆಯಾಗುತ್ತಿದೆ. (ಡೊಂಕು > ದಂಕ) ಕೊಳಾಯಿ ಪದವನ್ನು ದಾ.ಹೆ.ಯಶ ದಲ್ಲಿ ಯಾವುದೇ ವ್ಯತ್ಯಾಸವಾಗದೆ ಬಳಕೆಯಾದರೆ, ಜಾಲ ಭಾಗಗಳಲ್ಲಿ ಆರಂಭ ವರ್ಣವು ಒ ಕಾರದ ಬದಲು ಉ ಕಾರವು ಬಳಕೆಯಾಗುತ್ತಿದೆ. (ಕೊಳಾಯಿ> ಕುಳಾಯಿ)

ಇಲ್ಲಿ ದಾ. ಹೆ. ಯ ಭಾಗಕ್ಕಿಂತ ಯಲಹಂಕ ಮತ್ತು ಜಾಲ ಭಾಗಗಳಲ್ಲಿ ಭಿನ್ನವಾಗಿ ಬಳಕೆಯಾಗುತ್ತಿವೆ. ತೆಲುಗಿನಲ್ಲಿ **ಓಸಗೆ** ಎಂಬ ಪದವನ್ನು **ವಸ್ಗೆ** ಎಂದು, **ಡೊಂಕು** ಪದವನ್ನು **ಡಂಕ** ಎಂದು, **ಕೊಳಾಯಿ** ಎಂಬ ಪದವು **ಕುಳಾಯಿ** ಎಂಬ ಅರ್ಥದಲ್ಲಿ ಬಳಕೆಯಾಗುತ್ತಿದೆ. ಈ ಪದಗಳು ಜಾಲ ಜನರ ಆಡುಮಾತಿನಲ್ಲಿ ಸೇರಿ ಬಳಕೆಯಾಗುತ್ತಿವೆ.

೩.೧.೧.೨ ದೀರ್ಘಸ್ವರಗಳು

ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಭಾಗದ ಜನರ ಆಡುಮಾತಿನಲ್ಲಿ ಬಳಕೆಯಾಗುವ ದೀರ್ಘಸ್ವರಗಳ ಬಳಕೆಯನ್ನು ಈ ರೀತಿಯಲ್ಲಿ ಗುರುತಿಸಲಾಗಿದೆ.

'ಆ'ವರ್ಣದ ಬಳಕೆ

ಶಿಷ್ಟಪದ	**ದಾಸನಪುರ**	**ಹೆಸರಘಟ್ಟ**	**ಯಶವಂತಪುರ**	**ಯಲಹಂಕ**	**ಜಾಲ**
ಆಯ್ದುಕೊಳ್ಳು	ಆಯ್ಕೋ	ಆಯ್ಕೋ	ಆಯ್ಕೋ	ಎಯ್ಕೋ	ಎಯ್ಕೋ
ಆಶ್ಲೇಷ	ಅಸ್ಲೆ	ಅಸ್ಲೆ	ಅಸ್ಲೆ	ಉಸ್ಲೆ	ಉಸ್ಲೆ
ಆರಿದ್ರಾ	ಆದ್ರಿ	ಆದ್ರಿ	ಆದ್ರಿ	ಅರ್ದೆ	ಅರ್ದೆ

'ಆಯ್ದುಕೊಳ್ಳು' ಪದವು **ದಾ.ಹೆ.ಯ** ದಲ್ಲಿ 'ಆಯ್ಕೋ' ಎಂದು ಬಳಕೆಯಾದರೆ, ಅದನ್ನು ಜಾ.ಯ ದಲ್ಲಿ 'ಆ' ಕಾರವು 'ಎ' ಕಾರವಾಗಿ ಬಳಕೆಯಾಗುತ್ತಿದೆ. ತೆಲುಗಿನಲ್ಲಿ **ಎರ್ಕೋ, ಎನ್ನಿಕೋ** ಎಂಬ ಪದಗಳು ಈ ಅರ್ಥದಲ್ಲಿ ಬಳಸುತ್ತಿದ್ದು, ಈ ಪದವು ಜಾಲ ಭಾಗದ ಜನರ ಆಡುಮಾತಿನಲ್ಲಿ ಅಂತ್ಯ ವರ್ಣ **ಯ್** ಬದಲು **ರ್** ಕಾರವಾಗಿ ಬದಲಾಗಿ ಬಳಕೆಯಾಗಿದೆ. (**ಆಯ್ಕೋ** > **ಎಯ್ಕೋ**). ಸಂಸ್ಕೃತ ಮಳೆ **ಆಶ್ಲೇಷ** ಎಂಬ ನಾಮಪದವನ್ನು ಬೆಂಗಳೂರು ಉತ್ತರ ತಾಲೂಕಿನ ದಾ. ಹೆ. ಯ ದಲ್ಲಿ ಆದಿವರ್ಣ **ಆ** ದೀರ್ಘದ ಬದಲು ಸ್ವರ **ಅ** ವರ್ಣ ಮತ್ತು **ಶ** (ತಾಲವ್ಯ) **ಷ** (ಮೂರ್ಧನ್ಯ) ಧ್ವನಿಗಳ ಸ್ಥಾನದಲ್ಲಿ ದಂತ್ಯವರ್ಣ **ಸ** ದೊಡನೆ **ಎ** ಕಾರಾಂತ ಏಕವರ್ಣ ವಿಜಾತೀಯ ದ್ವಿತ್ವವಾಗಿ ಬಳಕೆಯಾಗುತ್ತಿದೆ. ಇಲ್ಲಿ 'ಆ' ಧ್ವನಿಯು 'ಅ' ಹ್ರಸ್ವಧ್ವನಿಯಾಗಿ ಜಾಲ ಮತ್ತು ಯಲಹಂಕದಲ್ಲಿ 'ಉ' ಧ್ವನಿಯಾಗಿ ಬಳಕೆಯಾಗುತ್ತಿದೆ. ತೆಲುಗು ಭಾಷಿಕರಲ್ಲಿ **ಚಿಕ್ಕುಸ್ಲೆ, ಪೆದ್ದುಸ್ಲೆ** ಎಂದು ಆರಂಭ ಪದವು **ಪೆದ್ದ(ದೊಡ್ಡ), ಚಿಕ್ಕ** ಪರಿಮಾಣವಾಚಿಯನ್ನು ಬಳಸಿ **ಉಸ್ಲೆ** ಎಂದು ಬಳಸುತ್ತಿದ್ದಾರೆ. ಹಾಗೆಯೇ ಜಾಲ ಮತ್ತು ಯಲಹಂಕದ ಕೆಲವು ಭಾಗಗಳಲ್ಲಿ **ಉಸ್ಲೆ** ಎಂದೇ **ಅ** ಕಾರ **ಉ** ಕಾರವಾಗಿ ಬಳಕೆಯಾಗಿದೆ. ದ್ರಾವಿಡ ಭಾಷೆಗಳಲ್ಲಿ ಸಾಮಾನ್ಯವಾಗಿ ಪದಾಂತ್ಯದಲ್ಲಿ **'ಅ'** ಕಾರವು **'ಉ'** ಕಾರವಾಗುವುದು ಸಾಮಾನ್ಯವಾದ ಸಂಗತಿಯಾಗಿದೆ. ಅದರಂತೆ ಜಾಲ ಭಾಗದಲ್ಲಿ ಪದಾರಂಭದಲ್ಲೇ **ಅ** ಕಾರಕ್ಕೆ **ಉ** ಕಾರವನ್ನು ಬಳಸುವುದನ್ನು ಕಾಣುತ್ತೇವೆ. ಆರಿದ್ರಾ ಸಂಸ್ಕೃತ ನಾಮಪದವು **'ಆದ್ರಿ'**ಯಾಗಿ ಏಕವರ್ಣ ಲೋಪವಾಗಿ ಬಳಕೆಯಾದರೆ, ಜಾಲದ ಭಾಗದಲ್ಲಿ ಆರಂಭಾಕ್ಷರವು **ಆ** ದೀರ್ಘವು **ಅ** ಸ್ವರವಾಗಿ ಬಳಕೆಯಾಗಿ, **ದ್** ದಂತ್ಯ

ವರ್ಣದ ಬದಲು ತಾಡಿತ ವರ್ಣ **ರ್** ಧ್ವನಿಗೆ ದಂತ್ಯಧ್ವನಿ **ದ್** ವು ದ್ವಿತ್ವವಾಗಿ ಬಳಕೆಯಾಗುತ್ತಿದೆ. ತೆಲುಗು ಭಾಷೆಯ ಆಡುಮಾತಿನಲ್ಲಿ ಈ ಮಳೆಯನ್ನು **ಆರ್ದೆ** ಎಂದೇ ಕರೆಯಲಾಗುತ್ತಿದೆ.

'ಈ'ವರ್ಣದಬಳಕೆ

ಶಿಷ್ಟಪದ	**ದಾಸನಪುರ**	**ಹೆಸರಘಟ್ಟ**	**ಯಶವಂತಪುರ**	**ಯಲಹಂಕ**	**ಜಾಲ**
ಈಯು	ಈಲು	ಈಲು	ಈಲು	ಇನು	ಇನು
ಈರಲು	ಇರ್ಲು	ಇರ್ಲು	ಇರ್ಳು	ಈರ್ಳು	ಈರ್ಳು
ಈಜು	ಯೀಜು	ಯೀಜು	ಯೀಜು	ಈಸು	ಈಸು

ಶಿಷ್ಟಪದ **ಈಯು** ಎಂಬುದು ದಾ.ಹೆ.ಯ ದಲ್ಲಿ **ಈ** ಕಾರದ ಪೂರ್ವ ವರ್ಣ **ಯ್** ಧ್ವನಿಯು ಪಾರ್ಶ್ವಿಕ ವತ್ಸ ಧ್ವನಿ **ಲ್** ಆಗಿ ಬಳಕೆಯಾದರೆ, ದಾ.ಹೆ.ಯಶ ಭಾಗಗಳಲ್ಲಿ ಅನುನಾಸಿಕ **ನ್** ವಾಗಿ ಬಳಕೆಯಾಗಿ ಹಿಂದಿನ ಸ್ವರಾಕ್ಷರವು ಹ್ರಸ್ವ ಇ **(ಈ>ಇ)** ಧ್ವನಿಯು ಬಳಕೆಯಾಗುತ್ತಿದೆ. **(ಈನು>ಇನು)**. **ಈರಲು** ಎಂಬ ಕಾಯಿಲೆ ಸೂಚಿಸುವ ನಾಮಪದವು ದಾ.ಹೆ.ಯಶ ಭಾಗಗಳಲ್ಲಿ **ರಲು** ವರ್ಣಗಳು ದ್ವಿತ್ವವಾಗಿ ಹಿಂದಿನ ಧ್ವನಿಯು ಹ್ರಸ್ವವಾಗಿ ಬಳಕೆಯಾದರೆ, ಜಾಲ ಭಾಗಗಳಲ್ಲಿ ದೀರ್ಘವಾಗಿ **(ಈರಲು>ಇರ್ಲು>ಈರ್ಳು)** ಬಳಕೆಯಾಗುತ್ತಿದೆ. **ಈಜು** ಪದವು ದಾ.ಹೆ.ಯಶ ಭಾಗಗಳಲ್ಲಿ ತಾಲವ್ಯ ವಿರಳಘರ್ಷ **ಯ್** ಧ್ವನಿಯಲ್ಲಿ **ಈ** ಕಾರವು ಸೇರಿ ಬಳಕೆಯಾದರೆ, ಜಾ.ಯಲ ದಲ್ಲಿ **ಜ್** ವರ್ಣವು **ಸ್** ಕಾರವಾಗಿ **(ಈಜು>ಈಸು)** ಬಳಕೆಯಾಗಿ ಹಿಂದಿನ ವರ್ಣವು **ಈ** ವರ್ಣವಾಗಿ ಬಳಕೆಯಾಗುತ್ತಿದೆ. ಜಾಲ ಭಾಗಗಳಲ್ಲಿ ಬಳಕೆಯಾಗುತ್ತಿರುವ **ಇನು, ಈರ್ಳು, ಈಸು** ಪದಗಳನ್ನು ತೆಲುಗು ಭಾಷೆಯಲ್ಲಿ **ಈನು(ಕರುಹಾಕು), ಈರಳು(ಮಕ್ಕಳಿಗೆ ಭೇದಿಯಾಗುವ ಕಾಯಿಲೆ), ಈತ, ಈದು (ಈಜಾಡು)** ಎಂಬರ್ಥದಲ್ಲಿ ಬಳಕೆಯಾಗುತ್ತಿವೆ. ಈ ಪದಗಳ ಬಳಕೆಯನ್ನು ಗಮನಿಸಿದಾಗ ತೆಲುಗಿನ ಭಾಷೆಯ ಪ್ರಭಾವ ಕಾಣುತ್ತಿದೆ.

ಬೆಂಗಳೂರಿನ ಗ್ರಾಮೀಣ ಜಾಲ ಭಾಗದಲ್ಲಿ **ಈ** ದೀರ್ಘಸ್ವರವು ಇ ಹ್ರಸಸ್ವರವಾಗಿ ವ್ಯತ್ಯಾಸಗೊಂಡು ಬಳಕೆಯಾಗುತ್ತಿದೆ. ಹಾಗೂ ಶಿಷ್ಟ **ಈ** ಕಾರವು ಆಡುಮಾತಿನಲ್ಲಿ **ಯೀ** ಎಂದು ದಾಸನಪುರಾದಿಯಲ್ಲಿ

ಬಳಕೆಯಾಗಿದ್ದು ಜಾಲ ಭಾಗದಲ್ಲಿ ಮತ್ತೆ ದೀರ್ಘವನ್ನು (ಈರಲು>ಇರ್ಲು>ಈರ್ಳು) ಬಳಕೆ ಮಾಡುವುದನ್ನು ಕಾಣಬಹುದಾಗಿದೆ.

'ಏ'ವರ್ಣದಬಳಕೆ

ಶಿಷ್ಟಪದ	**ದಾಸನಪುರ**	**ಹೆಸರಘಟ್ಟ**	**ಯಶವಂತಪುರ**	**ಯಲಹಂಕ**	**ಜಾಲ**
ಚೇಳು	ಚೋಳು	ಚೋಳು	ಚೋಳು	ಸೇಳು	ಸೇಳು
ಏರು	ಅತ್ತು	ಅತ್ತು	ಅತ್ತು	ಎಕ್ಕು	ಎಕ್ಕು
ತೇಪೆ	ತೇಪೆ	ತೇಪೆ	ತೇಪೆ	ತ್ಯಾಪೆ	ತ್ಯಾಪೆ
ಸಲಿಗೆ	ಸಲ್ಗೆ	ಸಲ್ಗೆ	ಸಲ್ಗೆ	ಸಲ್ಗಾ	ಸಲ್ಗಾ

ಶಿಷ್ಟಪದ **ಚೇಳು** ಎಂಬ ನಾಮಪದವನ್ನು ದಾ.ಹೆ.ಯಶ ಭಾಗದ ಜನರು ಆದಿವರ್ಣದಲ್ಲಿ ತಾಲವ್ಯ ವರ್ಣ **ಚ** ದೊಡನೆ ಕಂಠೋಷ್ಠ್ಯ ಧ್ವನಿ (ಅರೆಸಂವೃತ್ತ) **ಓ** ಧ್ವನಿಯು ಬಳಕೆಯಾದರೆ, ಯಲ.ಜಾ ಭಾಗದಲ್ಲಿ ದಂತ್ಯ ವರ್ಣ **ಸ** ದೊಂದಿಗೆ ಏ ಕಂಠತಾಲು ಧ್ವನಿಯನ್ನು ಬಳಸುತ್ತಾರೆ. **ಏರು** ಎಂಬುದು ದಾ.ಹೆ.ಯಶ ಭಾಗದಲ್ಲಿ **ಅತ್ತು** ಎಂದು ಬಳಕೆಯಾದರೆ ಜಾ.ಯಲ ದಲ್ಲಿ **ಎಕ್ಕು** ಎಂದು ಬಳಕೆಯಾಗುತ್ತಿದೆ, **ತೇಪೆ** ಎಂಬ ಪದೋಚ್ಚಾರದಲ್ಲಿ ದಾ.ಹೆ.ಯಶ ದಲ್ಲಿ ಏ ಸ್ವರವು **ಆ** ಕಾರವಾಗಿ ವ್ಯಂಜನ **ಯ್** ದ್ವಿತ್ವವಾಗಿ ಬಳಕೆಯಾದರೆ, ಜಾಲದಲ್ಲಿ ಏ ಕಾರವಾಗಿಯೇ ಬಳಕೆಯಾಗುತ್ತಿದೆ.

ಚೇಳು ಎಂಬ ಪದವು ತೆಲುಗಿನಲ್ಲಿ **ತೇಳ್/ತೇಲ್** ಎಂದು ಬಳಕೆಯಲ್ಲಿದೆ. ಆದರೆ ಜಾಲ ಭಾಗದಲ್ಲಿ ಕನ್ನಡದ ಚೇಳು ಪದವು ಆದಿವರ್ಣ **ಚ್** ಕಾರವು **ಸ್** ಕಾರವಾಗಿ ಬಳಕೆಯಾಗುತ್ತಿದೆ. ದ್ರಾವಿಡಭಾಷೆಗಳಲ್ಲಿ ಈ ರೀತಿಯ ಬದಲಾವಣೆಯು ಸಾಕಷ್ಟು ನಡೆದಿವೆ. ಸ್ವತಂತ್ರವಾದ ಈ ಪರಿವರ್ತನೆಯು ದ್ರಾವಿಡ ಭಾಷೆಗಳಲ್ಲಿ ಸಹಜವಾಗಿ ನಡೆದಿವೆ. **ಎಕ್ಕು** ಎಂಬ ಕ್ರಿಯಾಪದವು ತೆಲುಗಿನಲ್ಲಿ **ಏರು, ಹತ್ತು** ಎಂಬರ್ಥದಲ್ಲಿ ಬಳಕೆಯಾಗುತ್ತಿದೆ. **ತ್ಯಾಪೆ** ಎಂಬ ನಾಮಪದವನ್ನು ತೆಲುಗಿನಲ್ಲಿ **ತ್ಯಾಪ/ ಟಾಕ** ಎಂದು ಬಳಕೆಯಾಗುತ್ತಿದೆ. ಈ ಪದಗಳ ಪ್ರಭಾವ ಜಾಲ ಜನರ ಆಡುಮಾತಿನಲ್ಲಿ ಕಂಡುಬರುತ್ತಿವೆ. ಆದೇ ರೀತಿಯಲ್ಲಿ **ಸಲಿಗೆ** ಪದವನ್ನು

ಜಾಲ ಭಾಗದ ಜನರು **ಸಲ್ಲಾ** ಎಂದು ಬಳಸುತ್ತಾರೆ. ಹೀಗೆ ಏ ಕಾರವನ್ನು **ಆ** ಕಾರವಾಗಿ ಬಳಕೆಯಾಗುತ್ತಿದೆ. (ತೆ>ಸಲಿಗಾ)

೩.೧.೨ ವ್ಯಂಜನಗಳು

ಬೆಂಗಳೂರು ಗ್ರಾಮೀಣ ಭಾಗದಲ್ಲಿನ ಜನರ ಆಡುಮಾತಿನಲ್ಲಿ ಬಳಕೆಯಾಗುವ ವ್ಯಂಜನಗಳನ್ನು ಘೋಷಗಳು ಮತ್ತು ಅಘೋಷಗಳು ಎಂದು ಎರಡು ರೀತಿಯಲ್ಲಿ ವಿಭಾಗಿಸಿಕೊಂಡು ಅಧ್ಯಯನದಲ್ಲಿ ಬಳಸಿದ್ದೇನೆ. ಅವುಗಳು ಇಂತಿವೆ:

೩.೧.೨.೧ ಅಘೋಷಗಳು –ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಭಾಗದ ಜನರ ಆಡುನುಡಿಯಲ್ಲಿ ಬಳಕೆಯಾಗುತ್ತಿರುವ ಅಘೋಷಧ್ವನಿಗಳಾದ ಕ್, ಚ್, ಟ್, ತ್, ಪ್ ಎಂಬ ಧ್ವನಿಗಳ ಬಳಕೆಯ ಬಗೆಯನ್ನು ಗುರುತಿಸಿ, ಅವುಗಳಲ್ಲಿನ ಬದಲಾವಣೆಯ ಸ್ವರೂಪವನ್ನು ಅರಿಯಲು ಪ್ರಯತ್ನಿಸಲಾಗಿದೆ.

ದ್ರಾವಿಡ ಭಾಷೆಗೆ ಅಘೋಷ ಧ್ವನಿಗಳು ಸಹಜವಾದವು. ಕನ್ನಡ ಭಾಷೆಯ ಚರಿತ್ರೆಯನ್ನು ಗಮನಿಸಿದಾಗ ಅಘೋಷವು ಘೋಷವಾಗಿ ಹಲವು ಸಂದರ್ಭಗಳಲ್ಲಿ ಬದಲಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಹಲವು ನಿಯಮಗಳಿವೆ. ಅವುಗಳಲ್ಲಿ ಕೆಲವು ಈ ಕೆಳಕಂಡಂತೆ ಇವೆ:

೧. "ತಮಿಳು ಮತ್ತು ಮಲಯಾಳಂ ಭಾಷೆಗಳಲ್ಲಿ ದ್ರಾವಿಡ ಭಾಷೆಯ ಅಪೂರ್ವ ನಿಯಮಗಳಲ್ಲೊಂದಾದ ಘೋಷ ಅಘೋಷ ವರ್ಣಗಳ ಪರಿವರ್ತನೆಯ ನಿಯಮದ ಮೂಲಕ, ಒಂದೇ ಒಂದು ವ್ಯಂಜನವು ಎರಡೂ ಉದ್ದೇಶಗಳಿಗೆ ಬಳಸಲ್ಪಡುತ್ತದೆ. ಅಂತಹ ವ್ಯತ್ಯಾಸಗಳನ್ನು ಅವುಗಳ ಉಚ್ಚಾರಣೆಯಲ್ಲಿ ಮಾತ್ರ ಅಭಿವ್ಯಕ್ತಿಸಲಾಗುತ್ತದೆ."[೧]

ಆಡುಮಾತಿನಲ್ಲಿ ಅಘೋಷ(ಕ, ಚ, ಟ, ತ, ಪ)ವು ಘೋಷವಾಗುವುದು ಪದದ ಆರಂಭ, ಮಧ್ಯ, ಅಂತ್ಯದಲ್ಲಿ ಇದೆ. ಈ ಬದಲಾವಣೆಗೆ ಪದದ ಪರಿಸರವೂ ಕಾರಣವಾಗುತ್ತದೆ. ಅದರಲ್ಲಿನ ಸ್ವರವೂ ಬದಲಾವಣೆಗೆ ಪ್ರಮುಖ ಕಾರಣವಾಗುತ್ತದೆ. ಪದ ಪರಿಸರವನ್ನು ವಿವರವಾಗಿ ಪರಿಗಣನೆಗೆ ತೆಗೆದುಕೊಳ್ಳದೆ ಈ ಕೆಳಗಿನ ಪದಗಳಲ್ಲಿ ಅಘೋಷ ಮತ್ತು ಘೋಷದ ಬದಲಾವಣೆಯು ಕನ್ನಡ ಮತ್ತು ತೆಲುಗಿನ ಆಡುಮಾತಿನ ಪರಿಸರದ ಹಿನ್ನೆಲೆಯೊಳಗೆ ಗುರುತಿಸಲಾಗಿದೆ. ಇಲ್ಲಿ ಕನ್ನಡ–ತೆಲುಗು ಭಾಷೆಗಳು ದ್ವಿಭಾಷಿಕ ಪರಿಸರದ ಪ್ರದೇಶದಲ್ಲಿ ಉಂಟುಮಾಡುತ್ತಿರುವ ಪ್ರಭಾವವನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

‘ಕ್’ಕಂಠ್ಯ ಅಘೋಷ

ಶಿಷ್ಟಪದ	ದಾಸನಪುರ	ಹೆಸರಘಟ್ಟ	ಯಶವಂತಪುರ	ಯಲಹಂಕ	ಜಾಲ
ಕೆಂಪಿರುವೆ	ಕೆಂಜ್ಗ	ಕೆಂಜ್ಗ	ಕೆಂಜ್ಗ	ಕೆಂಚೀಮೆ	ಕೆಂಚೀಮೆ
ಕಿವುಡ	ಕಿವ್ಡ	ಕಿವ್ಡ	ಕಿವ್ಡ	ಶೆವಿಟ್ಗ	ಶೆವಿಟ್ಗ
ಕನ್ನಡಿ	ಕನ್ನುಡಿ	ಕನ್ನುಡಿ	ಕನ್ನುಡಿ	ಅದ್ದ	ಅದ್ದ
ಅನುಕು	ಅನ್ಕು	ಅನ್ಕು	ಅನ್ಕು	ಅನ್ಗು	ಅನ್ಗು
ಅನುಕು	ಅನ್ಕು	ಅನ್ಕು	ಅನ್ಕು	ಅನ್ಗು	ಅನ್ಗು
ಕರಿಕಲು	ಕರಿಕ್ಲು	ಕರಿಕ್ಲು	ಕರಿಕ್ಲು	ಗರಿಗ್ಲು	ಗರಿಗ್ಲು
ಕೆದರು	ಕೆದ್ರು	ಕೆದ್ರು	ಕೆದ್ರು	ಚೆದ್ರು	ಚೆದ್ರು

ಈ ಮೇಲಿನ ಪದಗಳಲ್ಲಿ ದಾ.ಹೆ.ಯಶ. ಭಾಗದ ಕ ಕಾರವು ಶ(ಶೆವಿಟ್ಗ) ಕಾರವಾಗಿ/ಗ ಕಾರವಾಗಿ (ಗರಿಗ್ಲು)/ ಚಕಾರವಾಗಿ (ಕೆದ್ರು >ಚೆದ್ರು) ಯ.ಜಾಲ. ಭಾಗದಲ್ಲಿ ಕಂಡುಬರುತ್ತಿದೆ. ಇವುಗಳಲ್ಲಿ ಚ ಮತ್ತು ಶ ಒಂದು ಬಗೆಯದ್ದಾದರೆ ಗ ಕಾರವು ಘೋಷವಾಗಿದೆ. ಪದದ ಆದಿಯ ಕ ಕಾರ ಅಘೋಷದ ಬಗ್ಗೆ ಇರುವ ನಿಯಮಗಳು ಈ ಕೆಳಕಂಡಂತೆ ಇವೆ:

೧. “ಕನ್ನಡದಲ್ಲಿ ಸಾಮಾನ್ಯವಾಗಿ ‘ಕ’ ಕಾರವೇ ಉಚ್ಚಾರಣೆಯಲ್ಲಿ ಉಳಿದುಬಂದಿದೆ. ಕನ್ನಡದಲ್ಲಿ ‘ಕ’ ಕಾರ ಬರುವ ಕಡೆಯಲ್ಲಿ ತೆಲುಗಿನಲ್ಲಿ ‘ಚ’ ಕಾರವೂ ತಮಿಳಿನಲ್ಲಿ ‘ಶ’ ಕಾರವೂ ಬರುತ್ತದೆ. ಉದಾ.ಕಿಣ್ಣ(ಕ)>ಚಿನ್ನ(ತೆ), (ಕ) ಕೆಯ್>ಚೆಯ್(ತೆ)>ಶೆಯ್(ತ)”[೨]

೨. “ತೆಲುಗು ಕನ್ನಡಗಳಲ್ಲಿ ಘೋಷ–ಅಘೋಷ ಧ್ವನಿಮಾಗಳಲ್ಲಿ ಹೊಂದಾಣಿಕೆಗಿಂತ ವ್ಯತ್ಯಾಸವೇ ಹೆಚ್ಚು. ಗಿಡ–ಚೆಟ್ಟು, ಗಿಳಿ–ಚಿಲಿಕ, ಜೇನಿ–ತೇನಿ, ಕಟ್ಟೆ–ಗಾಡಿದೆ, ಕೊಡೆ–ಗೊಡಗು. ಕನ್ನಡ ಮತ್ತು ತೆಲುಗು ಭಾಷೆಯ ಗ ಡ ದ ಬ ಎಂಬ ವರ್ಣಗಳಿಂದ ಮೊದಲಾಗುವ ಪದಗಳು ತಮಿಳು ಅಥವಾ ಮಲಯಾಳಂ ಭಾಷೆಗಳಲ್ಲಿ ಸಮಾನ ಪದಗಳನ್ನು ಪಡೆದಿಲ್ಲ”.[೩]

೩. "ಕನ್ನಡ, ತೆಲುಗು ಮುಂತಾದ ಕೆಲವು ದ್ರಾವಿಡ ಭಾಷೆಗಳಲ್ಲಿ ಘೋಷ–ಅಘೋಷಗಳು ವಿರುದ್ಧ ಪ್ರಸಾರದಲ್ಲಿ ಬರುತ್ತವೆ; ಅರ್ಥವ್ಯತ್ಯಾಸಕ್ಕೆ ಕಾರಣವಾಗುತ್ತವೆ. ತಡ–ದಡ, ಕರಿ–ಗರಿ. ತ.ನಲ್ಲಿ ಘೋಷ–ಅಘೋಷಗಳು ಪೂರಕ ಪ್ರಸಾರದಲ್ಲಿವೆ ಮತ್ತು ಅವುಗಳಿಗೆ ನಿರ್ದಿಷ್ಟ ಪರಿಸರವಿದೆ."[೬]

ತಮಿಳಿನ ಕ>ಶ, ತೆಲುಗಿನ ಕ>ಚ ಕನ್ನಡದ ಕ>ಗ– ಈ ಮೂರು ಮಾದರಿಗಳು ಯಲ.ಜಾಲ. ಭಾಗದಲ್ಲಿ ಕಂಡುಬರುತ್ತಿವೆ. ದ್ವಿಭಾಷಿಕಕ್ಕಿಂತ ಬಹುಭಾಷಿಕ ಪರಿಸರದ ಲಕ್ಷಣ ಈ ಭಾಗದಲ್ಲಿದೆ.

೧. "ಅಘೋಷತ್ವವನ್ನು ಘೋಷತ್ವವನ್ನಾಗಿಸಿಕೊಳ್ಳುವ ಪ್ರವೃತ್ತಿಯೊಂದು ಕನ್ನಡ, ತೆಲುಗು ಭಾಷೆಗಳಲ್ಲಿ ಕಂಡುಬರುತ್ತದೆ. ಈ ಪ್ರಕ್ರಿಯೆ ದೇಶ್ಯ ಮತ್ತು ಸ್ವೀಕರಣ ರೂಪಗಳೆರಡರಲ್ಲೂ ಉಂಟು: ಜೋಡಿರೂಪಗಳೂ ಉಂಟು; ಕೆಯ್–ಗೆಯ್–ಕೆಯ್ಮೆ–ಗೆಯ್ಮೆ."[೭]

ಅನುಕು (ಜಿಪುಣ ಎಂಬ ಅರ್ಥವನ್ನು ಹೊಂದಿರುವುದು) ಎಂಬ ಪದವು ದಾ,ಹೆ,ಯ ಭಾಗದಲ್ಲಿ 'ಅನ್ಕು' ಎಂದು ಬಳಕೆಯಾಗುತ್ತಿದ್ದರೆ. ಜಾಲ ಭಾಗದಲ್ಲಿ 'ಅನ್ಗು' ಎಂದು ಬಳಕೆಯಾಗುತ್ತಿದೆ. ಈ ಪದವು ತೆಲುಗಿನಲ್ಲಿ ಅನುಗು(ಜಿಪುಣ) ಎಂದು ಬಳಕೆಯಲ್ಲಿದೆ. ಅಂತೆಯೆ **ಅನಕ** ಎಂಬ ಪದವು ಅನ್ಕ ಎಂದು ಕ ಕಾರ ಅಘೋಷವಾಗಿ ದಾ,ಹೆ ಭಾಗದಲ್ಲಿ ಬಳಕೆಯಾಗುತ್ತಿದ್ದರೆ, ಜಾಲ ಭಾಗದಲ್ಲಿ **ಅನ್ಗ** ಎಂದು ಘೋಷವರ್ಣ 'ಗ್' ಕಾರವಾಗಿ ಬಳಕೆಯಾಗುತ್ತಿದೆ. (ತೆ>ಅನುಗು) **ಕರಿಕಲು** ಎಂಬ ಪದವನ್ನು ದಾ, ಹೆ, ಯಶ ಭಾಗದ ಜನರಲ್ಲಿ ಪದಾರಂಭದಲ್ಲಿ **ಅಘೋಷ (ಕ್)** ಧ್ವನಿಯುಕ್ತ **ಕರಿಕ್ಲು** ಪದವು ಜಾಲ ಭಾಗದಲ್ಲಿ ಅಘೋಷ ಧ್ವನಿಯ ಬದಲು **ಘೋಷಧ್ವನಿ, ಗ್** ಆಗಿ **ಗರಿಗ್ಲು** ಎಂದು ಬಳಸುತ್ತಿದ್ದಾರೆ. (ತೆ>ಗರಿಗುಲು)

ಈ ಮೇಲಿನ ಧ್ವನಿ ವ್ಯತ್ಯಾಸವು ತೆಲುಗಿನ ಪ್ರಭಾವವು ಯಲ.ಜಾಲ.ದಲ್ಲಿ ತೀವ್ರವಾಗಿರುವುದರ ಕುರುಹು ಆಗಿದೆ.

'ಚ್' : ತಾಲವ್ಯ ಅಘೋಷ ಅಲ್ಪಪ್ರಾಣ ಧ್ವನಿ

ಶಿಷ್ಟಪದ	**ದಾಸನಪುರ**	**ಹೆಸರಘಟ್ಟ**	**ಯಶವಂತಪುರ**	**ಯಲಹಂಕ**	**ಜಾಲ**
ಚಿತ್ತಾ	ಚಿತ್ತೆ (ಕುಲ್ಡ್‌ಚಿತ್ತೆ)	ಚಿತ್ತೆ (ಕುಲ್ಡ್‌ಚಿತ್ತೆ)	ಚಿತ್ತೆ (ಕುಲ್ಡ್‌ಚಿತ್ತೆ)	ಸಿತ್ತೆ (ಕುಲ್ಡ್‌ಸಿತ್ತೆ)	ಸಿತ್ತೆ (ಕುಲ್ಡ್‌ಸಿತ್ತೆ)
ಚೇಳು	ಚೋಳು	ಚೋಳು	ಚೋಳು	ಸೇಳ್ಕುಟ್ರಿ	ಸೇಳ್ಕುಟ್ರಿ

ಅಣಚು	ಅಣ್ಚು	ಅಣ್ಚು	ಅಣ್ಚು	ಅಣ್ಸು	ಅಣ್ಸು
ಈಚಲು	ಯೀಚ್ಲು	ಯೀಚ್ಲು	ಯೀಚ್ಲು	ಈಸ್ಲು	ಈಸ್ಲು
ಚಿಮ್ಮಟ	ಚಿಮ್ಟ	ಚಿಮ್ಟ	ಚಿಮ್ಟ	ಸಿಮ್ಟ	ಸಿಮ್ಟ
ಚವ್ಮಟಿಗೆ	ಚಮ್ಟಿ	ಚಮ್ಟಿ	ಚಮ್ಟಿ	ಸಮ್ಟಿ	ಸಮ್ಟಿ

ಮೇಲಿನ ಬೆಂಗಳೂರು ಗ್ರಾಮೀಣ ಭಾಗಗಳ ಜನರ ಆಡುಮಾತಿನಲ್ಲಿ ಪದಗಳಲ್ಲಿ ದಾ.ಹೆ.ಯಶ ಭಾಗಗಳಲ್ಲಿ **ಚ್** ಕಾರವು ಬಳಕೆಯಾಗುತ್ತಿದ್ದರೆ, ಜಾಲ.ಯಲ ಭಾಗದಲ್ಲಿ **ಚ್** ಕಾರವನ್ನು **ಸ್** ಕಾರವನ್ನಾಗಿ ಬಳಕೆಯನ್ನು ಮಾಡಲಾಗುತ್ತಿದೆ. **ಚ್** ಕಾರವನ್ನು **ಸ್** ಕಾರವನ್ನಾಗಿ ಪದಾರಂಭ, ಪದಮಧ್ಯ ಮತ್ತು ಪದಾಂತ್ಯಗಳಲ್ಲಿ ವ್ಯತ್ಯಾಸಗಳಾಗುತ್ತಿರುವುದು ಕಾಣಬಹುದು. **ಚ್** ಕಾರದ ಬಳಕೆಯಲ್ಲಿ ಕೆಲವು ನಿಯಮಗಳು ಈ ಕೆಳಕಂಡಂತೆ ಇವೆ;

೧. "ಮೂಲ ದ್ರಾವಿಡದಲ್ಲಿ ಸ್, ಹ್ ಧ್ವನಿಮಾಗಳೇ ಇರಲಿಲ್ಲ. ಅವು ಕೆಲವು ದ್ರಾವಿಡ ಭಾಷೆಗಳಲ್ಲಿ ಅನುಷಂಗಿಕವಾಗಿ ಸ್ವತಂತ್ರವಾಗಿ ಬಳಕೆಯಾಗತೊಡಗಿದಂತೆ ತೋರುತ್ತದೆ. ಸ್ ಹಾಗೂ ಹ್ ಗಳಿಗೆ ಚ್ ಕಾರವೇ ಮೂಲವಾಗಿರಬೇಕೆಂದು ತಿಳಿದುಬರುತ್ತದೆ."[೬]

೨. "ಅನೇಕ ದ್ರಾವಿಡ ಭಾಷೆಗಳು ಚ್ ಕಾರವನ್ನು ಕೆಲವೆಡೆ ಮೂಲದಲ್ಲಿದ್ದಂತೆ ಇಟ್ಟುಕೊಂಡರೂ ಬಹಳಷ್ಟು ಬದಲಾವಣೆಗಳನ್ನು ಮಾಡಿಕೊಂಡಿರುವ ಭಾಷೆಗಳೆಂದರೆ ಕನ್ನಡ ಮತ್ತು ತೆಲುಗು ಎನ್ನಬಹುದು. ಕನ್ನಡವು ಶಬ್ದಾದಿಯ ಚ್ ವನ್ನು ಸ್, ಜ್, ತ್ ಎಂದು ಅನೇಕ ರೀತಿಯಲ್ಲಿ ಬದಲಾಯಿಸಿಕೊಂಡಿರುವುದನ್ನು ಮನಗಾಣಬಹುದು. ತೆಲುಗು ಭಾಷೆಯು ಕೂಡ ಆ ಎಲ್ಲಾ ಬದಲಾವಣೆಯನ್ನು ಮಾಡಿಕೊಂಡು ಕನ್ನಡವನ್ನು ಅನುಸರಿಸಿದೆ."[೭]

ಮೇಲಿನ ನಿಯಮಗಳಂತೆ ಬೆಂಗಳೂರು ಗ್ರಾಮೀಣ ಭಾಗವಾದ ದಾ.ಹೆ.ಯಶ ಭಾಗದ ಜನರು ಆದಿವರ್ಣದಲ್ಲಿ ತಾಲವ್ಯ ವರ್ಣ **ಚ** ದೊಡನೆ ಕಂಠೋಷ್ಠ್ಯ ಧ್ವನಿ (ಅರೆಸಂವೃತ್ತ) **ಓ (ಚೋ)** ಧ್ವನಿಯನ್ನು ಸೇರಿಸಿ ಬಳಸಿದರೆ, ಯಲ.ಜಾ ಭಾಗದಲ್ಲಿ ದಂತ್ಯ ವರ್ಣ **ಸ (ಸೇ)** ದೊಂದಿಗೆ ಏ ಕಂಠತಾಲು ಸ್ವರವು ಸೇರಿ ಅಂತ್ಯದಲ್ಲಿ ಸೇರಿಸಿ ಬಳಸುತ್ತಿದ್ದಾರೆ. ಕುಡುಗೋಲಿನ ಹಿಡಿಯ ಮುಂಭಾಗದ ಪಟ್ಟಿಯಾದ **ಅಣಚು** ಎಂಬುದರಲ್ಲಿ ದಾ.ಹೆ.ಯಶ. ಭಾಗದಲ್ಲಿ **ಚ್** ಧ್ವನಿಯು ಸಂಕ್ಷಿಪ್ತವಾಗಿ ಸೇರಿಸಿ ಕೆಲವೆಡೆ ಬಳಕೆಯಾದರೆ,

ಜಾಲ ಭಾಗದಲ್ಲಿ **ಚ್** ಧ್ವನಿಯ ಸ್ಥಾನದಲ್ಲಿ ಘರ್ಷ ಧ್ವನಿ **ಸ್** ಸಂಕ್ಷಿಪ್ತವಾಗಿ ಸೇರಿ ಬಳಕೆಯಾಗುತ್ತಿದೆ. ಹಾಗೆಯೇ **ಚಿತ್ತಾ** ಪದವು ದಾ.ಹೆ.ಯಶ ಭಾಗದಲ್ಲಿ **ಚಿತ್ತೆ**ಯಾಗಿ, ಜಾಲ ಭಾಗದಲ್ಲಿ **ಸಿತ್ತೆ** ಎಂದು ದಂತ್ಯ ಅಘೋಷ ವರ್ಣದ ಹಿಂದಿನ **ಚ್** ಧ್ವನಿಯು **ಸ** ಕಾರವಾಗಿ ಬಳಕೆಯಾಗುವುದು. **ಅಣ್ಚು** > **ಅಣ್ಸು** ಬಳಕೆಯಲ್ಲೂ ದ್ವಿತ್ವವಾದ **ಚ್** ಧ್ವನಿಯು **ಸ್** ಮೂರ್ಧನ್ಯ ಅಘೋಷ ದ್ವಿತ್ವವಾಗಿ ಬಳಕೆಯಾಗುತ್ತಿದೆ. ಅದೇ ರೀತಿಯಲ್ಲಿ **ಈಚಲು** ಎಂಬ ಪದವನ್ನು ದಾ.ಹೆ.ಯಶ ಭಾಗದಲ್ಲಿ **ಈಚ್ಲು** ಎಂದು **ಲ್** ಧ್ವನಿಯು **ಚ್** ಧ್ವನಿಗೆ ದ್ವಿತ್ವವಾಗಿ ಬಳಕೆಯಾದರೆ, ಜಾಲ ಭಾಗದಲ್ಲಿ **ಸ್** ಧ್ವನಿಗೆ **ಲ್** ಧ್ವನಿಯು ದ್ವಿತ್ವವಾಗುತ್ತಿದೆ. ದಾಸನಪುರದ ಭಾಗಗಳಲ್ಲಿ **ಚ್** ಕಾರದ ಬದಲು, ಜಾಲ ಭಾಗದಲ್ಲಿ **ಸ್** ಕಾರದ ಬಳಕೆಯಾಗುತ್ತಿದೆ. (ಈಚ್ಲು>ಈಸ್ಲು)

ಜಾಲ ಭಾಗದಲ್ಲಿ **ಚ್** ಕಾರದ ಬದಲು **ಸ್** ಕಾರವನ್ನು ಪಡೆದ ರೀತಿಯಲ್ಲಿಯೇ **ಈಚ್ಲು, ಚಿಮುಟ, ಚಮ್ಮಟಿಗೆ** ಎಂಬ ಪದವು ತೆಲುಗಿನಲ್ಲಿ **ಈಸಲಿ, ಸಿಮುಟ, ಸಮ್ಮೆಟ** ಎಂಬ ಪದಗಳ ಬಳಕೆಯಿದೆ. ಜಾಲ. ಯಲ ಭಾಗದಲ್ಲಿ ಬಳಕೆಯಾಗುವ **ಸಿತ್ತೆ** ಎಂಬ ಮಳೆಯ ಹೆಸರನ್ನು ತೆಲುಗಿನಲ್ಲಿ **ಸಿತ್ವಾನ** ಎಂದು ಬಳಸಲಾಗುತ್ತಿದೆ. **ಅಣಚ**ನ್ನು ತೆಲುಗು ಆಡುಮಾತಿನಲ್ಲಿ **ಅಣಸು** ಎಂದು ಬಳಸುತ್ತಾರೆ. ಈ ಪದವು ಜಾ. ಯಲ ಭಾಗದಲ್ಲಿ **ಅಣ್ಸು** ಎಂದು ಬಳಕೆಯಾಗುತ್ತಿದೆ. ಮೇಲಿನ ಮೂರು ಪದಗಳಲ್ಲಿ **ಚ್** ಕಾರವು ತೆಲುಗಿನಲ್ಲಿ **ಸ** ಕಾರವಾಗಿ (**ಚ್**>**ಸ್**) ಬಳಕೆಯಾಗುತ್ತಿದೆ. ಬೆಂಗಳೂರು ಗ್ರಾಮೀಣ ಭಾಗವಾದ ಜಾಲ ಮತ್ತು ಯಲಹಂಕದಲ್ಲಿ ತೆಲುಗಿನ ಸಂಪರ್ಕವಿರುವುದರಿಂದ ಈ ಧ್ವನಿ ಬದಲಾವಣೆಗೆ ಕಾರಣವಾಗಿದೆ.

'ಟ್' ; ಮೂರ್ಧನ್ಯ ಅಘೋಷ ಸ್ಪರ್ಶಧ್ವನಿ

ಶಿಷ್ಟ ಪದ	**ದಾಸನಪುರ**	**ಹೆಸರಘಟ್ಟ**	**ಯಶವಂತಪುರ**	**ಜಾಲ**	**ಯಲಹಂಕ**
ತಟ್ಟೆ	ತಣ್ಗೆ	ತಣ್ಗೆ	ತಣ್ಗೆ	ತಟ್ಟೆ/ಗಂಗ್ಳ	ತಟ್ಟೆ/ಗಂಗ್ಳ
ತಮಟೆ	ತಮ್ಟೆ	ತಮ್ಟೆ	ತಮ್ಟೆ	ಟಪ್ಪೆ	ಟಪ್ಪೆ
ಕಾಡಿಗೆ	ಕಾಡ್ಗೆ	ಕಾಡ್ಗೆ	ಕಾಡ್ಗೆ	ಕಾಟ್ಗೆ	ಕಾಟ್ಗೆ

ಮೇಲಿನ ಬೆಂಗಳೂರು ಗ್ರಾಮೀಣ ಭಾಗಗಳ ಜನರ ಆಡುಮಾತಿನಲ್ಲಿ ಪದಗಳಲ್ಲಿ ದಾ.ಹೆ.ಯಶ ಭಾಗಗಳಲ್ಲಿ **ಣ್** ಕಾರವು ಬಳಕೆಯಾಗುತ್ತಿದ್ದರೆ, ಜಾಲ.ಯಲ ಭಾಗದಲ್ಲಿ **ಟ್** ಕಾರವನ್ನಾಗಿ ಬಳಕೆಯನ್ನು ಮಾಡಲಾಗುತ್ತಿದೆ. ಟ್ ಕಾರವನ್ನು ಸೌಲಭ್ಯಕಾಂಕ್ಷೆಯಿಂದ ಪದಾರಂಭ, ಪದಮಧ್ಯ ಮತ್ತು ಪದಾಂತ್ಯಗಳಲ್ಲಿ ವ್ಯತ್ಯಾಸಗಳಾಗುತ್ತಿರುವುದು ಕಾಣಬಹುದು. ಟ್ ಕಾರದ ಬಳಕೆಯಲ್ಲಿ ಕೆಲವು ನಿಯಮಗಳು ಈ ಕೆಳಕಂಡಂತೆ ಇವೆ;

೧. "ಮೂರ್ಧನ್ಯವೆನಿಸಿದ ಟ ಕಾರವು ಘೋಷವರ್ಣವಾಗಿ ಡ ಕಾರವಾದಾಗ ತಮಿಳಿನಲ್ಲಿ ಅದು ರ್ ಕಾರವಾಗಿ ವಾಗುತ್ತದೆ."[೮]

೨. "ದ್ರಾವಿಡ ಭಾಷೆಗಳಲ್ಲಿ ಶಬ್ದಾದಿಯಲ್ಲಿ ರ್, ಲ್, ಟ್, ಣ್, ಳ್, ವ್ಯಂಜನಗಳು ಬರುವುದಿಲ್ಲ. ಆದರೇ ಈ ವ್ಯಂಜನಗಳಿಂದ ಆರಂಭವಾಗುವ ಹಲವಾರು ಶಬ್ದಗಳು ತೆಲುಗು, ಕುಇ, ಕುವಿ ಭಾಷೆಗಳಲ್ಲಿ ದೊರೆಯುತ್ತವೆ. ಇದಕ್ಕೆ ಕಾರಣವೆಂದರೆ ವ್ಯಂಜನ ಪಲ್ಲಟ ಹಾಗೂ ಸ್ವರಾನೂರೂಪತೆ ಪ್ರಕ್ರಿಯೆ."[೯]

ಈ ಮೇಲಿನ ನಿಯಮದಂತೆ **ತಟ್ಟೆ** ಎಂಬುವ ಪದವನ್ನು ದಾ.ಹೆ.ಯಶ ಭಾಗದ ಜನರಲ್ಲಿ **ಟ್** ಮೂರ್ಧನ್ಯ ವರ್ಣ ಸಜಾತೀಯ ದ್ವಿತ್ವವು ಮೂರ್ಧನ್ಯ ಅನುನಾಸಿಕ **ಣ್** ಧ್ವನಿಯೊಂದಿಗೆ ಕಂಠ್ಯ ಧ್ವನಿ ದ್ವಿತ್ವವಾಗಿ ಬಳಕೆಯಾದರೆ, ಜಾ.ಯಲ ಭಾಗದ ಜನರಲ್ಲಿ **ಟ್** ಮೂರ್ಧನ್ಯ ಸಜಾತೀಯ ದ್ವಿತ್ವವೇ **(ತಣ್ಗೆ>ತಟ್ಟೆ)** ಬಳಕೆಯಾಗುತ್ತಿದೆ. **ತಮಟೆ** ಪದವನ್ನು ದಾ.ಹೆ.ಯಶ ಭಾಗದಲ್ಲಿ ಅಂತ್ಯ ವರ್ಣ **ಟ್** ವು ಅನುನಾಸಿಕ ಧ್ವನಿ **ಮ್** ದೊಡನೆ ದ್ವಿತ್ವವಾಗಿ **ಎ** ಕಾರಾಂತವಾಗಿ ಬಳಕೆಯಾದರೆ, ಜಾ.ಯಲ ಭಾಗದಲ್ಲಿ ಅಂತ್ಯ ವರ್ಣ **ಮ್** ಬದಲು **ಪ್** ಧ್ವನಿಗೆ **ಟ್** ಧ್ವನಿಯು ದ್ವಿತ್ವಗೊಂಡು, ಹಿಂದಿನ ವರ್ಣವು **ತ್** ಧ್ವನಿಯ ಬದಲು **ಟ್** ಧ್ವನಿಯಾಗಿ **(ತಮ್ಟೆ>ಟಪ್ಟೆ)** ಬಳಕೆಯಾಗುತ್ತಿದೆ. ಶಿಷ್ಟಪದ **ಕಾಡಿಗೆ** ನಾಮಪದದ ಅಂತ್ಯ ವರ್ಣ **ಡ್** ಕಾರಕ್ಕೆ **ಗ್** ಕಂಠ್ಯಧ್ವನಿಯು ಜಾ,ಯಲ ಭಾಗದಲ್ಲಿ **ಟ್** ವರ್ಣವಾಗಿ **ಗ್** ಕಾರವು ದ್ವಿತ್ವವಾಗಿ **(ಕಾಡ್ಗೆ>ಕಾಟ್ಕೆ)** ಬಳಕೆಯಾಗುತ್ತಿದೆ. ಜಾಲ ಭಾಗದಲ್ಲಿ ಬಳಕೆಯಾಗುವ **ತಟ್ಟೆ** ಎಂಬ ಪದವು ತೆಲುಗು ಭಾಷೆಯಲ್ಲಿ **ತಟ್ಟೆ** ಎಂದು, **ಟಪ್ಟೆ** ಎಂಬುದು ತೆಲುಗಿನಲ್ಲಿ **ತಪ್ಪೆಟ** ಎಂದು, **ಕಾಟ್ಕೆ** ಎಂಬ ಪದವು **ಕಾಟುಕ** ಎಂದು ಬಳಕೆಯಾಗುತ್ತಿದೆ. ಈ ತೆಲುಗು ಪದಗಳ ಪ್ರಭಾವವು ಜಾಲ ಭಾಗದ ಜನರ ಮೇಲಾಗಿರುವುದು ಕಾಣುತ್ತದೆ.

'ತ್': ದಂತ್ಯ ಅಘೋಷ ಅಲ್ಪಪ್ರಾಣ

ಶಿಷ್ಟಪದ	**ದಾಸನಪುರ**	**ಹೆಸರಘಟ್ಟ**	**ಯಶವಂತಪುರ**	**ಯಲಹಂಕ**	**ಜಾಲ**
ತರಗು	ತರ್ಗ್ಗ	ತರ್ಗ್ಗ	ತರ್ಗ್ಗ	ಸರ್ಗ್ಗ	ಸರ್ಗ್ಗ
ತಟ್ಟೆ	ತಣ್ಗೆ	ತಣ್ಗೆ	ತಣ್ಗೆ	ಗಂಗ್ಳ	ಗಂಗ್ಳ
ಸತ್ತೆ	ಸತ್ತೆ	ಸತ್ತೆ	ಸತ್ತೆ	ಸಪ್ಪೆ	ಸಪ್ಪೆ

ಈ ಪಟ್ಟಿಯಲ್ಲಿ ಬೆಂಗಳೂರು ಗ್ರಾಮೀಣ ಭಾಗಗಳ ಜನರ ಆಡುಮಾತಿನಲ್ಲಿ ಪದಗಳಲ್ಲಿ ದಾ.ಹೆ.ಯಶ ಭಾಗಗಳಲ್ಲಿ **ತ್** ಕಾರವು ಬಳಕೆಯಾಗುತ್ತಿದ್ದರೆ, ಜಾಲ.ಯಲ ಭಾಗದಲ್ಲಿ **ಸ್** ಕಾರವನ್ನಾಗಿ ಬಳಕೆ ಮಾಡಲಾಗುತ್ತಿದೆ. **ತ್** ಕಾರವು ಸೌಲಭ್ಯಕಾಂಕ್ಷೆಯಿಂದ ಪದಾರಂಭ, ಪದಮಧ್ಯ ಮತ್ತು ಪದಾಂತ್ಯಗಳಲ್ಲಿ ವ್ಯತ್ಯಾಸಗಳನ್ನು ಉಂಟುಮಾಡುತ್ತಿದೆ. **ತ್** ಕಾರದ ಬಳಕೆಯಲ್ಲಿ ದ್ರಾವಿಡದ ಕೆಲವು ನಿಯಮಗಳು ಈ ಕೆಳಕಂಡಂತೆ ಇವೆ;

೧. " 'ತ' ಅಥವಾ 'ದ' ಕಾರಗಳು 'ಶ' ಕಾರವಾಗುತ್ತದೆ. ಈ ಬದಲಾವಣೆಯು ತಮಿಳಿನಲ್ಲಿ ನಾಮಪ್ರತ್ಯಯಗಳಲ್ಲಿ 'ದ' ಕಾರವನ್ನು ವಿಕಲ್ಪವಾಗಿ ಉಚ್ಚರಿಸಬೇಕಾದ ಸಂದರ್ಭದಲ್ಲಿ ಕಂಡುಬರುತ್ತದೆ. ಉದಾ: ಪೆರಿದು>ಪೆರಿಶು ಎಂದೆನ್ನಲಾಗುತ್ತಿದೆ."[೧೦]

ಈ ಮೇಲಿನ ನಿಯಮವು 'ತ್' ಕಾರದ ಬಳಕೆಯನ್ನು ತೆಲುಗು ಭಾಷೆಯಲ್ಲಿ 'ಶ' ಕಾರವಾಗುತ್ತಿರುವುದನ್ನು ಗಮನಿಸಬಹುದಾಗಿದೆ. ಆದರೆ ಕೆಲವೆಡೆ 'ಸ' ಕಾರವಾಗಿ ಬಳಸಲಾಗುತ್ತಿದೆ. ಉದಾ: ತರಗು ಎಂಬುದು ತೆಲುಗಿನಲ್ಲಿ ಸರ್ಗು ಎಂದು ಬಳಕೆಯಾಗುತ್ತಿದೆ.

ಜಾಲ ಭಾಗದಲ್ಲಿ **ತ್** ಕಾರಕ್ಕೆ **ಸ್** ಕಾರವನ್ನಾಗಿ ಬಳಕೆ ಮಾಡುವುದು ಒಂದು ರೀತಿಯದ್ದು ಆದರೆ **ತ್** ಕಾರಕ್ಕೆ **ಪ್** ಕಾರವನ್ನಾಗಿ ಅಘೋಷ ವ್ಯಂಜನ ಪಲ್ಲಟವಾಗುತ್ತಿರುವುದು ಮತ್ತೊಂದು ವ್ಯತ್ಯಾಸವಾಗಿ ಬಳಕೆಯಾಗುತ್ತಿದೆ.

ಮೇಲಿನ ನಿಯಮದಂತೆ **ತರಗು** ಎಂಬ ನಾಮಪದವನ್ನು ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಭಾಗವಾದ ದಾ. ಹೆ. ಯಶ ಭಾಗದ ಜನರಲ್ಲಿ **ತರ್ಗು** ಎಂದು ಸೌಲಭ್ಯಾಕಾಂಕ್ಷಿಯಾಗಿ ಬಳಸುತ್ತಿದ್ದರೆ, ಜಾಲ

ಮತ್ತು ಯಲಹಂಕ ಭಾಗಗಳಲ್ಲಿ ಪದಾರಂಭದಲ್ಲಿ **ತ್** ದಂತ್ಯ ಅಘೋಷ ವರ್ಣವು **ಸ್** ವರ್ತ್ಸ್ಯ ಧ್ವನಿಯಾಗಿ ಬಳಕೆಯಾಗುತ್ತಿದೆ. ದಾ. ಹೆ. ಯ ಭಾಗದಲ್ಲಿ ಉಚ್ಚಾರಗೊಳ್ಳುವ **ತರ್ರು** ಎಂಬ ಪದವು **ಸರ್ರು** ಆಗಿ ಬದಲಾವಣೆಗೊಂಡು ಬಳಕೆಯಲ್ಲಿದೆ. ಅಂದರೆ **ತ್** ಕಾರವು **ಸ್** ಕಾರವಾಗಿ ಬದಲಾಗಿ ಬಳಕೆಯಾಗುತ್ತಿದೆ.

ಸತ್ತೆ ಎಂಬ ಪದ ಬಳಕೆಯಲ್ಲಿ ದಾ. ಹೆ. ಯಶ ಭಾಗದಲ್ಲಿ **ಸಪ್ಪೆ** ಎಂದು ಆಡುಮಾತಿನಲ್ಲಿ ಬಳಕೆಯಾದರೆ, ಜಾಲ ಮತ್ತು ಯಲಹಂಕ ಭಾಗದಲ್ಲಿ ಘರ್ಷವರ್ಣದ ಪೂರ್ವಧ್ವನಿಯು ಸ್ಪರ್ಷ ಅಘೋಷಧ್ವನಿ **ಪ್** ಧ್ವನಿಯು ಸಜಾತೀಯ ದ್ವಿತ್ವವಾಗಿ ಬಳಕೆಯಾಗುತ್ತಿದೆ. **ಸತ್ತೆ** ಪದ ಉಚ್ಚಾರದಲ್ಲಿ ಜಾಲ ಭಾಗದಲ್ಲಿ ದಂತ್ಯ ಅಘೋಷ ಧ್ವನಿ **ತ್** ಸಜಾತೀಯ ದ್ವಿತ್ವದ ಬದಲು ಓಷ್ಠ್ಯಧ್ವನಿ **ಪ್** ಸಜಾತೀಯ ದ್ವಿತ್ವವಾಗಿ ಬಳಕೆಯಲ್ಲಿದೆ. ತೆಲುಗಿನಲ್ಲಿ **ಸಪ್ಪ** ಎಂದು ಈ ಪದವನ್ನು ಬಳಸುತ್ತಾರೆ.

ತಟ್ಟೆ ಯು ದಾ.ಹೆ.ಯಶ ಭಾಗದಲ್ಲಿ **ತಣ್ಗೆ** ಎಂದು ಬಳಕೆಯಾದರೆ ಜಾಲದಲ್ಲಿ **ಗಂಗ್ಳ** ಎಂದು ಪದಶಃ ವ್ಯತ್ಯಾಸದಿಂದ ಬಳಕೆಯಾಗುತ್ತಿದೆ. ಹಾಗೆಯೆ **ತಟ್ಟೆ** ಎಂಬ ಪದವನ್ನು ದಾ. ಹೆ. ಯಶ ಭಾಗದಲ್ಲಿ ಸ್ಪರ್ಶ ಮೂರ್ಧನ್ಯಾಕ್ಷರವು ದ್ವಿತ್ವವಾಗಿರುವುದನ್ನು ವಿಜಾತೀಯ ದ್ವಿತ್ವವಾಗಿ **ಣ್ಗೆ** ಎಂಬ ಕಂಠ್ಯವರ್ಣವಾಗಿ ಕೆಲವೆಡೆ ಬಳಕೆಯಾಗುತ್ತಿದೆ. ಆದರೆ ಜಾಲ ಭಾಗಗಳಲ್ಲಿ **ತಟ್ಟೆ** ಎಂಬುದನ್ನು ಪದಶಃ ವ್ಯತ್ಯಾಸ ಮಾಡಿ **ಗಂಗ್ಳ** ಎಂದು ಬಳಸುತ್ತಾರೆ. (ತಟ್ಟೆ>ತಣ್ಗೆ>ಗಂಗ್ಳ)

ಹೀಗೆ ಜಾಲ ಭಾಗದಲ್ಲಿ **ತ್** ಕಾರವನ್ನು ತೆಲುಗಿನ ಪ್ರಭಾವದಿಂದ ಬದಲಾಯಿಸಿ ಬಳಸುತ್ತಿದ್ದಾರೆ.

ಪ್: ಉಭಯೋಷ್ಠ, ಅಘೋಷ ಧ್ವನಿ

ಶಿಷ್ಟಪದ	**ದಾಸನಪುರ**	**ಹೆಸರಘಟ್ಟ**	**ಯಶವಂತಪುರ**	**ಯಲಹಂಕ**	**ಜಾಲ**
ಪೈರು	ಪಯ್ರು	ಪಯ್ರು	ಪಯ್ರು	ಪೈರ	ಪೈರ
ಹಾವು/ಪಾವು	ಹಾವು/ಪೀಮಿ	ಹಾವು/ಪೀಮಿ	ಹಾವು/ಪೀಮಿ	ಪಾಮಿ	ಪಾಮಿ
ಪಚ್ಚೆ	ಪಚ್ಚೆ	ಪಚ್ಚೆ	ಪಚ್ಚೆ	ಹಚ್ಚೆ	ಹಚ್ಚೆ
ಹಾಲು	ಆಲು	ಆಲು	ಆಲು	ಪಾಲು	ಪಾಲು
ಹಚ್ಚೆ	ಅಚ್ಚೆ	ಅಚ್ಚೆ	ಅಚ್ಚೆ	ಪಚ್ಚೆ	ಪಚ್ಚೆ

ಈ ಪಟ್ಟಿಯಲ್ಲಿ ಬೆಂಗಳೂರು ಗ್ರಾಮೀಣ ಭಾಗಗಳ ಜನರ ಆಡುಮಾತಿನಲ್ಲಿ ಪದಗಳಲ್ಲಿ ದಾ.ಹೆ.ಯಶ ಭಾಗಗಳಲ್ಲಿ **ಹ್** ಕಾರವು ಬಳಕೆಯಾಗುತ್ತಿದ್ದರೆ, ಜಾಲ.ಯಲ ಭಾಗದಲ್ಲಿ **ಪ್** ಕಾರವನ್ನಾಗಿ ಬಳಕೆಯನ್ನು ಮಾಡಲಾಗುತ್ತಿದೆ. ಜಾಲ ಭಾಗ ಮತ್ತು ಯಲಹಂಕ ಭಾಗಗಳಲ್ಲಿ **ಪ್** ಕಾರವು ಸೌಲಭ್ಯಕಾಂಕ್ಷೆಯಿಂದ ಪದಾರಂಭ ಮತ್ತು ಪದಾಂತ್ಯಗಳಲ್ಲಿ ವ್ಯತ್ಯಾಸವಾಗುತ್ತಿರುವುದನ್ನು ಕಾಣಬಹುದು. **ಪ್** ಕಾರದ ಬಳಕೆಯಲ್ಲಿ ಕೆಲವು ನಿಯಮಗಳು ಈ ಕೆಳಕಂಡಂತೆ ಇವೆ;

೧. "ಪ ಕಾರವು ಹ ಕಾರವಾಗಿ ಕನ್ನಡದಲ್ಲಿ ಬದಲಾವಣೆಯಾಗುತ್ತದೆ. ಈ ನಿಯಮವು ಹೊಸಗನ್ನಡಕ್ಕೆ ಸಂಬಂಧಿಸಿದಂತೆ ಅವು ಅಚ್ಚಗನ್ನಡ ದ್ರಾವಿಡ ಪದಗಳೇ ಆಗಿರಲಿ ಸಂಸ್ಕೃತ ಪದಗಳೇ ಆಗಿರಲಿ ಪದಾದಿಯ ಪ ಕಾರಕ್ಕೆ ನಿಯತವಾಗಿ ಅನ್ವಯವಾಗುತ್ತದೆ."[೧೧]

ಈ ಮೇಲಿನ ನಿಯಮದಂತೆ ಕನ್ನಡದಲ್ಲಿ ಪದಾದಿಯ ಪ್ ಧ್ವನಿಯು ಹ್ ಧ್ವನಿಯಾಗಿ ಬಳಕೆಯಾಗುತ್ತಿದೆ. ಈ ನಿಯಮವು ಬೆಂಗಳೂರು ಗ್ರಾಮೀಣ ಭಾಗವಾದ ದಾ.ಹೆ.ಯಶ ಭಾಗದಲ್ಲಿ ಅನ್ವಯವಾಗುತ್ತಿದೆ. ಅಂದರೆ ದಾ.ಹೆ.ಯಶ ಭಾಗದಲ್ಲಿ ಪದಾರಂಭದ ಪ್ ಕಾರದ ಪದಗಳು ಹ್ ಕಾರವಾಗಿ ಬಳಕೆಯಾಗುತ್ತಿವೆ. ಆದರೆ ಯಲ ಮತ್ತು ಜಾಲ ಭಾಗಗಳಲ್ಲಿ ಪ್ ಕಾರದಿಂ ಕೂಡಿದ ಪದಗಳೇ ಬಳಕೆಯಾಗುತ್ತಿವೆ. ಅವುಗಳು ಈ ಮುಂದಿನಂತಿವೆ;

ಬೆಂಗಳೂರು ಗ್ರಾಮೀಣ ಭಾಗವಾದ **ಹಾವು** ಎಂಬ ಪದವನ್ನು ದಾ.ಹೆ.ಯಶ ಭಾಗದಲ್ಲಿ **ಹ್** ಕಾರವು ಬಳಕೆಯಾಗುತ್ತಿದ್ದರೆ, ಯಲ. ಜಾಲ ದಲ್ಲಿ **ಪ್** ಕಾರವೇ ಬಳಕೆಯಾಗುತ್ತಿದೆ. ಹಳಗನ್ನಡದಲ್ಲಿ **ಪಾವು** ಎಂದು ಬಳಕೆಯಾಗಿದ್ದ ಪದವು ತೆಲುಗಿನಲ್ಲಿ **ಪಾಮು** ಎಂದೇ ಬಳಕೆಯಲ್ಲಿದೆ. ಈ ಪದವು ಹೆಚ್ಚು ಮಕ್ಕಳೊಡನೆ ಮಾತನಾಡುವಾಗ ಉಪಯೋಗವಾಗುತ್ತಿದೆ. ಹಾಗೆಯೇ ಶಿಷ್ಟಪದವಾದ **ಹಾಲು** ಎಂಬ ಪದವನ್ನು ದಾ.ಹೆ.ಯ ಭಾಗದಲ್ಲಿ ಪದಾರಂಭ **ಹ್** ಧ್ವನಿಯನ್ನು **ಆ** ಎಂದು ದೀರ್ಘಸ್ವರವಾಗಿ ಬಳಸುತ್ತಾರೆ. ಆದರೆ ಜಾಲ ಭಾಗದಲ್ಲಿ **ಪ್** ಧ್ವನಿಯನ್ನು ಬಳಸಿ **ಪಾಲು** ಎಂದಾಗಿ ಬಳಸುತ್ತಾರೆ. (ಹಾಲು>ಆಲು>ಪಾಲು) ತೆಲುಗಿನಲ್ಲಿ ಹಾಲನ್ನು **ಪಾಲು** ಎಂದು ಕರೆಯುತ್ತಾರೆ. ಶಿಷ್ಟಪದ **ಪಚ್ಚೆ** ಎಂಬುದನ್ನು ದಾ.ಹೆ.ಯಶ ಗ್ರಾಮೀಣ ಭಾಗದ ಜನರು **ಹ್** ಕಾರವನ್ನು **ಅ** ಸ್ವರವಾಗಿ ಬದಲಾಯಿಸಿಕೊಂಡು ಬಳಸುತ್ತಿದ್ದಾರೆ. ಆದರೆ ಜಾಲ ಭಾಗದಲ್ಲಿ ಪದಾರಂಭದಲ್ಲಿನ **ಹ್** ಕಾರದ ಬದಲು **ಪ್** ಕಾರವನ್ನು ಬಳಸುತ್ತಿದ್ದಾರೆ. (ಹಚ್ಚೆ>ಅಚ್ಚೆ>ಪಚ್ಚೆ) ಎಂದು ಬಳಕೆಯಾಗುತ್ತಿದೆ. **ಪೈರು** ಎಂಬುದನ್ನು ಬೆಂಗಳೂರು ಗ್ರಾಮೀಣ ಭಾಗವಾದ ದಾ(ದಾಸನಪುರ). ಹೆ(ಹೆಸರಘಟ್ಟ). ಯ(ಯಶವಂತಪುರ) ಭಾಗದ ಜನರು **ಪೈರ್** ಎಂದು ವ್ಯಂಜನಾಂತದಲ್ಲಿ, ಕೆಲವೊಮ್ಮೆ **ಪಯ್ರು** ಎಂದು **ಉ**

ಕಾರಾಂತ (ರ್/ಉ) ಬಳಸಿದರೆ, ಜಾ(ಜಾಲ) ಯಲ(ಯಲಹಂಕ) ಭಾಗದ ಜನರು **ಪೈರ/ಪಯ್ರ** ಎಂದು **ಅ** ರಾಂತವಾಗಿ ಸೌಲಭ್ಯಗೊಳಿಸಿ ಬಳಸುತ್ತಿದ್ದಾರೆ.

ಹೀಗೆ ಈ ಮೇಲಿನ ಧ್ವನಿ ವ್ಯತ್ಯಾಸವು ತೆಲುಗಿನ ಪ್ರಭಾವವು ಯಲ.ಜಾಲ.ದಲ್ಲಿ ತೀವ್ರವಾಗಿರುವುದರಿಂದ ಉಂಟಾಗಿದೆ.

೩.೧.೨.೨. ಘೋಷಗಳು

ಬೆಂಗಳೂರು ಗ್ರಾಮೀಣ ಭಾಗದಲ್ಲಿನ ಜನರ ಆಡುಮಾತಿನಲ್ಲಿ ಬಳಕೆಯಾದ ಗ್, ಜ್, ಡ್, ದ್, ಬ್, ಘೋಷಧ್ವನಿಗಳ ಬಳಕೆಯನ್ನು ಗುರುತಿಸಿ ಅವುಗಳ ಮೂಲಕ ವ್ಯತ್ಯಾಸವನ್ನು ತಿಳಿಸುತ್ತೇನೆ.

ದ್ರಾವಿಡ ಭಾಷೆಯಲ್ಲಿ ಘೋಷ ಧ್ವನಿಗಳು ಇದ್ದುವೇ? : ಕನ್ನಡ ಭಾಷೆಯ ಚರಿತ್ರೆಯನ್ನು ಗಮನಿಸಿದಾಗ ಘೋಷವು ಅಘೋಷವಾಗಿ ಹಲವು ಸಂದರ್ಭಗಳಲ್ಲಿ ಬದಲಾಗಿದೆ. ಆದರೆ ಮೂಲ ದ್ರಾವಿಡದಲ್ಲಿ ಘೋಷ ಧ್ವನಿಮಾಗಳು ಇದ್ದುವೇ? ಅಥವಾ ತದ ನಂತರದ ಬದಲಾವಣೆಯೆ, ಎಂಬುವ ಎರಡು ಚರ್ಚೆಗಳಿವೆ. ಅವುಗಳೆಂದರೆ;

೧. "ಮೂಲ ದ್ರಾವಿಡ ಭಾಷೆಯಲ್ಲಿ ಶಬ್ದಾದಿಯಲ್ಲಿ ಘೋಷ ಧ್ವನಿಮಾಗಳು ಇದ್ದುವೆ ಎಂಬ ಸಮಸ್ಯೆಯನ್ನು ರಾಬರ್ಟ್ ಕಾಲ್ಡ್‌ವೆಲ್ ರವರು ಎತ್ತಿಕೊಂಡು ಪರಿಶೀಲಿಸಿ ತಮಿಳು, ಮಲೆಯಾಳಂ, ಭಾಷೆಗಳಲ್ಲಿ ಶಬ್ದಗಳ ಆಧಾರದಿಂದ ಘೋಷ ಧ್ವನಿಮಾ ಶಬ್ದಾದಿಯ ಅಸ್ತಿತ್ವವನ್ನು ಅಲ್ಲಗೆಳೆದಿದ್ದಾರೆ."[೧೨] ಅಂದರೆ ದ್ರಾವಿಡ ಭಾಷೆಯಲ್ಲಿ ಪದಾದಿಯಲ್ಲಿ ಘೋಷ ಧ್ವನಿಯ ಬಳಕೆಯಿಲ್ಲ ಎಂದು ತಿಳಿಸಿದ್ದಾರೆ. ಇದು ಒಂದು ತೆರನಾದರೆ,

೨. "ಜೂಲ್‌ಬಾಕ್ಸ್ ರವರು ಮೂಲ ದ್ರಾವಿಡದಲ್ಲಿ ಅಘೋಷಗಳಲ್ಲದೆ ಘೋಷ ಧ್ವನಿಮಾಗಳು ಶಬ್ದಾದಿಯಲ್ಲಿ ಇದ್ದವು. ತಮಿಳಿನಲ್ಲಿ ಶಬ್ದದ ಮಧ್ಯದಲ್ಲಿದ್ದ ಘೋಷಗಳು ಅಘೋಷಗಳಾಗಿ ಮಾರ್ಪಟ್ಟಿದ್ದೂ ಇತ್ತೀಚೆಗೆ ಮಾತ್ರ ಅಂದರೆ ನನ್ನೂಲ್ ವ್ಯಾಕರಣ (ಕ್ರಿ.ಶ ೧೨೦೦)ಕಾಲದಿಂದ ಮಾತ್ರ. ಆದರೆ ಕನ್ನಡ ತೆಲುಗು ಭಾಷೆಗಳೆ ಮೂಲದ್ರಾವಿಡದ ಅಂಶಗಳನ್ನು ಉಳಿಸಿಕೊಂಡು ಬಂದವುಗಳಾಗಿವೆ ಎಂದು ಅವರ ಅಭಿಪ್ರಾಯ"[೧೩]

೩. "ಮೂಲ ದ್ರಾವಿಡದಲ್ಲಿ ಶಬ್ದಾದಿಯಲ್ಲಿ ಘೋಷಗಳು ಇಲ್ಲ. ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಶಬ್ದಾದಿಯಲ್ಲಿ ಘೋಷ ಧ್ವನಿಮಾಗಳು ಸ್ವೀಕರಣ, ವರ್ಣಪಲ್ಲಟ, ಸ್ವರಾನೂರೂಪತೆ ಮುಂತಾದ ಕೆಲವು ಪ್ರಕ್ರಿಯೆಗೆ ಬಳಗಾಗಿ ಬಂದಿರಲು ಸಾಧ್ಯವಿದೆ. ಅಂದರೆ ಪದಮದ್ಯದಲ್ಲಿರುವ ಘೋಷ ಧ್ವನಿಮಾಗಳು ಪದಾದಿಗೆ

ಸಂದಿರಬೇಕು."[೧೪] ಇದರಂತೆ ಬೆಂಗಳೂರು ಗ್ರಾಮೀಣ ಜನರಲ್ಲಿ ಆಡುಮಾತಿನಲ್ಲಿ ವ್ಯಕ್ತವಾಗುತ್ತಿರುವ ಘೋಷಗಳ ಬಳಕೆಯನ್ನು ನಾವು ಕಾಣಬಹುದು.

'ಗ್' ಕಂಠ್ಯ ಘೋಷ ಅಲ್ಪಪ್ರಾಣ

ಶಿಷ್ಟಪದ	**ದಾಸನಪುರ**	**ಹೆಸರಘಟ್ಟ**	**ಯಶವಂತಪುರ**	**ಯಲಹಂಕ**	**ಜಾಲ**
ಇಂಗು	ಇಂಗು	ಇಂಗು	ಇಂಗು	ಇಂಕು	ಇಂಕು
ಇದೀಗ	ಯೀಗ	ಯೀಗ	ಯೀಗ	ಇಂದ್ಕ	ಇಂದ್ಕ
ಬಾಗಿಲು	ಬಾಗ್ಲು	ಬಾಗ್ಲು	ಬಾಗ್ಲು	ವಾಕ್ಲು	ವಾಕ್ಲು
ಗಾಟು	ಗಾಟು	ಗಾಟು	ಗಾಟು	ಕಾಟು	ಕಾಟು
ಗಂಟು	ಗೆಣ್ಣು	ಗೆಣ್ಣು	ಗೆಣ್ಣು	ಗಂತಿ	ಗಂತಿ
ಗದ್ದಿಗೆ	ಗದ್ಗೆ	ಗದ್ಗೆ	ಗದ್ಗೆ	ಗಾದಿ	ಗಾದಿ

ಈ ಮೇಲೆ ತಿಳಿಸಿರುವ ಪಟ್ಟಿಯಲ್ಲಿ ಬೆಂಗಳೂರು ಗ್ರಾಮೀಣ ಭಾಗಗಳ ಜನರ ಆಡುಮಾತಿನಲ್ಲಿ ಪದಗಳಲ್ಲಿ ದಾ.ಹೆ.ಯಶ ಭಾಗಗಳಲ್ಲಿ ಗ್ ಘೋಷ ಧ್ವನಿಯು ಬಳಕೆಯಾಗುತ್ತಿದ್ದರೆ, ಜಾಲ.ಯಲ ಭಾಗದಲ್ಲಿ **ಕ್** ಅಘೋಷವಾಗಿ ಬಳಕೆ ಮಾಡಲಾಗುತ್ತಿದೆ. ಇದರೊಡನೆ 'ಗ' ಕಾರದ ಬಳಕೆಯೂ ಆದಿಯಲ್ಲಿಯೂ ಇದೆ. **ಗ್** ಕಾರದ ಬಳಕೆಯಲ್ಲಿ ಕೆಲವು ನಿಯಮಗಳು ಈ ಕೆಳಕಂಡಂತೆ ಇವೆ;

ಇದಕ್ಕೆ ಸಂಬಂಧಪಟ್ಟಂತೆ ಹಲವು ನಿಯಮಗಳಿವೆ. ಅವುಗಳಲ್ಲಿ ಕೆಲವು ಈ ಕೆಳಕಂಡಂತೆ ಇವೆ:

೧. ಹಿಂದಿನ ಘೋಷ ವರ್ಣಗಳ ನಿಯಮಗಳಲ್ಲಿ ತಿಳಿಸಿರುವಂತೆ ಕನ್ನಡ ಮತ್ತು ತೆಲುಗು ಭಾಷೆಯಲ್ಲಿ **ಗ್** ಘೋಷ ಧ್ವನಿಮಾಗಳಿಂದ ಆರಂಭವಾಗುವ ಪದಗಳು ಇತ್ತೀಚಿನ ಬೆಳವಣಿಗೆಯಾಗಿದೆ. ಇವು ಕನ್ನಡ ತೆಲುಗು ದ್ವಿಭಾಷಿಕ ಪರಿಸರದಲ್ಲಿ ಕಂಡುಬರುತ್ತಿವೆ. ಉದಾ: ಕನ್ನಡದ 'ಗದ್ದಿಗೆ' ತೆಲುಗಿನಲ್ಲಿ 'ಗಾದಿ(ಗದ್ದೆ)' ಎಂದು ಬಳಕೆಯಲ್ಲಿವೆ.[೧೫]

೨. ಕನ್ನಡದ **ಗ್** ಘೋಷ ಧ್ವನಿಮಾದ ಬಳಕೆಯು ಹಳೆಯದಾಗಿದ್ದರೂ ತೆಲುಗಿನಲ್ಲಿ ಏಕರೂಪತೆಯಿಲ್ಲದೆ ಭಿನ್ನತೆಯನ್ನು ಪಡೆಯುತ್ತಿದೆ. ಉದಾ: 'ಗಿಳಿ' ಎಂಬುದು ತೆಲುಗಿನಲ್ಲಿ ಚಿಲುಕ ಎಂದು ಬಳಕೆಯಿದೆ.[೧೬]

೩. ಕನ್ನಡ ತೆಲುಗು ಭಾಷೆಗಳಲ್ಲಿ ಅನೇಕ ಅಘೋಷ ಧ್ವನಿಗಳಲ್ಲಿ ಪರಸ್ಪರ ಹೊಯ್ದಾಟಗಳಿರುವುದು ಕಂಡುಬರುತ್ತದೆ. ಉದಾ: **'ಬಾಗಿಲು'** ಎಂಬುದು **'ವಾಕ್ಲು'** (ತೆಲುಗಿನಲ್ಲಿ ವಾಕಿಲ್) ಎಂದು, **'ಗಾಟು'** ಎಂಬುದು **'ಕಾಟು'** ಎಂದು ಬಳಕೆಯಾಗುತ್ತಿದೆ.[೧೭]

ನಾಮಪದವಾದ **ಗಂಟು** ಎಂಬ ಪದವು ದಾ.ಹೆ.ಯಶ ಭಾಗದಲ್ಲಿ **ಗೆಣ್ಣು** ಎಂಬುದಾಗಿ , ಜಾ. ಯಲ ಭಾಗದಲ್ಲಿ **ಗಂತಿ** ಎಂಬುದಾಗಿ ಬಳಕೆಯಾಗುತ್ತದೆ. **(ಗಂಟು>ಗೆಣ್ಣು>ಗಂತಿ)** ಬಳಸುತ್ತಾರೆ. **ಗದ್ದಿಗೆ** ಪದವು ದಾ.ಹೆ.ಯಶ ದಲ್ಲಿ ಅಂತ್ಯ ವರ್ಣ **ಗ್** ವು ದಂತ್ಯವರ್ಣ **ದ್** ಧ್ವನಿಗೆ ದ್ವಿತ್ವವಾಗಿ **ಎ** ಕಾರಾಂತವಾಗಿ ಬಳಕೆಯಾದರೆ, ಜಾಲ ಭಾಗದಲ್ಲಿ ಪದಾರಂಭದ **ಗ್** ಧ್ವನಿಯು **ಆ** ಕಾರ ದೀರ್ಘವಾಗಿ **(ಗದ್ದಿಗೆ>ಗದ್ಗೆ>ಗಾದಿ)** ಬಳಕೆಯಾಗುತ್ತಿದೆ. 'ಗದ್ದೆ' ಎಂಬುದರ ಮೂಲರೂಪ ಗಳ್ತೆ <ಕಳ್ತೆ ಎಂಬುದಾಗಿತ್ತು. ಈಗ ಆಡುಮಾತಿನಲ್ಲಿ ದ್ವಿಭಾಷಿಕ ಪರಿಸರದಲ್ಲಿ ಬದಲಾಗುತ್ತಿರು ರೂಪವನ್ನು ಗಮನಿಸಬಹುದು.

ಹಾಗೆಯೆ ಶಿಷ್ಟಪದವಾದ **ಇಂಗು** ಎಂಬ ಪದವನ್ನು ದಾ.ಹೆ.ಯಶ ಭಾಗದಲ್ಲಿ ಪದವ್ಯತ್ಯಾಸವಾಗದೆ ಶಿಷ್ಟಪದದಂತೆ ಬಳಕೆ ಮಾಡಿದರೆ, ಜಾಲ ಮತ್ತು ಯಲಹಂಕ ಭಾಗದಲ್ಲಿ ಪದಾಂತ್ಯದಲ್ಲಿ **ಗ್** ಕಾರದ ಬದಲು **ಕ್** ಕಾರವನ್ನು ಬಳಸುತ್ತಿದ್ದಾರೆ. **ಇದೀಗ** ಎಂಬ ಪದವನ್ನು ದಾ. ಹೆ. ಯಶ ಭಾಗದಲ್ಲಿ ಇ ಧ್ವನಿಯ ಮತ್ತು **ದ್** ಧ್ವನಿಯ ಬದಲು **ಯ್** ಕಾರ ಅರೆ ವ್ಯಂಜನವನ್ನು ಬಳಸಿದರೆ, ಜಾ. ಯಲ ಭಾಗದಲ್ಲಿ **ದ್** ಧ್ವನಿಗೆ **ಗ್** ಕಾರದ ಬದಲು **ಕ್** ಕಾರವನ್ನು ದ್ವಿತ್ವವನ್ನಾಗಿಸಿ ಬಳಸುತ್ತಿದ್ದಾರೆ. ಇದರೊಡನೆ **'ತ'** ಕಾರದ ಅನುನಾಸಿಕವೂ ಬಳಕೆಯಾಗಯತ್ತಿದೆ. **'ಇಂದು'** ಎಂಬುದರಲ್ಲಿ ಬಳಕೆಯಲ್ಲಿದ್ದ ಅನುನಾಸಿಕವು ಇಲ್ಲಿಯೂ ಉಳಿದುಕೊಂಡಿದೆ. (ಇದೀಗ> ಯೀಗ> ಇಂದ್ಕ). ಹಾಗೆಯೇ ಬಾಗಿಲು ಎಂಬುವ ಪದವನ್ನು ಜಾಲ ಭಾಗದ ಜನರ ಆಡುಮಾತಿನಲ್ಲಿ **ಬಾಕ್ಲು** ಎಂದಾಗಿ **ಗ್** ಕಾರದ ಬದಲು **ಕ್** ಕಾರವಾಗಿ ಬಳಕೆಯಾಗುತ್ತಿದೆ.

ಹೀಗೆ ಜಾಲ. ಯಲಹಂಕದ ಆಡುಮಾತಿನಲ್ಲಿ ಬಳಕೆಯಾಗುತ್ತಿರುವ **ಗಂತಿ, ಗಾದಿ** ಎಂಬ ನಾಮಪದಗಳು ಪದಗಳು ತೆಲುಗು ಭಾಷೆಯಲ್ಲಿನ ರೀತಿಯಲ್ಲಿಯೇ **ಗಂತು, ಗಾದಿ** ಎಂದೆ ಬಳಕೆಯಾಗುತ್ತಿವೆ. **ಗಂತು** ಪದವನ್ನು **ಇಂದ**>**ಇಂಕ,** ದಿಂದಲೂ **ಗಾಟು**>**ಕಾಟು, ಬಾಗ್ಲು**>**ಬಾಕ್ಲು, ಇಗ**>**ಇಂದ್ಕ** ಎಂಬ ಪದಬಳಕೆಯಲ್ಲಿ ಕ್ರಮವಾಗಿ ತೆಲುಗಿನ ಪ್ರಭಾವವಿರುವುದು ಜಾಲ ಭಾಗದ ಜನರ ಆಡುಮಾತಿನಲ್ಲಿ ಕಂಡುಬರುತ್ತದೆ. ಜಾಲ

ಭಾಗದಲ್ಲಿ **ಗ್** ಕಾರಕ್ಕೆ ಹೆಚ್ಚು **ಕ್** ಕಾರದ ಬಳಕೆಯನ್ನು ಬಳಕೆಯಾಗುತ್ತಿದೆ. ಅದರೊಂದಿಗೆ ಜಾಲ ಮತ್ತು ಯಲ ಭಾಗದಲ್ಲಿ **ಗ್** ಕಾರವು **ಕ್** ಕಾರವಾಗಿ ಬದಲಾಗುತ್ತಿದೆ.

'ಜ್' : ತಾಲವ್ಯ ಘೋಷ, ಅಲ್ಪಪ್ರಾಣ.

ಶಿಷ್ಟ ಪದ	**ದಾಸನಪುರ**	**ಹೆಸರಘಟ್ಟ**	**ಯಶವಂತಪುರ**	**ಜಾಲ**	**ಯಲಹಂಕ**
ಜೊಲ್ಲು	ಜಲ್ಲು	ಜಲ್ಲು	ಜಲ್ಲು	ಜೊಲ್ಲು	ಜೊಲ್ಲು
ಜೋಳಿಗೆ	ಜೋಳ್ಗೆ	ಜೋಳ್ಗೆ	ಜೋಳ್ಗೆ	ಜಾಳ್ಗೆ	ಜಾಳ್ಗೆ
ಸೋಜಿಗ	ಸೋಜ್ಗ	ಸೋಜ್ಗ	ಸೋಜ್ಗ	ಶೋದ್ಗ	ಶೋದ್ಗ
ಎಂಜಲು	ಎಂಜ್ಲು	ಎಂಜ್ಲು	ಎಂಜ್ಲು	ಎಂಗ್ಲು	ಎಂಗ್ಲು

ಈ ಮೇಲೆ ತಿಳಿಸಿರುವ ಪಟ್ಟಿಯಲ್ಲಿ ಬೆಂಗಳೂರು ಗ್ರಾಮೀಣ ಭಾಗಗಳ ಜನರ ಆಡುಮಾತಿನಲ್ಲಿ **ಜ್** ಘೋಷ ಧ್ವನಿಯು ದಾ.ಹೆ.ಯಶ ಭಾಗಗಳಲ್ಲಿ ಬಳಕೆಯಾಗುತ್ತಿದ್ದರೆ, ಜಾಲ.ಯಲಹಂಕ ಭಾಗದಲ್ಲಿ **ಜ್** ಕಾರವು **ದ್** ಕಾರವಾಗಿ ಕೆಲವು ಪದಗಳಲ್ಲಿ **ಗ್** ಧ್ವನಿಯಾಗುತ್ತಿದೆ. **ಜ್** ಕಾರದ ಬಳಕೆಯಲ್ಲಿ ಕೆಲವು ನಿಯಮಗಳು ಈ ಕೆಳಕಂಡಂತೆ ಇವೆ;

೧. "ಚ, ಶ ಮತ್ತು ಜ ಬೇರೆ ಬೇರೆಯಾಗಿ ಕಾಣುವುದಾದರೂ ದ್ರಾವಿಡದಲ್ಲಿ ಅವು ಒಂದೇ ಆಗಿವೆ."[೧೮]

೨. "ಮೂಲ ದ್ರಾವಿಡದಲ್ಲಿ ಶಬ್ದಾದಿಯಲ್ಲಿ ಘೋಷಗಳು ಇಲ್ಲ. ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಶಬ್ದಾದಿಯಲ್ಲಿ ಘೋಷ ಧ್ವನಿಮಾಗಳು ಸ್ವೀಕರಣ, ವರ್ಣಪಲ್ಲಟ, ಸ್ವರಾನೂರೂಪತೆ ಮುಂತಾದ ಕೆಲವು ಪ್ರಕ್ರಿಯೆಗೆ ಬಳಗಾಗಿ ಬಂದಿರಲು ಸಾಧ್ಯವಿದೆ."[೧೯]

ಈ ಮೇಲಿನ ನಿಯಮದಂತೆ ಜ್ ಕಾರವು ಕನ್ನಡ ಮತ್ತು ತೆಲುಗು ಭಾಷೆಯಲ್ಲಿ ಬದಲಾವಣೆಗೆ ಒಳಗಾಗುತ್ತಿದೆ. ಉದಾ: ಬೆಂಗಳೂರಿನ ಗ್ರಾಮೀಣ ಜನರಲ್ಲಿ ಬಳಕೆಯಾಗುವ **ಜೊಲ್ಲು** ಎಂಬ ಪದವು ದಾ.ಹೆ.ಯ ಭಾಗದಲ್ಲಿ **ಜ್** ಧ್ವನಿಯು **ಲ್** ವಾಗಿ ಬಳಕೆಯಾಗುತ್ತಿದೆ. ಆದರೆ ಜಾಲದಲ್ಲಿ **ಜ** ಧ್ವನಿಯು **ಒ** ಸ್ವರದೊಡನೆ ಬಳಕೆಯಾಗುತ್ತಿದೆ. **(ಜಲ್ಲು>ಜೊಲ್ಲು)** **ಜೋಳಿಗೆ** ಪದದಲ್ಲಿ **ಜ್** ವು **ಓ** ಕಾರವಾಗಿ

ಬಳಕೆಯಾದರೆ, ಜಾ. ಯಲ ಭಾಗದಲ್ಲಿ **ಓ** ಕಾರವು **ಆ** ಕಾರವಾಗಿ **(ಜೋಳ್ಗೆ>ಜಾಳ್ಗೆ)** ಬಳಕೆಯಾಗುತ್ತಿದೆ. ತೆಲುಗು ಭಾಷೆಯ **ಜೊಲ್ಲು** ಮತ್ತು **ಜಾಳಿಗೆ** ಪದಗಳನ್ನು ಜಾ. ಯಲ ಭಾಗದಲ್ಲಿ **ಜೊಲ್ಲು, ಜಾಳ್ಗೆ** ಯಾಗಿ ಬಳಸಲಾಗುತ್ತಿದೆ. ಇಲ್ಲಿ 'ಜ' ಧ್ವನಿಗೆ ಸೇರುವ ಸ್ವರದಲ್ಲಿ ವ್ಯತ್ಯಾಸವಾಗುತ್ತಿದೆ. ಇದಕ್ಕೆ ಪದ ಬಳಕೆಯ ಪರಿಸರವನ್ನು ಗಮನಿಸಬೇಕಾಗುತ್ತದೆ. **ಜ್** ಕಾರವು **ದ್** ಕಾರವಾಗಿ ಮತ್ತು **ಜ್** ಕಾರವು **ಗ್** ಕಾರವಾಗಿಯು ಬಳಕೆಯಾಗುವವು. ತೆಲುಗಿನಲ್ಲಿ **ಎಂಗಲು** ಮತ್ತು **ಶೊದ್ಗ** ಪದಗಳು ಬಳಕೆಯಲ್ಲಿವೆ. ತೆಲುಗಿನವರ ಸಂಪರ್ಕ ಹೊಂದಿದ್ದ ಜಾಲ ಭಾಗದ ಜನರಲ್ಲಿ **ಶೋದ್ಗ** ಪದ ಬಳಕೆಯಾಗುತ್ತಿದೆ. ಹೀಗೆ **ಜ್** ಕಾರವು **ಶ್** ಕಾರವಾಗಿ ಬಳಕೆಯಾಗುತ್ತಿದೆ.

ಡ್ :ಮೂರ್ಧನ್ಯ ಘೋಷ ಸ್ಪರ್ಶಧ್ವನಿ

ಶಿಷ್ಟಪದ	**ದಾಸನಪುರ**	**ಹೆಸರಘಟ್ಟ**	**ಯಶವಂತಪುರ**	**ಯಲಹಂಕ**	**ಜಾಲ**
ಡಾಂಬರು	ಟಾರು	ಟಾರು	ಟಾರು	ಡಾರು	ಡಾರು
ಡಾಬು	ಡಾಬು	ಡಾಬು	ಡಾಬು	ದಾಬು	ದಾಬು
ಇಡ್ಡಲಿ	ಇಡ್ಲಿ	ಇಡ್ಲಿ	ಇಡ್ಲಿ	ಇದ್ಲಿ	ಇದ್ಲಿ

ಈ ಮೇಲೆ ತಿಳಿಸಿರುವಂತೆ ಬೆಂಗಳೂರು ಗ್ರಾಮೀಣ ಭಾಗಗಳ ಜನರ ಆಡುಮಾತಿನಲ್ಲಿ ಪದಗಳಲ್ಲಿ ದಾ.ಹೆ.ಯಶ ಭಾಗಗಳಲ್ಲಿ **ಡ್** ಘೋಷ ಧ್ವನಿಯು **ಟ್** ಧ್ವನಿಯಾಗಿ ಬಳಕೆಯಾಗುತ್ತಿದ್ದರೆ, ಜಾಲ.ಯಲ ಭಾಗದಲ್ಲಿ **ಡ್** ಧ್ವನಿಯೇ ಬಳಕೆಯಲ್ಲಿದೆ. ಇದು ಒಂದು ರೀತಿಯದಾದರೆ, ದಾ.ಹೆ.ಯಶ ಭಾಗದಲ್ಲಿ ಬಳಕೆಯಾಗುವ 'ಡ್' ಘೋಷವರ್ಣವು ಜಾಲ ಮತ್ತು ಯಲಭಾಗದಲ್ಲಿ **'ದ್'** ಧ್ವನಿಯಾಗಿ ಬಳಕೆ ಮಾಡಲಾಗುತ್ತಿದೆ. ಬೆಂಗಳೂರು ಗ್ರಾಮೀಣ ಜನರಲ್ಲಿನ **ಡ್** ಕಾರದ ಧ್ವನಿ ಬಳಕೆಯಲ್ಲಿ ಕೆಲವು ಲಕ್ಷಣಗಳು ಈ ಕೆಳಕಂಡಂತೆ ಇವೆ:

೧. ಕನ್ನಡದಲ್ಲಿ ಕೆಲವು ಪದಗಳಲ್ಲಿ ಘೋಷಗಳು ಅಘೋಷವಾಗುವುದು. ತೆಲುಗಿನಲ್ಲಿ ಕೆಲವು ಘೋಷಧ್ವನಿಗಳು ಆರಂಭದಲ್ಲಿ ಬಳಕೆಯಾಗುತ್ತವೆ. ಅದೇ ರೀತಿಯಲ್ಲಿ ಕನ್ನಡ ಮತ್ತು ತೆಲುಗಿನ ಲಕ್ಷಣಕ್ಕೆ ತಕ್ಕಂತೆ ಯಲಹಂಕ ಮತ್ತು ಜಾಲ ಭಾಗದಲ್ಲಿ ಬದಲಾಗುತ್ತಿವೆ. ಉದಾ: 'ಟಾರು' ಎಂಬ ಪದವು 'ಡಾರು' ಎಂದು ಜಾಲ.ಯಲ. ಭಾಗದಲ್ಲಿ ಬಳಕೆಯಾಗುತ್ತಿದೆ.

೨. ಮೂರ್ಧನ್ಯ ಘೋಷ ಧ್ವನಿಗಳನ್ನು ದಂತ್ಯವಾಗಿ ಬಳಸಲಾಗುತ್ತಿದೆ.

ಉದಾ: ಡಾಬು > ದಾಬು, ಇಡ್ಲಿ > ಇದ್ಲಿ ಎಂದು ಬಳಕೆಯಾಗುತ್ತಿದೆ.

ಈ ಮೇಲಿನ ನಿಯಮಗಳಂತೆ ಬೆಂಗಳೂರು ಗ್ರಾಮೀಣ ಜನರಲ್ಲಿ **ಡಾಂಬರು** ಎಂಬುದು ದಾ.ಹೆ.ಯಶ. ಭಾಗದಲ್ಲಿ ಮಧ್ಯ ವರ್ಣ **ಬ್** ವು ಲೋಪವಾಗಿ ಹಿಂದಿನ **ಡ್** ಧ್ವನಿಯ ಬದಲು **ಟ್** ಧ್ವನಿಯು ಬಳಕೆಯಾದರೆ, ಜಾ. ಯಲ ಭಾಗದಲ್ಲಿ **ಟ್** ಕಾರದ ಬದಲು **ಡ್** ಕಾರವು ಬಳಕೆಯಾಗುವುದು. **ಡಾಬು** ಎಂಬ ಪದವು ಜಾಲ. ಯಲಹಂಕ ಭಾಗದಲ್ಲಿ **ದ್** ದಂತ್ಯ ಘೋಷವರ್ಣವಾಗಿ ಬಳಕೆಯಾಗುತ್ತಿದೆ. (ಡಾಂಬರು > ಡಾರು > ಡಾರು) ಎಂದು ಭಿನ್ನವಾಗಿ ಬಳಕೆಯಾಗುತ್ತಿದೆ.

ಡಾಬು ಪದವನ್ನು ದಾ.ಹೆ.ಯಶ ದಲ್ಲಿ **ಡಾಬು** ಎಂದು ಯಾವುದೇ ವ್ಯತ್ಯಾಸವನ್ನು ಮಾಡದೆ ಬಳಸುತ್ತಿದ್ದಾರೆ. ಆದರೆ ಜಾಲ ಭಾಗದಲ್ಲಿ **ಡ್** ಮೂರ್ಧನ್ಯದ ಬದಲು **ದ್** ದಂತ್ಯ ವರ್ಣವು **(ಡಾಬು>ದಾಬು)** ಬಳಕೆಯಾಗುತ್ತಿದೆ. ತೆಲುಗು ಭಾಷೆಯ **ಡಾಮರು** ಜಾ. ಯಲ. ಭಾಗದಲ್ಲಿ **ಡಾರು** ಎಂದು ಅನುನಾಸಿಕ ಧ್ವನಿ ಲೋಪವಾಗಿ **(ಡಾಮರು>ಡಾರು)** ಬಳಕೆಯಾಗುತ್ತಿದೆ. ಮತ್ತು **ದಾಬು** ಎಂಬ ತೆಲುಗು ಪದವು ಜಾಲ ಜನರ ಆಡುಮಾತಿನಲ್ಲಿ **ದಾಬು** ಎಂದೇ ಬಳಕೆಯಾಗುತ್ತಿದೆ. ದಾಸನಪುರ ಭಾಗದಲ್ಲಿ ಬಳಕೆಯಾಗುತ್ತಿರುವ **ಇಡ್ಲಿ** ಎಂಬ ಪದವನ್ನು ಜಾಲ ಭಾಗದಲ್ಲಿ **ಇದ್ಲಿ** ಯಾಗಿ ಬದಲಾಯಿಸಿ ಬಳಸುತ್ತಿದ್ದಾರೆ. ಜಾಲ ಭಾಗದಲ್ಲಿ **ಡ್** ಕಾರದ ಬದಲು **ದ್** ಧ್ವನಿಯನ್ನು ಬಳಸುತ್ತಿದ್ದಾರೆ. ತೆಲುಗು ಭಾಷೆಯಲ್ಲಿ ಇಡ್ಲಿಯನ್ನು **ಇದ್ದೇನ** ಎಂದು ಬಳಸುತ್ತಿದ್ದಾರೆ. ಆ ಪದ ಪ್ರಭಾವದಿಂದ ಜಾಲ ಭಾಗದಲ್ಲಿ **ಇದ್ಲಿ** ಎಂದಾಗಿ ಬಳಕೆಯಾಗುತ್ತಿದೆ. ಈ ವ್ಯತ್ಯಾಸದ ಮೂಲಕ ಜಾಲ ಮತ್ತು ಯಲಹಂಕದ ಮೇಲೆ ತೆಲುಗು ಪ್ರಭಾವವಾಗುತ್ತಿರುವುದು ಸೂಚಿಸುತ್ತದೆ. ಆದರೆ ಅದು ಪ್ರಭಾವವಷ್ಟೇ ಅಲ್ಲದೆ, ಕೆಲವು ಬದಲವಣೆಗಳಿಗೂ ಕಾರಣವಾಗುತ್ತಿದೆ. ತೆಲುಗಿನ ಇದ್ದೇನ ಎಂಬುದು ಜಾ.ಯಶ. ಭಾಗದಲ್ಲಿ ಇದ್ಲಿ ಎಂಬುದಾಗಿ ಇರುವುದು, ಇತ್ತ ತೆಲುಗೂ ಅಲ್ಲದ, ಅತ್ತ ಕನ್ನಡವೂ ಅಲ್ಲದ ಸ್ವರೂಪವಾಗಿದೆ. ಕನ್ನಡದ ಇಡ್ಲಿ, ತೆಲುಗಿನ ಇದ್ದೇನ ಯಶ.ಜಾ.ದಲ್ಲಿ ಇದ್ಲಿ ಎಂಬುದಾಗಿ ಹೊಸ ಪದದಂತೆ ಕೇಳಿಸುತ್ತಿದೆ.

ಇದು ಭಾಷೆಯಲ್ಲಿನ ಧ್ವನಿ ವ್ಯತ್ಯಾಸವಾಗುತ್ತಿರುವುದರಲ್ಲಿ ಮುಖ್ಯವಾದ ಸಂಗತಿಯಾಗಿದೆ.

‘ದ್’ : ದಂತ್ಯ ಘೋಷಧ್ವನಿ

ಶಿಷ್ಟಪದ	**ದಾಸನಪುರ**	**ಹೆಸರಘಟ್ಟ**	**ಯಶವಂತಪುರ**	**ಜಾಲ**	**ಯಲಹಂಕ**
ಕೂದಲು	ಕೂದ್ಲು	ಕೂದ್ಲು	ಕೂದ್ಲು	ಕೂರ್ಲು	ಕೂರ್ಲು
ದೋಟಿ	ದೋಟಿ	ದೋಟಿ	ದೋಟಿ	ರೋಟಿ	ರೋಟಿ
ಮುದುಕಿ	ಮುದ್ಕಿ	ಮುದ್ಕಿ	ಮುದ್ಕಿ	ಮುಶ್ಲಿ	ಮುಶ್ಲಿ
ದಾರಿ	ದಾರಿ	ದಾರಿ	ದಾರಿ	ಟಾವು	ಟಾವು
ಆರಿದ್ರಾ	ಆದ್ರಿ	ಆದ್ರಿ	ಆದ್ರಿ	ಆಜ್ರಿ	ಆಜ್ರಿ

ದ್ ಕಾರದ ಧ್ವನಿ ಬಳಕೆಯಲ್ಲಿ ಕೆಲವು ನಿಯಮಗಳು ಈ ಕೆಳಕಂಡಂತೆ ಇದೆ:

“ತ ಅಥವಾ ಘೋಷವರ್ಣ ‘ದ’ ಕಾರವು ಎರಡು ಸ್ವರಾಕ್ಷರಗಳ ಮಧ್ಯೆ ಬಂದಾಗ ತಮಿಳು ಮತ್ತು ತೆಲುಗಿನಲ್ಲಿ ‘ರ’ ಕಾರವಾಗುತ್ತದೆ. ‘ದ್’ ಕಾರವು ‘ರ’ ಕಾರವಾಗುವ ಈ ಪ್ರಕ್ರಿಯೆಯು ಬಹುಶಃ ಅದು (ಎಂದರೆ ‘ರ’ ಕಾರವೂ) ದಂತ್ಯವರ್ಣದಂತೆಯೇ ಉಚ್ಚಾರಣೆಯಾಗುವುದು ಹಾಗೂ ‘ದ’ ಕಾರದ ಉಚ್ಚಾರಣೆಯನ್ನು ಹೋಲುವುದೇ ಆಗಿರುವುದೆನಿಸುತ್ತದೆ.**”**[೨೦]

ಈ ಮೇಲೆ ತಿಳಿಸಿರುವಂತೆ ಬೆಂಗಳೂರು ಗ್ರಾಮೀಣ ಭಾಗಗಳ ಜನರ ಆಡುಮಾತಿನಲ್ಲಿ ಪದಗಳಲ್ಲಿ ದಾ.ಹೆ.ಯಶ ಭಾಗಗಳಲ್ಲಿ **ದ್** ಘೋಷ ಧ್ವನಿಯು ಬಳಕೆಯಾಗುತ್ತಿದ್ದರೆ, ಜಾಲ.ಯಲ ಭಾಗದಲ್ಲಿ **ರ್** ಧ್ವನಿ ಬಳಕೆಯಲ್ಲಿದೆ. ಇದು ಒಂದು ರೀತಿಯದಾದರೆ, ದಾ.ಹೆ.ಯಶ ಭಾಗದಲ್ಲಿ ಬಳಕೆಯಾಗುವ **‘ದ್’** ಘೋಷವರ್ಣವು ಜಾಲ ಮತ್ತು ಯಲ ಭಾಗದಲ್ಲಿ **‘ಜ್’** ಧ್ವನಿಯ ಬಳಕೆಯಾಗುತ್ತಿದೆ.

ಬೆಂಗಳೂರು ಗ್ರಾಮೀಣ ಭಾಗದಲ್ಲಿ ಜನರಲ್ಲಿ ಬಳಕೆಯಾಗುತ್ತಿರುವ **ಕೂದಲು** ಎಂಬ ಪದವನ್ನು ದಾ. ಹೆ. ಯಶ. ಭಾಗದಲ್ಲಿ ಅಂತ್ಯವರ್ಣ **ಲ್** ವರ್ತ್ಸ್ಯಪಾರ್ಶ್ವಿಕ ಧ್ವನಿಯು ದಂತ್ಯವರ್ಣದ ದ್ವಿತ್ವವಾಗಿ ಬಳಕೆಯಾದರೆ,

ಜಾ. ಯಲ ಭಾಗದಲ್ಲಿ ವರ್ತ್ಸ್ಯತಾಡಿತ ವರ್ಣ **ರ್** ಧ್ವನಿಗೆ **ಲ್** ವರ್ತ್ಸ್ಯ ಪಾರ್ಶ್ವಿಕ ಧ್ವನಿಯು ಬಳಕೆಯಾಗುತ್ತಿದೆ. (ಕೂದಲು>ಕೂದ್ಲು>ಕೂರ್ಲು) **ದೋಟಿ** ಪದವು ದಾ. ಹೆ. ಯಶ ಭಾಗದಲ್ಲಿ ಯಾವುದೇ ವ್ಯತ್ಯಾಸವಿಲ್ಲದೆ ಬಳಕೆಯಾಗುತ್ತಿದೆ. ಆದರೆ ಜಾಲ ಭಾಗದಲ್ಲಿ **ದ್** ತಾಡಿತ ವರ್ಣ**ರ್** ಕಾರವಾಗಿ ಬಳಸುತ್ತಾರೆ. ಜಾಲ ಮತ್ತು ಯಲಹಂಕ ಭಾಗದಲ್ಲಿ **ರೋಟಿ** ಎಂದು ಬದಲಾಯಿಸಿ ಬಳಕೆಯಾಗುತ್ತಿದೆ. (ದೋಟಿ>ರೋಟಿ)

ಮುದುಕಿ ಪದವು ದಾ. ಹೆ. ಯಶ. ಭಾಗದಲ್ಲಿ **'**ಮುದ್ಕಿ**'** ಎಂದು ಸಂಕ್ಷಿಪ್ತವಾಗಿ ಬಳಕೆಯಾಗುತ್ತಿದೆ. ಆದರೆ ಜಾಲಮತ್ತು ಯಲಹಂಕದ ಪೂರ್ವ ಗ್ರಾಮೀಣ ಭಾಗಗಳಲ್ಲಿ **ಮುಶ್ಲಿ** ಎಂದು ಬಳಸುತ್ತಿದ್ದಾರೆ. ದಾಸನಪುರದಲ್ಲಿ ಬಳಕೆಯಾಗುವ **ದ್** ವರ್ಣದ ಬದಲು ಜಾಲ ಭಾಗದಲ್ಲಿ **ಶ್** ತಾಲವ್ಯ ಧ್ವನಿಯು ಬಳಕೆಯಾಗುತ್ತಿದೆ. ಹಾಗೆಯೇ **ದಾರಿ** ಪದವು ದಾ. ಹೆ. ಯಶ ಭಾಗದಲ್ಲಿ ಯಾವುದೇ ವ್ಯತ್ಯಾಸವುಂಟಾಗದೇ ಬಳಕೆಯಾಗುತ್ತಿದ್ದರೆ**,** ಜಾಲ ಭಾಗದಲ್ಲಿ **ಟಾವು** ಎಂದು ಪದಶಃ ಬದಲಾಗಿ ಬಳಕೆಯಾಗುತ್ತಿದೆ.

ಇಲ್ಲಿ ಕಂಡುಬರುವ ಮುಖ್ಯವಾದ ಅಂಶವೆಂದರೆ: ದ್>ರ್**,** ದ್>ಶ್**,** ದ್>ಜ್ **–** ಹೀಗೆ ಭಿನ್ನ ಬಗೆಯಲ್ಲಿ ಬಳಕೆಯಲ್ಲಿರುವುದಾಗಿದೆ. ದ್ ಮತ್ತು ರ್, ಶ್, ಜ್ ಇವುಗಳ ಉಚ್ಚಾರಣೆಯ ಸ್ಥಾನಗಳು ಸೂಕ್ಷ್ಮವಾಗಿ ಹತ್ತಿರವಿರುವುದು ಈ ವ್ಯತ್ಯಾಸಕ್ಕೆ ಕಾರಣವಾಗಿರಬಹುದು ಎನ್ನಿಸುತ್ತದೆ. ಈ ನಿಟ್ಟಿನಲ್ಲಿ ಕಾಲ್ಡ್ ವೆಲ್ ಅವರ ಅಭಿಪ್ರಾಯವೇ ಸೂಕ್ತವಾಗಿದೆ ಎಂದು ಹೇಳಬಹುದು. ಜಾಲ ಮತ್ತು ಯಶ. ಭಾಗಗಳು ಈ ವ್ಯತ್ಯಾಸವನ್ನು ಮತ್ತಷ್ಟು ಬೆಳೆಸಿವೆ. ಆಡುಮಾತಿನಲ್ಲಿ ಹಲವು ಬಗೆಯ ವೈಪರಿತ್ಯಗಳು ಕಂಡುಬರುವುದು ಇಲ್ಲಿ ತೋರುತ್ತದೆ.

ಬ್ : ಉಭಯೋಷ್ಠ, ಘೋಷ ಧ್ವನಿ

ಶಿಷ್ಟಪದ	**ದಾಸನಪುರ**	**ಹೆಸರಘಟ್ಟ**	**ಯಶವಂತಪುರ**	**ಯಲಹಂಕ**	**ಜಾಲ**
ಕೊಬ್ಬರಿ	ಕೊಬ್ರಿ	ಕೊಬ್ರಿ	ಕೊಬ್ರಿ	ಕೊಪ್ರಿ	ಕೊಪ್ರಿ
ತೂಬು	ತೂಬು	ತೂಬು	ತೂಬು	ತೂಮು	ತೂಮು
ತಬಟೆ	ತಬ್ಟೆ	ತಬ್ಟೆ	ತಬ್ಟೆ	ತಮ್ಟೆ	ತಮ್ಟೆ
ನಂಬಿಕೆ	ನಂಬ್ಕೆ	ನಂಬ್ಕೆ	ನಂಬ್ಕೆ	ನೆಮ್ಕೆ	ನೆಮ್ಕೆ

ಬೆಂಗಳೂರು ಗ್ರಾಮೀಣ ಭಾಗಗಳಾದ ದಾ.ಹೆ.ಯಶ ಭಾಗಗಳಲ್ಲಿ **'ಬ್'** ಘೋಷ ಧ್ವನಿಯಾಗಿ ಬಳಕೆಯಾಗುತ್ತಿದ್ದರೆ, ಜಾಲ.ಯಲ. ಭಾಗದಲ್ಲಿ **'ಪ್'** ಅಘೋಷ ಧ್ವನಿಯಾಗಿ ಬಳಕೆಯಲ್ಲಿದೆ. ಇದು ಒಂದು ರೀತಿಯದಾದರೆ, ದಾ.ಹೆ.ಯಶ ಭಾಗದಲ್ಲಿ ಬಳಕೆಯಾಗುವ 'ಬ್' ಘೋಷವರ್ಣವು ಜಾಲ ಮತ್ತು ಯಲ. ಭಾಗದಲ್ಲಿ **'ಮ್'** ಅನುನಾಸಿಕ ಧ್ವನಿಯ ಬಳಕೆ ಮಾಡಲಾಗುತ್ತಿದೆ. 'ಬ' ಕಾರದ ಉಚ್ಚಾರಣೆಗೆ ಸಂಬಂಧಿಸಿದಂತೆ ತೆಲುಗು ಭಾಷೆಯ ಕೆಲವು ನಿಯಮಗಳು ಈ ಕೆಳಕಂಡಂತೆ ಇವೆ:

೧. "'ಪ' ಕಾರದ ಘೋಷವರ್ಣವಾದ 'ಬ' ಕಾರವು ಕೆಲವೊಮ್ಮೆ 'ಮ' ಕಾರವಾಗುವುದು. ಉದಾ: 'ಪದಿ' ಎಂಬ ಪ್ರತ್ಯಯವು 'ಮಿದಿ'ಯಾಗಿ 'ತೊಮ್ಮಿದಿ' ಎಂಬ ಸಂಯುಕ್ತ ಪದದಲ್ಲಿ ಪಲ್ಲಟವಾಗುವುದು."[೨೧]

೨. ಘೋಷವು ಅಘೋಷವಾಗುವುದು. ಉದಾ: ಕೊಬ್ಬರಿ>ಕೊಪ್ರಿ ಎಂದಾಗುವುದು.

ಈ ಮೇಲಿನ ನಿಯಮದಂತೆ ಜಾಲ ಮತ್ತು ಯಲ ಭಾಗದಲ್ಲಿ 'ಬ್' ಕಾರವು 'ಪ್' ಕಾರವಾಗುತ್ತಿದೆ. ಮತ್ತು 'ಬ್' ಕಾರವು 'ಮ್' ಅನುನಾಸಿಕವಾಗಿ ಬಳಕೆಯಾಗುತ್ತಿದೆ.

ಕೊಬ್ಬರಿ ಎಂಬುದು ದಾ. ಹೆ. ಯಶ ಭಾಗದಲ್ಲಿ ಅಂತ್ಯವರ್ಣ **ಬ್** ಕಾರಕ್ಕೆ **ರ್** ಕಾರವು ದ್ವಿತ್ವವಾಗಿ ಬಳಕೆಯಾದರೆ (ಬ್ರಿ), ಜಾಲ ಭಾಗಗಳಲ್ಲಿ **ಪ್** ಕಾರವಾಗಿ (ಪ್ರಿ) ಬಳಕೆಯಾಗುತ್ತಿದೆ. ದಾಸನಪುರದಲ್ಲಿ ಬಳಕೆಯಾಗುವ **ಬ್** ಕಾರವು ಜಾಲ ಮತ್ತು ಯಲಹಂಕ ಭಾಗದಲ್ಲಿ **ಪ್** ಕಾರವಾಗಿ ಬಳಕೆಯಾಗುವುದು. ಕೊಬ್ಬರಿ ಎಂಬುದನ್ನು ತೆಲುಗಿನಲ್ಲಿ **ಕೊಪ್ಪೆರ** ಎಂದೆ ಕರೆಯುತ್ತಾರೆ. ಜಾಲ ಭಾಗದಲ್ಲಿ ತೆಲುಗು ಪ್ರಭಾವ ಇರುವುದರಿಂದ ಜಾಲ ಭಾಗದ ಜನರಲ್ಲಿ ಕೊಪ್ರಿಯಾಗಿ ಪದ ಬಳಕೆಯಾಗುತ್ತಿದೆ. **ತೂಬು** ಮತ್ತು **ತಬಟೆ** ಎಂಬ ಪದಗಳ ಬಳಕೆಯಲ್ಲಿ ದಾ. ಹೆ. ಯಶ ಭಾಗಗಳಲ್ಲಿ **ಬ್** ಧ್ವನಿಗೆ **ಟ್** ಧ್ವನಿಯು ದ್ವಿತ್ವವಾಗಿ (ಬ್ಟೆ) ಬಳಕೆಯಾದರೆ, ಜಾಲ ಭಾಗಗಳಲ್ಲಿ 'ಪ್' ಧ್ವನಿ ವರ್ಗದ ಅನುನಾಸಿಕ **ಮ್** ಧ್ವನಿಯು ಬಳಕೆಯಾಗುತ್ತಿದೆ. ಇಲ್ಲಿ ದಾಸನಪುರಾದಿ ಭಾಗಗಳಲ್ಲಿ ಬಳಕೆಯಾದ 'ಬ್' ಕಾರವನ್ನು ಜಾಲ ಮತ್ತು ಯಲಹಂಕ ಭಾಗಗಳಲ್ಲಿ ಮ್ ಕಾರವಾಗಿ ಬಳಕೆಯಾಗುತ್ತಿದೆ. ತೆಲುಗಿನ **ತೂಮು** ಮತ್ತು **ತಮ್ಮೆಟ**ಎಂಬ ತೆಲುಗು ಪದಗಳ ಪ್ರಭಾವದಿಂದ ಈ ಪದದ ಬಳಕೆಯು ಜಾಲ ಭಾಗದಲ್ಲಿ ಬಳಕೆಯಾಗುತ್ತಿದೆ. **ಬ್** ಕಾರವು ಅನುನಾಸಿಕ **ಮ್** ಕಾರವಾಗಿ ಬಳಕೆಯಾಗುತ್ತದೆ.

ಹಾಗೆಯೆ 'ನಂಬಿಕೆ' ಎಂಬ ಪದವನ್ನು ದಾ. ಹೆ. ಯಶ ಭಾಗದಲ್ಲಿ 'ನಂಬ್ಕೆ' ಎಂಬುದಾಗಿ ಸಂಕ್ಷಿಪ್ತವಾಗಿ ಬಳಕೆಯಾದರೆ, ಜಾಲ ಭಾಗದಲ್ಲಿ 'ಬ್' ಕಾರದಬದಲು'ಮ್' ಅನುನಾಸಿಕ ಧ್ವನಿಯನ್ನು ಬಳಕೆ ಮಾಡುತ್ತಿದ್ದಾರೆ. ನಂಬಿಕೆ ಎಂಬ ಪದವು ತೆಲುಗಿನಲ್ಲಿ **ನೆಮ್ಮಿಕಾ/ನಮ್ಮಿಕ** ಎಂಬುದಾಗಿ ಬಳಕೆಯಲ್ಲಿದೆ. ಈ ಧ್ವನಿಯುಕ್ತ

ಪದದಿಂದ ಜಾಲ ಭಾಗದ ಜನರ ಆಡುಮಾತಿನಲ್ಲಿ **ನೆಮ್ಕೆ** ಎಂದು **ಮ್** ಕಾರಯುಕ್ತ ಧ್ವನಿಯಾಗಿ ಬಳಕೆಯಾಗುತ್ತಿದೆ. ಬೆಂಗಳೂರಿನ ಗ್ರಾಮೀಣ ಭಾಗವಾದ ಜಾಲ ಮತ್ತು ಯಲಹಂಕ ಪೂರ್ವ ಭಾಗದ ಜನರಲ್ಲಿ **ಬ್** ಕಾರವು **ಮ್** ಕಾರವಾಗಿ, **ಬ್** ಕಾರವು **ಪ್** ಕಾರವಾಗಿ ವ್ಯತ್ಯಾಸಗಳು ಉಂಟಾಗುತ್ತಿವೆ.

ಈ ರೀತಿಯಲ್ಲಿ ಬೆಂಗಳೂರು ಗ್ರಾಮೀಣ ಭಾಗಗಳಾದ ಜಾಲ ಮತ್ತು ಯಲಹಂಕ ಭಾಗದಲ್ಲಿ ಬಳಕೆಯಾಗುವ ಘೋಷ ಧ್ವನಿಗಳ ಮೇಲೆ ಆಗುತ್ತಿರುವ ತೆಲುಗು ಭಾಷೆಯ ಪ್ರಭಾವವನ್ನು ಕಾಣಬಹುದಾಗಿದೆ. ಗಮನಿಸಬೇಕಾದ ಅಂಶವೆಂದರೆ: ದಂತ್ಯ ಘೋಷ ವರ್ಣವು, ಇದೇ ವರ್ಗದ ಬೇರೆ ಬೇರೆ ಧ್ವನಿಗಳಾಗಿ ಬಳಕೆಯಾಗುವುದು. ಪ, ಬ, ಮ– ಈ ಧ್ವನಿಗಳಲ್ಲಿಯೇ ಪಲ್ಲಟಗಳು ಆಗುತ್ತಿವೆ.

೫.೧.೩ ಅನುನಾಸಿಕಗಳು

ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಭಾಗದ ಜನರ ಆಡುನುಡಿಯಲ್ಲಿ ಬಳಕೆಯಾಗುತ್ತಿರುವ ನ್, ಮ್ ಅನುನಾಸಿಕ ಧ್ವನಿಯ ಬಳಕೆಯ ಬಗೆಯನ್ನು ಗುರುತಿಸಿ, ಅವುಗಳಲ್ಲಿನ ಬದಲಾವಣೆಯ ಸ್ವರೂಪವನ್ನು ಅರಿಯಲು ಪ್ರಯತ್ನಿಸಲಾಗಿದೆ. ಅನುನಾಸಿಕದ ಕೆಲವು ನಿಯಮಗಳು ಇಂತಿವೆ:

೧. "ಅನುನಾಸಿಕವು ಪ್ರತ್ಯಯಾಂತ ಪದದ ಮೊದಲ ವ್ಯಂಜನವನ್ನು ಅನುಸರಿಸಿ ರೂಪಾಂತರಗೊಳ್ಳುತ್ತದೆ. ಅದು 'ಕ' ಅಥವಾ 'ಗ' ಕಾರಗಳು ಮೊದಲು ಬಂದಾಗ 'ಙ'ವಾಗುತ್ತದೆ; 'ಚ' ಅಥವಾ 'ಜ' ಕಾರಗಳು ಮೊದಲು ಬಂದಾಗ 'ಞ' ವಾಗುತ್ತದೆ; 'ಟ' ಅಥವಾ 'ಡ' ಕಾರಗಳು ಮೊದಲು ಬಂದಾಗ 'ಣ' ಕಾರವಾಗುತ್ತದೆ; 'ತ' ಅಥವಾ 'ದ' ಕಾರಗಳು ಮೊದಲು ಬಂದಾಗ 'ನ' ಕಾರವಾಗುತ್ತದೆ: 'ಪ' ಅಥವಾ 'ಬ' ಕಾರಗಳು ಮೊದಲು ಬಂದಾಗ 'ಮ' ಕಾರವಾಗುತ್ತದೆ. ತೆಲುಗು ಭಾಷೆಯು ವಿವಿಧ ಧ್ವನಿಗಳ ಕಾರಣಕ್ಕಾಗಿ ಅನುಸ್ವಾರವನ್ನು ಬಳಸುತ್ತದೆ. ಹಾಗೆಯೇ ಕೆಲವೊಂದು ನಿರ್ದಿಷ್ಟ ಸಂದರ್ಭಗಳಲ್ಲಿ ಅರ್ಧ ಅನುಸ್ವಾರಗಳ ಬಳಕೆಯೂ ಅಲ್ಲಿದೆ."[೨೨]

೨. "ತೆಲುಗಿನ 'ನ' ಕಾರವು 'ಮ' ಕಾರವಾಗುವುದು ಇತ್ತಿಚಿನದೇ ಆಗಿದೆ. ಆದರೆ ನಿಸ್ಸಂಶಯವಾಗಿ ನಾವು ನಂಬಬಹುದಾದ ಅಂಶವೆಂದರೆ 'ಮ' 'ನ' 'ವ' ಮತ್ತು 'ಯ' ಕಾರಗಳು ತೆಲುಗು ಕನ್ನಡ ತುಳುಗಳಂತೆ ತಮಿಳಿನಲ್ಲಿ 'ನ' 'ವ' ಮತ್ತು 'ಯ' ಕಾರಗಳು ಪರಸ್ಪರ ಪಲ್ಲಟವಾಗುತ್ತವೆ"[೨೩]

ಈ ಮೇಲಿನ ನಿಯಮಗಳಿಗೂ ಬೆಂಗಳೂರು ಗ್ರಾಮೀಣ ಭಾಗದ ಜನರ ಆಡುಮಾತಿನ ಸ್ವರೂಪಕ್ಕೂ ಸಂಬಂಧವಿದೆಯೇ ಎಂಬುದನ್ನು ನೋಡೋಣ:

ನ್ : ದಂತ್ಯ ಅನುನಾಸಿಕ ಧ್ವನಿ

ಶಿಷ್ಟಪದ	**ದಾಸನಪುರ**	**ಹೆಸರಘಟ್ಟ**	**ಯಶವಂತಪುರ**	**ಯಲಹಂಕ**	**ಜಾಲ**
ನೂಕು	ನೂಕು	ನೂಕು	ನೂಕು	ದೂಕು	ದೂಕು
ಇನ್ನು	ಇನ್ನ	ಇನ್ನ	ಇನ್ನ	ಇಂಕ	ಇಂಕ
ನುಗ್ಗೆ	ನುಗ್ಗೆ	ನುಗ್ಗೆ	ನುಗ್ಗೆ	ಮುಗ್ಗೆ	ಮುಗ್ಗೆ
ನುಲಿಕೆಕಾಯಿ	ನುಲ್ಕಾಯಿ	ನುಲ್ಕಾಯಿ	ನುಲ್ಕಾಯಿ	ಮುಲ್ಕೆಕಾಯಿ	ಮುಲ್ಕೆಕಾಯ್
ನುಲಿಕೆ	ನುಲ್ಕೆ	ನುಲ್ಕೆ	ನುಲ್ಕೆ	ಮುಲ್ಕೆ	ಮುಲ್ಕೆ

ಬೆಂಗಳೂರು ಗ್ರಾಮೀಣ ಭಾಗಗಳಾದ ದಾ.ಹೆ.ಯಶ ಭಾಗಗಳಲ್ಲಿ 'ನ್' ಅನುನಾಸಿಕ ಧ್ವನಿಯ ಬಳಕೆಯು ಜಾಲ.ಯಲಭಾಗದಲ್ಲಿ 'ದ್' ಘೋಷ ಧ್ವನಿಯಾಗಿ ಬಳಕೆಯಲ್ಲಿದೆ. ಇದು ಒಂದು ರೀತಿಯದಾದರೆ, ದಾ.ಹೆ.ಯಶ ಭಾಗದಲ್ಲಿ ಬಳಕೆಯಾಗುವ 'ನ್' ದಂತ್ಯ ಅನುನಾಸಿಕವರ್ಣವು ಜಾಲ ಮತ್ತು ಯಲ ಭಾಗದಲ್ಲಿ 'ಮ್' ಓಷ್ಠ್ಯ ಅನುನಾಸಿಕ ಧ್ವನಿಯಾಗಿ ಬಳಕೆ ಮಾಡಲಾಗುತ್ತಿದೆ. ಬೆಂಗಳೂರು ಗ್ರಾಮೀಣ ಜನರಲ್ಲಿನ **ನ್** ಅನುನಾಸಿಕ ಧ್ವನಿ ಬಳಕೆಯಲ್ಲಿ ಅನ್ವಯವಾಗುವ ದ್ರಾವಿಡ ಭಾಷೆಯ ಕೆಲವು ನಿಯಮಗಳು ಈ ಕೆಳಕಂಡಂತೆ ಇವೆ:

೧. 'ಮ' ಕಾರವು ತೆಲುಗಿನಲ್ಲಿ ಮೂಲತಃ ಇದ್ದ ಸೌಲಭ್ಯಕಾಂಕ್ಷಿ ಪ್ರತ್ಯಯವೆಂದೇ ಹೇಳಬಹುದು. ಹಾಗೆಯೇ 'ನ' ಕಾರ ಅಥವಾ 'ಯ' ಕಾರಗಳು ಅದರ ಮೃದುಲ ರೂಪಗಳಾಗಿವೆ.[೨೪]

೨ "ತೆಲುಗಿನ 'ನ' ಕಾರವು 'ಮ' ಕಾರವಾಗುವುದು ಇತ್ತಿಚಿನದೇ ಆಗಿದೆ. ಆದರೆ ನಿಸ್ಸಂಶಯವಾಗಿ ನಾವು ನಂಬಬಹುದಾದ ಅಂಶವೆಂದರೆ 'ಮ' 'ನ' 'ವ' ಮತ್ತು 'ಯ' ಕಾರಗಳು ತೆಲುಗು ಕನ್ನಡ ತುಳುಗಳಂತೆ ತಮಿಳಿನಲ್ಲಿ 'ನ' 'ವ' ಮತ್ತು 'ಯ' ಕಾರಗಳು ಪರಸ್ಪರ ಪಲ್ಲಟವಾಗುತ್ತವೆ"[೨೫]

ಈ ಮೇಲಿನ ನಿಯಮದಂತೆ ಜಾಲ ಮತ್ತು ಯಲ ಭಾಗದಲ್ಲಿ 'ನ್' ಕಾರವು 'ಮ್' ಕಾರವಾಗಿ ಬಳಕೆಯಾಗುತ್ತಿದೆ. ಘೋಷವು ಅನುನಾಸಿಕವಾಗುತ್ತಿವೆ. ಕಾಲ್ಡ್‌ವೆಲ್ ಅಭಿಪ್ರಾಯದಂತೆ 'ನ್' ಕಾರವು ಇನ್ನಷ್ಟು ಸೌಲಭ್ಯಾಕಾಂಕ್ಷಿಯಾಗುವ ಕಡೆಗೆ ಚಲಿಸುತ್ತಿದೆ.

ಮೇಲಿನ ನಿಯಮದಂತೆ ಪದಾರಂಭ ಅನುನಾಸಿಕ **ನ್** ಧ್ವನಿಯು ದಾ. ಹೆ. ಯಶ ದಲ್ಲಿ **ನೂಕು** ಎಂದು ಬದಲಾಗದಂತೆ ಬಳಕೆಯಾದರೆ, ಯಲಹಂಕ. ಜಾಲ ಭಾಗಗಳಲ್ಲಿ **ನ್** ಧ್ವನಿಯ ಬದಲಾಗಿ ಅದೇ ವರ್ಗದ ದಂತ್ಯ ಧ್ವನಿಯಾದ **ದ್** ವಾಗಿ(**ನೂಕು**>**ದೂಕು**) ಬಳಸುತ್ತಿದ್ದಾರೆ. ಹಾಗೂ **ಇನ್ನು** ಎಂಬ ಪದ ಬಳಕೆಯಲ್ಲಿ ಅನುನಾಸಿಕ ಸಜಾತೀಯ ದ್ವಿತ್ವವಾದ **ನ್ನ** ಧ್ವನಿಯು ಯಲಹಂಕ ಮತ್ತು ಜಾಲ ಭಾಗಗಳಲ್ಲಿ ಇ ಸ್ವರದ ಮುಂದಿನ ಅನುನಾಸಿಕವು ದ್ವಿತ್ವವು ಲೋಪವಾಗಿ ಪದಮಧ್ಯದಲ್ಲಿ ಅನುನಾಸಿಕ 'ನ್' ಧ್ವನಿಯು ಬಂದು ಸೇರುತ್ತಿದೆ. ಪೂರ್ವ ಧ್ವನಿಯು ಕಂಠ್ಯ ಅಘೋಷ ವರ್ಣವಾದ **'ಕ್'** ಧ್ವನಿಯ (**ಇನ್ನ**>**ಇಂಕ**) ಪೂರ್ವದಲ್ಲಿ, ಅದೇ ವರ್ಗದ ಅನುನಾಸಿಕ ಬಳಕೆಯಲ್ಲಿದೆ. **'ನ್'** ಅನುನಾಸಿಕವು ದಂತ್ಯ ಮತ್ತು ದಂತ್ಯ ಸ್ಪರ್ಶವರ್ಣಗಳ ಹಿಂದೆ (**ಇನ್ನು**>**ಇಂಕ**) ಹೆಚ್ಚು ಬಳಕೆಯಾಗುತ್ತಿದೆ. **ನೂಕು** ಎಂಬುದನ್ನು ತೆಲುಗಿನಲ್ಲಿ **ದೂಕು** ಎಂದು ಬಳಸುತ್ತಾರೆ. **ಇನ್ನು** ಎಂಬ ನಾಮಪದವನ್ನು ದಾಸನಪುರ. ಹೆಸರಘಟ್ಟ ಮತ್ತು ಯಶವಂತಪುರ ಭಾಗಗಳಲ್ಲಿ ಯಾವುದೆ ವ್ಯತ್ಯಾಸವಾಗದೇ 'ಇನ್ನ' ಎಂದೇ ಬಳಕೆಯಾಗುತ್ತಿದೆ. ಆದರೆ ಜಾಲ ಭಾಗದಲ್ಲಿ ಬಳಕೆಯಾಗುವ **ಇಂಕ** ಎಂದು ಬಳಕೆಯಾಗುತ್ತಿದೆ. ಜಾಲ ಭಾಗದಲ್ಲಿ **ನ್** ಕಾರದ ಬದಲು **ಕ್** ಕಾರವನ್ನಾಗಿ ಬಳಕೆ ಮಾಡುತ್ತಿದ್ದಾರೆ. ತೆಲುಗಿನಲ್ಲಿರುವ **ಇಂಕ** ಪದದಂತೆಯೇ **ಇನ್ನು, ಮತ್ತೆ** ಎಂಬರ್ಥದಲ್ಲಿ ಜಾಲ ಭಾಗದಲ್ಲೂ ಈ ಪದವು ಬಳಕೆಯಾಗುತ್ತಿದೆ. **ನ್** ಕಾರವು **ಮ್** ಕಾರವಾಗಿ ಬಳಕೆಯಾಗುತ್ತಿದೆ. ಶಿಷ್ಟಪದವಾದ 'ನುಗ್ಗೆ' ಎಂಬುದು ದಾ. ಹೆ. ಯಶಭಾಗದಲ್ಲಿ ಯಾವುದೇ ವ್ಯತ್ಯಾಸವಾಗದೇ ಬಳಸುತ್ತಿದ್ದರೆ, ಜಾಲ ಭಾಗದಲ್ಲಿ ಪದಾರಂಭ ಧ್ವನಿ ಅನುನಾಸಿಕ ಧ್ವನಿಯಾದ **ನ್** ಕಾರವು ಅನುನಾಸಿಕ ಧ್ವನಿ **ಮ್** ಕಾರವಾಗಿ (ನುಗ್ಗೆ> ಮುಗ್ಗೆ) ಬಳಸುತ್ತಿದ್ದಾರೆ. ಅಂತೆಯೆ ಶಿಷ್ಟಪದವಾದ **ನುಲಿಕೆಕಾಯಿ** ಎಂಬ ಪದವನ್ನು ದಾ. ಹೆ. ಯ ಭಾಗದಲ್ಲಿ ಯಾವುದೇ ವ್ಯತ್ಯಾಸವಾಗದೇ ಸರಳೀಕೃತವಾಗಿ ಬಳಕೆಯಾಗುತ್ತಿದೆ. ಆದರೆ ಜಾಲ ಭಾಗದಲ್ಲಿ ಪದಾರಂಭ ಅನುನಾಸಿಕ ಧ್ವನಿಯಾದ **ನ್** ಕಾರವನ್ನು ಅನುನಾಸಿಕ ಧ್ವನಿ **ಮ್** ಕಾರವಾಗಿ (ನುಲಿಕೆಕಾಯಿ> ನುಲ್ಕಾಯಿ> ಮುಲ್ಕಾಯಿ) ಬಳಸುತ್ತಿದ್ದಾರೆ. ಹಾಗೇಯೇ ದಾಸನಪುರ ಭಾಗದಲ್ಲಿ ಬಳಕೆಯಾಗುತ್ತಿರುವ **ನುಲ್ಕೆ** ಎಂಬ ಶಬ್ದವನ್ನು ಮುಲ್ಕೆ ಎಂದಾಗಿ **ನ್** ಅನುನಾಸಿಕ ಧ್ವನಿಯ ಬದಲಾಗಿ **ಮ್** ಧ್ವನಿಯನ್ನಾಗಿ (ನುಲಿಕೆ> ನುಲ್ಕೆ> ಮುಲ್ಕೆ) ಬಳಸುತ್ತಿದ್ದಾರೆ.

ಜಾಲಭಾಗದಲ್ಲಿ 'ನುಗ್ಗೆ'ಯನ್ನು 'ಮುಗ್ಗೆ'ಯಾಗಿ, 'ನುಲಿಕೆಕಾಯಿ'ಯನ್ನು 'ಮುಲ್ಕೆಕಾಯಿ'ಯಾಗಿ ಮತ್ತು **'ನುಲಿಕೆ'** ಪದವನ್ನು **'ಮುಲ್ಕೆ'** ಎಂದು ಬಳಕೆಯಾಗುತ್ತಿವೆ. ಇವು ಕ್ರಮವಾಗಿ ತೆಲುಗಿನಲ್ಲಿ **ಮುಗ್ಗಾಯ್, ಮುಲ್ಕಾಯಿ, ಮುಲ್ಕೆ** ಎಂಬ ಪದಗಳಲ್ಲಿ ಬಳಕೆಯಾಗುತ್ತಿವೆ. ಈ ತೆಲುಗು ಪದಗಳು ತೆಲುಗು ಸಂಪರ್ಕವನ್ನು ಹೊಂದಿರುವ ಜಾಲ ಭಾಗದಲ್ಲಿನ ಜನರ ಆಡುನುಡಿಯಲ್ಲಿ ಸೇರಿವೆ. ಇದರ ಮೂಲಕ ತಿಳಿದುಬರುವ ಅಂಶವೆಂದರೆ:

೧. ಅನುನಾಸಿಕಗಳು ಪರಸ್ಪರ ಪಲ್ಲಟಗೊಳ್ಳುವುದು.

೨. ಕಾಲ್ಡ್ ವೆಲ್ ಹೇಳುವಂತೆ: ಯ, ವ ದಂತೆಯೇ ಅನುನಾಸಿಕಗಳು ಸಹ ಸೌಲಭ್ಯಾಕಾಂಕ್ಷಿ ಧ್ವನಿಗಳಾಗಿವೆ. ಅದರಂತೆಯೇ ಬಳಕೆಯಲ್ಲಿ ವ್ಯತ್ಯಾಸವನ್ನು ತೋರಿಸುತ್ತವೆ.

೫.೧.೪ ಅರೆವ್ಯಂಜನಗಳು

ಬೆಂಗಳೂರು ಗ್ರಾಮೀಣ ಜನರ ಆಡುನುಡಿಯಲ್ಲಿ ಅರೆವ್ಯಂಜನಗಳ ಬಳಕೆಯನ್ನು ಪಾರ್ಶ್ವಿಕ, ತಾಡಿತ, ಘರ್ಷ, ವಿರಳಘರ್ಷ ಎಂದು ವಿಭಾಗಿಸಿಕೊಳ್ಳಲಾಗಿದೆ. ಬೆಂಗಳೂರು ಗ್ರಾಮೀಣ ಜನರಲ್ಲಿ ಅವುಗಳ ಬಳಕೆಯು ಈ ರೀತಿಯಲ್ಲಿವೆ.

೫.೧.೪.೧ ಪಾರ್ಶ್ವಿಕವರ್ಣ

ಲ್ : ವರ್ತ್ಸ್ಯ ವರ್ಣ ಧ್ವನಿ

ಶಿಷ್ಟಪದ	**ದಾಸನಪುರ**	**ಹೆಸರಘಟ್ಟ**	**ಯಶವಂತಪುರ**	**ಯಲಹಂಕ**	**ಜಾಲ**
ಕುಡುಗೋಲು	ಕುಡ್ಲು	ಕುಡ್ಲು	ಕುಡ್ಲು	ಕುಡೋಲು	ಕುಡೋಲು
ಈರಲು	ಇರ್ಲು	ಇರ್ಲು	ಇರ್ಲು	ಈರ್ಳು	ಈರ್ಳು
ಬರಲು	ಬರ್ಲು	ಬರ್ಲು	ಬರ್ಲು	ಬರ್ಳು	ಬರ್ಳು
ಕೂದಲು	ಕೂದ್ಲು	ಕೂದ್ಲು	ಕೂದ್ಲು	ಕೂರ್ಲು	ಕೂರ್ಲು

ಬೆಂಗಳೂರು ಗ್ರಾಮೀಣ ಭಾಗಗಳಾದ ದಾ.ಹೆ.ಯಶ ಭಾಗಗಳಲ್ಲಿ **'ಲ್'** ವರ್ತ್ಸ್ಯ ಧ್ವನಿಯ ಬಳಕೆಯು ಜಾಲ.ಯಲ. ಭಾಗದಲ್ಲಿ **'ರ್'** ಧ್ವನಿಯಾಗಿ ಬಳಕೆಯಲ್ಲಿದೆ. ಇದು ಒಂದು ರೀತಿಯದಾದರೆ, ದಾ.ಹೆ.ಯಶ

ಭಾಗದಲ್ಲಿ ಬಳಕೆಯಾಗುವ 'ಲ್' ಧ್ವನಿಯು ಜಾಲ ಮತ್ತು ಯಲಹಂಕ ಭಾಗದಲ್ಲಿ 'ಳ್' ಧ್ವನಿಯಾಗಿ ಬಳಕೆಯಾಗುತ್ತದೆ. **ಲ್** ವರ್ತ್ಸ್ಯ ಧ್ವನಿ ಬಳಕೆಯಲ್ಲಿ ಕಂಡುಬರುವ ದ್ರಾವಿಡ ಭಾಷೆಯ ನಿಯಮಗಳು ಈ ಕೆಳಕಂಡಂತೆ ಇವೆ:

೧. 'ರ' ಕಾರವು 'ಲ್' ಕಾರವಾಗಿ ಬಳಕೆಯಾಗುವುದು– "'ರ' ಕಾರ 'ಲ' ಕಾರಗಳು ಪಾರಸ್ಪರಿಕವಾಗಿ ಬದಲಾವಣೆಯಾಗುವುದು ಬಹುತೇಕ ದ್ರಾವಿಡಭಾಷೆಗಳಲ್ಲಿ ಕಂಡುಬರುತ್ತದೆ. ದ್ರಾವಿಡ ಭಾಷೆಗಳಲ್ಲೆಲ್ಲ ರ>ಲ ಕಾರವಾಗುವ ಈ ಪ್ರಕ್ರಿಯೆಯು ಸರ್ವೆಸಾಮಾನ್ಯವಾದುದಾಗಿದೆ."[೨೬]

೨. "ಲ್ ಕಾರಮತ್ತು ರ್ ಕಾರವಾಗುವುದು ರ್ ಕಾರವುಲ್ ಕಾರವಾಗುವುದು ದ್ರಾವಿಡಭಾಷೆಯಲ್ಲಿ ಸಾಮಾನ್ಯವಾದ ನಿಯಮವಾಗಿದೆ"[೨೭]

ಈ ಮೇಲಿನ ನಿಯಮದಂತೆ ಬೆಂಗಳೂರು ಗ್ರಾಮೀಣ ಭಾಗದಲ್ಲಿ 'ಲ್' ಕಾರವು ಜಾಲ ಮತ್ತು ಯಲ. ಭಾಗದಲ್ಲಿ 'ರ್' ಕಾರವಾಗಿ 'ಲ್' ವು ದ್ವಿತ್ವವಾಗುತ್ತಿದೆ.

ಕುಡುಗೋಲು ಎಂಬ ಪದವು ದಾ. ಹೆ. ಯಶ ಭಾಗದ ಜನರು **ಕುಡ್ಲು** ಎಂದು **ಗ್ ಮತ್ತು ಓ** (ಗೋ) ಕಂಠ್ಯೋಷ್ಠ್ಯ ಧ್ವನಿಯು ಲೋಪಗೊಂಡು ಮೂರ್ಧನ್ಯ ವರ್ಣ ಮತ್ತು **ಲ್** ಕಾರವು ಒಟ್ಟಿಗೆ ಸೇರಿ ಉಚ್ಚಾರವಾದರೆ, ಜಾ. ಯಲ. ದ ಭಾಗದಲ್ಲಿ **ಗ್** ಕಾರವು ದ್ವಿತ್ವವಾಗಿ **ಓ** (ಸಂವೃತ್ತ ಓಷ್ಠ್ಯ) ಧ್ವನಿಯು ಮೂರ್ಧನ್ಯ ಧ್ವನಿ **ಡ್** ದೊಡನೆ ಸೇರಿ ಬಳಕೆಯಾಗುತ್ತಿದೆ. **ಈರಲು** ಪದವನ್ನು ದಾ. ಹೆ. ಯಶ ಭಾಗದಲ್ಲಿ **ರ್** ಧ್ವನಿಯ ದ್ವಿತ್ವವಾಗಿ ಬಳಕೆಯಾದರೆ, ಜಾಲ ಭಾಗಗಳಲ್ಲಿ **ಳ್** ಕಾರ ದ್ವಿತ್ವವಾಗಿ **(ಇರ್ಲು>ಈರ್ಳು) (ಲ್>ಳ್)** ಬಳಕೆಯಾಗುತ್ತಿವೆ. ತೆಲುಗಿನ **ಕುಡೋಲಿ**ಯು ಜಾಲ ಭಾಗದಲ್ಲಿ **ಕುಡೋಲು** ಎಂದು **ಉ** ಕಾರಾಂತ ವಾಗಿ ಬಳಕೆಯಾಗುತ್ತಿದೆ. ತೆಲುಗಿನ **ಈರಳು** ಪದವು ಜಾಲದಲ್ಲಿ **ಈರ್ಳು** ಎಂದು ಬಳಕೆಯಾಗುತ್ತಿದೆ. ಶಿಷ್ಟಪದ **ಬರಲು** ಎಂಬ ಪದವನ್ನು ದಾ,ಹೆ,ಯಶ ಭಾಗದಲ್ಲಿ **ಬರ್ಲು** ಎಂದು ಸೌಲಭ್ಯಕಾಂಕ್ಷೆಯಿಂದ ಬಳಕೆಯಾದರೆ, ಜಾಲ ಮತ್ತು ಯಲಹಂಕ ಭಾಗದಲ್ಲಿ **ಲ್** ಕಾರದ ಬದಲು **ಳ್** ಕಾರವನ್ನು ಬಳಸಿ **ರ್ಳು** ಎಂದು ಉಚ್ಚಾರ ಮಾಡಲಾಗುತ್ತಿದೆ (ಬರಲು>ಬರ್ಲು>ಬರ್ಳು). ಹೀಗೆ ಜಾಲ ಭಾಗದಲ್ಲಿ **ಲ್** ಕಾರದ ಬದಲು **ಳ್** ಕಾರವು ಬಳಕೆಯಾಗುತ್ತಿದೆ.

ಹೀಗೆ ಜಾಲ ಮತ್ತು ಯಲ ಭಾಗದಲ್ಲಿ 'ರ್' ಧ್ವನಿಯ ಬಳಕೆಯಲ್ಲಿ ಆಗುತ್ತಿರುವ ವ್ಯತ್ಯಾಸವು ತೆಲುಗು ಭಾಷೆಯ ಪ್ರಭಾವದಿಂದ ಉಂಟಾಗುತ್ತಿದೆ.

೫.೧.೪.೨ ತಾಡಿತ ವರ್ಣ

'ರ್' : ವರ್ಣದ ಬಳಕೆ

ಶಿಷ್ಟಪದ	ದಾಸನಪುರ	ಹೆಸರಘಟ್ಟ	ಯಶವಂತಪುರ	ಯಲಹಂಕ	ಜಾಲ
ಕೂರಿಗೆ	ಕೂರ್ಗೆ	ಕೂರ್ಗೆ	ಕೂರ್ಗೆ	ಕೂಡ್ಗೆ	ಕೂಡ್ಗೆ
ಯಾರಿಗೆ	ಯಾರ್ಗೆ	ಯಾರ್ಗೆ	ಯಾರ್ಗೆ	ಯಾರ್ಕ	ಯಾರ್ಕ
ಭರಣಿ	ಬರ್ಣಿ	ಬರ್ಣಿ	ಬರ್ಣಿ	ಬಯ್ಣಿ	ಬಯ್ಣಿ
ತಿರುಗಿ(ಪುನಃ)	ತಿರ್ಗ	ತಿರ್ಗ	ತಿರ್ಗ	ತಿರ್ಗಿ	ತಿರ್ಗಿ

ಬೆಂಗಳೂರು ಗ್ರಾಮೀಣ ಭಾಗಗಳಾದ ದಾ.ಹೆ.ಯಶ ಭಾಗಗಳಲ್ಲಿ **'ರ್'** ಧ್ವನಿಯ ಬಳಕೆಯು ಜಾಲ.ಯಲಭಾಗದಲ್ಲಿ 'ಡ್' ಘೋಷ ಧ್ವನಿಯಾಗಿ ಬಳಕೆಯಲ್ಲಿದೆ. ಇದು ಒಂದು ರೀತಿಯದಾದರೆ, ದಾ.ಹೆ.ಯಶ ಭಾಗದಲ್ಲಿ ಬಳಕೆಯಾಗುವ 'ರ್' ವರ್ಣವು ಜಾಲ ಮತ್ತು ಯಲಭಾಗದಲ್ಲಿ 'ಯ್' ಧ್ವನಿಯ ಬಳಕೆ ಮಾಡಲಾಗುತ್ತಿದೆ. ಬೆಂಗಳೂರು ಗ್ರಾಮೀಣ ಜನರಲ್ಲಿನ **ರ್** ಧ್ವನಿ ಬಳಕೆಯಲ್ಲಿ ಅನ್ವಯವಾಗುವ ದ್ರಾವಿಡ ಭಾಷೆಯ ಕೆಲವು ನಿಯಮಗಳು ಈ ಕೆಳಕಂಡಂತೆ ಇವೆ;

೧. "ರ್ ಕಾರವು ಡ ಕಾರವಾಗುವುದೂ ಸಹ ದ್ರಾವಿಡ ಭಾಷೆಗಳಲ್ಲಿ ಸಾಮಾನ್ಯವಾದ ಗುಣಲಕ್ಷಣವೇ ಆಗಿದೆ."[೨೮]

೨. "ರ್ ಗಾರವು ಡ್ ಕಾರವಾಗುವುದು ಬಹಳ ಮುಖ್ಯವಾದ ಪಾರಸ್ಪರಿಕ ನಿಯಮವೊಂದನ್ನು ಹೇಳುತ್ತದೆ. ಆ ನಿಯಮವೆಂದರೆ ತಮಿಳಿನಲ್ಲಿ ರ್ ಕಾರವೆನಿಸುವ ವರ್ಣವು ತೆಲುಗಿನಲ್ಲಿ ಡ ಕಾರವಾಗಿರುತ್ತದೆ"[೨೯]

ಈ ಮೇಲಿನ ನಿಯಮದಂತೆ ಬೆಂಗಳೂರಿನ ಜಾಲ ಮತ್ತು ಯಲ. ಭಾಗಗಳಲ್ಲಿ ಬದಲಾವಣೆಗಳು ಉಂಟಾಗುತ್ತಿವೆ. ಅಂದರೆ ಜಾಲ ಭಾಗದಲ್ಲಿ 'ರ್' ಕಾರವು 'ಡ್' ಕಾರವಾಗಿ ಬದಲಾಗಿರುವುದನ್ನು ಕಾಣಬಹುದು. ಮತ್ತು ಆಡುಮಾತಿನಲ್ಲಿ 'ರ್' ಕಾರವು 'ಯ್' ಕಾರವಾಗಿಯೂ ಬದಲಾವಣೆಯಾಗುತ್ತಿದೆ. ಮತ್ತು ಸ್ವರಗಳ ಕಾರಣದಿಂದ 'ರ್' ವ್ಯಂಜನ ಬಳಕೆಯಲ್ಲಿ ಕೆಲವು ವ್ಯತ್ಯಾಸಗಳು ಉಂಟಾಗಿರುವುದು ತಿಳಿಯುತ್ತದೆ.

ಕೂರಿಗೆ ಎಂಬುದನ್ನು ಬೆಂಗಳೂರು ಗ್ರಾಮೀಣ ಭಾಗವಾದ ದಾ. ಹೆ. ಯಶ ದಲ್ಲಿ ಅಂತ್ಯಾಕ್ಷರವು ವಿಜಾತೀಯ ದ್ವಿತ್ವವಾಗಿದ್ದು, **ರ** ಮೂರ್ಧ ಧ್ವನಿಗೆ **ಗ್** ಕಂಠ್ಯಧ್ವನಿಯು ದ್ವಿತ್ವವಾಗಿ ಬಳಕೆಯಾಗುತ್ತಿದ್ದರೆ, ಯಲ. ಮತ್ತು ಜಾಲ ಭಾಗದಲ್ಲಿ **ಡ್** ಮೂರ್ಧಧ್ವನಿಗೆ **ಗ್** ಕಂಠ್ಯಧ್ವನಿಯು ದ್ವಿತ್ವವಾಗಿ **(ಕೂರ್ಗೆ>ಕೂಡ್ಗೆ)** ಉಚ್ಚಾರವಾಗುತ್ತಿವೆ. ಪ್ರಶ್ನಾರ್ಥಕ ಪದ **ಯಾರಿಗೆ** ಎಂಬುದನ್ನು ಬೆಂಗಳೂರು ಗ್ರಾಮೀಣ ಭಾಗವಾದ ದಾ. ಹೆ. ಯಶ ದಲ್ಲಿ ಅಂತ್ಯವರ್ಣವು **ರ** ಮೂರ್ಧಧ್ವನಿಗೆ ಕಂಠ್ಯಧ್ವನಿ **ಗ** ವು ವಿಜಾತೀಯ ದ್ವಿತ್ವವಾಗಿ **ಎ** ಕಾರಾಂತ್ಯಗೊಂಡು ಬಳಕೆಯಾಗುತ್ತಿದೆ. ಆದರೆ ಜಾ. ಯಲ ದಲ್ಲಿ **ರ** ಮೂರ್ಧಧ್ವನಿಗೆ ಕಂಠ್ಯಧ್ವನಿ **ಕ** ವು ವಿಜಾತೀಯ ದ್ವಿತ್ವವಾಗಿ **ಅ** ಕಾರಾಂತ್ಯಗೊಂಡು **(ರ್ಗ>ರ್ಕ)** ಬಳಕೆಯಾಗುತ್ತಿದೆ. ಅಂತೆಯೇ **ತಿರುಗಿ** ಎಂಬ ಪದವನ್ನು ದಾ. ಹೆ. ಯಶ ಭಾಗದಲ್ಲಿ **ತಿರ್ಗ** ಎಂದು ಬಳಕೆಯಾಗುತ್ತಿದೆ. ಇಲ್ಲಿ ಅಂತ್ಯವರ್ಣವು **ರ್** ಧ್ವನಿಗೆ **ಗ್** ಧ್ವನಿಯು ದ್ವಿತ್ವಗೊಳಿಸಿ **ಅ** ಕಾರವಾಗಿ ಬಳಕೆಯಾದರೆ, ಬೆಂಗಳೂರು ಗ್ರಾಮೀಣ ಭಾಗವಾದ ಜಾಲ ಭಾಗದಲ್ಲಿ ಅಂತ್ಯವರ್ಣವು **ತ್** ಕಾರಕ್ಕೆ **ಗ್** ಕಾರ ದ್ವಿತ್ವವಾಗಿ **ಇ** ಕಾರವನ್ನು ಬಳಸುತ್ತಾರೆ. (ತಿರುಗ>ತಿರ್ಗ>ತಿರ್ಗಿ) **ತಿರುಗ** ಪದವು ತೆಲುಗಿನ **ತಿರಿಗಿ** ಪದವು ಜಾಲದಲ್ಲಿ **ತಿರ್ಗಿ** ಎಂದು ಬಳಕೆಯಾಗುತ್ತಿದೆ.

ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಭಾಗವಾದ ದಾ. ಹೆ. ಯಶ ಭಾಗದಲ್ಲಿ ಕೂರಿಗೆ ಬಳಕೆಯಾಗುತ್ತಿದೆ. ಜಾಲದ ಜನರ ಆಡುಮಾತಿನ **ಕೂಡ್ಗೆ** ಎಂಬ ವ್ಯವಸಾಯ ಪದವನ್ನು ತೆಲುಗು ಆಡುಮಾತಿನಲ್ಲಿ **ಕೂಡಿಗ** ಎಂದು ಬಳಸುತ್ತಿದ್ದಾರೆ. **ಭರಣಿ** ಎಂಬ ಪದವನ್ನು ದಾ. ಹೆ. ಯಶ ಭಾಗದಲ್ಲಿ **ಬರ್ಣಿ** ಎಂದು ಸೌಲಭ್ಯವನ್ನು ಪಡೆದು ಬಳಕೆಯಾಗುತ್ತಿದ್ದರೆ, ಜಾಲ ಮತ್ತು ಯಲಹಂಕ ಗ್ರಾಮೀಣ ಭಾಗದಲ್ಲಿ ಅಂತ್ಯವರ್ಣವು **ರ್** ಕಾರದ ಬದಲು **ಯ್** ಕಾರವನ್ನು ಬಳಸಿ ಪದೋಚ್ಚಾರವಾಗುತ್ತಿದೆ. ಅಂದರೆ **ಬರ್ಣಿಯು** **ಬಯ್ಣಿ**ಯಾಗಿ ಬಳಕೆಯಾಗುತ್ತಿದೆ. (ಭರಣಿ>ಬರ್ಣಿ>ಬಯ್ಣಿ) **ಭರಣಿ ಮಳೆ** ಪದವನ್ನು ತೆಲುಗಿನಲ್ಲಿ **ಬಯ್ಣ್ ವಾನ** ಎಂದು ಬಳಕೆಯಲ್ಲಿದೆ. ಈ ತೆಲುಗು ಭಾಷಿಕರ ಪ್ರಭಾವದಿಂದ ಜಾಲ ಭಾಗದ ಜನರಲ್ಲಿ **ಬಯ್ಣಿ** ಎಂಬ ಪದ ಬಳಕೆಯಲ್ಲಿದೆ.

೫.೧.೪.೩ ವಿರಳ ಘರ್ಷ

ವ್ : ದಂತೌಷ್ಠ್ಯ

ಶಿಷ್ಟಪದ	ದಾಸನಪುರ	ಹೆಸರಘಟ್ಟ	ಯಶವಂತಪುರ	ಯಲಹಂಕ	ಜಾಲ
ವ್ಯಾಜ್ಯ	ಯಾಜ್ಯ	ಯಾಜ್ಯ	ಯಾಜ್ಯ	ಯಾಜ್ಗ	ಯಾಜ್ಗ
ಅವನು	ಅವ್ನು	ಅವ್ನು	ಅವ್ನು	ಆತ್ನು	ಆತ್ನು
ಅವಳು	ಅವ್ಳು	ಅವ್ಳು	ಅವ್ಳು	ಆತ್ಲು	ಆತ್ಲು
ತಿರುವು	ತಿರ್ವು	ತಿರ್ವು	ತಿರ್ವು	ತಿರ್ಗು	ತಿರ್ಗು

ಬೆಂಗಳೂರು ಗ್ರಾಮೀಣ ಭಾಗಗಳಾದ ದಾ.ಹೆ.ಯಶ. ಭಾಗಗಳಲ್ಲಿ 'ವ್' ವಿರಳ ಘರ್ಷ ಧ್ವನಿಯ ಬಳಕೆಯು ಜಾಲ. ಯಲ. ಭಾಗದಲ್ಲಿ 'ಯ್' ಘೋಷ ಧ್ವನಿಯಾಗಿ ಬಳಕೆಯಲ್ಲಿದೆ. ಇದು ಒಂದು ರೀತಿಯದಾದರೆ, ದಾ.ಹೆ.ಯಶ ಭಾಗದಲ್ಲಿ ಬಳಕೆಯಾಗುವ 'ವ್' ವರ್ಣವು ಜಾಲ ಮತ್ತು ಯಲ ಭಾಗದಲ್ಲಿ 'ತ್' ಧ್ವನಿಯಾಗಿ ಬಳಕೆಯಾಗುತ್ತಿದೆ. ಬೆಂಗಳೂರು ಗ್ರಾಮೀಣ ಜನರಲ್ಲಿನ **ವ್** ಧ್ವನಿ ಬಳಕೆಗೆ ತಕ್ಕುದಾದ ದ್ರಾವಿಡ ಭಾಷೆಯ ಕೆಲವು ನಿಯಮಗಳು ಈ ಮುಂದಿನಂತೆ ಇವೆ:

೧. "ತಮಿಳು ಭಾಷೆಯಲ್ಲಿ ಸೌಲಭ್ಯಾಕಾಂಕ್ಷೆಯಾಗಿ ಪ್ರಯೋಗವಾಗುವ 'ವ' ಕಾರವು ಕೆಲವೊಮ್ಮೆ 'ಗ್' ಕಾರವಾಗುತ್ತದೆ. ಕೆಲವೊಮ್ಮೆ ತೆಲುಗಿನಲ್ಲಿ 'ವ' ಕಾರದ ಬದಲಾಗಿ 'ಯ' ಕಾರದ ಪ್ರಯೋಗಗಳು ನಡೆಯುತ್ತವೆ."[೩೦]

೨. ತೆಲುಗಿನಲ್ಲಿ ಗ್ ಕಾರವನ್ನು ವ ಕಾರದ ಬದಲಾಗಿ ಮಾತ್ರವಲ್ಲದೇ ಯ್ ಕಾರದ ಬದಲಾಗಿಯೂ ಬಳಸುತ್ತಾರೆ.[೩೧] ಉದಾ: ಕನ್ನಡದಲ್ಲಿನ 'ತಿರುವು' ತೆಲುಗಿನಲ್ಲಿ 'ತಿರುಗು' ಎಂದಾಗಿರುವುದಾಗಿದೆ.

ವ್ಯಾಜ್ಯ ಎಂಬ ಪದವು ದಾ. ಹೆ. ಯಶ. ಭಾಗದಲ್ಲಿ, ಪದಾರಂಭದಲ್ಲಿ 'ವ್' ಧ್ವನಿಗೆ 'ಯ್' ಧ್ವನಿಯು ಸೇರಿ ಬಳಕೆಯಾದರೆ, ಬೆಂಗಳೂರು ಗ್ರಾಮೀಣ ಪ್ರದೇಶದ ಜಾಲ ಮತ್ತು ಯಲಹಂಕ ಭಾಗದ ಜನರಲ್ಲಿ ಆರಂಭ ವರ್ಣ **ವ್** ಧ್ವನಿಯು **ಯ್** ಧ್ವನಿಯಾಗಿ ಬಳಕೆಯಾಗುತ್ತದೆ. (ವ್ಯಾಜ್ಯ>ಯಾಜ್ಯ) 'ಅವನು' ಎಂಬ ಪದವನ್ನು ದಾ. ಹೆ. ಯಶ. ಭಾಗದಲ್ಲಿ ಪದದ ಅಂತ್ಯದ **'ವನು'** ಎಂಬ ವರ್ಣಗಳು ಪರಸ್ಪರ ಸೇರಿ **'ವ್ನು'** ಎಂದು ವಿರಳ

ಘರ್ಷದೊಂದಿಗೆ ಬಳಕೆಯಾಗುತ್ತದೆ. ಆದರೆ ಯಲಹಂಕ ಮತ್ತು ಜಾಲ ಭಾಗದಲ್ಲಿ **'ನ್'** ಅನುನಾಸಿಕ ಅದೇ ದಂತ್ಯವರ್ಣ ಅಘೋಷ **'ತ್'** ಧ್ವನಿಯೊಡನೆ ಸೇರಿ **(ಅವ್ನು** > **ಆತ್ನು)** ಬಳಕೆಯಾಗುತ್ತಿದೆ. ಇಲ್ಲಿ ಪ್ರಸ್ತುತ ಪಡಿಸಿರುವ ಪದಗಳಾದ **ಅವನು** ಎಂಬುದು ತೆಲುಗು ಭಾಷೆಯಲ್ಲಿ **ಅತಡು** ಎಂದು ಬಳಕೆಯಾಗುತ್ತಿದ್ದು, ಅದನ್ನು ಜಾಲ ಭಾಗಗಳಲ್ಲಿ **ಆತ್ನು** ಎಂದು ಬಳಸುತ್ತಿದ್ದಾರೆ. ತೆಲುಗು ಆಡುಮಾತಿನಲ್ಲಿ **ವಾಜಿಗ** ಎಂದರೆ ಜಗಳವಾಡುವರು ಎಂಬರ್ಥದಲ್ಲಿ ಬಳಕೆಯಾಗುತ್ತಿದೆ. ಆ ಪದ ಪ್ರಭಾವದಿಂದ **ಜ್** ದ್ವಿತ್ವ **ಗ್** ವರ್ಣವು **(ಯಾಜ್ಗ)** ಎಂದಾಗಿ ಜಾಲ ಭಾಗದಲ್ಲಿ ಬಳಕೆಯಾಗುತ್ತಿದೆ. **ಅವಳು** ಎಂಬ ಸ್ತ್ರೀ ವಾಚಕವು ಶಿಷ್ಟದಂತೆ ಆದರೆ, ಆಡುಮಾತಿನಲ್ಲಿ ಸಂಕ್ಷಿಪ್ತಗೊಂಡು **ಅವ್ಳು** ಎಂಬುದಾಗಿ ಬಳಕೆಯಾಗುತ್ತಿದೆ. ಅದು ಜಾಲ ಮತ್ತು ಯಲಹಂಕ ಭಾಗದಲ್ಲಿ **ಆತ್ಲು** ಎಂದಾಗಿ **ವ್** ಕಾರಕ್ಕೆ **ತ್** ಕಾರವು ಬಳಕೆಯಾಗುತ್ತಿದೆ. ಹೀಗೆ ಜಾಲ ಭಾಗದಲ್ಲಿ ತೆಲುಗು ಭಾಷೆಯು ಪ್ರಭಾವ ಬೀರುತ್ತಿರುವುದನ್ನು ಕಾಣಬಹುದು. ಕನ್ನಡ ಮತ್ತು ತೆಲುಗು ಎರಡೂ ಭಾಷೆಯಿಂದ ಧ್ವನಿಗಳು ಮಿಳಿತಗೊಂಡು ಆತ್ಲು ಎಂಬುದಾಗಿ ಬಳಕೆಯಾಗುತ್ತದೆ. ಸಮಕಾಲೀನ ಭಾಷೆಯಲ್ಲಿ ಭಾಷೆ ಬದಲಾಗುತ್ತಿರುವ ಸ್ವರೂಪವನ್ನು ಇದು ವ್ಯಕ್ತ ಮಾಡುತ್ತದೆ.

೩.೧.೪.೪. ಘರ್ಷವರ್ಣಗಳು

'ಹ' : ವರ್ಣದ ಬಳಕೆ

ಶಿಷ್ಟಪದ	**ದಾಸನಪುರ**	**ಹೆಸರಘಟ್ಟ**	**ಯಶವಂತಪುರ**	**ಯಲಹಂಕ**	**ಜಾಲ**
ಹಿಕ್ಕೆ	ಪಿಚ್ಕೆ	ಪಿಚ್ಕೆ	ಪಿಚ್ಕೆ	ಪಿಕ್ಕೆ	ಪಿಕ್ಕೆ
ಹಾವು	ಹಾವು	ಹಾವು	ಹಾವು	ಪಾಮಿ	ಪಾಮಿ
ಹಿಪ್ಪೆ	ಯಿಪ್ಪೆ	ಯಿಪ್ಪೆ	ಯಿಪ್ಪೆ	ಇಪ್ಪೆ	ಇಪ್ಪೆ
ಹಿಪ್ಪೆ	ಯಿಪ್ಪೆ	ಯಿಪ್ಪೆ	ಯಿಪ್ಪೆ	ಇಪ್ಪೆ	ಇಪ್ಪೆ
ಹಿತ್ತಾಳೆ	ಇತ್ತಾಳೆ	ಇತ್ತಾಳೆ	ಇತ್ತಾಳೆ	ಇತ್ತಾಡೆ	ಇತ್ತಾಡೆ
ಹೀಗೆ	ಯಿಂಗೆ	ಯಿಂಗೆ	ಯಿಂಗೆ	ಇಂಗ	ಇಂಗ
ಹಿಂಗು	ಯಿಂಗು	ಯಿಂಗು	ಯಿಂಗು	ಇಂಗುವ	ಇಂಗುವ

ಬೆಂಗಳೂರು ಗ್ರಾಮೀಣ ಭಾಗಗಳಾದ ದಾ.ಹೆ.ಯಶ ಭಾಗಗಳಲ್ಲಿ 'ಹ್' ವಿರಳ ಘರ್ಷಧ್ವನಿಯ ಬಳಕೆಯು ಜಾಲ.ಯಲ.ಭಾಗದಲ್ಲಿ 'ಪ್' ಅಘೋಷ ಧ್ವನಿಯಾಗಿ ಬಳಕೆಯಲ್ಲಿದೆ. ಇದು ಒಂದು ರೀತಿಯದಾದರೆ, ದಾ.ಹೆ.ಯಶ. ಭಾಗದಲ್ಲಿ ಬಳಕೆಯಾಗುವ 'ಪ್' ವರ್ಣವು ಜಾಲ ಮತ್ತು ಯಲ. ಭಾಗದಲ್ಲಿ ಪ ಕಾರ ಲೋಪಗೊಳಿಸಿ, ಇದರೊಡನೆ ಇರುವ 'ಇ' ಸ್ವರವನ್ನು ಮಾತ್ರ ಬಳಕೆ ಮಾಡಲಾಗುತ್ತಿದೆ. ಬೆಂಗಳೂರು ಗ್ರಾಮೀಣ ಜನರಲ್ಲಿನ **ಹ್** ಧ್ವನಿ ಬಳಕೆಗೆ ತಕ್ಕುದಾದ ದ್ರಾವಿಡ ಭಾಷೆಯ ಕೆಲವು ನಿಯಮಗಳು ಈ ಕೆಳಕಂಡಂತೆ ಇವೆ:

೧. " 'ಪ' ಕಾರವು 'ಹ' ಕಾರವಾಗಿ ಕನ್ನಡದಲ್ಲಿ ಬದಲಾವಣೆಯಾಗುತ್ತದೆ. ಈ ನಿಯಮವು ಹೊಸಗನ್ನಡ ಸಂಬಂಧಿಸಿದಂತೆ ಅವು ಅಚ್ಚಗನ್ನಡ ದ್ರಾವಿಡ ಪದಗಳೇ ಆಗಿರಲಿ ಸಂಸ್ಕೃತ ಪದಗಳೇ ಆಗಿರಲಿ ಪದಾದಿಯ 'ಪ' ಕಾರಕ್ಕೆ ನಿಯತವಾಗಿ ಅನ್ವಯವಾಗುತ್ತದೆ."[೩೨]

೨. ಸಾಮಾಜಿಕವಾಗಿ ಆಡುಮಾತಿನಲ್ಲಿ 'ಹ್' ಹಾರವು 'ಯ್' ಕಾರವಾಗಿ, ಕೆಲವೆಡೆ 'ಇ' ಕಾರವಾಗಿ ಬಳಕೆಯಾಗುವ ಪ್ರವೃತ್ತಿಯಿದೆ. ಅದರಂತೆ ಜಾಲ ಮತ್ತು ಯಲಭಾಗದಲ್ಲಿ ವ್ಯಂಜನವು ಲೋಪಗೊಂಡು ಅದರಲ್ಲಿನ ಸ್ವರವನ್ನು ಮಾತ್ರ ಬಳಸಿಕೊಳ್ಳುತ್ತಿದೆ.

ಈ ಮೇಲಿನ ನಿಯಮದಂತೆ **ಹಿಪ್ಪೆ** ಎಂಬ ಪದವು ದಾ. ಹೆ. ಯಶ ಭಾಗದಲ್ಲಿ **ಹ್** ಘರ್ಷವರ್ಣವಾಗಿ ಬಳಕೆಯಾದರೆ, ಯಲ. ಮತ್ತು ಜಾಲ ಭಾಗಗಳಲ್ಲಿ ವ್ಯಂಜನದ ಬದಲು ಇ (**ಹ್**>ಇ) (**ಹಿಪ್ಪೆ**>**ಇಪ್ಪೆ**) ಬಳಕೆಯಾಗುತ್ತದೆ. ಹಾಗೆಯೇ **ಹಿತ್ತಾಳೆ** ಎಂಬುದರ **ಹ್** ಧ್ವನಿಯಲ್ಲಿನ **ಹ್** ಲೋಪಗೊಂಡು, ಅದರಲ್ಲಿನ ಸ್ವರ ಇ ದಾ.ಹೆ.ಯಶ ಭಾಗದಲ್ಲಿ ಬಳಕೆಯಾದರೆ, ಜಾಲ ಭಾಗದಲ್ಲಿ ಇ ಧ್ವನಿಯೇ ಬಳಕೆಯಾಗುತ್ತಿದೆ. ಆದರೆ ಅಂತ್ಯವರ್ಣದಲ್ಲಿ ವ್ಯತ್ಯಾಸವುಂಟಾಗಿ ಬಳಕೆಯಾಗುತ್ತದೆ. ಬೆಂಗಳೂರು ಗ್ರಾಮೀಣ ಭಾಗದಲ್ಲಿ **ಹ್** ಧ್ವನಿ ಲೋಪಗೊಂಡು, ಇ (**ಇತ್ತಾಳೆ**>**ಇತ್ತಾಡೆ**) ಬಳಕೆಯಾಗುತ್ತಿದೆ. 'ಹಾವು' ಎಂಬ ಶಿಷ್ಟಪದವು ದಾ. ಹೆ. ಯಶ ಭಾಗದಲ್ಲಿ ಹೆಚ್ಚು ವ್ಯತ್ಯಾಸವಾಗದೇ 'ಹಾವು' ಎಂದೇ ಬಳಕೆಯಾದರೆ ಜಾಲ ಭಾಗದಲ್ಲಿ 'ಹ್' ಕಾರವು 'ಪ್' ಕಾರವಾಗಿ ಬಳಕೆಯಾಗುತ್ತಿದೆ. ಅಂದರೆ **ಹಾವು**>**ಪಾಮಿ** ಯಾಗಿದೆ. **ಹಿಕ್ಕೆ** ಎಂಬ ಶಿಷ್ಟಪದವನ್ನು ಬೆಂಗಳೂರು ಗ್ರಾಮೀಣ ಭಾಗವಾದ ದಾ.ಹೆ.ಯಶ. ಭಾಗದಲ್ಲಿ **ಹಿಕ್ಕೆ** ಯು **ಪಿಚ್ಕೆ** ಯಾಗಿ ಜಾಲ ಭಾಗದಲ್ಲಿ **ಹ್** ಕಾರಕ್ಕೆ **ಪ್** ಕಾರವನ್ನು ಬಳಸಿ ಉಚ್ಚಾರವನ್ನು ಮಾಡಲಾಗುತ್ತಿದೆ. ಜಾಲ ಭಾಗದಲ್ಲಿ **ಪಿಕ್ಕೆ** ಎಂಬುದರಲ್ಲಿ **ಹ್** ಕಾರವು **ಪ್** ಕಾರವಾಗಿ ಬಳಕೆಯಾಗುತ್ತಿದೆ. ತೆಲುಗು ಭಾಷೆಯ ಪದ **ಇಪ್ಪ** ವು ಯಲ. ಜಾಲ ಭಾಗದಲ್ಲಿ **ಇಪ್ಪ** ಎಂದು

ಬಳಕೆಯಾಗುತ್ತಿದೆ. ತೆಲುಗಿನ **ಇತ್ತಡಿ** ಎಂಬುದು ಜಾ. ಯಲ ಭಾಗದ ಜನರಲ್ಲಿ **ಇತ್ತಾಡೆ** ಎಂದು ಬಳಕೆಯಾಗುತ್ತಿದೆ. ಹಾಗು ತೆಲುಗಿನ **ಪಿಕ್ಕೆ** ಯು ಜಾಲ ಭಾಗದಲ್ಲಿ **ಪಿಕ್ಕೆ** ಎಂದೆ ಬಳಕೆಯಾಗುತ್ತಿದೆ.

ಬೆಂಗಳೂರು ಗ್ರಾಮೀಣ ಭಾಗವಾದ ದಾ. ಹೆ. ಯಶ ಭಾಗದಲ್ಲಿ **ಹ್** ಕಾರವು **ಯ್** ಕಾರವಾಗಿ ಮತ್ತು ಇ/ಎ ಕಾರವಾಗಿ ಬಳಕೆಯಾಗುತ್ತಿವೆ. ತೆಲುಗಿನ **ಇಪ್ಪಲು,** ಜಾಲ ಭಾಗದಲ್ಲಿ **ಇಪ್ಪೆ, ಇಂಗ, ಇಂಗುವ** ಎಂಬ ಪದಗಳಾಗಿ ಬಳಕೆಯಾಗುತ್ತಿರುವುದು ತೆಲುಗು ದ್ವಿಭಾಷಿಕರ ಪ್ರಭಾವದಿಂದ ಕಂಡು ಬಂದಂತಹ ಮುಖ್ಯ ಬದಲಾವಣೆಯಾಗಿದೆ.

ಈ ರೀತಿಯಲ್ಲಿ ಅರೆ ವ್ಯಂಜನಗಳ ಬಳಕೆಯಲ್ಲಿ ಜಾಲ ಮತ್ತು ಯಲಹಂಕ ಭಾಗದ ಜನರ ಮೇಲೆ ತೆಲುಗು ಭಾಷಿಕರ ಸಂಪರ್ಕದ ಪ್ರಭಾವದಿಂದ ಭಿನ್ನತೆ ಉಂಟಾಗುತ್ತಿರುವುದನ್ನು ಅರಿಯಲಾಗಿದೆ.

ಹೀಗೆ ಬೆಂಗಳೂರು ಗ್ರಾಮೀಣ ಜನರಲ್ಲಿ ಅದರಲ್ಲಿಯೂ ಜಾಲ ಮತ್ತು ಯಲಹಂಕ ಭಾಗದ ದ್ವಿಭಾಷಿಕ ಪರಿಸರದಲ್ಲಿನ ಧ್ವನಿಬಳಕೆಯಲ್ಲಿ ಸ್ವರ, ವ್ಯಂಜನ, ಅನುನಾಸಿಕ ಮತ್ತು ಅರೆವ್ಯಂಜನಗಳನ್ನು ಬಹಳಷ್ಟು ವ್ಯತ್ಯಾಸವಾಗಿ ಬಳಸುತ್ತಿರುವುದು ಕಾಣಸಿಗುತ್ತಿವೆ. ಇಲ್ಲಿ ಉಂಟಾಗುತ್ತಿರುವ ವ್ಯತ್ಯಾಸಗಳಲ್ಲಿ ಕೆಲವು ಬೇರೆ ಭಾಷೆಯ ಸಂಪರ್ಕದಿಂದ ನಡೆಯುತ್ತಿದ್ದರೆ, ಕೆಲವು ಅನ್ಯ ಭಾಷೆಯ ಪ್ರಭಾವದಿಂದ ಉಂಟಾಗಿವೆ. ಈ ಧ್ವನಿ ವ್ಯತ್ಯಾಸಗಳ ಮೂಲಕ ಬೆಂಗಳೂರು ಗ್ರಾಮೀಣ ಭಾಷೆಯ ಮೇಲೆ ತೆಲುಗು ಭಾಷೆಯ ಪ್ರಭಾವವು ಎಷ್ಟರ ಮಟ್ಟಿಗೆ ಇದೆ ಎಂಬುದನ್ನು ಅರಿಯಬಹುದಾಗಿದೆ.

೫.೧.೫ ಧ್ವನಿ ವ್ಯತ್ಯಾಸದ ತೌಲನಿಕ ವಿವರ

ಬೆಂಗಳೂರು ಗ್ರಾಮೀಣ ಜನರ ಆಡುಮಾತನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಅವರ ಧ್ವನಿಗಳ ಬಳಕೆಯಲ್ಲಿ ಮೂರು ಮುಖ್ಯ ಬದಲಾವಣೆಗಳನ್ನು ಗಮನಿಸಬಹುದು

೧. ತೆಲುಗು ಭಾಷಾಪರಿಸರದ ಪ್ರಭಾವದಿಂದ ಉಂಟಾದ ಸ್ವರ ಬದಲಾವಣೆಗಳು

೨. ತಮಿಳು ಭಾಷಾ ಪ್ರಭಾವದಿಂದಾದ ಧ್ವನಿಗಳ ಬದಲಾವಣೆಗಳು.

೩. ಕನ್ನಡ ಪದಗಳ ಸ್ವರಾನೂರೂಪತೆ, ಸರಳೀಕರಣ, ಸೌಲಭ್ಯಕಾಂಕ್ಷೆಯಿಂದ ಉಂಟಾದ ಧ್ವನಿಗಳ ಬದಲಾವಣೆಗಳು,

ಹೀಗೆ ಮೂರು ರೀತಿಯಲ್ಲಿ ಬೆಂಗಳೂರು ಗ್ರಾಮೀಣ ಭಾಗದ ಜನರ ಧ್ವನಿಗಳ ಬಳಕೆಯಲ್ಲಿ ವ್ಯತ್ಯಾಸವುಂಟಾಗುತ್ತಿದೆ.

ತೆಲುಗು ಪ್ರಭಾವ : ಬೆಂಗಳೂರು ಗ್ರಾಮೀಣ ಜನರ ಆಡುಮಾತನ್ನು ಗಮನಿಸಿದಾಗ ದಾಸನಪುರ, ಹೆಸರಘಟ್ಟ, ಯಶವಂತಪುರ ಭಾಗಕ್ಕಿಂತ ಜಾಲ ಮತ್ತು ಯಲಹಂಕ ಭಾಗದಲ್ಲಿ ತುಂಬಾ ಭಿನ್ನವಾದ ಧ್ವನಿಗಳು ಬಳಕೆಯಾಗುತ್ತಿವೆ. ಈ ಭಾಗದ ಜನರ ಆಡುಮಾತಿನಲ್ಲಿ ತೆಲುಗು ಪದಗಳ ಬಳಕೆ ಹೆಚ್ಚಾಗಿವೆ. ಅಂತಹ ಕೆಲವು ಪದಗಳನ್ನು ಈ ಪಟ್ಟಿಯಲ್ಲಿ ಕೊಡಲಾಗಿದೆ.

ಕನ್ನಡ ಪದ	**ತೆಲುಗು**	**ಜಾಲ, ಯಲಹಂಕ**	**ದಾ, ಹೆ, ಯಶ**
ಅವನು	ಅತಡು	ಆತ್ನು	ಅವ್ನು
ಅಷ್ಟು	ಅಂತೇಸು	ಆಸು	ಅಸ್ಟು
ಆರಿದ್ರಾ	ಆರ್ದೆ	ಆರ್ದೆ	ಆದ್ರಿ
ಏರು	ಎಕ್ಕು	ಎಕ್ಕು	ಅತ್ತು
ಡೊಂಕು	ದೊಂಕ	ದೊಂಕ	ಡೊಂಕ
ಕನ್ನಡಿ	ಅದ್ದಮು	ಅದ್ದ	ಕನ್ನುಡಿ
ಗದ್ದಿಗೆ	ಗಾದಿ	ಗಾದಿ	ಗದ್ಗೆ
ಡಾಂಬರು	ಡಾಮರು	ಡಾರು	ಟಾರು
ಮುದುಕಿ	ಮುಸಲಿ	ಮುಶ್ಲಿ	ಮುದ್ಕಿ
ಕೂದಲು	ಕುರುಲು	ಕೂರ್ಲು	ಕೂದ್ಲು
ಸತ್ತೆ	ಸಪ್ಪ	ಸಪ್ಪೆ	ಸತ್ತೆ
ಬೆಳ್ಳಗೆ	ತೆಲ್ಲಗ	ತೆಳ್ಗೆ	ಬೆಳ್ಗೆ

ಕೊಳಾಯಿ	ಕುಳಾಯಿ	ಕುಳಾಯಿ	ಕೊಳಾಯಿ
ಈರಲು	ಈರಳು	ಇರ್ಳು	ಈರ್ಳು
ಕೂರಿಗೆ	ಕೂಡಿಗ	ಕೂಡ್ಗೆ	ಕೂರ್ಗೆ
ಹಿತ್ತಾಳೆ	ಇತ್ತಡಿ	ಇತ್ತಾಡೆ	ಇತ್ತಾಡೆ
ಹಿಕ್ಕೆ	ಪಿಕ್ಕೆ	ಪಿಕ್ಕೆ	ಪಿಚ್ಕೆ

ಜಾಲ ಮತ್ತು ಯಲಹಂಕ ಭಾಗದಲ್ಲಿ ತೆಲುಗು ಭಾಷೆಯ ಸಂಪರ್ಕ ಹೆಚ್ಚಾಗಿ ಅಲ್ಲಿನ ಜನರ ಆಡುಮಾತಿನಲ್ಲಿ ಪ್ರಭಾವ ಬೀರಿರುವುದನ್ನು ಈ ಮೇಲಿನ ಪಟ್ಟಿಯ ಮೂಲಕ ತೌಲನಿಕವಾಗಿ ಗುರುತಿಸಿದ್ದೇನೆ. ಇಲ್ಲಿ ತೆಲುಗು ಭಾಷೆಯ ಪ್ರಭಾವವು ಹೆಚ್ಚು ಜಾಲ ಮತ್ತು ಯಲಹಂಕ ಭಾಗದಲ್ಲಿ ಉಂಟಾಗುತ್ತಿದೆ. ಬೆಂಗಳೂರು ಗ್ರಾಮೀಣ ಪ್ರದೇಶವಾದ ಜಾಲ ಮತ್ತು ಯಲಹಂಕ ಪೂರ್ವ ಭಾಗದ ಹಳ್ಳಿಯ ಜನರಲ್ಲಿ ಈ ವ್ಯತ್ಯಾಸಗಳು ಹೆಚ್ಚು ಕಾಣಿಸುತ್ತವೆ.

ತಮಿಳು ಪ್ರಭಾವ: ಬೆಂಗಳೂರು ಗ್ರಾಮೀಣ ಭಾಗಕ್ಕೆ ತಮಿಳು ಪ್ರಭಾವ ಅಷ್ಟೇನೂ ಪರಿಣಾಮಕಾರಿಯಾಗಿ ಆಗಿಲ್ಲ. ಜಾಲ ಭಾಗದಲ್ಲಿ ಮತ್ತು ಯಲಹಂಕ ಪೂರ್ವ ಭಾಗದಲ್ಲಿನ ಬಂಡೆಯ ಕೆಲಸ ಮಾಡುವವರ ಸಂಪರ್ಕದಿಂದ ಕೆಲವು ಪದಗಳಲ್ಲಿ ತಮಿಳು ಭಾಷೆಯ ಪ್ರಭಾವವನ್ನು ಕಾಣಬಹುದು. ಉದಾಹರಣೆಗೆ ತಮಿಳು ಪದಗಳಾದ ಅವನುಕ್ > ಅವುಂಕ (ಅವನಿಗೆ), ಎದಕು >ಏಂಕ(ಏತಕ್ಕೆ), ಯಾರ್ಕ್ > ಯಾರ್ಕ (ಯಾರಿಗೆ) ಕುಳಾಯ್ > ಕುಳಾಯಿ ಎಂದು ಜಾಲಭಾಗದ ಜನರಲ್ಲಿ ಬಳಕೆಯಾಗುತ್ತಿವೆ. ಆ ಮೂಲಕ ತಮಿಳು ಭಾಷಿಕರ ಪ್ರಭಾವವು ಈ ಭಾಗದಲ್ಲಿದೆ.

ಕನ್ನಡ ಪದ	**ತಮಿಳು**	**ಜಾಲ, ಯಲಹಂಕ**	**ದಾ, ಹೆ, ಯಶ**
ಅವನಿಗೆ	ಅವನುಕ್	ಅವುಂಕ	ಅವನ್ಗೆ
ಏತಕ್ಕೆ	ಎದಕು	ಏಂಕ/ಯೇಂದ್ಕ	ಏನ್ಕೆ
ಕೊಳಾಯಿ	ಕುಳಾಯ್	ಕುಳಾಯಿ	ಕೊಳಾಯಿ

ಬೆಕ್ಕು	ಪೂಣೆ	ಊನೆ	ಬೆಕ್ಕು
ಚಪ್ಪರ ಅವರೆಕಾಯಿ	ಚಿಕ್ಕಡಿ	ಸಿಕ್ಡಿಗಾಯ್	ಚಪ್ರ್‌ರವ್ರೆಕಾಯ್

ಕನ್ನಡದ ಸೌಲಭ್ಯಕಾಂಕ್ಷೆ, ಸ್ವರಾನೂರೂಪತೆಯಿಂದಾದ ಬದಲಾವಣೆಗಳು : ಬೆಂಗಳೂರು ಗ್ರಾಮೀಣ ಭಾಗದಲ್ಲಿ ಜನರ ಆಡು ಮಾತಿನಲ್ಲಿ ಕೆಲವೊಂದು ಕನ್ನಡ ಪದಗಳ ಸ್ವರಪಲ್ಲಟ, ಸ್ವರಾನೂರೂಪತೆ, ಸೌಲಭ್ಯಕಾಂಕ್ಷೆಯಿಂದ ಕೆಲವು ಧ್ವನಿಗಳ ಬದಲಾವಣೆಯಾಗುತ್ತಿವೆ. ಉದಾಹರಣೆಗೆ :

ಬ್ರಹ್ಮ >ಬರ್ಮ > ಬರಮ

ತಾಮ್ರ > ತಾಮ್ರ>ತಾಂಬ್ರ

ಆಮ್ಲಜನಕ >ಆಂಬ್ಲಜನ್ಕ > ಆಂಬ್ಲಜನಕ

ಡಾಕ್ಟರ್> ಡಾಕುಟ್ರು > ಡಾಕಡ್ರು

ಕೊಬ್ಬರಿ > ಕೊಬ್ರಿ > ಕೊಪ್ರಿ

ಹೀಗೆ ಉಚ್ಚಾರಣೆಯ ಸೌಲಭ್ಯಕ್ಕಾಗಿ ಹೊಸ ಧ್ವನಿಯೊಂದನ್ನು ಬಳಸಿ ಭಿನ್ನವಾಗಿ ಬೆಂಗಳೂರು ಗ್ರಾಮೀಣ ಜನರಲ್ಲಿ ಬಳಕೆಯಾಗುತ್ತವೆ. ಈ ರೀತಿಯಲ್ಲಿ ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಜನರಲ್ಲಿ ಧ್ವನಿಗಳು ಬಳಕೆಯಾಗುತ್ತಿವೆ.

೫.೨ ಆಡುಮಾತಿನಲ್ಲಿರುವ ಆಕೃತಿಮಾಗಳಲ್ಲಿನ ವ್ಯತ್ಯಾಸ

ಆಡುಮಾತಿನಲ್ಲಿರುವ ಆಕೃತಿಮಾಗಳನ್ನುನಾಮಪದ, ಕ್ರಿಯಾಪದ ಮತ್ತು ಅವ್ಯಯಗಳಾಗಿ ವಿಭಾಗಿಸಿ ಅಧ್ಯಯನವನ್ನು ಮಾಡಲಾಗಿದೆ.

೫.೨.೧ ನಾಮ ಆಕೃತಿಮಾ

"ಕನ್ನಡದಲ್ಲಿ ನಾಮಪ್ರಕೃತಿಗಳಿಗೆ ಬೇರೆ ಬೇರೆ ಬಗೆಯ ಪ್ರತ್ಯಯಗಳು ಸೇರಿ ನಾಮಪದಗಳಾಗುತ್ತವೆ."[೩೩] ನಾಮಪದಗಳು ನಾಮಪ್ರಕೃತಿಗಳನ್ನು, ಕೆಲವಡೆ ವಿಶೇಷಣ ಹಾಗೂ ನಾಮಸೂಚಕಾವ್ಯಯಗಳನ್ನು

ಒಳಗೊಂಡಿರುತ್ತವೆ. "ನಾಮಪದದ ಮೂಲರೂಪವೇ ನಾಮಪ್ರಕೃತಿ. ಇವು ಕ್ರಿಯೆಯ ಅರ್ಥವನ್ನು ಕೊಡದಿರುವ ಶಬ್ದಗಳಾಗಿವೆ. ಇವು ಪ್ರಾತಿಪದಿಕಗಳಾಗಿವೆ."[೩೪] ಇಂತಹ ಪ್ರಾತಿಪದಿಕಗಳಿಗೆ ವಚನ, ವಿಭಕ್ತಿಗಳು ಸೇರಿ ನಾಮಪದಗಳಾಗುತ್ತಿವೆ.

ನಾಮಪದಗಳ ಅಧ್ಯಯನದಲ್ಲಿ ಮುಖ್ಯವಾಗಿ ಲಿಂಗ, ವಚನ, ವಿಭಕ್ತಿ, ಸರ್ವನಾಮಗಳು, ಗುಣವಚನಗಳಿವೆ.

೫.೨.೧.೧ ಲಿಂಗಗಳು

ನಾಮಪ್ರಕೃತಿಗಳಲ್ಲಿ ಪ್ರಮುಖವಾಗಿ ಮಹತ್ ಮತ್ತು ಅಮಹತ್ ಎಂದು ದ್ವಿವಿಧ ಲಿಂಗವನ್ನು ತೆಲುಗು ಭಾಷೆಯು ಒಳಗೊಂಡಿದ್ದು, ಆಲೋಚನಾ ಶಕ್ತಿಯುಳ್ಳ ಜೀವಿಗಳು ಮಹತ್ ವರ್ಗಕ್ಕೆ ಸೇರಿದರೆ, ಆಲೋಚನಾಶಕ್ತಿಯಿಲ್ಲದ ಜೀವಿಗಳು ಮತ್ತು ಅಜೀವಿಗಳು ಅಮಹತ್ ಲಿಂಗವನ್ನು ನಿರ್ಧರಿಸುತ್ತವೆ. ಆದರೆ ಬೆಂಗಳೂರು ಗ್ರಾಮೀಣ ಭಾಗದಲ್ಲಿ ತ್ರಿವಿಧ ವರ್ಗೀಕರಣವು ಇದೆ. ಕನ್ನಡಲ್ಲಿ ತ್ರಿವಿಧ ವರ್ಗೀಕರಣವಿದೆ. ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕ ಲಿಂಗವಾಗಿ ಬಳಕೆಯಲ್ಲಿದೆ.

ದ್ರಾವಿಡದಲ್ಲಿ ಲಿಂಗವ್ಯವಸ್ಥೆ

"ದ್ರಾವಿಡ ಭಾಷೆಗಳಲ್ಲಿ ಲಿಂಗ ವ್ಯವಸ್ಥೆ ಖಚಿತವೂ ಸರಳವೂ ಆಗಿದೆ. ಇಲ್ಲಿ ಸಾಮಾನ್ಯವಾಗಿ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕ ಲಿಂಗವೆಂದು ಮೂರು ಬಗೆಯ ವಿಂಗಡನೆ ತೋರಿಬಂದರೂ ಬುದ್ಧಿಶಕ್ತಿಯಿರುವ ಬುದ್ಧಿಕಡಿಮೆಯಿರುವ ಮಹತ್ ಅಮಹತ್ ಇಲ್ಲವೆ ಮೇಲುವರ್ಗ ಮತ್ತು ಕೆಳವರ್ಗ ಎಂಬ ವರ್ಗಾನುಸಾರಿಯಾದ ಲಿಂಗ ವಿಂಗಡಣೆ ಇದೆ. ಪ್ರಥಮ ಪುರುಷ ಏಕವಚನದಲ್ಲಿ ಸ್ತ್ರೀಲಿಂಗ ಮತ್ತು ನಪುಂಸಕ ಲಿಂಗಗಳು 'ಅಮಹತ್' ವರ್ಗದಲ್ಲಿ ಸೇರಿದರೆ ಬಹುವಚನ ಸ್ತ್ರೀ ಲಿಂಗವು 'ಮಹತ್'ವರ್ಗಕ್ಕೆ ಸೇರುತ್ತದೆ. ದ್ರಾವಿಡ ಭಾಷೆಯಲ್ಲಿ ಅರ್ಥಾನುಗುಣವಾಗಿ ಲಿಂಗ ನಿರ್ಧಾರವಾಗುತ್ತದೆ."[೩೫] ಈ ಮಾತುಗಳು ಕನ್ನಡ ಮತ್ತು ತೆಲುಗು ಭಾಷೆಯನ್ನು ಕುರಿತು ಹೇಳಿದರೆ, "ಮೂಲ ದ್ರಾವಿಡ ಭಾಷೆಯಲ್ಲಿ ಲಿಂಗ ವಿಂಗಡನೆ ಮಹತ್ ವರ್ಗ ಅಮಹತ್‌ವರ್ಗ ಎಂದು ಎರಡೇ ಬಗೆಯಾಗಿ ಇತ್ತು"[೩೬]

ಬೆಂಗಳೂರು ಗ್ರಾಮೀಣ ಜನರ ಲಿಂಗವ್ಯವಸ್ಥೆಯು ಪ್ರಮುಖವಾಗಿ ತ್ರಿವಿಧ ವರ್ಗೀಕರಣವನ್ನು ಒಳಗೊಂಡಿದೆ. ಅವು ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗಗಳಾಗಿವೆ. ಗಂಡನ್ನು ಸೂಚಿಸುವುದು ಪುಲ್ಲಿಂಗ, ಸ್ತ್ರೀಯರನ್ನು ಸೂಚಿಸುವುದು ಸ್ತ್ರೀಲಿಂಗ, ಗಂಡು, ಹೆಣ್ಣು ಎರಡು ಅಲ್ಲದ್ದು ನಪುಂಸಕಲಿಂಗವಾಗಿ ಬಳಕೆಯಾಗುತ್ತಿದೆ. ಬೆಂಗಳೂರು ಗ್ರಾಮೀಣ ಭಾಗದಲ್ಲಿ ಅ ಕಾರಾಂತವು ಪುಲ್ಲಿಂಗವನ್ನು, ಇ, ಈ

ಕಾರಾಂತಗಳು ಸ್ತ್ರೀಲಿಂಗವನ್ನೂ, ಉ ಕಾರಾಂತವು ನಪುಂಸಕಲಿಂಗವನ್ನು ನಿರ್ಧರಿಸುತ್ತಿವೆ. ಆದರೆ ಬೆಂಗಳೂರಿನ ಜಾಲ ಭಾಗಗಳಲ್ಲಿ ಇವುಗಳ ಬಳಕೆಯಲ್ಲಿ ಕೆಲವು ಭಿನ್ನತೆಯನ್ನು ಕಾಣಬಹುದು.

೫..೨.೧.೧.೧ ಪುಲ್ಲಿಂಗ

ಪುಲ್ಲಿಂಗ ಪದಗಳ ಬಳಕೆಯ ದ್ರಾವಿಡ ಭಾಷಾ ನಿಯಮಗಳು ಇಂತಿವೆ:

೧. **“**ಕನ್ನಡದಲ್ಲಿ ಪುಲ್ಲಿಂಗ ಏಕವಚನ ಪ್ರತ್ಯಯವಾದ ‘ಅನು’ ಎಂಬುದು ತಮಿಳಿನ ‘ಅನ್’ ಗೆ ಸಂವಾದಿಯಾದುದು. ಇಲ್ಲಿಯ ‘ಉ’ ಕಾರವು ಹೊಸಗನ್ನಡ ಸಂದರ್ಭದಲ್ಲಿ ಉಂಟಾದ ಒಂದು ಸ್ವರ ಸೌಲಭ್ಯವಲ್ಲದೆ ಬೇರೇನೂ ಅಲ್ಲ. ತೆಲುಗಿನಲ್ಲಿ ಪುಲ್ಲಿಂಗ ಏಕವಚನ ಪ್ರತ್ಯಯಗಳಾಗಿ ‘ಡು’, ‘ಉಡು’, ಅಥವಾ ‘ಅಡು’ ಗಳಿವೆ. ಅಥವಾ ‘ನ್ಡು’, ‘ಉನ್ಡು’, ಅಥವಾ ‘ಅನ್ಡು’ ಪದಗಳಿವೆ. ಇಲ್ಲಿಯ‘ನ’ ಕಾರವು ಅಸ್ಪಷ್ಟ ಉಚ್ಚಾರಣೆಗೊಳಪಡುವುದಾದರೂ ಅದು ಉಚ್ಚರಿಸಲ್ಪಡಲೇಬೇಕಾದ ವರ್ಣವದು**”**[೩೭]

ಈ ನಿಯಮದಂತೆ ಬೆಂಗಳೂರಿನ ಜಾಲ ಭಾಗಗಳಲ್ಲಿ ಮಾನವವಾಚಕ ಪ್ರಕೃತಿಯಲ್ಲಿ ಕೆಲವು ಸಂದರ್ಭದಲ್ಲಿ **ಅ** ಕಾರಾಂತವು ನಪುಂಸಕದಲ್ಲಿ **ಉ** ಕಾರಾಂತವಾಗಿ ಬಳಕೆಯಾಗುತ್ತಿದೆ. ಕಾರಣ ಜಾಲ ಭಾಗದಲ್ಲಿ ತೆಲುಗು ಮಾತನಾಡುವವರು ಹೆಚ್ಚಾಗಿದ್ದಾರೆ. ತೆಲುಗು ಭಾಷೆಯಲ್ಲಿ ನಾಮಪದಗಳಲ್ಲಿ ಅಂತ್ಯ ‘ನ್ಡು’ ಪ್ರತ್ಯಯದ ಬಳಕೆಯು ಹೆಚ್ಚು ಕಂಡುಬರುತ್ತವೆ. (ಉನ್ಡು, ಅನ್ಡು, ವಾನ್ಡು) ಅದರಂತೆ ತೆಲುಗಿನ ಪ್ರಭಾವದಿಂದ ಜಾಲ ಜನರಲ್ಲಿ **ನ್** ಕಾರದ ಬಳಕೆಯಿದ್ದರೂ, ಡ್ ಕಾರದ ಬಳಕೆ ಇಲ್ಲ. ಆದರೆ ದಾಸನಪುರ ಭಾಗದಲ್ಲಿ ಹೆಚ್ಚು ಶಿಷ್ಟತೆಗೆ ಹತ್ತಿರವಾದ ಪದಬಳಕೆಯಿದೆ. ಪುಲ್ಲಿಂಗ ವಾಚಿ **ಗಾರ/ದಾರ** ಎಂಬುದು ದಾ.ಹೆ.ಯ. ಭಾಗದಲ್ಲಿ ಶಿಷ್ಟತೆಗೆ ಹತ್ತಿರವಾದಂತೆ ಬಳಕೆಯಾಗುತ್ತಿದ್ದರೆ, ಜಾಲಭಾಗದಲ್ಲಿ **ಗಾರ್ನು** ಎಂದು ಬಳಕೆಯಾಗುತ್ತಿದೆ. ತೆಲುಗಿನಲ್ಲಿ ಪುಲ್ಲಿಂಗ ವಾಚಿಯಾಗಿ **ಗಾರ್ನು** ಎಂಬ ಪದಬಳಕೆಯಿದೆ. ಆ ಪದದ ಪ್ರಭಾವವು ಜಾಲದ ಜನರಲ್ಲಿ ಕಂಡುಬರುತ್ತಿದೆ. ಈ ಕೆಳಗಿನ ಪಟ್ಟಿಯಲ್ಲಿ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ಆಧರಿಸಿ ಈ ಅಂಶವನ್ನು ಗಮನಿಸಲಾಗಿದೆ.

(ಇಲ್ಲಿ ದಾ.ಹೆ.ಯ ಭಾಗವು ದಾಸನಪುರ, ಹೆಸರಘಟ್ಟ, ಯಶವಂತಪುರ ಗ್ರಾಮೀಣ ಭಾಗವಾಗಿದೆ. ಜಾಲ ಭಾಗವು ಜಾಲ ಮತ್ತು ಯಲಹಂಕ ಭಾಗವನ್ನು ಒಳಗೊಂಡಿದ್ದಾಗಿದೆ)

ಶಿಷ್ಟಪದ	ದಾ.ಹೆ.ಯ. ಭಾಗ	ಜಾಲ ಭಾಗ
ರಾಜ	ರಾಜ	ರಾಜ್ನು
ಹಾವಾಡಿಗ	ಹಾವಾಡ್ಗ	ಆವಾಡ್ಗ್ನು
ಕರಿಯಪ್ಪ	ಕರ್ಯಪ್ಪ	ಕರ್ಯಪ್ಪ್ನು
ಅಪ್ಪ	ಪೋ/ ಅಪೊ	ಅಪ/ಅಪ್ನು
ಆರಂಭದಾರ	ಆರಂಭ್ಗಾರ	ಆರಂಬ್ಗಾರ್ನು
ವ್ಯವಸಾಯಗಾರ	ಯವಸಾಯ್ಗಾರ	ಎವಸಾಯ್ಗಾರ್ನು

೫..೨.೧.೧..೨. ಸ್ತ್ರೀಲಿಂಗ

ಸ್ತ್ರೀಲಿಂಗ ಪ್ರತ್ಯಯಗಳ ಬಳಕೆಯ ದ್ರಾವಿಡ ಭಾಷಾ ನಿಯಮಗಳು ಇಂತಿವೆ:

೧. "ಮೂಲ ದ್ರಾವಿಡ 'ಣ್' ಹಾಗೂ 'ಳ್' ಸ್ತ್ರೀ ಲಿಂಗಸೂಚಕಗಳು ಎಲ್ಲ ಮಧ್ಯದ್ರಾವಿಡ ಭಾಷೆಗಳಲ್ಲಿ 'ನ್' ಹಾಗೂ 'ಲ್' ಗಳಾಗಿವೆ. ತೆಲುಗಿನಲ್ಲೂ ಆಗಿವೆ."[೩೭]

೨. "ಸ್ತ್ರೀ ಸಂಬಂಧವಾಚಿ ಪ್ರತ್ಯಯ 'ಆಳ್' ಮಧ್ಯ ದ್ರಾವಿಡ ಭಾಷೆಗಳಲ್ಲಿ ಬಳಕೆಯಾಗುವಂತೆ ತೆಲುಗಿನಲ್ಲಿಯೂ ಆಗುತ್ತದೆ.

ಉದಾ: ಕೋಡಲು(ಸೊಸೆ) (ಕೋಳ್+ಆಳ್)

ಚೆಲ್ಲಲು (ತಂಗಿ) (ಚೇಲ್+ಆಲ್)

ಮರೆದಲು(ನಾದಿನಿ) (ಮರಂದ್+ಆಳ್)"[೩೮]

೩. "ದಕ್ಷಿಣ ದ್ರಾವಿಡ ಭಾಷೆಗಳು 'ಆಳ್' ಅಥವಾ 'ಅಳ್' ಪ್ರತ್ಯಯವನ್ನು ಉಪಯೋಗಿಸಿ ಸ್ತ್ರೀವರ್ಗ ಸೂಚಕ ಶಬ್ದಗಳನ್ನು ನಿರ್ಮಿಸಿಕೊಂಡಿದೆ."[೩೯]

ಈ ಮೇಲಿನ ನಿಯಮವು ಬೆಂಗಳೂರು ಗ್ರಾಮೀಣ ಭಾಗದ ಜಾಲ ಭಾಗದಲ್ಲಿ ಕೆಲವು ವ್ಯತ್ಯಾಸಗಳಿಗೆ ಒಳಗಾಗಿದೆ.

ಬೆಂಗಳೂರು ಗ್ರಾಮೀಣ ಭಾಗದಲ್ಲಿ ಸ್ತ್ರೀಲಿಂಗ ಪ್ರತ್ಯಯವಾಗಿ **ಇ** ಕಾರವು ಬಳಕೆಯಾಗುತ್ತಿದೆ. ದಾಸನಪುರ ಭಾಗಗಳಲ್ಲಿ ಶಿಷ್ಟರೂಪೀಕರಣವಾಗುತ್ತಿದ್ದು, ಜಾಲ ಭಾಗಗಳಲ್ಲಿ ಪದಶಃ ಬದಲಾವಣೆಗೊಂಡು ಬಳಕೆಯಾಗುತ್ತಿದೆ. ಕೆಲವು ಸ್ತ್ರೀಲಿಂಗ ನಾಮರೂಪಗಳಲ್ಲಿ ವ್ಯಂಜನಗಳು ಹ್ರಸ್ವೀಕರಣಗಳಾಗುತ್ತಿವೆ. **ರ್** ಕಾರವು **ಲ್** ಕಾರವಾಗುವುದು ತೆಲುಗು ಭಾಷೆಯಲ್ಲಿ ಸಾಮಾನ್ಯವಾಗಿದ್ದು, ಆ ಬದಲಾವಣೆಯನ್ನು ಜಾಲ ಭಾಗದಲ್ಲಿಯೂ ಕಾಣಬಹುದು. **ದ್** ಕಾರವು **ಸ್/ಶ್** ಕಾರವಾಗಿ **ಲ್** ದ್ವಿತ್ವವಾಗಿದೆ. ಹೀಗೆ **'ಲ್'** ಕಾರ ಅಂತ್ಯವಾಗುವ ರೂಪಗಳು ಬಳಕೆಯಾಗುತ್ತಿವೆ. ತೆಲುಗಿನಲ್ಲಿ **ಲ್** ಕಾರವು ಸಾಮಾನ್ಯ ಬಳಕೆಯಾಗಿದೆ. ಇದರ ಪ್ರಭಾವವಾಗಿ ಜಾಲ ಭಾಗದಲ್ಲಿ **ಲ್** ಕಾರವು ಬಳಕೆಯಾಗುತ್ತಿದೆ. **ನ್** ಅನುನಾಸಿಕವು ಮತ್ತು ನಪುಂಸಕಲಿಂಗ ಪ್ರತ್ಯಯವಾದ **ಲ್/ಲು** ಎಂಬುದು ಜಾಲ ಮತ್ತು ಯಲಹಂಕ ಭಾಗದಲ್ಲಿ **ಳ್/ಳು** ಆಗಿ ಬಳಕೆಯಾಗುತ್ತಿದೆ. ತೆಲುಗಿನಲ್ಲಿ ಸ್ತ್ರೀಲಿಂಗವು ಅಮಹತ್ ವರ್ಗಕ್ಕೆ ಸೇರಿದ್ದು, ನಪುಂಸಕ ಪ್ರತ್ಯಯ **ಳು/ ಅಲು** ಎಂದಾಗಿ ಬಳಕೆಯಾಗುತ್ತಿದೆ. ಇಲ್ಲಿ ಸ್ತ್ರೀ ಲಿಂಗ ಸೂಚಕವು **ಲ್** ಎಂದು ಮೃದುಲ ರೂಪವಾಗಿ ಬಳಕೆಯಾಗುತ್ತಿದೆ.

ಶಿಷ್ಟಪದ	**ದಾ.ಹೆ.ಯ. ಭಾಗ**	**ಜಾಲ ಭಾಗ**
ಮುದುಕಿ	ಮುದ್ಕಿ	ಮುಸ್ಲಿ/ಮುಶ್ಲಿ
ಹುಡುಗಿ	ಹುಡ್ಗಿ	ಉಡ್ಗಿ/ಐದಿ(ಐದ್ಲು)
ಕುರುಡಿ	ಕುರ್ಡಿ	ಕುಲ್ಡಿ
ಕಿವುಡಿ	ಕಿವ್ಡಿ	ಶೆವ್ಪಿ
ಕುರುಬಿ	ಕುರ್ಬಿ	ಕುರ್ವಿ (ಕುರುವ್ರೋಳ್)

೫..೨.೧.೧.೩ ನಪುಂಸಕಲಿಂಗ

ನಪುಂಸಕ ಲಿಂಗ ಭೇದವು ಹೆಚ್ಚು ಏಕವಚನ ಮತ್ತು ಬಹುವಚನ ಪದಗಳ ಬಳಕೆಯಲ್ಲಿ ಕಾಣಿಸುತ್ತವೆ. ದ್ರಾವಿಡ ಭಾಷೆಯಲ್ಲಿ ನಪುಂಸಕ ಲಿಂಗವನ್ನು ಬುದ್ಧಿಯಿಲ್ಲದ/ಅಜೀವ ವರ್ಗಗಳಲ್ಲಿ ಸೇರಿಸಿದ್ದಾರೆ. ತೆಲುಗಿನಲ್ಲಿ ಅಮಹತ್ ವರ್ಗಗಳಲ್ಲಿ ನಪುಂಸಕ ಲಿಂಗಗಳು ಬಳಕೆಯಾಗುತ್ತಿವೆ. ನಪುಂಸಕ ಲಿಂಗ ಬಳಕೆಯ ಕೆಲವು ನಿಯಮಗಳು ಇಂತಿವೆ:

೧. "ಪ್ರತಿಯೊಂದು ದ್ರಾವಿಡ ನಾಮಪದವೂ ಸಹಜವಾಗಿಯೇ ನಪುಂಸಕಲಿಂಗ ವಾಗಿರುತ್ತದೆ ಅಥವಾ ಲಿಂಗರಹಿತವಾಗಿರುತ್ತದೆ. ಪುಲ್ಲಿಂಗ ಇಲ್ಲವೇ ಸ್ತ್ರೀಲಿಂಗ ಪ್ರತ್ಯಯಗಳನ್ನು ಪ್ರಯುಕ್ತಗೊಳಿಸಲಾಗಿ ಅದು ಕ್ರಮವಾಗಿ ಪುಲ್ಲಿಂಗವೋ, ಸ್ತ್ರೀಲಿಂಗವೋ ಆಗುತ್ತದೆ."[೪೦]

೨. "ದ್ರಾವಿಡ ಭಾಷೆಗಳಲ್ಲಿ ಬುದ್ಧಿಯಿಲ್ಲದವುಗಳೆಂದು ಎಲ್ಲ ಪ್ರಾಣಿವರ್ಗವನ್ನೂ ಜಾತಿರಹಿತ ಅಥವಾ ನಪುಂಸಕ ಲಿಂಗ ಜಾತಿಯಲ್ಲಿ ಸೇರಿಸಲಾಗಿದೆ. ಅಂತಹ ಪ್ರಾಣಿಗಳನ್ನು ಸೂಚಿಸುವ ನಾಮಪದಗಳನ್ನು ಏಕವಚನವೇ ಇರಲಿ ಬಹುವಚನವೇ ಇರಲಿ ಸ್ಪಷ್ಟವಾಗಿ ನಪುಂಸಕಲಿಂಗವೆಂದೇ ಪರಿಗಣಿಸಲಾಗುತ್ತದೆ."[೪೧]

೩. "ನಪುಂಸಕ ಲಿಂಗ ಬಹುವಚನ ಪ್ರತ್ಯಯ 'ಅ' ದ್ರಾವಿಡ ಭಾಷೆಗಳಲ್ಲಿ ನಪುಂಸಕಲಿಂಗ ಬಹುವಚನ ಪ್ರತ್ಯಯ 'ಗಳ್' ಮತ್ತದರ ವಿವಿಧ ರೂಪಗಳನ್ನು ಹೊರತು ಪಡಿಸಿದಂತೆ ಹ್ರಸ್ವ 'ಅ' ಬಳಕೆಯ ನೆನಪಿಸುವ ಉಚ್ಚಾರಣೆ ಕೇಳಿ ಬರುತ್ತದೆ."[೪೨]

೪. "ತೆಲುಗು ಭಾಷೆಯಲ್ಲಿ ನಪುಂಸಕ ಲಿಂಗ 'ಲು' ಪ್ರತ್ಯಯ ಬಳಕೆಯಿದೆ. ಈ ಲು ಕಾರವು ನಪುಂಸಕದ ಬಹುವಚನವಾದುದಾದರೆ ಅದರ ಶುದ್ಧರೂಪವು ಅರು ಎಂಬುದೇ ಆಗಿರುತ್ತದೆ."[೪೩]

೫. "ದ್ರಾವಿಡ ಭಾಷೆಯಲ್ಲಿ ಬಹುವಚನದ ಕಳ್>ಗಳ್, ಕಳ್>ಳ್ ಳ್>ಲ್ ಪ್ರತ್ಯಯಗಳು ನಪುಂಸಕ ನಾಮಪದಗಳ ಪ್ರತ್ಯಯವಾಗಿವೆ. ಕನ್ನಡದಲ್ಲಿ ಕಳ್/ಳ್ ಗಳಂತೆ ತೆಲುಗಿನಲ್ಲಿ ಅಲು/ ಲ್ ಪ್ರತ್ಯಯಗಳು ಬಹುವಚನ ನಪುಂಸಕ ನಾಮಪದಗಳಲ್ಲಿ ಬಳಕೆಗೊಂಡಿವೆ"[೪೪]

ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಪ್ರದೇಶದ ಜನರ ಆಡುನುಡಿಯಲ್ಲಿ ಪ್ರಾಣಿವಾಚಕಗಳು ನಪುಂಸಕ ಲಿಂಗವಾಗಿ ಬಳಕೆಯಾಗುತ್ತಿವೆ. ಬೆಂಗಳೂರಿನ ದಾ.ಹೆ.ಯಶ. ಭಾಗಗಳಿಗಿಂತ ಜಾಲ ಭಾಗದಲ್ಲಿ ಕೆಲವು ನಪುಂಸಕ ಪದಗಳು ಭಿನ್ನವಾಗಿ ಬಳಕೆಯಾಗುತ್ತಿವೆ.

ಶಿಷ್ಟಪದ	**ದಾ.ಹೆ.ಯ. ಭಾಗ**	**ಜಾಲ ಭಾಗ**
ಬೆಕ್ಕು	ಬೆಕ್ಕು	ಊನೆ
ಹುಲಿ	ವುಲಿ	ಉಲಿ
ಗಿಳಿ	ಗಿಣಿ	ಸಿಲ್ಕುಲು
ಅಳಿಲು	ಅಳುವ/ಅಳಿಳ್	ಉಡ್ತೆ

ಹುಲಿ ಎಂಬ ಪದ ಬಳಕೆಯಲ್ಲಿ **ಹ್** ಕಾರವು ದಾಸನಪುರ ಭಾಗಗಳಲ್ಲಿ **ವ್** ಕಾರವಾಗಿ, ಜಾಲ ಭಾಗದಲ್ಲಿ **ಉ** ಕಾರವಾಗುತ್ತಿದೆ. ಸಾಮಾಜಿಕ ಭಾಷಾ ಬಳಕೆಯಲ್ಲಿ **ಹ್** ಕಾರವು **ವ್** ಕಾರವಾಗಿ ನಂತರ **ಉ** ಕಾರ (ಹ್>ವ್>ಉ) ವ್ಯಂಜನ ಸ್ವರವಾಗುವ ಪ್ರಕ್ರಿಯೆಯು ಸಾಮಾನ್ಯವಾಗಿ ನಡೆಯುತ್ತಿವೆ. ಆದರೆ ಅದರ ಪ್ರಮಾಣವು ಜಾಲ ಮತ್ತು ಯಲಹಂಕ ಭಾಗದಲ್ಲಿ ಹೆಚ್ಚಾಗಿ ಕಾಣಬಹುದು. ಜಾಲ ಭಾಗದಲ್ಲಿ ಕೆಲವು ಪ್ರಾಣಿವಾಚಿಗಳ ಮೇಲೆ ತೆಲುಗಿನ ಪ್ರಭಾವ ಬೀರುತ್ತಿರುವುದು ಕಾಣಬಹುದು. ತೆಲುಗಿನ **'ಚಿಲುಕ'**ವು **ಸಿಲ್ಕುಲು** ಎಂದು ಬಳಕೆಯಾಗುತ್ತಿದೆ. **ಲ್** ಕಾರವು ತೆಲುಗಿನಲ್ಲಿ ಅಮಹತ್ ರೂಪದಲ್ಲಿ ಬಳಕೆಯಾಗುವ ಪ್ರತ್ಯಯವಾಗಿದೆ. ಬೆಂಗಳೂರು ಗ್ರಾಮೀಣ ಭಾಗವಾದ ಜಾಲದಲ್ಲಿ ಈ ರೀತಿ ಕೆಲವು ಭಿನ್ನಬಳಕೆಯು ಇದೆ.

ನಪುಂಸಕ ಲಿಂಗ ವಾಚಿಯಾಗಿ ಬಳಕೆಯಾಗುವ ಕನ್ನಡದ ಬಹುವಚನದ ಪ್ರತ್ಯಯವಾದ 'ಗಳ್', 'ಕಳ್', 'ಳ್' ಗಳು ತೆಲುಗು ಭಾಷೆಯಲ್ಲಿ 'ಅಲು', 'ಲು' ಎಂದಾಗಿ ಬಳಕೆಯಲ್ಲಿವೆ. ತೆಲುಗಿನಲ್ಲಿ ಬಳಕೆಯಾಗುವ 'ಲ್' ಕಾರವು 'ಳ್' ಜಿಹ್ವಾಮೂಲೀಯ ದ ಸಂವಾದಿ ರೂಪವಾಗಿದೆ. ಅದರಂತೆ ಬೆಂಗಳೂರು ಗ್ರಾಮೀಣ ಭಾಗದಲ್ಲಿ ನಪುಂಸಕ ಲಿಂಗ ನಾಮಪದಗಳು ಈ ರೀತಿ ಬಳಕೆಯಲ್ಲಿವೆ.

ಶಿಷ್ಟಪದ	**ದಾ.ಹೆ.ಯ. ಭಾಗ**	**ಜಾಲ ಭಾಗ**
ಬೆಕ್ಕುಗಳು	ಬೆಕ್ಕುಗುಳು	ಊನೆಗ್ಲು
ಹುಲಿ	ವುಲಿಗುಳು	ಉಲಿಗ್ಲು

ಗಿಳಿ	ಗಿಣಿಗುಳು	ಸಿಲ್ಕುಲು
ಅಳಿಲು	ಅಳುವ್ಗಳು /ಅಳಿಲ್ಗುಳು	ಉಡ್ತೆಗ್ಲು
ಎಮ್ಮೆಗಳು	ಯಮ್ಮೆಗುಳು	ಎಮ್ಮಿಗ್ಲು

ಬೆಂಗಳೂರು ಗ್ರಾಮೀಣ ಭಾಗವಾದ ದಾ.ಹೆ.ಯಶ. ಭಾಗದಲ್ಲಿ ನಪುಂಸಕ ನಾಮಪದಗಳಲ್ಲಿ ಬಳಕೆಯಾಗುವ **ಗಳ್/ಗುಳ್** ಕಾರವು ಜಾಲ ಭಾಗದಲ್ಲಿ **ಗ್ಲು/ಲು** ಕಾರವಾಗುತ್ತದೆ. ತೆಲುಗಿನ **ಳ್** ಕಾರವು **ಲ್** ಕಾರವನ್ನಾಗಿ ಬಳಕೆಯನ್ನು ಮಾಡಲಾಗುತ್ತದೆ. **ಲ್** ಕಾರವು ತೆಲುಗಿನಲ್ಲಿ ಅಮಹತ್ ರೂಪದಲ್ಲಿ ಬಳಕೆಯಾಗುವ ಪ್ರತ್ಯಯವಾಗಿದೆ. ಇದರಿಂದ ಜಾಲ ಭಾಗದ ಭಾಷಿಕರ ಮೇಲೆ ತೆಲುಗಿನ ಪ್ರಭಾವ ಬೀರುತ್ತಿರುವುದು ಕಾಣಬಹುದು. ಬೆಂಗಳೂರು ಗ್ರಾಮೀಣ ಭಾಗವಾದ ಜಾಲದಲ್ಲಿ ಈ ರೀತಿ ಹಲವು ಭಿನ್ನಬಳಕೆ ಇರುವುದು ಗೋಚರವಾಗುತ್ತವೆ.

ಸಂಬಂಧವಾಚಕಗಳಲ್ಲಿ

ಬೆಂಗಳೂರಿನ ಜಾಲ ಭಾಗದಲ್ಲಿ ಮಾನವವಾಚಕ ಪ್ರಕೃತಿಯ ಬಳಕೆಯ ಸಂದರ್ಭದಲ್ಲಿ **ಅ** ಕಾರಾಂತವು **ಉ** ಕಾರಾಂತವು ಬಳಕೆಯಾಗುವುದು. ಕಾರಣ ಜಾಲ ಭಾಗದಲ್ಲಿ ತೆಲುಗು ಮಾತನಾಡುವವರು ಹೆಚ್ಚಾಗಿದ್ದಾರೆ. ತೆಲುಗು ಭಾಷೆಯಲ್ಲಿ ನಾಮಪದಗಳಲ್ಲಿ ಅಂತ್ಯ **'ನ್'** ಪ್ರತ್ಯಯದ ಬಳಕೆಯು ಹೆಚ್ಚು ಕಂಡುಬರುತ್ತದೆ. (ಉನ್ಡು, ಅನ್ಡು, ವಾನ್ಡು) ಅದರಂತೆ ತೆಲುಗಿನ ಪ್ರಭಾವದಿಂದ ಜಾಲ ಜನರಲ್ಲಿ **ನ್** ಕಾರದ ಬಳಕೆಯನ್ನು ಕಾಣಬಹುದು.

ಶಿಷ್ಟಪದ	**ದಾ.ಹೆ.ಯ. ಭಾಗ**	**ಜಾಲ ಭಾಗ**
ಅರಸ	ಅರ್ಸ	ಅರ್ಸ್ನು
ಚಿಕ್ಕಪ್ಪ	ಚಿಕಪ/ಚಿಗಪ	ಚಿಚ್ಚಪ್ನು/ಚಿಚ್ಚ
ಅಮ್ಮ	ಅಮೋ/ಅಮ್ಮ	ಅಮ್ನು
ಅಕ್ಕ	ಅಕ್ಕ	ಅಕ್ನು

ಅನ್ವರ್ಥಕಗಳಲ್ಲಿ

ಬೆಂಗಳೂರು ಗ್ರಾಮೀಣರಲ್ಲಿ ಅನ್ವರ್ಥಕಗಳಲ್ಲಿ ಪುಲ್ಲಿಂಗ ಪ್ರಕೃತಿಗಳ ಬಳಕೆಯಲ್ಲಿ **'ಇ'** ಕಾರಂತದ ಬಳಕೆಯಿದೆ. ಆದರೇ ಜಾಲ ಭಾಗದಲ್ಲಿ 'ನ್'/'ವ್ನು' /'ಏವ್ನು' ಎಂದುಬಳಸುತ್ತಿದ್ದಾರೆ. ಹಾಗೆಯೆ ಜಾಲಭಾಗದಲ್ಲಿ **'ನ್'** ಸೇರಿಕೆಯಾಗಿ ಬಳಕೆಯಾಗುತ್ತಿದೆ. **ಕ್** ಕಾರದ ಬದಲು **ಶ್** ಕಾರದ ಬಳಕೆಯಾಗಿದೆ. ಕುರುಡ ಪದಮಧ್ಯವು ಕನ್ನಡದಲ್ಲಿ **ರ್** ಕಾರವನ್ನು ಒಳಗೊಂಡಿದ್ದು, ಜಾಲ ಭಾಗದಲ್ಲಿ **ಲ್** ಪದಮಧ್ಯವಾಗಿದೆ. ತೆಲುಗಿನಲ್ಲಿ **ರ್** ಧ್ವನಿಯ ಬದಲು **ಲ್** ಧ್ವನಿ ಬಳಕೆಯಿದೆ. ಅದರ ಪ್ರಭಾವ ಜಾಲ ಭಾಗದಲ್ಲಿ ವ್ಯಕ್ತವಾಗಿದೆ. 'ಏವ್ನು' ಎಂಬುದು ಜಾಲ ಭಾಗದ ಹಿರಿ–ಕಿರಿಯರ ಆಡುನುಡಿಯಲ್ಲಿ ಸಹಜವಾಗಿ ಬಳಕೆಯಾಗುತ್ತಿದೆ.

ಪುಲ್ಲಿಂಗವಾಚಿ

ಶಿಷ್ಟಪದ	**ದಾ.ಹೆ.ಯ. ಭಾಗ**	**ಜಾಲ ಭಾಗ**
ಕಿವುಡ	ಕಿವ್ಡ	ಶೆವ್ವ/ ಶೆವ್ನು
ಕುರುಡ	ಕುರ್ಡ	ಕುಲ್ಡೇವ್ನು
ಮೂಗ	ಮೂಗ	ಮೂಗ್ನು
ಎಳವ	ಎಳ್ವ	ಎಳ್ವೋವ್ನು

ಸ್ತ್ರೀಲಿಂಗವಾಚಿಗಳಲ್ಲಿ

ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಭಾಗದಲ್ಲಿ ಕೆಲವು ಸ್ತ್ರೀಲಿಂಗ ವಾಚಿಯು ಭಿನ್ನವಾಗಿ ಬಳಕೆಯಾಗುತ್ತಿವೆ. ಸ್ತ್ರೀಲಿಂಗ ಅನ್ವರ್ಥಕಗಳ ಬಳಕೆಯಲ್ಲಿ ಅಂತ್ಯ ಪ್ರತ್ಯಯ **ಇ** ಕಾರವು ವಿಕಲ್ಪವಾಗಿ ದಾಸನಪುರ ಭಾಗಗಳಲ್ಲಿ **ಒಳ್/ಒಳು** ಎಂದು ಬಳಕೆಯಾಗುತ್ತಿದೆ. ಆದರೆ ಜಾಲ ಭಾಗಗಳಲ್ಲಿ **ಅವ್ಳು** ಎಂದು ಅಂತ್ಯವಾಗುವ ರೂಪಗಳು ಬಳಕೆಯಾಗುತ್ತಿವೆ. ಇಲ್ಲಿ **ಳ್** ಕಾರವು **ಲ್** ಕಾರವಾಗುವುದು ತೆಲುಗಿನಲ್ಲಿ ಸಾಮಾನ್ಯ ಬದಲಾವಣೆಯಾಗಿದೆ. ಆದರೇ ಜಾಲ ಭಾಗದಲ್ಲಿ **ನವ್ಳು** ಎಂದು ಬಳಕೆಯಾಗುತ್ತಿದೆ. **ನ್** ಅನುನಾಸಿಕವು ಮತ್ತು ನಪುಂಸಕಲಿಂಗ ಪ್ರತ್ಯಯವಾದ **ಲ್/ಲು** ಎಂಬುದು ಜಾಲ ಮತ್ತು ಯಲಹಂಕ ಭಾಗದಲ್ಲಿ **ಳ್/ಳು** ಆಗಿ ಬಳಕೆಯಾಗುತ್ತಿದೆ. ತೆಲುಗಿನಲ್ಲಿ ಸ್ತ್ರೀಲಿಂಗ ವಾಚಕ ಪ್ರತ್ಯಯವಿಲ್ಲ. ಬದಲಾಗಿ

ನಪುಂಸಕ ಲಿಂಗವಾಗಿ ಬಳಕೆಯಾಗುತ್ತದೆ. ಇದನ್ನು ಅಮಹತ್ ಎಂದು ಹೇಳುತ್ತಾರೆ. ಇದು **ಅಲು** ರೂಪವು ಬಳಕೆಯಾಗುವುದು. ಅದರಂತೆ ಜಾಲ ಭಾಗದಲ್ಲಿ ಅವ್ವು ಎಂಬ ಸ್ತ್ರೀವಾಚಿಯು **ನವ್ಲು/ನವ್ವು** ಎಂದು ಬಳಕೆಯಾಗುತ್ತಿದೆ. ಕನ್ನಡದಲ್ಲಿನ ಸ್ತ್ರೀ ಲಿಂಗ **ಲ್/ಳ್** ಈ ಭಾಗದಲ್ಲಿ ಬಳಕೆಯಾಗುತ್ತಿದೆ. ಸ್ತ್ರೀಲಿಂಗವಾಚಿಯಾಗಿ **ವ್ವು** ಎಂದು ಮೃದುಲ ರೂಪವಾಗಿಯೂ ಬಳಕೆಯಾಗುತ್ತಿದೆ.

"ಸ್ತ್ರೀಸಂಬಂಧವಾಚಿ ಪ್ರತ್ಯಯ 'ಆಳ್' ಮಧ್ಯ ದ್ರಾವಿಡ ಭಾಷೆಗಳಲ್ಲಿ ಬಳಕೆಯಾಗುವಂತೆ ತೆಲುಗಿನಲ್ಲಿಯೂ ಆಗುತ್ತದೆ. ಉದಾ: ಕೋಡಲು(ಸೊಸೆ) (ಕೋಳ್+ಆಳ್, ಚೆಲ್ಲಲು (ತಂಗಿ) (ಚೇಲ್+ಆಳ್) ಮರೆದಲು (ನಾದಿನಿ) (ಮರಂದ್+ಆಳ್)**"**[೪೫] ಈ ವ್ಯತ್ಯಾಸವು ಜಾಲ ಭಾಗದಲ್ಲು ಕಂಡುಬರುತ್ತಿದೆ.

ಶಿಷ್ಟಪದ	**ದಾ.ಹೆ.ಯ. ಭಾಗ**	**ಜಾಲ ಭಾಗ**
ಕುರುಡಿ	ಕುಲ್ಡೋಳು	ಕುರುಡ್ನವ್ವು
ಮೂಗಿ	ಮೂಗ್ಳು	ಮೂಕ್ನವ್ವು
ಎಳವಿ	ಎಳ್ವೋಳು	ಎಳ್ವನವ್ವು
ಮೊಂಡಳು	ಮಂಡ್ರೋಳು	ಮಂಡ್ರುನವ್ವು

ಈ ಮಾನವವಾಚಿ ಮತ್ತು ಅನ್ವರ್ಥಕಗಳಲ್ಲಿ ಕಾಣುವ ಭಿನ್ನತೆಯು ಜಾಲ ಮತ್ತು ಯಲಹಂಕದ ಪೂರ್ವದ ಗ್ರಾಮೀಣ ಭಾಗಗಳಲ್ಲಿ ಅದರಲ್ಲೂ ತರುಣರಲ್ಲಿ ಮಾತನಾಡುವಾಗ ಹೆಚ್ಚು ಬಳಕೆಯಾಗುತ್ತಿದೆ. ಕೆಲವೆಡೆ ಬಹುವಚನದಲ್ಲಿ ಬಳಸುವಾಗ ಉಭಯಲಿಂಗಿಗಳಾಗಿಯೂ ಬಳಸುವರು. ಉದಾ; ಮಂಡ್ರೋರು, ಎಳ್ವುನೋರು. ಕುರುಡ್ನೋರು ಎಂದು ಬಳಕೆಯಲ್ಲಿವೆ.

ಬೆಂಗಳೂರು ಗ್ರಾಮೀಣ ಭಾಗದಲ್ಲಿ **ಅ** ಕಾರಾಂತವು ಪುಲ್ಲಿಂಗವನ್ನು, **ಇ, ಈ** ಕಾರಾಂತಗಳು ಸ್ತ್ರೀಲಿಂಗವನ್ನೂ, **ಗಳ್/ಲು** ಎಂಬ ಪ್ರತ್ಯಯವು ನಪುಂಸಕಲಿಂಗವನ್ನು ನಿರ್ಧರಿಸುತ್ತಿವೆ. ಆದರೆ ಬೆಂಗಳೂರಿನ ಜಾಲ ಭಾಗಗಳಲ್ಲಿ ಮಾನವವಾಚಕ ಪ್ರಕೃತಿಯಲ್ಲಿ ಕೆಲವು ಸಂದರ್ಭದಲ್ಲಿ **ಅ** ಕಾರಾಂತವು ನಪುಂಸಕ **ಉ** ಕಾರಾಂತವಾಗಿ ಬಳಸುತ್ತಿದ್ದಾರೆ. ಅದಕ್ಕೆ ಕಾರಣ ಬೆಂಗಳೂರು ಗ್ರಾಮೀಣ ಭಾಗವಾದ ಜಾಲ ಮತ್ತು

ಯಲಹಂಕ ಭಾಗದಲ್ಲಿ ತೆಲುಗು ಮಾತನಾಡುವವರು ಹೆಚ್ಚಾಗಿದ್ದಾರೆ. ತೆಲುಗು ಭಾಷೆಯಲ್ಲಿ ನಾಮಪದಗಳಲ್ಲಿ ಅಂತ್ಯ **'ನ್'** ಪ್ರತ್ಯಯದ ಬಳಕೆಯು ಹೆಚ್ಚು ಕಂಡುಬರುತ್ತದೆ. (ಉನ್ನು, ಅನ್ನು, ವಾನ್ನು) ಅದರಂತೆ ತೆಲುಗಿನ ಪ್ರಭಾವದಿಂದ ಜಾಲದ ಜನರಲ್ಲಿ **ನ್** ಕಾರದ ಬಳಕೆಯನ್ನು ಕಾಣಬಹುದು. ಆದರೆ ದಾಸನಪುರ ಭಾಗದಲ್ಲಿ ಹೆಚ್ಚು ಶಿಷ್ಟತೆಗೆ ಹತ್ತಿರವಾದ ಪದಬಳಕೆಯು ಕಂಡುಬರುತ್ತಿದೆ. ಪುಲ್ಲಿಂಗವಾಚಿ **ಗಾರ/ದಾರ** ಎಂಬುದನ್ನು ದಾ.ಹೆ.ಯ ಭಾಗದಲ್ಲಿ ಶಿಷ್ಟತೆಗೆ ಹತ್ತಿರವಾದಂತೆ ಬಳಸುತ್ತಿದ್ದರೆ, ಜಾಲಭಾಗದಲ್ಲಿ **ಗಾರ್ರು** ಎಂದು ಬಳಸಲಾಗುತ್ತಿದೆ. ತೆಲುಗಿನಲ್ಲಿ **ಗಾರ್ರು** ಪದಬಳಕೆಯಿದೆ. ಆ ಪದ ಪ್ರಭಾವವು ಜಾಲದ ಜನರಲ್ಲಿ ಕಂಡುಬರುತ್ತಿದೆ. ಸ್ತ್ರೀಲಿಂಗ ಅನ್ವರ್ಥಕಗಳಲ್ಲೂ ಪ್ರತ್ಯಯ ಇ ಕಾರವು ವಿಕಲ್ಪವಾಗಿ ದಾಸನಪುರ ಭಾಗಗಳಲ್ಲಿ **ಒಳ್** ಎಂದು ಬಳಕೆಯಾಗುತ್ತಿದ್ದರೆ, ಜಾಲ ಭಾಗದಲ್ಲಿ **ನವ್ವು** ಎಂದು ಬಳಕೆಯಾಗುತ್ತಿದೆ. ಬಹುವಚನ ನಪುಂಸಕಲಿಂಗ ಪ್ರತ್ಯಯವಾದ ಗಳ್/ಕಳ್/ಳ್ ಪ್ರತ್ಯಯವು ಜಾಲ ಭಾಗದಲ್ಲಿ **ಅಲ್/ಲು** ಆಗಿ ಬಳಕೆಯಾಗುತ್ತಿವೆ. ತೆಲುಗಿನಲ್ಲಿ ಸ್ತ್ರೀಲಿಂಗ ವಾಚಕ **ಅಲು** ರೂಪವು ಬಳಕೆಯಾಗುವುದು. ಅದರಂತೆ ಜಾಲ ಭಾಗದಲ್ಲಿ **ಅವ್ವು** ಎಂಬ ಸ್ತ್ರೀವಾಚಿಯು **ನವ್ಲು/ನವ್ವು** ಎಂದು ಬಳಕೆಯಾಗುತ್ತಿದೆ. ನಪುಂಸಕಲಿಂಗದಲ್ಲಿ **ಗಳ್/ಲ್** ಕಾರಾಂತವು ಅಮಹತ್ ವರ್ಗದಲ್ಲಿ ನಪುಂಸಕ ಲಿಂಗವನ್ನು ಸೂಚಿಸುವ ಪ್ರತ್ಯಯವಾಗಿದೆ.

ಆದರೆ ಕೆಲವು ಜೀವಾರೋಪಿತ ನಾಮರೂಪಗಳಲ್ಲಿ ಇ ಕಾರದ ಬಳಕೆಯಿದೆ. ಜಾಲ ಭಾಗದಲ್ಲಿ ಕೆಲವು ಪ್ರಾಣಿವಾಚಕಗಳಲ್ಲಿ ಭಿನ್ನತೆಗಳಿದ್ದು, ಅವುಗಳ ಮೇಲೆ ತೆಲುಗು ಪ್ರಭಾವವನ್ನು ಕಾಣಬಹುದು. ತೆಲುಗು ಭಾಷೆಯಲ್ಲಿ ಸ್ತ್ರೀಲಿಂಗವನ್ನು ನಪುಂಸಕ ಲಿಂಗವಾಗಿ ಬಳಕೆ ಮಾಡಲಾಗುತ್ತದೆ. ಆದರೆ ಇಲ್ಲಿ ಕನ್ನಡ ಭಾಷೆಯ ಪ್ರಭಾವದಿಂದ ಸ್ತ್ರೀಲಿಂಗವನ್ನು ಸ್ತ್ರೀಲಿಂಗವಾಗಿಯೆ ಬಳಕೆ ಮಾಡಿರುವುದನ್ನು ಗಮನಿಸಬಹುದು. ಹೀಗೆ ಲಿಂಗವ್ಯವಸ್ಥೆಯು ಜಾಲ ಭಾಗದಲ್ಲಿ ವ್ಯತ್ಯಸ್ಥವಾಗಿ ಬಳಕೆಯಾಗುತ್ತಿದೆ.

೫..೨.೧.೨.ವಚನಗಳು

ದ್ರಾವಿಡ ಭಾಷೆಯಲ್ಲಿ ವಚನ ವ್ಯವಸ್ಥೆ ದ್ವಿವಿಧವಾಗಿದೆ. ಒಂದೇ ವಸ್ತು ಎಂದು ಸೂಚಿಸುವ ಪದಗಳು ಏಕವಚನವಾದರೆ, ಒಂದಕ್ಕಿಂತ ಹೆಚ್ಚು ವಸ್ತುಗಳನ್ನು ಒಳಗೊಂಡವುಗಳನ್ನು ಸೂಚಿಸುವ ಶಬ್ದಗಳು ಬಹುವಚನಗಳಾಗಿವೆ. **"**ಸಂಸ್ಕೃತದಲ್ಲಿ ದ್ವಿವಚನವನ್ನೊಳಗೊಂಡ ಮೂರು ಭೇದಗಳಿವೆ.**"**[೪೬] ಬೆಂಗಳೂರು ಗ್ರಾಮೀಣ ಜನರಲ್ಲಿ ನಾಮಪದಗಳು ಏಕವಚನ ಮತ್ತು ಬಹುವಚನ ಎಂದು ದ್ವಿವಿಧವಾಗಿಯೇ ಬಳಕೆಯಾಗುತ್ತಿವೆ.

೧. "ದ್ರಾವಿಡ ಭಾಷೆಗಳಲ್ಲಿ ವಚನ ವ್ಯವಸ್ಥೆ ಏಕವಚನ ಹಾಗೂ ಅನೇಕವಚನ ಎಂದು ಎರಡೇ ಬಗೆಯಲ್ಲದೆ ದ್ವಿವಚನವಿಲ್ಲ. ಅನೇಕ ದ್ರಾವಿಡ ಭಾಷೆಗಳಲ್ಲಿ ಮಾನವೇತರ ಬಹುವಚನ ಐಚ್ಛಿಕವಾಗಿದೆ."[೪೭]

೫.೨.೧.೨.೧ ಏಕವಚನ

ಬೆಂಗಳೂರು ಗ್ರಾಮೀಣ ಜನರಲ್ಲಿ ಕಂಡುಬರುವ ಏಕವಚನ ಪದಗಳ ಬಳಕೆಗೆ ಅನ್ವಯವಾಗುವ ದ್ರಾವಿಡ ಭಾಷಾ ನಿಯಮಗಳು ಇಂತಿವೆ:

೧. "ದ್ರಾವಿಡ ಭಾಷೆಯಲ್ಲಿ 'ಅನ್', 'ಆನ್' ಮತ್ತು 'ಓನ್' ಎಂಬಿವುಗಳು ಪುಲ್ಲಿಂಗ ಏಕವಚನ ಪ್ರತ್ಯಯಗಳಾಗಿವೆ. 'ಆನ್' ಹ್ರಸ್ವೀಕರಣಗೊಂಡ ಪ್ರತ್ಯಯವಾಗಿದ್ದು, ಅದು ನಿರ್ದೇಶಾತ್ಮಕ ಸರ್ವನಾಮ 'ಅವನ್'(ಅ,ವ್,ಅನ್) ಎಂಬಲ್ಲಿ ಕಾಣಿಸಿಕೊಳ್ಳುತ್ತದೆ."[೪೮]

೨. "ಕನ್ನಡದಲ್ಲಿ ಪುಲ್ಲಿಂಗ ಏಕವಚನ ಪ್ರತ್ಯಯವಾದ 'ಅನು' ಎಂಬುದು ತಮಿಳಿನ'ಅನ್' ಗೆ ಸಂವಾದಿಯಾದುದು. ಇಲ್ಲಿಯ 'ಉ' ಕಾರವು ಹೊಸಗನ್ನಡ ಸಂದರ್ಭದಲ್ಲಿ ಉಂಟಾದ ಒಂದು ಸ್ವರ ಸೌಲಭ್ಯವಲ್ಲದೆ ಬೇರೇನೂ ಅಲ್ಲ. ತೆಲುಗಿನಲ್ಲಿ ಪುಲ್ಲಿಂಗ ಏಕವಚನ ಪ್ರತ್ಯಯಗಳಾಗಿ 'ಡು', 'ಉಡು', ಅಥವಾ 'ಅಡು' ಗಳಿವೆ. ಅಥವಾ 'ನ್ಡು', 'ಉನ್ಡು' ಅಥವಾ 'ಅನ್ಡು' ಪದಗಳಿವೆ. ಇಲ್ಲಿಯ 'ನ' ಕಾರವು ಅಸ್ಪಷ್ಟ ಉಚ್ಚಾರಣೆಗೊಳಪಡುವುದಾದರೂ ಅದು ಉಚ್ಚರಿಸಲ್ಪಡಲೇ ಬೇಕಾದ ವರ್ಣವದು"[೪೯]

ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಜನರ ಆಡುಮಾತಿನಲ್ಲಿ ಏಕವಚನವನ್ನು ಬಳಸುವಾಗ ಪ್ರತ್ಯೇಕವಾದ ಪ್ರತ್ಯಯವನ್ನು ಬಳಸದೇ ನಾಮಪ್ರಕೃತಿಯೇ ಅದರ ಸ್ಥಾನದಲ್ಲಿ ಬಳಕೆಯಾಗುತ್ತಿದೆ. ಜಾಲ ಮತ್ತು ಯಲಹಂಕ ಪೂರ್ವ ಭಾಗಗಳನ್ನು ಒಳಗೊಂಡಂತೆ ಏಕವಚನವು ಮಹತ್ ಪ್ರಕೃತಿಗಳಲ್ಲಿ **ಅ, ಉ** ಕಾರದ ಬದಲು **ನ್/ನು** ಕಾರವಾಗಿ ಬಳಕೆಯಾಗುತ್ತಿದೆ. ಪುಲ್ಲಿಂಗ ಏಕವಚನ **ಅ** ಕಾರವು ಜಾಲ ಭಾಗದಲ್ಲಿ **ಅನ್ (ನ್)** /**ಅನು** ಪ್ರತ್ಯಯದೊಂದಿಗೆ ಸೇರಿ ಬಳಕೆಯಾಗುತ್ತಿದೆ. ತೆಲುಗಿನಲ್ಲಿ **ನ್ಡು** ವು ಪುಲ್ಲಿಂಗ ಏಕವಚನವಾಗಿ ಬಳಕೆಯಾಗುತ್ತಿದೆ. ಇಲ್ಲಿ **ನ್** ದ್ವಿತ್ವವಾಗಿ ಬಳಕೆಯಾಗುತ್ತಿದೆ. **ಅ** ಕಾರದ ಬದಲು **ಉ** ಕಾರದ ಬಳಕೆಯು ತೆಲುಗಿನಲ್ಲಿ ಹೆಚ್ಚಾಗಿರುವುದರಿಂದ ಆ ಪ್ರಭಾವವು ಜಾಲ ಭಾಗದಲ್ಲಿ ಹೆಚ್ಚು ಕಾಣಿಸುತ್ತಿದೆ.

ಶಿಷ್ಟಪದ	ದಾ.ಹೆ.ಯ. ಭಾಗ	ಜಾಲ ಭಾಗ
ಅಗಸ	ಅಗ್ಸ	ಅಕ್ಸ್ನ/ಅಗ್ಸ್ನ
ತಮ್ಮ	ತಮ್ಮ	ತಮ್ನು
ಗಂಡು	ಗಂಡು	ಗಂಡ್ನು
ಮಗ	ಮಗ	ಮಗ್ನು
ಮಾವ	ಮಾಮ	ಮಾವ್ನು

ನಪುಂಸಕ ಪ್ರತ್ಯಯ **ಅಳ್** ಎಂಬುದು ತೆಲುಗಿನಲ್ಲಿ ಅಮಹತ್ ಪ್ರಕೃತಿಗಳಿಗೆ **ಅಲು** ಎಂದು ಬಳಕೆಯಾಗುತ್ತಿದೆ. ಅಂತೆಯೇ ಜಾಲ ಭಾಗದಲ್ಲಿ 'ಅಲು' ಪ್ರತ್ಯಯವು ಬಳಕೆಯಾಗುತ್ತಿದೆ. "ಮೂಲ ದ್ರಾವಿಡ ಣ್, ಳ್, ಎಲ್ಲಾ ಮಧ್ಯಮ ದ್ರಾವಿಡಭಾಷೆಯಲ್ಲಿ 'ನ್' ಹಾಗೂ 'ಲ್' ಗಳಾಗಿವೆ. ತೆಲುಗಿನಲ್ಲೂ ಆಗಿವೆ."[೫೦]

ಶಿಷ್ಟಪದ	ದಾ.ಹೆ.ಯ. ಭಾಗ	ಜಾಲ ಭಾಗ
ಅಕ್ಕ	ಅಕ್ಕ	ಅಕ್ನು
ಅಮ್ಮ	ಮೋ	ಅಮ್ನು
ಸ್ನೇಹಿತೆ	ಸ್ನೇಯ್ತೆ	ಸ್ನೇಯಿತ್ಲು
ಹೆಂಗಸು	ಯೆಂಗ್ಸು	ಎಂಗ್ಸ್ಲು
ಮೂಕಿ	ಮೂಗಿ	ಮೂಗ್ಲು/ಮೂಗ್ಳು
ಅವಳು	ಅವ್ಳು	ಅವ್ಲು

೫.೨.೧.೨.೨ ಬಹುವಚನ

ಬೆಂಗಳೂರು ಗ್ರಾಮೀಣ ಜನರಲ್ಲಿ ಕಂಡುಬರುವ ಬಹುವಚನ ಪದಗಳ ಬಳಕೆಗೆ ಅನ್ವಯವಾಗುವ ದ್ರಾವಿಡ ಭಾಷಾ ನಿಯಮಗಳು ಇಂತಿವೆ:

೧. "ಕನ್ನಡ:– ಅರ್, ವರ್/ಬರ್, ಅಂದಿರ್, ದಿರ್, ವಿರ್, ಇರ್, ಕಳ್, ಗಳ್ಹಾಗೂ ಅರ್ ಎಂಬ ಬಹುವಚನ ಪ್ರತ್ಯಯದ ಬಳಕೆಯಿವೆ."[೫೧]

೨. "ತೆಲುಗು:– ಉರ್, ರು, ವುರು, ಅಳ್, ಉಳ್, ಕಳ್, ಳು, ಲು ಎಂಬ ಬಹುವಚನ ಪ್ರತ್ಯಯದ ಬಳಕೆಯಿವೆ."[೫೨]

ಉದಾ: ಕನ್ನಡ ತೆಲುಗು

ತಮ್ಮಂದಿರ್ > ತೊಂಬುಲ್

ಸಾವಿರಾರು > ವೇವುರ್

ಗೊಂಬೆಗಳು > ಬೊಮ್ಮಲು

ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಜನರ ಆಡುಮಾತಿನಲ್ಲಿ ಬಹುವಚನವು ನಾಮ ಮತ್ತು ಸರ್ವನಾಮಗಳಲ್ಲಿ ಬಳಕೆಯಾಗುತ್ತವೆ. ಬಹುವಚನ ಪ್ರತ್ಯಯಗಳು ಹಲವು ರೂಪಗಳಲ್ಲಿ ಬಳಕೆಯಾಗುತ್ತವೆ. ಬೆಂಗಳೂರು ಗ್ರಾಮೀಣ ಜನರಲ್ಲಿ ಬಹುವಚನವು ಪ್ರತ್ಯೇಕವಾದ ಪ್ರತ್ಯಯಗಳನ್ನು ಒಳಗೊಂಡಿರುವುದನ್ನು ಕಾಣಬಹುದು. ಬಹುವಚನ ಪ್ರತ್ಯಯಗಳಾದ **ಗಳು, ಅರು>ರು ಅಂದಿರು>ದ್ರು, ಇರು>ಒರ್, ಎರ್>ಓರು, ಗೊಳು>ಗ್ಳು, ಗ್ಲು, ಲು** ಎಂಬಿತ್ಯಾದಿ ಪ್ರತ್ಯಯಗಳ ಬಳಕೆಯನ್ನು ಮಾಡುತ್ತಿದ್ದಾರೆ.

ಶಿಷ್ಟಪದ	ದಾ.ಹೆ.ಯ. ಭಾಗ	ಜಾಲ ಭಾಗ
ಅಗಸರು	ಅಗುಸ್ರು	ಅಕ್ಸ್ರು
ಮನುಷ್ಯರು	ಮನುಸ್ರು	ಮನುಶ್ರು
ಹುಡುಗರು	ಹುಡುಗ್ರು	ಉಡುಗ್ರು

ಹುಡುಗಿಯರು	ಹುಡ್ಗೀರು	ಉಡ್ಗೀರು
ಹೆಂಡತಿಯರು	ಯಂಡ್ತೀರು	ಎಂಣ್ತೀರು

ಮೇಲಿನ ಬೆಂಗಳೂರು ಗ್ರಾಮೀಣ ಭಾಗದ ಆಡುನುಡಿಯಲ್ಲಿ ಬಳಕೆಯಾದ ಬಹುವಚನ ಪಟ್ಟಿಗೆ ಅನ್ವಯಿಸುವ ದ್ರಾವಿಡದ ನಿಯಮವು ಇಂತಿದೆ.

೧. "ತೆಲುಗಿನಲ್ಲಿ ವರ್> ಉರು> ಗುರು ಎಂದು ಕೆಲವು ಬಹುವಚನ ಪ್ರತ್ಯಯಗಳು ಬಳಕೆಯಲ್ಲಿವೆ."[೫೩]

ಪುಲ್ಲಿಂಗ ಮತ್ತು ಸ್ತ್ರೀಲಿಂಗ ಬಹುವಚನ ಪ್ರತ್ಯಯ **ಅಂದಿರು** ಎಂಬ ಶಿಷ್ಟರೂಪವು ದಾಸನಪುರಾದಿ ಭಾಗಗಳಲ್ಲಿ **ಅಂದ್ರು/ಏರ್** ಎಂದು ಬಳಕೆಯಾಗುತ್ತಿದೆ. ಜಾಲದಲ್ಲಿ **ಓರ್** ಎಂದು ಬಳಕೆಯಾಗುತ್ತಿದೆ. ಅನುಸ್ವಾರದ ಬದಲು ತೆಲುಗಿನಲ್ಲಿ **ನ್** ಅನುನಾಸಿಕಗಳ ಬಳಕೆಯಾಗುವುದು. ಜಾಲ ಭಾಗದಲ್ಲಿ **ದ್** ಕಾರವು **ನ್** ಕಾರವಾಗಿ **ಒರ್** ಎಂದು ಬಳಕೆಯಾಗುತ್ತಿದೆ. **ಅಂದಿರು** ಎಂಬ ಪ್ರತ್ಯಯವು ಸಂಬಂಧ ಸೂಚಕ ಪದಗಳಲ್ಲಿ ಹೆಚ್ಚು ಬಳಕೆಯಾಗುವುದು.

ಶಿಷ್ಟಪದ	**ದಾ.ಹೆ.ಯ. ಭಾಗ**	**ಜಾಲ ಭಾಗ**
ಅಣ್ಣಂದಿರು	ಅಣ್ಣಂದ್ರು	ಅಣ್ದೀರು/ಅಣ್ಣೋರು
ತಮ್ಮಂದಿರು	ತಮ್ಮಂದ್ರು	ತಮ್ನೋರು
ಮಾವಂದಿರು	ಮಾವಂದ್ರು	ಮಾವ್ನೋರು
ಅತ್ತೆಯಂದಿರು	ಅತ್ತೇರು	ಅತ್ತ್ಯೋರು
ತಂಗಿಯಂದಿರು	ತಂಗೀರು	ತಂಗ್ಯೋರು

ಸಂಬಂಧಸೂಚಕಗಳಲ್ಲಿ ಬಳಕೆಯಾಗುವ **ಅಂದಿರು** ಎಂಬ ಬಹುವಚನವು ಜಾಲ ಭಾಗದಲ್ಲಿ **ಓರ್** ಎಂದು, ಮತ್ತೆ ಕೆಲವರಲ್ಲಿ **ಇರ್/ಈರ್** ಆಗಿ ಬಳಕೆಯಾಗುತ್ತಿದೆ. ತೆಲುಗು ಭಾಷೆಯಲ್ಲಿ ನಪುಂಸಕಲಿಂಗ

ಬಹುವಚನ ಪ್ರತ್ಯಯವು ಕ್ರಿಯಾಪದ ಸೂಚಕವಾದ **ಅ** ಕಾರ ಪ್ರತ್ಯಯವು **ಇ** ಕಾರವಾಗಿ ಪರಿವರ್ತನೆಯಾಗಿ ಬಳಕೆಯಾಗುತ್ತದೆ. ಅದರ ಪ್ರಭಾವವು ಜಾಲ ಭಾಗದ ಆಡುಮಾತಿನಲ್ಲಿ ಗೋಚರವಾಗುತ್ತಿದೆ.

ಶಿಷ್ಟಪದ	**ದಾ.ಹೆ.ಯ. ಭಾಗ**	**ಜಾಲ ಭಾಗ**
ಅಣ್ಣಂದಿರು	ಅಣ್ಣಂದ್ರು	ಅಣ್ದೀರು/ಅಣ್ಣೋರು
ತಮ್ಮಂದಿರು	ತಮ್ಮಂದ್ರು	ತಮ್ದೀರು
ಮಾವಂದಿರು	ಮಾವಂದ್ರು	ಮಾವ್ದೀರು
ಬಾವಂದಿರು	ಬಾವಂದ್ರು	ಬಾವ್ದೀರು

ಮೇಲಿನ ಬೆಂಗಳೂರು ಗ್ರಾಮೀಣ ಭಾಗದ ಆಡುನುಡಿಯಲ್ಲಿ ಬಳಕೆಯಾದ ಸಂಬಂಧ ಸೂಚಕದಲ್ಲಿ ಬಳಕೆಯಾಗುವ ಬಹುವಚನ ಪಟ್ಟಿಗೆ ಅನ್ವಯಿಸುವ ದ್ರಾವಿಡದ ನಿಯಮವು ಇಂತಿದೆ:

೧. "ಕನ್ನಡದಲ್ಲಿ –ಅರ್, –ಇರ್, ಇವುಗಳ ಹೊರತಾಗಿ –ದಿರ್ ಎಂಬ ಬಹುವಚನ ಪ್ರತ್ಯಯಗಳಿವೆ. ಇವು ಕೆಲವು ಸಂಬಂಧಸೂಚಕ ಪದಗಳಿಗೆ ಮಾತ್ರ ಅನ್ವಯವಾಗುವಂತೆ ತೋರುತ್ತದೆ. ಇದಲ್ಲದೆ ಮಧ್ಯ ದ್ರಾವಿಡದ ಗದಬ, ತೆಲುಗು ಭಾಷೆಯಲ್ಲಿ –ಎರ್, –ಇರ್, ಈರ್, ದಿರ್, ಅಂದಿರ್ ಎಂದು ಬಳಕೆಯಲ್ಲಿವೆ."[೩೪]

ನಪುಂಸಕಲಿಂಗ ಬಹುವಚನ ಪ್ರತ್ಯಯ **ಅಳು**(ಗಳು) ಎಂಬ ರೂಪವು ದಾಸನಪುರಾದಿ ಭಾಗಗಳಲ್ಲಿ **ಅಳು** ಎಂದು ಬಳಕೆಯಾಗುತ್ತಿದೆ. ಜಾಲದಲ್ಲಿ **ಅ** ಕಾರವು **ಉ** ಕಾರವಾಗಿ ಬಳಕೆಯಾಗಿದೆ. ಅಂದರೆ ಜಾಲ ಭಾಗದಲ್ಲಿ **ಗ್ಲು/ಗ್ಳು** ಎಂಬ ಬಹುವಚನ ಪ್ರತ್ಯಯವು ಬಳಕೆಯಾಗುತ್ತಿದೆ. "ದ್ರಾವಿಡ ಭಾಷೆಗಳಲ್ಲಿ **ಅಗಳ್** ಎಂಬ ಪ್ರತ್ಯಯವು ಬಳಕೆಯಲ್ಲಿದೆ. **ಗಳ್** ಜೊತೆ ಸೇರುವ ಅ ಪ್ರತ್ಯಯವು ನಿಖರವಾಗಿ ನಪುಂಸಕ ಪ್ರತ್ಯಯಕ್ಕೆ ಸೇರುತ್ತವೆ."[೩೩] ಆದರೆ ತೆಲುಗಿನಲ್ಲಿ **ಉ** ಕಾರವು ಹೆಚ್ಚು ಬಳಕೆಯಾಗುತ್ತದೆ. ಅದರಂತೆ **ಅಳು>ಗ್ಳು/ಗ್ಲು** ಗಳ ಬಳಕೆಯಾಗುತ್ತಿದೆ. "ಕನ್ನಡದ **ಗಳು** ಪ್ರತ್ಯಯದ ಸಂವಾದಿಯಾಗಿ ತೆಲುಗಿನಲ್ಲಿ **ಲು** ಪ್ರತ್ಯಯದ ಬಳಕೆಯಿದೆ. **ಲ್** ಕಾರವು ಜಿಹ್ವಾಮೂಲೀಯ ಳ ಕಾರಕ್ಕೆ ಸಂವಾದಿಯಾಗಿದೆ."[೩೬]

ಶಿಷ್ಟಪದ	ದಾ.ಹೆ.ಯ. ಭಾಗ	ಜಾಲ ಭಾಗ
ಕರುಗಳು	ಕುರ್ಗಳು	ಕುರಿಗ್ಳು
ಮೀನುಗಳು	ಮೀನ್ಗಳು	ಮೀನುಗ್ಳು
ಮೇಕೆಗಳು	ಮೇಕ್ಗಳು	ಮ್ಯಾಕುಗ್ಲು/ಆಡುಗ್ಳು
ಮರಗಳು	ಮರ್ಗಳು	ಮರುಗ್ಲು
ಬುರುಗುಗಳು	ಬುರ್ಗುಗಳು /ಬುರ್ಗಳು	ಬುರ್ಗುಗ್ಲು
ಗಂಟುಗಳು	ಗಂಟ್ಗುಳು	ಗಂಟ್ಲು

ಬೆಂಗಳೂರಿನ ಗ್ರಾಮೀಣ ಭಾಗವಾದ ಜಾಲ ಮತ್ತು ಯಲಹಂಕ ಪೂರ್ವದ ಗ್ರಾಮೀಣ ಭಾಗಗಳಲ್ಲಿ ಅಹಮತ್ ವರ್ಗಗಳಿಗೆ ಕೆಲವು ಸಂದರ್ಭದಲ್ಲಿ **ಗಳು/ಗುಳು** ಬದಲು **ಏವು/ಏವ್ನು** ಎಂಬ ಬಹುವಚನ ಪ್ರತ್ಯಯಗಳ ಬಳಕೆಯಾಗುತ್ತಿವೆ. **ಏವ್ನು** ಎಂಬ ಪದಬಳಕೆಯು ತೆಲುಗು ಭಾಷಿಕರಲ್ಲಿ ಕಂಡುಬರುತ್ತದೆ.

ಶಿಷ್ಟಪದ	ದಾ.ಹೆ.ಯ. ಭಾಗ	ಜಾಲ ಭಾಗ
ಹಸುಗಳು	ಹಸ್ಗಳು	ಅಸೇವು
ಕರುಗಳು	ಕರ್ಗಳು	ಕರೇವು
ಆಡುಗಳು	ಮೇಕ್ಗುಳು/ಮ್ಯಾಕ್ಗಳು	ಆಡ್ನೇವು
ಅಳಿಲುಗಳು	ಅಳುಳ್ಗಳು	ಉಡ್ತ್ನೇವು
ಕರಡಿಗಳು	ಕಲ್ಡಿಗುಳು	ಕಳ್ಡೇವು

ಬಹುವಚನದ ಪ್ರತ್ಯಯ **ಗಳು** ಎಂಬುದು ಎರಡಕ್ಕಿಂತಲೂ ಹೆಚ್ಚು ವಸ್ತುಗಳನ್ನು ಸೂಚಿಸುವಾಗ **ಉಗಳು** ಎಂಬುವುದು **ಉಗ್ಲು** ಎಂದಾಗಿ ಕೆಲವು ಬಾರಿ ಬಳಕೆಯಾಗುತ್ತದೆ. (ಉಗಳು>ಉರುಗ್ಲು). ದಾ.ಹೆ.ಯ ಭಾಗದಲ್ಲಿ ಅಂತ್ಯವರ್ಣದ ಹಿಂದಿನ **ಗ್** ಧ್ವನಿಯನ್ನು ದ್ವಿತ್ವವಾಗಿ, **ಳ್** ಧ್ವನಿಯನ್ನು ವ್ಯಂಜನವಾಗಿ ಬಳಸುತ್ತಿದ್ದಾರೆ. ಆದರೆ ಜಾಲ ಭಾಗದಲ್ಲಿ **ಗ್** ವರ್ಣಕ್ಕೆ **ಲ್** ಧ್ವನಿಯು ದ್ವಿತ್ವವಾಗಿ ಬಳಕೆಯಾಗುವುದನ್ನು ಕಾಣಬಹುದು. **ಳ್** ಕಾರದ ಬದಲು **ಲ್** ಕಾರವನ್ನು ಬಳಸುವುದು ತೆಲುಗಿನ ಆಡುಮಾತಿನಲ್ಲಿ ಕಂಡುಬರುತ್ತದೆ. ಅದರಂತೆ ಜಾಲ ಭಾಗದಲ್ಲಿ **ಲ್** ಕಾರವು ದ್ವಿತ್ವವಾಗುವುದು. **ಅಳು** ಎಂಬುದು **ಅಲು/ ಲ್** ಆಗಿ ಬಳಕೆಯಾಗುತ್ತಿದೆ. ಇವುಗಳ ಬಗ್ಗೆ ದ್ರಾವಿಡದ ನಿಯಮವು ಇಂತಿದೆ;

೧. "ಸಾಮಾನ್ಯವಾಗಿ 'ಕಳ್', 'ಳ್' ನಪುಂಸಕಲಿಂಗ ನಾಮಗಳಿಗೆ ಅನ್ವಯವಾದರೂ ಇತರ ನಾಮಗಳಿಗೂ ಹತ್ತುತ್ತವೆ. ತೆಲುಗಿನಲ್ಲಿ ಕಳ್>ಗಳ್, ಕಳ್>ಳ್, ಳ್>ಲ್, ಅಳ್ ಎಂದು ಮುಂತಾಗಿ ಈ ಪ್ರತ್ಯಯಗಳು ಬಳಕೆಯಲ್ಲಿವೆ."[೫೭]

ಶಿಷ್ಟಪದ	ದಾ.ಹೆ.ಯ. ಭಾಗ	ಜಾಲ
ಬುರುಗುಗಳು	ಬುರ್ಗುಗಳು /ಬುರ್ಗಳು	ಬುರ್ಗುಗ್ಲು
ಆಡಿಕೊಳ್ಳುವವರುಗಳು	ಆಡ್ಕೋಳ್ಳುವವರ್ಗಳು	ಆಡ್ಕೋಳ್ಳೋರಗ್ಲು
ನೋಡುವವರುಗಳು	ನೋಡಕ್ಕೊಳ್ಳೋರ್ಗುಳು	ನೋಡ್ಕೋಳ್ಳೋರುಗ್ಲು
ತೂರುಕೊಳ್ಳುವವರುಗಳು	ತೂರ್ಕೋಳ್ಳೋರ್ಗುಳು	ತೂರ್ಕೋಳ್ಳೋರುಗ್ಲು
ಮಾಡುವವರುಗಳು	ಮಾಡ್ವೋರ್ಗಳು	ಮಾಡ್ದೋಳ್ಳೊರುಗ್ಲು

೫.೨.೧.೨.೨ ಗೌರವಾರ್ಥದಲ್ಲಿ ಏಕವಚನ

ಬೆಂಗಳೂರು ಗ್ರಾಮೀಣ ಜನರಲ್ಲಿ ಗೌರವವನ್ನು ಸೂಚಿಸುವಾಗ ಏಕವಚನದ ಸಂದರ್ಭದಲ್ಲಿ ಬಹುವಚನವು ಬಳಕೆಯಾಗುವುದು. ಮಹತ್ ಪ್ರಕೃತಿಗಳಿಗೆ ಹತ್ತುವ ಎಲ್ಲಾ ಬಹುವಚನ ಪ್ರತ್ಯಯಗಳು ಗೌರವಾರ್ಥ ಏಕವಚನದಲ್ಲಿ ಬಳಕೆಯಾಗುತ್ತವೆ. ಕನ್ನಡದಲ್ಲಿ ಗಳ್ ಎಂಬ ಪ್ರತ್ಯಯವು ಗೌರವ ಸೂಚಕ ಏಕವಚನ ಪ್ರತ್ಯಯವಾಗಿದೆ. "ಗೌರವ ಸೂಚಕ ಪ್ರತ್ಯಯಗಳು ಮೂಲ ದ್ರಾವಿಡದಲ್ಲಿರಲಿಲ್ಲ. ಇದು ಇತ್ತೀಚಿನ

ಬೆಳವಣಿಗೆಯಾಗಿದೆ”[೩೮] ಮಹತ್ ಪ್ರಕೃತಿಗಳಿಗೆ **ಅವರು, ಏರ್, ಓರ್, ಯೋರ್** ಎಂಬ ಬಹುವಚನ ಪ್ರತ್ಯಯಗಳು ಏಕವಚನ ಸ್ಥಾನದಲ್ಲಿ ಬಳಕೆಯಾಗುತ್ತಿವೆ. ಮತ್ತು ವ್ಯಕ್ತಿನಾಮಗಳಲ್ಲಿ **ಅರ್/ಆರ್** ಪ್ರತ್ಯಯಗಳಿಗೆ **ಓರ್** ಎಂದು ಬಳಕೆಯಾಗುತ್ತವೆ. ತೆಲುಗಿನಲ್ಲಿ **ಅವರ್, ವಾರ್, ಗಾರ್** ಎಂಬ ಗೌರವ ಸೂಚಕ ಪ್ರತ್ಯಯಗಳ ಬಳಕೆಯಿದೆ.

ಅಧಿಕಾರಸೂಚಕ ಪ್ರಕೃತಿಗಳಿಗೆ **ಗ್ಳು/ಯೋರ್(ಅವರು)** ಪ್ರತ್ಯಯ ಬಳಕೆಯಾಗುತ್ತಿವೆ.

ಶಿಷ್ಟಪದ	**ದಾ.ಹೆ.ಯ. ಭಾಗ**	**ಜಾಲ ಭಾಗ**
ಗುರುಗಳು	ಗುರ್ಗಳು	ಗುರುಗ್ಳು/ ಗುರುಗ್ಳೋರು
ಸ್ವಾಮಿಯವರು	ಸ್ವಾಮೀರು	ಸ್ವಾಮ್ಯೋರು
ಅಯ್ಯನವರು	ಅಯ್ನೋರು	ಐಯ್ನೋರು
ಮಂತ್ರಿಯವರು	ಮಂತ್ರಿಗುಳು	ಮಂತ್ರಿಗ್ಳು
ಸಚಿವರವರು	ಸಚಿವ್ರು	ಸಚಿವ್ನೋರು

ಸಂಬಂಧವಾಚಿ ಪ್ರಕೃತಿಗಳಿಗೆ ರವರು/ರು/ ಯೋರ್/ಓರ್ ಪ್ರತ್ಯಯವನ್ನು ಬಳಸುತ್ತಿದ್ದಾರೆ.

ಶಿಷ್ಟಪದ	**ದಾ.ಹೆ.ಯ. ಭಾಗ**	**ಜಾಲ ಭಾಗ**
ತಂದೆಯವರು	ತಂದೇರು	ತಂದ್ಯೋರು
ತಮ್ಮನವರು	ತಮ್ಮೋರು	ತಮ್ನೋರು
ಅಕ್ಕನವರು	ಅಕ್ಕೋರು	ಅಕ್ನೋರು
ಮಾವನವರು	ಮಾವೋರು	ಮಾವ್ನೋರು

ಬೆಂಗಳೂರು ಗ್ರಾಮೀಣ ಜನರ ಆಡುಮಾತಿನಲ್ಲಿ ಇತರೆ ಗೌರವಸೂಚನೆಗೆ **ಅರು/ರು** ಪ್ರತ್ಯಯ ಬಳಸುತ್ತಾರೆ.

ಶಿಷ್ಟಪದ	**ದಾ.ಹೆ.ಯ. ಭಾಗ**	**ಜಾಲ ಭಾಗ**
ಸ್ನೇಹಿತರು	ಸ್ನೇಹಿತ್ರು	ಸ್ನೇಯಿತ್ರು
ಪರಿಚಯದವರು	ಪರಿಚಯ್ದೋರು	ಪರಿಚಯಿತ್ರು/ಪರಿಚಿತ್ರು
ಅಣ್ಣನವರು	ಅಣ್ಣವ್ರು	ಅಣ್ಣೋರು
ಪಂಡಿತರು	ಪಂಡಿತ್ರು	ಪಂಡ್ಯೀತ್ರು

ಹೀಗೆ ವಚನ ವ್ಯವಸ್ಥೆಯನ್ನು ಒಳಗೊಂಡಿದೆ. ಕನ್ನಡದ ಆಡುಮಾತಿನ ಮಾದರಿಯೇ ಜಾಲ ಯಲಹಂಕ ಭಾಗದಲ್ಲಿದೆ. ಕೆಲವು ಪ್ರತ್ಯಯಗಳಲ್ಲಿ ತೆಲುಗಿನ ಪ್ರಭಾವ ಕಂಡುಬಂದರೆ, ಇನ್ನು ಕೆಲವು ಕಡೆ ಕನ್ನಡದ ಪ್ರಭಾವವಿದೆ.

೫.೨.೧.೩ ವಿಭಕ್ತಿ ಪ್ರತ್ಯಯಗಳು

"ವಾಕ್ಯದ ಇತರೆ ಪದಗಳೊಡನೆ ಸಂಬಂಧವನ್ನು ಸೂಚಿಸಲು ನಾಮಪದಗಳ ಅಂತ್ಯದಲ್ಲಿ ಸೇರುವ ಪ್ರತ್ಯಯಗಳು ವಿಭಕ್ತಿ ಪ್ರತ್ಯಯವಾಗಿವೆ."[೫೯] ವಿಭಕ್ತಿ ಪ್ರತ್ಯಯಗಳು ಎಂಟು. ಆದರೆ ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಭಾಗದಲ್ಲಿ ಪ್ರಮುಖವಾಗಿ ಆರು ಬಗೆಯ ವಿಭಕ್ತಿಗಳ ಬಳಕೆಯನ್ನು ಕಾಣಬಹುದು. ಪ್ರಥಮ ವಿಭಕ್ತಿಯ ಕಾರ್ಯವನ್ನು ನಾಮಪ್ರಕೃತಿಗಳೇ ನೇರವಾಗಿ ನಿರ್ವಹಿಸುತ್ತಿವೆ. ಪ್ರಥಮೆಯು ಪ್ರಕೃತಿಯಾಗಿಯೇ ಬಳಕೆಯಾಗುತ್ತಿದೆ. ಪಂಚಮಿ ವಿಭಕ್ತಿಯ ಕಾರ್ಯವನ್ನು ತೃತೀಯ ವಿಭಕ್ತಿಯೇ ನಿರ್ವಹಿಸುತ್ತದೆ. ಇನ್ನುಳಿದಂತೆ ದ್ವಿತೀಯ, ತೃತೀಯ, ಚತುರ್ಥಿ, ಷಷ್ಠಿ, ಸಪ್ತಮಿ, ಸಂಬೋಧನಾ ವಿಭಕ್ತಿಗಳು ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಭಾಗದ ಜನರಲ್ಲಿ ಬಳಕೆಯಾಗುತ್ತಿವೆ. ಈ ರೀತಿ ಬೆಂಗಳೂರು ಗ್ರಾಮೀಣ ಜನರಲ್ಲಿ ಬಳಕೆಯಾಗುವ ಪ್ರತ್ಯಯಗಳು ಈ ಮುಂದಿನಂತಿವೆ.

ವಿಭಕ್ತಿ	ಶಿಷ್ಟಪದ ಪ್ರತ್ಯಯ	ದಾ.ಹೆ.ಯ.ಭಾಗ ಪ್ರತ್ಯಯ	ಜಾಲ ಭಾಗ ಪ್ರತ್ಯಯ
ಪ್ರಥಮ	ಉ	ಉ	ಉ
ದ್ವಿತೀಯ	ಅನ್ನು	ಅನ್ನ/ನನ್ನು	ಅನ್ನ/ನ
ತೃತೀಯ	ಇಂದ	ಇಂದ	ಇಂಕ/ಇಂದ
ಚತುರ್ಥಿ	ಅ	ಅ/ಆ	ಅ/ಅ/ಉ
ಸಪ್ತಮಿ	ಅಲ್ಲಿ	ಅಲ್ಲಿ/ಅಕ	ಆಗ/ಆಗೆ/ಅಲ್ಲಿ
ಸಂಬೋಧನೆ	ಏ/ಈರಾ	ಏ	ಏ

ಪ್ರಥಮ ವಿಭಕ್ತಿ

ಕನ್ನಡದಲ್ಲಿ ಪ್ರಥಮ ವಿಭಕ್ತಿಯನ್ನು **ಉ** ಸ್ವರದಿಂದ ಗುರುತಿಸಲಾಗುತ್ತದೆ. "ಮೂಲ ದ್ರಾವಿಡದಲ್ಲಿನ ವ್ಯಂಜನಾಂತದಲ್ಲಿ **ಉ** ಕಾರವನ್ನು ಸೇರಿಸಿ ಸ್ವರಾಂತ್ಯವನ್ನು ಮಾಡಿಕೊಳ್ಳುವ ಪ್ರಕ್ರಿಯೆಯಿದೆ."[೧೧] ಪ್ರಥಮ ವಿಭಕ್ತಿಯು ನಾಮಪದಗಳಲ್ಲಿ ನೇರವಾಗಿ ಬಳಕೆಯಾಗುತ್ತದೆ. ಪ್ರಕೃತಿಯೇ ನೇರವಾಗಿ ಪ್ರಥಮೆಯ ಕೆಲಸ ನಿರ್ವಹಿಸುತ್ತದೆ. ಬೆಂಗಳೂರು ಗ್ರಾಮೀಣ ಜನರಲ್ಲಿ ಉ ಪ್ರತ್ಯಯವೇ ಪ್ರಥಮ ವಿಭಕ್ತಿಯಾಗಿ ಬಳಕೆಯಾಗುತ್ತಿದೆ. ಆದ್ದರಿಂದ ಅದರ ಅವಶ್ಯಕತೆಯಿಲ್ಲವಾಗಿದೆ.

ದ್ವಿತೀಯ ವಿಭಕ್ತಿ

ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಭಾಗದಲ್ಲಿ ದ್ವಿತೀಯ ವಿಭಕ್ತಿ ಪ್ರತ್ಯಯವು **ಅನ್ನು** ಎಂಬುದೇ ಬಳಕೆಯಲ್ಲಿದೆ. "ಮೂಲ ದ್ರಾವಿಡದಲ್ಲಿ **ಅನ್, ಆಯ್, ನ್‌ಕ್** ಎಂಬ ಮೂರು ಪ್ರತ್ಯಯಗಳಿಂದ ದ್ವಿತೀಯ ವಿಭಕ್ತಿಯನ್ನು ಗುರುತಿಸಲಾಗುವುದು."[೬೦] ದ್ವಿತೀಯ ವಿಭಕ್ತಿ ಬಳಕೆಯ ಬಗೆಗೆ ಇರುವ ದ್ರಾವಿಡ ನಿಯಮ ಇಂತಿದೆ:

೧. “ತಮಿಳು ಮತ್ತು ಕನ್ನಡ ಭಾಷೆಗಳಲ್ಲಿ ದ್ವಿತೀಯ ವಿಭಕ್ತಿಯು ಅಯ್/ಅನ್(ಅನ್ನು) ಪ್ರತ್ಯಯ ಬರುತ್ತವೆ. ತೆಲುಗಿನಲ್ಲಿ ಇದಕ್ಕೆ ಸಂವಾದಿಯಾಗಿ ‘ನಿ’, ಮತ್ತು ‘ನ’ ಪ್ರತ್ಯಯಗಳಿರುತ್ತವೆ.”[೬೧]

೨. “ತೆಲುಗಿನಲ್ಲಿ ದ್ವಿತೀಯಾದಿ ವಿಭಕ್ತಿಗಳಲ್ಲಿ ‘ನ್’, ‘ಅನಿ’, ಅಥವಾ ‘ನಿ’ ಯಾಗಿ ಬಳಕೆಯಲ್ಲಿವೆ”[೬೨]

ಬೆಂಗಳೂರು ಗ್ರಾಮೀಣ ಭಾಗದಲ್ಲಿ ದ್ವಿತೀಯ ವಿಭಕ್ತಿಯು **ಅನ್ನು/ಅನ್ನ/ನ್ನ** ಎಂದು ಬಳಕೆಯಾಗುತ್ತಿದೆ. ದಾ.ಹೆ.ಯಶ. ಭಾಗದಲ್ಲಿ ‘ಅನ್ನು/ಅನ್ನ’ ವು ಜಾಲಭಾಗದಲ್ಲಿ ‘ನ್’ ವಾಗಿ ಬಳಕೆಯಾಗುತ್ತಿದೆ.

ಬೆಂಗಳೂರು ಗ್ರಾಮೀಣ ಜನರಲ್ಲಿ ಏಕವಚನ ಮತ್ತು ಬಹುವಚನಗಳಲ್ಲಿ ಬಳಕೆಯಾಗುವ ವಿಭಕ್ತಿಗಳ ಪ್ರಯೋಗವನ್ನು ಬಳಕೆಯಾಗುವುದನ್ನು ಮುಂದಿನಂತೆ ನೀಡಲಾಗಿದೆ.

ವಿಭಕ್ತಿ	ಪ್ರಕೃತಿ	ಶಿಷ್ಟಪದ	ದಾ.ಹೆ.ಯ. ಭಾಗ	ಜಾಲ ಭಾಗ
	ರಾಜ	ರಾಜನನ್ನು	ರಾಜನ್ನ	ರಾಜ್ನ
ದ್ವಿತೀಯ		ರಾಜರಲ್ಲಿ	ರಾಜರನ್ನ	ರಾಜರ್ನ
	ಹಸು	ಹಸುವನ್ನು	ಅಸನ್ನ	ಅಸ್ನ/ಅಸುನ
		ಹಸುಗಳನ್ನು	ಅಸುಗಳ್ನ	ಅಸುಗಳ್ನ
ದ್ವಿತೀಯ	ಗಿಡ	ಗಿಡವನ್ನು	ಗಿಡನ್ನ	ಗಿಡಾನ/ಗಿಡ್ನ
		ಗಿಡಗಳನ್ನು	ಗಿಡಗುಳ್ನ	ಗಿಡಗಳ್ನ

ಬೆಂಗಳೂರು ಗ್ರಾಮೀಣ ಭಾಗವಾದ ದಾ.ಹೆ.ಯ ಭಾಗದಲ್ಲಿ **ಅನ್ನು/ಅನ್ನ** ಎಂದು ಬಳಕೆಯಾಗುತ್ತಿದ್ದರೆ, ಜಾಲ ಭಾಗದಲ್ಲಿ **ನ್** ವ್ಯಂಜನವು ಸಂಕ್ಷಿಪ್ತವಾಗಿ ಬಳಕೆಯಾಗುತ್ತಿದೆ. ಕನ್ನಡದಲ್ಲಿ **ನ್** ಬಳಕೆಯಲ್ಲಿದ್ದರೆ, ತೆಲುಗಿನಲ್ಲಿ **ನ್** ಅಥವಾ **ನಿ** ಎಂದು ದ್ವಿತೀಯ ಪ್ರತ್ಯಯವಾಗಿ ಬಳಕೆಯಾಗುತ್ತಿವೆ. ಅದರ ಪ್ರಭಾವವು ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಪ್ರದೇಶವಾದ ಜಾಲದ ಮತ್ತು ಯಲಹಂಕದ ಮೇಲೆ ಆಗಿರುವುದನ್ನು ಕಾಣಬಹುದು.

ತೃತೀಯ ವಿಭಕ್ತಿ

ತೃತೀಯ ವಿಭಕ್ತಿಯನ್ನು **ಇಂದ** ಎಂಬ ಪ್ರತ್ಯಯದಿಂದ ಸೂಚಿಸಲಾಗುವುದು. ತೃತೀಯ ವಿಭಕ್ತಿಯು **"**ಕೆಲವು ಬಾರಿ ತೃತೀಯ ಮತ್ತು ಪಂಚಮಿಯು ಒಂದೇ ಸ್ಥಾನದಲ್ಲಿ ಬಳಕೆಯಾಗುತ್ತವೆ. ಆದರೆ ತೆಲುಗಿನಲ್ಲಿ ಕರಣಾರ್ಥ ಸ್ಥಾನದಲ್ಲಿ ತೃತೀಯ ವಿಭಕ್ತಿಯ ಬದಲು ಸಪ್ತಮಿಯ ಬಳಕೆಯಿದೆ.**"**[೬೩]

ಕನ್ನಡದಲ್ಲಿ ತೃತೀಯ ವಿಭಕ್ತಿಯೇ ಪಂಚಮಿಯ ಸ್ಥಾನದಲ್ಲಿ ಬಳಕೆಯಾಗುತ್ತದೆ. ಅದಕ್ಕೆ ಸಂಬಂಧಿಸಿದ ದ್ರಾವಿಡ ನಿಯಮಗಳು ಇಂತಿವೆ:

೧. **"**ಕನ್ನಡದಲ್ಲಿ ಪಂಚಮಿ ವಿಭಕ್ತಿಯು ಇಲ್ಲ. ಸಪ್ತಮಿ ಹಾಗೂ ತೃತೀಯ ವಿಭಕ್ತಿಗಳೇ ಪಂಚಮಿಯ ಕಾರ್ಯವನ್ನು ನಿರ್ವಹಿಸುತ್ತವೆ.**"**[೬೪]

೨. **"**ಆಧುನಿಕ ತೆಲುಗಿನಲ್ಲಿ ಪಂಚಮಿಯು ತೃತೀಯಾರ್ಥದಲ್ಲಿ ಬಳಕೆಯಾಗುತ್ತದೆ. ತೆಲುಗು ಕೆಲವು ಪ್ರತ್ಯಯಗಳನ್ನು ಪ್ರತ್ಯೇಕವಾಗಿ ಬಳಸುತ್ತದೆ. ಉದಾ: ನಿಂಚಿ/ನುಂಚಿ

ಶಾಲೆಯಿಂದ – ಬನ್ನಂಚಿ, ಗಿಡದಿಂದ–ಚೆಟ್ಟನುಂಚಿ**"**[೬೫]

ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಭಾಗವಾದ ದಾ.ಹೆ.ಯಶ. ಭಾಗದಲ್ಲಿ 'ಇಂದ' ಎಂದು ಬಳಕೆಯಾಗುತ್ತದೆ. ಆದರೆ ಬೆಂಗಳೂರಿನ ಗ್ರಾಮೀಣ ಭಾಗ ಜಾಲ ಮತ್ತು ಯಲಹಂಕ ಪೂರ್ವ ಭಾಗಗಳಲ್ಲಿ ಪಂಚಮಿ ವಿಭಕ್ತಿ ಪ್ರತ್ಯಯವು **ಇಂಕ, ಇಂಚಿ** ಯಾಗಿ ಬಳಕೆಯಾಗುತ್ತವೆ. ಬೆಂಗಳೂರು ಗ್ರಾಮೀಣ ಭಾಗದಲ್ಲಿ ತೃತೀಯ ವಿಭಕ್ತಿಯ ಬಳಕೆಯು ಇಂತಿದೆ.

ವಿಭಕ್ತಿ	**ಪ್ರಕೃತಿ**	**ಶಿಷ್ಟಪದ**	**ದಾ.ಹೆ.ಯ. ಭಾಗ**	**ಜಾಲ ಭಾಗ**
ತೃತೀಯ	ರಾಜ	ರಾಜನಿಂದ	ರಾಜ್ನಿಂದ	ರಾಜ್ನಿಂಕ
ತೃತೀಯ		ರಾಜರಿಂದ	ರಾಜ್ರಿಂದ	ರಾಜ್ರಿಂಕ
	ಗಿಡ	ಗಿಡದಿಂದ	ಗಿಡ್ಡಿಂದ	ಗಿಡ್ನಿಂಕ
		ಗಿಡಗಳಿಂದ	ಗಿಡ್ಗುಳಿಂದ	ಗಿಡ್ಗುಳ್ನಿಂಕ
	ಹಸು	ಹಸುವಿಂದ	ಅಸಿನಿಂದ	ಅಸ್ನಿಂಕ
		ಹಸುಗಳಿಂದ	ಅಸುಗಳಿಂದ	ಅಸ್ಗುಳ್ನಿಂಕ

ಬೆಂಗಳೂರು ಗ್ರಾಮೀಣ ಭಾಗವಾದ ದಾ.ಹೆ.ಯ. ಭಾಗದಲ್ಲಿ **ಇಂದ** ಎಂದು ಬಳಕೆಯಾಗುತ್ತಿದ್ದರೆ, ಜಾಲ ಭಾಗದಲ್ಲಿ **ದ್** ವಿಕಲ್ಪವಾಗಿ **ಕ್** ಬಳಕೆಯಾಗುತ್ತಿದೆ. ಅಂದರೆ ಜಾಲ ಭಾಗದಲ್ಲಿ **ಇಂದ** ವು **ಇಂಕ** ವಾಗಿ ಬಳಕೆಯಾಗುತ್ತಿದೆ. ಕನ್ನಡದಲ್ಲಿ **ಇಂದ** ಪ್ರತ್ಯಯವು ತೆಲುಗಿನಲ್ಲಿ **ಇಂಚಿ, ಇಂಕ** ಎಂದು ಪಂಚಮಿಯ ಸ್ಥಾನದಲ್ಲಿ ಬಳಕೆಯಾಗುತ್ತಿದೆ. ಜಾಲ ಭಾಗದ ಜನರ ಆಡುಮಾತಿನಲ್ಲಿ ತೃತೀಯ ವಿಭಕ್ತಿಯ ಸ್ಥಾನದಲ್ಲಿ ಇಂಕ ಬಳಕೆಯಾಗುತ್ತಿರುವುದನ್ನು ಕಾಣಬಹುದು.

ಚತುರ್ಥಿ ವಿಭಕ್ತಿ

ಕನ್ನಡದಲ್ಲಿ ಚತುರ್ಥಿ ವಿಭಕ್ತಿ ಪ್ರತ್ಯಯವನ್ನು **ಕೆ/ಗೆ** ಎಂಬ ಪ್ರತ್ಯಯದಿಂದ ಸೂಚಿಸಲಾಗುವುದು. ಮೂಲ ದ್ರಾವಿಡದಲ್ಲಿ ಈ ಪ್ರತ್ಯಯವು **ಕ್(ಕ್ಕು,ಕ್ಕೆ,ಕು,ಕಿ)** ಪ್ರತ್ಯಯವಾಗಿ ಬಳಕೆಯಲ್ಲಿತ್ತು. ಈ ಪ್ರತ್ಯಯವು ಹೊಸಗನ್ನಡದ ಅವಧಿಯಲ್ಲಿ **ಗ್** ರೂಪವಾಗಿ ಬಳಸಲಾಗುತ್ತಿದೆ. **ಕ್>ಗ್** ನ ವಿವಿಧರೂಪವಾಗಿದ್ದು, ಅಘೋಷವು ಘೋಷ ಉಚ್ಚಾರಣೆಯ **ಕ್>ಗ್** ಆಗಿ ಬಳಕೆಯಾಗುತ್ತಿದೆ. ತೆಲುಗು ಭಾಷೆಯಲ್ಲಿ ಚತುರ್ಥಿ ವಿಭಕ್ತಿಯು **ಕ್, ಕು, ಕಿ** ಪ್ರತ್ಯಯವನ್ನು ಬಳಸುತ್ತಿದೆ. **"ಚತುರ್ಥಿಯ ಕೆ** ಇಲ್ಲವೆ **ಕಾ** ಎನ್ನುವುದು ಮೂಲದ್ರಾವಿಡದ್ದು, ನಂತರ ಬೇರೆ ಭಾಷೆಗಳಿಗೆ ಅದರ ಪ್ರಭಾವವುಂಟಾಗಿದೆ ಎಂದು ಕಾಲ್ಡ್‌ವೆಲ್‌ರವರು ೧೮೬೫ ರಲ್ಲಿ ತಿಳಿಸಿದ್ದರು"[೬೬]

ಚತುರ್ಥಿ ವಿಭಕ್ತಿಯ ಕೆಲವು ದ್ರಾವಿಡ ನಿಯಮಗಳು ಇಂತಿವೆ:

೧. "ತಮಿಳು ಭಾಷೆಯಲ್ಲಿ ಚತುರ್ಥಿ ವಿಭಕ್ತಿಯು 'ಕು' ('ಕ್ಕು'ವಿನಿಂದ ನಿಷ್ಪತ್ತಿಯಾದುದು) ಪ್ರತ್ಯಯವಾಗಿದೆ. ಮಲಯಾಳಂ ಭಾಷೆಯಲ್ಲಿ 'ಕ್ಕು' ಎಂಬುದಾಗಿದೆ. ತೆಲುಗು ಭಾಷೆಯಲ್ಲಿ ಪೂರ್ವಸ್ವರಗಳನ್ನು ಅನುಸರಿಸಿ 'ಕು' ಅಥವಾ 'ಕಿ' ಪ್ರತ್ಯಯಗಳು ಪರವಾಗುತ್ತವೆ. ಉದಾ: 'ಇ' ಕಾರಾಂತ್ಯವಾಗಿರುವ ಪ್ರತ್ಯಯಗಳಿರುವ ಪದಗಳಿಗೆ 'ಕಿ' ಪ್ರತ್ಯಯವೂ ಇತರ ಪದಗಳಿಗೆ 'ಕು' ಪ್ರತ್ಯಯವೂ ಪರವಾಗುತ್ತದೆ."[೬೭]

೨. "ತೆಲುಗಿನಲ್ಲಿ 'ಕುನ್' 'ಕು' 'ಕಿ' ಪ್ರತ್ಯಯವು ಚತುರ್ಥಿಯಲ್ಲಿ ಬಳಕೆಯಾಗುತ್ತವೆ.

ಉದಾ : ಗಂಟೆಗೆ – ಗಂಟಲಕು

ಲೋಕೇಶ್ವರನಿಗೆ – ಲೋಕೇಶ್ವರಕುನ್

ಅವರಿಗೆ – ವಾರಿಕಿ ಎಂದು ಬಳಕೆಯಾಗುತ್ತವೆ."[೬೮]

ಬೆಂಗಳೂರು ಗ್ರಾಮೀಣ ಜಾಲ ಭಾಗದಲ್ಲಿ ಇದೇ ಸ್ವರೂಪದಲ್ಲಿ ಚತುರ್ಥಿ ವಿಭಕ್ತಿಯಾಗಿ **ಕ್/ಕ** ವು ಬಳಕೆಯಾಗುತ್ತಿರುವುದನ್ನು ಕಾಣಬಹುದು.

ವಿಭಕ್ತಿ	**ಪ್ರಕೃತಿ**	**ಶಿಷ್ಟಪದ**	**ದಾ.ಹೆ.ಯ. ಭಾಗ**	**ಜಾಲ ಭಾಗ**
ಚತುರ್ಥಿ	ರಾಜ	ರಾಜನಿಗೆ	ರಾಜಂಗೆ	ರಾಜುಂಕ/ರಾಜುಂಕಿ
		ರಾಜರಿಗೆ	ರಾಜ್ರಿಗೆ	ರಾಜುರ್ಕ/ರಾಜುರ್ಕಿ
	ಹಸು	ಹಸುವಿಗೆ	ಅಸುವ್ಗೆ	ಅಸುಕ
		ಹಸುಗಳಿಗೆ	ಅಸ್ಗಳ್ಗೆ	ಅಸುಗಳ್ಕ/ಅಸುಗಳ್ಕಿ
	ಗಿಡ	ಗಿಡಕ್ಕೆ	ಗಿಡುಕ್ಕೆ	ಗಿಡುಕ್ಕ/ ಗಿಡ್ಕ
		ಗಿಡಗಳಿಗೆ	ಗಿಡಗುಳ್ಗೆ	ಗಿಡಗುಳ್ಕ/ಗಿಡ್ಗುಳ್ಕಿ

ಇಲ್ಲಿ ಬೆಂಗಳೂರು ಗ್ರಾಮೀಣ ಭಾಗವಾದ ದಾ.ಹೆ.ಯ. ಭಾಗದಲ್ಲಿ ಚತುರ್ಥಿ ವಿಭಕ್ತಿಯಾದ **ಗೆ/ಕೆ** ಯು ಮಾನವವಾಚಿ ಮತ್ತು ಪ್ರಾಣಿವಾಚಿಗಳಿಗೆ **ಗೆ (ಇಗೆ)**ಎಂದು ಬಳಕೆಯಾಗುತ್ತಿದ್ದರೆ, ಪರಿಸರವಾಚಿ ಏಕವಚನ ಪದಗಳಲ್ಲಿ **ಕೆ(ಅಕ್ಕೆ)** ಎಂದು ಬಳಕೆಯಾಗುತ್ತಿವೆ. ಅದು ದಾ.ಹೆ.ಯ. ಭಾಗದಲ್ಲಿ ಸಂಕ್ಷಿಪ್ತಗೊಂಡು ಆಡುಮಾತಿನಲ್ಲಿ ಬಳಕೆಯಾಗುತ್ತಿದೆ. ಆದರೆ ಜಾಲ ಭಾಗದಲ್ಲಿ **ಗೆ/ಕೆ** ಜಾಗದಲ್ಲಿ **ಕ ಮತ್ತು ಕಿ** ಯು ಬಳಕೆಯಾಗುತ್ತಿದೆ. ಕೆಲವೆಡೆ **ಕ್** ಸಂಕ್ಷಿಪ್ತಗೊಂಡು ಸೇರುತ್ತಿದೆ. ತೆಲುಗಿನಲ್ಲಿ ಈ **ಕ್** ಧ್ವನಿಯು ಸಂಪ್ರದಾನ ಕಾರಕವಾಗಿ ಪೂರ್ವಸ್ವರ ಇ ಕಾರಾಂತವಾಗಿ **ಕಿ** ಎಂದು ಅಥವಾ **ಉ** ಕಾರಾಂತವಾಗಿ **ಕು** ಎಂದು ಬಳಕೆಯಾಗುತ್ತಿದೆ. ಜಾಲದಲ್ಲಿ **ಅ** ಮತ್ತು ಇ ಕಾರಾಂತವಾಗಿ ಬಳಕೆಯಾಗುವುದನ್ನು ಕಾಣಬಹುದಾಗಿದೆ. ಇಲ್ಲಿ**ಎ** (ಗಿಡಕ್ಕೆ) ಕಾರವು**ಅ** (ಗಿಡ್ಕ) ಕಾರವಾಗಿ ಬಳಕೆಯಾಗುತ್ತಿದೆ.

ಷಷ್ಠೀವಿಭಕ್ತಿ

ಕನ್ನಡದಲ್ಲಿ ಷಷ್ಠೀ ವಿಭಕ್ತಿ ಪ್ರತ್ಯಯವನ್ನು **ಅ** ಎಂಬ ಪ್ರತ್ಯಯದಿಂದ ಸೂಚಿಸಲಾಗುವುದು. "ಮೂಲ ದ್ರಾವಿಡದಲ್ಲಿ ಷಷ್ಠೀ ವಿಭಕ್ತಿ ಪ್ರತ್ಯಯವು **ಅ** ಅಥವಾ **ಅದು** ಎಂದಾಗಿ ಬಳಕೆಯಲ್ಲಿತ್ತು. **ಅದು** ಪ್ರತ್ಯಯದ ಸವಕಳಿರೂಪ **ಅ** ಪ್ರತ್ಯಯವಾಗಿದೆ."[೬೯] **ಅ** ಪ್ರತ್ಯಯವು ಹೆಚ್ಚು ಸಂಬಂಧವಾಚಕ ಪ್ರತ್ಯಯವಾಗಿ ಬಳಕೆಯಾಗುವುದು.

ವಿಭಕ್ತಿ	ಪ್ರಕೃತಿ	ಶಿಷ್ಟಪದ	ದಾ.ಹೆ.ಯ. ಭಾಗ	ಜಾಲ ಭಾಗ
ಷಷ್ಠಿ	ರಾಜ	ರಾಜನ	ರಾಜುನ್ನ	ರಾಜ್ನ
		ರಾಜರ	ರಾಜ್ರ	ರಾಜುರ್ನ
	ಹಸೂ	ಹಸೂ	ಅಸೂ	ಅಸೂ
		ಹಸುಗಳಾ	ಅಸೂಗಳಾ	ಅಸೂಗ್ಲಾ
	ಗಿಡ	ಗಿಡದ	ಗಿಡ್ದ	ಗಿಡ್ದಾ
		ಗಿಡಗಳ	ಗಿಡ್ಗುಳ	ಗಿಡುಗ್ಲಾ

ತೆಲುಗಿನಲ್ಲಿ ನಾಮಪದದ ಎಲ್ಲಾ ನಾಮವಾಚಿಗಳು ಷಷ್ಠೀ ವಿಭಕ್ತಿ **ಅ** ಪ್ರತ್ಯಯವನ್ನು ಒಳಗೊಂಡಿರುತ್ತವೆ. ಕೆಲವೆಡೆ **ಲು** ಬಹುವಚನ ಪ್ರತ್ಯಯವನ್ನು ಬಳಸುತ್ತಾರೆ. ಈ **ಲು** ಪ್ರತ್ಯಯವು **ಲ್**ಎಂದು ಕೇವಲ ಅವಧಾರಣಾರ್ಥವಾಗಿ ಬಳಕೆಯಾಗುತ್ತದೆ. ಇಲ್ಲಿ **ಅ** ಕಾರವು **ಉ** ಕಾರವಾಗಿ ಷಷ್ಠಿಯ ಸ್ಥಾನದಲ್ಲಿ ಬಳಕೆಯಾಗುವುದು. ಅದರ ಪ್ರಭಾವವು ಬೆಂಗಳೂರು ಗ್ರಾಮೀಣ ಭಾಗವಾದ ಜಾಲ ಭಾಗದಲ್ಲಿ ಉಂಟಾಗುತ್ತಿರುವುದನ್ನು ಕಾಣಬಹುದು. **ಹ್** ವ್ಯಂಜನವು **ಅ** ಕಾರವಾಗಿ ಬದಲಾಗುತ್ತದೆ. ಇದು ಸಾಮಾಜಿಕವಾಗಿ ಆಡುಮಾತಿನಲ್ಲಿ ಮುಖ್ಯವಾದ ವ್ಯತ್ಯಾಸವಾಗಿದೆ. ಹೀಗೆ ಜಾಲ ಭಾಗದಲ್ಲಿ ಬದಲಾವಣೆಗಳುಂಟಾಗುತ್ತಿವೆ.

ಸಪ್ತಮಿ ವಿಭಕ್ತಿ

ಕನ್ನಡದಲ್ಲಿ ಸಪ್ತಮಿ ವಿಭಕ್ತಿ ಪ್ರತ್ಯಯವು **ಲಿ, ಲ್ಲಿ, ಅಲ್ಲಿ** ಎಂದು ಸೂಚಿತವಾಗುವುದು, ದ್ರಾವಿಡದಲ್ಲಿ **ಅನ್, ಇನ್** ಎಂದು ಬಳಕೆಯಾಗುವುದು. **"**ಮೂಲದ್ರಾವಿಡದಲ್ಲಿ **ಉಳ್**/ **ಒಳ್** ಎಂದು ಬಳಕೆಯಲ್ಲಿದ್ದವು. ತೆಲುಗಿನಲ್ಲಿ **ಆನ್,ನನ್,**ನಿ ಪ್ರತ್ಯಯಗಳು ಸಪ್ತಮಿ ಸ್ಥಾನದಲ್ಲಿ ಬಳಕೆಯಲ್ಲಿವೆ.**"**[೨೦]

ವಿಭಕ್ತಿ	**ಪ್ರಕೃತಿ**	**ಶಿಷ್ಟಪದ**	**ದಾ.ಹೆ.ಯ. ಭಾಗ**	**ಜಾಲ ಭಾಗ**
ಸಪ್ತಮಿ	ರಾಜ	ರಾಜನಲ್ಲಿ	ರಾಜ್ನಲ್ಲಿ	ರಾಜ್ನಾಗ
		ರಾಜರಲ್ಲಿ	ರಾಜ್ರಲ್ಲಿ	ರಾಜ್ರಾಗ
	ಗಿಡ	ಗಿಡದಲ್ಲಿ	ಗಿಡ್ದಲ್ಲಿ	ಗಿಡ್ದಾಗ
		ಗಿಡಗಳಲ್ಲಿ	ಗಿಡ್ಗುಳಲ್ಲಿ	ಗಿಡುಗ್ಲಾಗ
	ಹಸು	ಹಸುವಿನಲ್ಲಿ	ಅಸಿನಲ್ಲಿ	ಅಸುವ್ನಾಗ
		ಹಸುಗಳಲ್ಲಿ	ಅಸ್ಗುಳಲ್ಲಿ	ಅಸ್ಗುಳ್ನಾಗ/ಅಸುಗ್ಲಾಗ

ಬೆಂಗಳೂರು ಗ್ರಾಮೀಣ ಭಾಗವಾದ ದಾ.ಹೆ.ಯ. ಭಾಗದಲ್ಲಿ **ಅಲ್ಲಿ** ಎಂದು ಬಳಕೆಯಾಗುತ್ತಿದ್ದರೆ, ಜಾಲ ಭಾಗದಲ್ಲಿ **ಆಗ, ನ್**ಗ. **(ನನ್,ಗ) (ಆನ್,ಗ)** ಬಳಕೆಯಾಗುತ್ತಿವೆ. **ನ್** ಧ್ವನಿಯು ದ್ವಿತ್ವವಾಗುವುದು. **"**ತೆಲುಗು ಭಾಷಿಕರಲ್ಲಿ **ನನ್, ಆನ್, ನಿ, ಲೋ, ಅಂದು** ಎಂಬ ಪ್ರತ್ಯಯಗಳ ಬಳಕೆಯಿದೆ.**"**[೨೧] ತೆಲುಗಿನ ಅಮಹತ್ ರೂಪಗಳ ನಾಮಪದಗಳಿಗೆ ಸಂಬಂಧಿಸಿದಂತೆ **ನ್** ಪ್ರತ್ಯಯವು ನಿ ಎಂದು ಬಳಕೆಯಾಗುವುದು. ಕನ್ನಡದಲ್ಲಿ ದೂರ ದರ್ಶಕ ಸರ್ವನಾಮ **ಅಲ್ಲಿ,** ಸಮೀಪ ದರ್ಶಕ ಸರ್ವನಾಮ ಇಲ್ಲಿ**,** ಯು ಕ್ರಮವಾಗಿ **ನ್,** ನಿ ಎಂದಾಗಿ ತೆಲುಗಿನಲ್ಲಿ ರೂಪಾಂತರವಾಗಿ ಬಳಕೆಯಾಗುವುದು. ಅದರ ಪ್ರಭಾವವು ಜಾಲದಲ್ಲಿ ಕಾಣುತ್ತಿದ್ದು ಅಲ್ಲಿ **ನನ್, ನ್ಗ, ಆಗ** ಎಂದು ಬಳಕೆಯಾಗುತ್ತಿದೆ. **ಳ್** ಕಾರ ವು **ಲ್** ಕಾರವಾಗಿ ಬಳಕೆಯಾಗುವುದು ತೆಲುಗಿನ ಭಾಷಾ ಸ್ವರೂಪವನ್ನು ತೋರಿಸುತ್ತಿದೆ. ಅದರಂತೆ ಜಾಲ ಭಾಗದ ಸ್ವರೂಪದಲ್ಲೂ ಭಿನ್ನತೆಯುಂಟಾಗಿದೆ.

ಸಂಬೋಧನೆ

ಸಂಬೋಧನಾ ವಿಭಕ್ತಿಯು **ಏ, ಇ, ಆ** ಎಂಬ ಪ್ರತ್ಯಯವನ್ನು ಒಳಗೊಂಡಿದೆ. ಸಂಬೋಧನೆಯು ಕನ್ನಡದಲ್ಲಿ ನಾಮವಾಚಕಕ್ಕೆ **ಆ** ದೀರ್ಘಸ್ವರವನ್ನು ಪ್ರಯುಕ್ತಗೊಳಿಸಿ ಪದಾಂತ್ಯದ ಸ್ವರವನ್ನು ದೀರ್ಘಗೊಳಿಸಿ ಅಥವಾ **ಎ** ಅಥವಾ **ಏ** ಸ್ವರವನ್ನು ಬಳಸುವುದರ ಮೂಲಕ ಸಂಬೋಧನಾ ವಿಭಕ್ತಿಯನ್ನು ಪಡೆಯಲಾಗುವುದು. ಸಂಬೋಧನೆಗೆ ಬಳಕೆಯ ಬಗೆಗಿನ ದ್ರಾವಿಡದ ನಿಯಮ ಇಂತಿದೆ:

೧. "ಮೂಲ ದ್ರಾವಿಡಕ್ಕೆ 'ಏ' ಹಾಗೂ 'ಓ' ಪ್ರತ್ಯಯಗಳನ್ನು ಪುನರ್‍ರಚಿಸಲಾಗಿದೆ. ತೆಲುಗಿನಲ್ಲಿರುವ ಆ ಪ್ರತ್ಯಯ ಬಹುಶಃ ಮೂಲದ್ರಾವಿಡದ 'ಓ' ಪ್ರತ್ಯಯದಿಂದ ಬಂದಿರಬೇಕೆಂದು ಷಣ್ಮುಗಂ ಅವರ ಅಭಿಪ್ರಾಯ. ಕೆಲವು ಭಾಷೆಗಳು 'ಈ' 'ಇರ್' ಮುಂತಾದ ಕೆಲವು ಸ್ವತಂತ್ರ ಪ್ರತ್ಯಯಗಳನ್ನು ಬೆಳೆಸಿಕೊಂಡಿವೆ."[೨]

೨. "ಕನ್ನಡದ 'ಏ' ಸಂಬೋಧನಾ ವಿಭಕ್ತಿಯು ತೆಲುಗಿನಲ್ಲಿ 'ಆ' ಪ್ರತ್ಯಯವಾಗಿ ಬಳಕೆಯಾಗುತ್ತಿದೆ.

ಉದಾ: ರಾಮನೇ–ರಾಮುಡಾ"[೨೩]

ವಿಭಕ್ತಿ	**ಪ್ರಕೃತಿ**	**ಶಿಷ್ಟಪದ**	**ದಾ.ಹೆ.ಯ. ಭಾಗ**	**ಜಾಲ ಭಾಗ**
ಸಂಬೋಧನಾ	ರಾಜ	ರಾಜಾ	ರಾಜಾ	ರಾಜಾ
		ರಾಜರೇ	ರಾಜ್ರೇ	ರಾಜ್ರಾ
	ಗಿಡ	ಗಿಡವೆ	ಗಿಡ್ವೆ	ಗಿಡ್ವಾ
		ಗಿಡಗಳೇ	ಗಿಡ್ಗುಳೇ	ಗಿಡ್ಗುಳಾ

ಬೆಂಗಳೂರು ಗ್ರಾಮೀಣ ಭಾಗವಾದ ದಾ.ಹೆ.ಯ. ಭಾಗದಲ್ಲಿ ಏಕವಚನ **ಆ** ಬಹುವಚನ **ಏ** ಎಂಬ ಅವಧಾರಣೆಯು ಸಂಬೋಧನೆಯಲ್ಲಿ ಬಳಕೆಯಾಗುತ್ತಿದ್ದರೆ, ಜಾಲ ಭಾಗದಲ್ಲಿ ಏಕವಚನ ಮತ್ತು ಬಹುವಚನದಲ್ಲಿ **ಆ** ದೀರ್ಘೀಕರಣವಾಗಿ ಬಳಕೆಯಾಗುತ್ತಿದೆ. ತೆಲುಗಿನಲ್ಲಿ ಎಲ್ಲಾ ನಾಮವಾಚಕ ಪದಗಳು ಅಂತ್ಯಸ್ವರವಾಗಿರುತ್ತವೆ, ಅವನ್ನು ದೀರ್ಘೀರಿಸುವುದರ ಮೂಲಕ ಸಂಬೋಧನಾ ವಿಭಕ್ತಿಯು

ರೂಪುಗೊಳ್ಳುತ್ತವೆ. ಅಂತೆಯೇ ಜಾಲ ಭಾಗದಲ್ಲಿ **ಆ** ಎಂದು ದೀರ್ಘೀಕರಿಸುತ್ತಾ ಪದ ಬಳಕೆಯನ್ನು ಮಾಡುತ್ತಾರೆ. ಇದಕ್ಕೆ ತೆಲುಗು ಭಾಷಿಕರ ಪ್ರಭಾವವುಂಟಾಗಿರುವುದು ಕಾರಣವಾಗಿದೆ.

ಹೀಗೆ ಬೆಂಗಳೂರು ಗ್ರಾಮೀಣ ಜನರಲ್ಲಿ ಈ ವಿಭಕ್ತಿಗಳು ಬಳಕೆಯಾಗುತ್ತಿದ್ದು, ಇವು ಮಾತನಾಡುವ ಸಂದರ್ಭಗಳಿಗೆ ಅನುಗುಣವಾಗಿ ಮತ್ತು ವಯಸ್ಸಿಗೆ ಅನುಗುಣವಾಗಿ ಭಿನ್ನವಾಗಿ ಬಳಕೆಯಾಗುತ್ತವೆ. ಕೆಲವು ಸಂದರ್ಭದಲ್ಲಿ ಬಳಸುವವರ ವಯಸ್ಸು ಕೂಡ ಪ್ರತ್ಯಯ ಬಳಕೆಯ ಮೇಲೆ ಪರಿಣಾಮ ಬೀರುತ್ತವೆ.

೫.೨.೧.೪ ಸರ್ವನಾಮಗಳು

ಸರ್ವನಾಮಗಳು ನಾಮಪದಗಳ ಬದಲು ಬಳಕೆಯಾಗುತ್ತವೆ. ಇವು ನಾಮಪದದ ಒಳವರ್ಗವಾಗಿವೆ. ಇವುಗಳ ಬಳಕೆಯು ಅರ್ಥವನ್ನು ಆಧರಿಸುತ್ತವೆ. ಬೆಂಗಳೂರು ಗ್ರಾಮೀಣ ಜನರಲ್ಲಿ ಬಳಕೆಯಾಗುವ ಸರ್ವನಾಮಗಳನ್ನು ಪುರುಷವಾಚಕ, ನಿರ್ದೇಶಕ, ಪ್ರಶ್ನಾರ್ಥಕ, ಸಾಪೇಕ್ಷಕ, ಅನಿರ್ದಿಷ್ಟಾರ್ಥಕ, ಪರಿಮಾಣವಾಚಕ ಎಂದು ವಿಭಾಗಿಸಿಕೊಂಡು ಪ್ರದೇಶಾವಾರು ತೌಲನಿಕವಾಗಿ ಅಧ್ಯಯನ ಮಾಡಲಾಗಿದೆ. "ಭಾಷೆಯ ಸ್ಥಿರ ಹಾಗೂ ಅಭೇದ್ಯ ಅಂಶಗಳಲ್ಲಿ ಸರ್ವನಾಮಗಳು ಪ್ರಮುಖವಾದವುಗಳು. ಅನ್ಯಭಾಷೆಯಿಂದ ಸ್ವೀಕರಣ ಮಾಡಿಕೊಳ್ಳಲು ಅಸಾಧ್ಯವಾದರಿಂದ ಭಾಷಾ ಸಂಬಂಧ ಹಾಗೂ ಸ್ವರೂಪವನ್ನು ಗುರುತಿಸುವಲ್ಲಿ ಹೆಚ್ಚು ಖಚಿತ ಆಧಾರವನ್ನು ಒದಗಿಸುತ್ತವೆ."[೭೪] ಭಾಷೆಯ ಸಾಮಾಜಿಕ ಸಂಪರ್ಕವು ಸರ್ವನಾಮಗಳಲ್ಲಿಯೂ ಏನಾದರೂ ವ್ಯತ್ಯಾಸವನ್ನು ತಂದಿದೆಯೇ ಎಂಬುದನ್ನು ಅಧ್ಯಯನ ಮಾಡುವುದು ಮುಖ್ಯವಾದ ಸಂಗತಿಯಾಗಿದೆ. ಭಾಷೆಯ ಸ್ಥಿರ ಮತ್ತು ಅಭೇದ್ಯ ಅಂಶಗಳಲ್ಲಿ ಉಂಟುಮಾಡುತ್ತಿರುವ ವ್ಯತ್ಯಾಸವನ್ನು ಅರಿಯಬೇಕಾಗಿದೆ.

೫.೨.೧.೪.೧ ಪುರುಷವಾಚಕ ಸರ್ವನಾಮಗಳು (ವ್ಯಕ್ತಿ ವಾಚಕ ಸರ್ವನಾಮಗಳು)

ಬೆಂಗಳೂರು ಗ್ರಾಮೀಣರಲ್ಲಿ ಬಳಕೆಯಾಗುವ ಪುರುಷವಾಚಕಗಳನ್ನು ಉತ್ತಮ, ಮಧ್ಯಮ, ಪ್ರಥಮ ಎಂದು ಮೂರು ರೀತಿಯ ಪುರುಷವಾಚಕಗಳಾಗಿ ಗುರುತಿಸಬಹುದು. ಇವು ಏಕವಚನ ಮತ್ತು ಬಹುವಚನಗಳ ವಚನ ಭೇದವನ್ನು ಒಳಗೊಂಡಿವೆ. ಪ್ರಥಮ ಪುರುಷವು ಮಹತ್ ಮತ್ತು ಅಮಹತ್ ಲಿಂಗ ಭೇದವನ್ನು ಒಳಗೊಂಡಿದ್ದು, ಉಳಿದ ಪ್ರಥಮ ಮತ್ತು ಉತ್ತಮ ಪುರುಷ ವಾಚಕದಲ್ಲಿ ಲಿಂಗ ಭೇದವು ವ್ಯಕ್ತವಾಗುವುದಿಲ್ಲ.

"ದ್ರಾವಿಡಭಾಷೆಗಳಲ್ಲಿ ಪುರುಷ ವಾಚಕಗಳಾದ ಉತ್ತಮ ಪುರುಷ ವಾಚಕ ಸರ್ವನಾಮವು **ನಾ, ಯಾ** ಅಥವಾ **ಆ** ಆಗಿದ್ದು, ಮಧ್ಯಮ ಪುರುಷ ವಾಚಕ ಸರ್ವನಾಮವು **ನೀ, ಯೀ** ಅಥವಾ **ಈ** ಆಗಿದೆ."[೮೫] ಬೆಂಗಳೂರು ಗ್ರಾಮೀಣ ಜನರಲ್ಲಿ ಉತ್ತಮ ಪುರುಷವು **ನಾ** ಎಂದು ಬಳಕೆಯಾದರೆ, ಮಧ್ಯಮ ಪುರುಷವು **ನೀ** ಎಂದು ಬಳಕೆಯಾಗುತ್ತಿದೆ. ಇಲ್ಲಿ ಯಾವುದೇ ವ್ಯತ್ಯಾಸವು ಕಾಣುವುದಿಲ್ಲ. ಇಲ್ಲಿ **ಅ** ಕಾರ ಮತ್ತು ಇ ಕಾರ ಸ್ವರಗಳಲ್ಲಿ ಧ್ವನಿವ್ಯತ್ಯಾಸ ಉಂಟಾಗಿರುವುದನ್ನು ಕಾಣಬಹುದು.

೫.೨.೪.೧.೧ ಉತ್ತಮ ಪುರುಷ ವಾಚಕ

ಉತ್ತಮ ಪುರುಷ ವಾಚಕಕ್ಕೆ ಸಂಬಂಧಿಸಿದಂತೆ ದ್ರಾವಿಡ ಭಾಷೆಯ ಕೆಲವು ನಿಯಮಗಳು ಇಂತಿವೆ.

೧. "ಉತ್ತಮ ಪುರುಷವಾಚಕ ಸರ್ವನಾಮದ ಆರಂಭದ ಅಕ್ಷರದಲ್ಲಿ ಬೇರೆ ಬೇರೆ ಭಾಷೆಗಳಲ್ಲಿ ಕೆಲವು ಬದಲಾವಣೆಗಳು ಕಂಡು ಬರುತ್ತವೆ. ಆದರೂ ಮೂಲ ದ್ರಾವಿಡದಕ್ಕೆ 'ಯಾನ್' ಎಂಬ ರೂಪವನ್ನು ಪುನರ್ರಚಿಸಿದ್ದಾರೆ. ಮೂಲದ 'ಯಾನ್' ರೂಪವೇ 'ಆನ್' 'ಓನ್' 'ಏನ್' ಹಾಗೂ 'ನಾನ್' ಮುಂತಾದ ರೂಪಗಳಾಗಿವೆ."[೮೬]

೨ "ಕನ್ನಡದಲ್ಲಿ ಉತ್ತಮ ಪುರುಷ ವಾಚಕವು ಏಕವಚನದಲ್ಲಿ ಆನ್, ನಾನ್ ಎಂದು ಬಹುವಚನದಲ್ಲಿ ಆಮ್, ನಮ್ ಎಂದು ಬಳಕೆಯಿವೆ. ತೆಲುಗಿನಲ್ಲಿ ಏಕವಚನದಲ್ಲಿ ಏನು, ನೇನು ಎಂದು ಬಹುವಚನದಲ್ಲಿ ಏನು, ನೇಮು, ಮನಮು, ಏಮು ಎಂದು ಬಳಕೆಯಲ್ಲಿವೆ."[೮೮]

ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಜನರ ಆಡುನುಡಿಯಲ್ಲಿ ಉತ್ತಮ ಪುರುಷವಾಚಕವು ಭಿನ್ನವಾಗಿ ಬಳಕೆಯಾಗುತ್ತಿದೆ. **ಆ** ಕಾರ ದೀರ್ಘಸ್ವರವನ್ನು ಒಳಗೊಂಡು ಸೂಚಿತವಾಗುವ – ನಾನು – ಎಂಬ ಉತ್ತಮ ಪುರುಷ ಸರ್ವನಾಮವು ಮಾತನಾಡುವ ವ್ಯಕ್ತಿಯನ್ನೊಳಗೊಂಡಿರುತ್ತದೆ. ಜಾಲ ಭಾಗದಲ್ಲಿ ಬಹುವಚನದ ರೂಪಬಳಕೆಯಲ್ಲಿ ಅಂತ್ಯಾಕ್ಷರದಲ್ಲಿ **ವ್** ಕಾರದ ಬದಲು **ಮ್** ಕಾರದ ಬಳಕೆಯಾಗುತ್ತಿದೆ.

	ಶಿಷ್ಟಪದ	**ದಾ.ಹೆ.ಯ ಭಾಗ**	**ಜಾಲ ಭಾಗ**
ಏಕವಚನ	ನಾನ್, ನಾನು	ನಾನು	ನಾನು
ಬಹುವಚನ	ನಾವು	ನಾವು, ನಾವ್	ನಾಮು, ನಾವು

ಈ ವ್ಯತ್ಯಾಸಕ್ಕೆ ಕಾರಣ ತೆಲುಗು ಭಾಷೆಯ ಪ್ರಭಾವವಾಗಿದೆ. ಆದರೆ, ಗಮನಿಸಬೇಕಾದ ಅಂಶವೆಂದರೆ, ನಾಮು ಮತ್ತು ನಾವು ಎಂಬ ಎರಡೂ ಪದಗಳ ಬಳಕೆಯಿದೆ. ಕನ್ನಡ ಮತ್ತು ತೆಲುಗು ಎರಡೂ ಭಾಷೆಯ ಪದಗಳು ಬಳಕೆಯಾಗುತ್ತಿವೆ. ಇದು ಎರಡೂ ಭಾಷೆಯ ಸಂಪರ್ಕವನ್ನು ಕುರಿತು ಹೇಳುತ್ತಿದೆ.

೫.೨.೪.೧..೨ ಮಧ್ಯಮ ಪುರುಷ ವಾಚಕ

ಮಧ್ಯಮಪುರುಷ ವಾಚಕಕ್ಕೆ ಸಂಬಂಧಿಸಿದಂತೆ ದ್ರಾವಿಡ ಭಾಷೆಯ ಕೆಲವು ನಿಯಮಗಳು ಇಂತಿವೆ:

೧. "ತೆಲುಗು ನಾಮ ವಿಭಕ್ತಿ ಪ್ರತ್ಯಯವು 'ನೀವು' ಎಂಬುದಾಗಿದೆ. ಅದು 'ನೀ' ಪ್ರತ್ಯಯಕ್ಕೆ ಶ್ರುತಿಸಹ್ಯತೆಗಾಗಿ 'ವು' ಪ್ರತ್ಯಯ ಪದವಾಗಿ ರೂಪುಗೊಂಡಿರುವುದಾಗಿದೆ. ತೆಲುಗಿನ 'ನೀವು' ಎಂಬುದು ಅರ್ಥದಲ್ಲಿ ಅಲ್ಲದಿದ್ದರೂ ಹೊಸಗನ್ನಡದಲ್ಲಿ ಇದೇ ಸರ್ವನಾಮದ ಬಹುವಚನ ರೂಪ 'ನೀವು' ಎಂಬುದಕ್ಕೆ ಸಂವಾದಿಯಾಗಿದೆ."[೭೮]

೨. "ಮಧ್ಯಮ ಪುರುಷ ವಾಚಕದಲ್ಲಿ ಬಳಕೆಯಾಗುವ 'ನೀ' ಪ್ರತ್ಯಯವು ಈ ಪ್ರತ್ಯಯಕ್ಕಿಂತ ಆಧುನಿಕವಾದುದು ಎಂದು ಹೇಳಲು ಸಾಧ್ಯವಿಲ್ಲ. ನಾನು 'ನೀ' ವ್ಯಂಜನಕ್ಕಿಂತ 'ಈ' ಸ್ವರವೇ ನಿಜವಾದ ಸರ್ವನಾಮ ಪ್ರತ್ಯಯವೆಂದೆ ಪರಿಗಣಿಸುತ್ತೇನೆ."[೭೯] ಎಂದು ಕಾಲ್ಡ್‌ವೆಲ್ ತಿಳಿಸಿದ್ದಾರೆ.

೩. " 'ಇ' ಪ್ರತ್ಯಯವು ಮಧ್ಯಮ ಪುರುಷ ಅಥವಾ ಕೇಳುಗನಿಗೆ ಸಂಬಂಧಿಸಿದಾಗಿರುತ್ತದೆ. ದ್ರಾವಿಡಭಾಷೆಗಳಲ್ಲಿ ಉತ್ತಮ ಪುರುಷ ಮತ್ತು ಮಧ್ಯಮ ಪುರುಷ ಸರ್ವನಾಮಗಳ ನಡುವೆ ಭೇದವನ್ನು ಕಲ್ಪಿಸುವುದಕ್ಕೆ ಅ ಮತ್ತು ಇ ಕಾರವನ್ನು ಪಾರಸ್ಪರಿಕವಾಗಿ ಪರಿವರ್ತನೆಗೊಳಿಸುವ ಕ್ರಮವಿದೆ"[೮೦]

ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಜನರ ಆಡುನುಡಿಯಲ್ಲಿ ಮಧ್ಯಮ ಪುರುಷ ವಾಚಕವು **ಈ** ಕಾರ ಸ್ವರದಿಂದ ಸೂಚಿತವಾಗಿದ್ದು, ಅದು ಕೇಳುವವನಿಗೆ/ ಮಧ್ಯಮ ಪುರುಷನಿಗೆ ಸಂಬಂಧಿಸಿದುದಾಗಿದೆ. ಇಲ್ಲಿ **ಈ** ಯು ಸದೂರ ನಿರ್ದೇಶಕವಾಗಿದ್ದು, ಆ ವಾಚಕವನ್ನು ಸಮೀಪದಲ್ಲಿ ಇರುವವರನ್ನು ಒಳಗೊಂಡಂತೆ ಬಳಕೆಯಾಗುತ್ತಿದೆ. ಬೆಂಗಳೂರು ಗ್ರಾಮೀಣ ಜನರಲ್ಲಿ ಭಾಷೆಯ ವ್ಯತ್ಯಾಸವಿಲ್ಲದೆ ಬಳಕೆಯಾಗುತ್ತಿದೆ.

	ಶಿಷ್ಟಪದ	**ದಾ.ಹೆ.ಯ ಭಾಗ**	**ಜಾಲ ಭಾಗ**
ಏಕವಚನ	ನೀನು	ನೀನು, ನೀನ್	ನೀನು
ಬಹುವಚನ	ನೀವು	ನೀವು, ನೀವ್	ನೀವ್ , ನೀವು

೫.೨.೪.೧.೩ ಪ್ರಥಮ ಪುರುಷ ವಾಚಕ

ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಜನರ ಆಡುನುಡಿಯಲ್ಲಿ ಪ್ರಥಮ ಪುರುಷವು ಹೇಳುಗನು ಯಾರನ್ನು ಉದ್ದೇಶಿಸಿ ಹೇಳುತ್ತಾನೋ ಅದನ್ನು ಒಳಗೊಂಡತೆ ಸೂಚಿತವಾಗುತ್ತಿದೆ. ಪ್ರಥಮ ಪುರುಷ ವಾಚಕವು ಮಹತ್ ಮತ್ತು ಅಮಹತ್ ಎಂಬ ಲಿಂಗ ಭೇದವನ್ನು ಒಳಗೊಂಡತೆ ವ್ಯಕ್ತವಾಗುತ್ತಿದೆ. ಬೆಂಗಳೂರಿನ ಗ್ರಾಮೀಣ ಭಾಗದಲ್ಲಿ ಪುರುಷವಾಚಕಗಳು ಈ ಕೆಳಗಿನಂತೆ ಬಳಕೆಯಾಗುತ್ತಿವೆ. ಪುರುಷ ವಾಚಕಕ್ಕೆ ಸಂಬಂಧಿಸಿದಂತೆ ದ್ರಾವಿಡ ಭಾಷೆಯ ಕೆಲವು ನಿಯಮಗಳು ಇಂತಿವೆ:

೧. "ಕನ್ನಡದಲ್ಲಿ ಪ್ರಥಮ ಪುರುಷ ವಾಚಕವು ಏಕವಚನದಲ್ಲಿ 'ಅವನು', 'ಅದು', 'ಅವಳು', 'ಅದು' ಎಂದು ಬಳಕೆಯಾಗುತ್ತಿದ್ದರೆ ಬಹುವಚನದಲ್ಲಿ 'ಅವು', 'ಅದು' ಪ್ರಯೋಗಗಳಿವೆ. ತೆಲುಗಿನಲ್ಲಿ 'ಅದಿ', 'ವಾಡು', 'ಅವಿ' ಎಂದು ಬಳಕೆಯಾದರೆ ಬಹುವಚನಗಳಲ್ಲಿ 'ವಾರು', 'ಅದಿ' ಎಂಬ ರೂಪಗಳನ್ನು ಪುನರ್ರಚಿಸಿದ್ದಾರೆ."[೮೧]

೨. "ತೆಲುಗು ಭಾಷೆಯಲ್ಲಿರುವ ಪ್ರಥಮ ಪುರುಷ ಸರ್ವನಾಮದದ ಬಹುವಚನ ರೂಪ 'ಮ' ಎಂಬುದು ದ್ರಾವಿಡಭಾಷೆಯಲ್ಲಿ ಸಾಮಾನ್ಯವಾಗಿ ಪ್ರಯೋಗದಲ್ಲಿರುವ 'ನ' ಎಂಬುದರೊಂದಿಗೆ ಹೊಂದಿರುವ ಸಂಬಂಧವನ್ನೆ 'ಮಿ' ಮತ್ತು 'ನೀ' ರೂಪಗಳಲ್ಲಿ ಕಾಣಬಹುದಾಗಿದೆ. ಕೆಲವೆಡೆ 'ನ್' ಮತ್ತು 'ಮ್' ಪ್ರಯೋಗಗಳು ಪಲ್ಲಟನೆಯಾಗಿವೆ."[೮೨]

ಶಿಷ್ಟಪದ			ದಾ.ಹೆ.ಯ ಭಾಗ	ಜಾಲ ಭಾಗ
ಏಕವಚನ	(ಪುಂ,ವಾ)	ಅವನು	ಅವ್ನು	ಅವ್ನು/ಆತ್ನು
	(ಸ್ತ್ರೀ,ವಾ)	ಅವಳು	ಅವ್ಳು	ಆಕೆ/ ಆತ್ಲು
	(ನ,ವಾ)	ಅದು	ಅದು	ಅದ
ಬಹುವಚನ	(ಪುಂ/ಸ್ತ್ರೀ,ವಾ)	ಅವರು	ಅವ್ರು	ಅವ್ರು
	(ನ,ವಾ)	ಅವು	ಅವು	ಅವು/ಅವಿ

ಇಲ್ಲಿ ಬೆಂಗಳೂರು ಗ್ರಾಮೀಣ ಭಾಗವಾದ ದಾ.ಹೆ.ಯ. ಭಾಗದಲ್ಲಿ ಶಿಷ್ಟತೆಯು ಸೌಲಭ್ಯವಾಗಿ ಬಳಕೆಯಾಗುತ್ತಿದೆ. ಆದರೇ ಜಾಲ ಭಾಗದಲ್ಲಿ **ಅವನು, ಅವಳು** ಪದಬಳಕೆಯ ಸ್ಥಾನದಲ್ಲಿ **ಆತ, ಆಕೆ/ಆತ್ಲು** ಪದಗಳನ್ನು ಬಳಸುತ್ತಾರೆ. ತೆಲುಗಿನಲ್ಲಿ ಸ್ತ್ರೀಲಿಂಗವು ನಪುಂಸಕ ಲಿಂಗವಾಗಿ ಬಳಕೆಯಾಗುತ್ತದೆ.ಆದರೆ ಜಾ. ಮತ್ತು ಯ. ಭಾಗದಲ್ಲಿ ಕನ್ನಡದ ಪ್ರಭಾವದ ಮೂಲಕ **ಆಕೆ/ಆತ್ಲು** ಎಂಬುದಾಗಿ ಬಳಕೆಯಾಗುತ್ತಿರುವುದು ಮೇಲಿನ ಉದಾಹರಣೆಗಳಿಂದ ಮನದಟ್ಟಾಗುತ್ತಿದೆ. ಆತ್ಲು ಎಂಬುದು ಕನ್ನಡದಲ್ಲಿ ಇಲ್ಲ. ತೆಲುಗಿನಲ್ಲಿಯೂ ಇಲ್ಲ. ಕನ್ನಡ ಮತ್ತು ತೆಲುಗು ಎರಡೂ ಸೇರಿ ಒಂದು ಹೊಸ ಪದ ಆತ್ಲು(ಸ್ತ್ರೀಲಿಂಗ ವಾಚಿ) ಎಂಬುದು ಸೃಷ್ಟಿಯಾಗಿದೆ. ಇಲ್ಲಿ ತೆಲುಗಿನ **ಆತಡು** ಪದದ ಪ್ರಭಾವದಿಂದ ಬದಲಾಗಿದ್ದು, ತೆಲುಗಿನಲ್ಲಿನ **ಲ್** ಧ್ವನಿ ಬಳಕೆಯು ಅಂತ್ಯದಲ್ಲಿ ಸೇರುವುದನ್ನು ಕಾಣಬಹುದಾಗಿದೆ. ಇದು ಏಕವಚನದಲ್ಲಿನ ವ್ಯತ್ಯಾಸವಾದರೆ, ಬಹುವಚನದ ನಪುಂಸಕದಲ್ಲಿ ಜಾಲ ಭಾಗದಲ್ಲಿ ಪದಾಂತ್ಯದ **ಉ** ಕಾರವು ಇ ಕಾರವಾಗಿ ಬಳಕೆಯಾಗುವುದು. ತೆಲುಗಿನಲ್ಲಿ ಪ್ರಥಮ ಪುರುಷ ಬಹುವಚನದಲ್ಲಿ **ಅವಿ** ಎಂಬ ಸರ್ವನಾಮದ ಬಳಕೆಯಿರುವುದನ್ನು ಕಾಣಬಹುದು.

೫.೨.೧.೫ ನಿರ್ದೇಶಕ ಸರ್ವನಾಮ (ದರ್ಶಕ ಸರ್ವನಾಮ)

ನಿರ್ದೇಶನಗಳನ್ನು ನೀಡಲು **ಅ/ಆ, ಇ/ಈ** ಎಂಬ ನಿರ್ದೇಶಕ ಮೂಲರೂಪಗಳ ಬಳಕೆಯು ಬೆಂಗಳೂರು ಗ್ರಾಮೀಣ ಜನರಲ್ಲಿ ಬಳಕೆಯಲ್ಲಿದೆ. ದ್ರಾವಿಡ ಭಾಷೆಯಲ್ಲಿ **ಅ,ಇ,ಉ** ಎಂಬ ಸ್ವರ ಮೂಲವಾದ ದರ್ಶಕ ಸರ್ವನಾಮವಿದೆ. ಇಲ್ಲಿ ದರ್ಶಕ ಸರ್ವನಾಮವು ಪ್ರಥಮ ಪುರುಷ ವಾಚಕ ಸರ್ವನಾಮದ ಸ್ಥಾನದಲ್ಲಿ ಬಳಕೆಯಾಗುವುದು. **ಅ** ಎಂಬ ಸ್ವರವು ದೂರವಾಚಿಯಾಗಿಯು, **ಇ** ಎಂಬ ಸ್ವರವು ಸಮೀಪವಾಚಿಯಾಗಿಯು, ಮತ್ತು **ಉ** ಎಂಬುದು ಮಧ್ಯಮವಾಚಿಯಾಗಿಯೂ ಬಳಕೆಯಾಗುತ್ತಿದೆ.

ದರ್ಶಕ ಸರ್ವನಾಮ ವಾಚಕಕ್ಕೆ ಸಂಬಂಧಿಸಿದಂತೆ ದ್ರಾವಿಡ ಭಾಷೆಯ ಕೆಲವು ನಿಯಮಗಳು ಇಂತಿವೆ:

೧. "ದ್ರಾವಿಡ ಭಾಷೆಗಳಲ್ಲಿ ದರ್ಶಕ ಸರ್ವನಾಮಗಳು ಇವೆ. ಅವುಗಳಿಗೆ ಅ', 'ಇ', 'ಉ' ಎಂಬ ಸ್ವರಗಳೇ ಮೂಲವಾಗಿರಬೇಕು ಎಂದು ಹೇಳಲಾಗುತ್ತದೆ. ಮೂಲ ದ್ರಾವಿಡಕ್ಕೆ 'ಅ', 'ಇ', 'ಉ' ಸ್ವರಗಳನ್ನೇ ಪುನರ್ರಚಿಸಲಾಗಿದೆ."[೮೩]

೨. “ಕನ್ನಡದಲ್ಲಿ ದೂರ ದರ್ಶಕ ಸರ್ವನಾಮವು **ಅವನ್, ಅವಳ್, ಅದು, ಅವರ್, ಅವು** ಎಂದು ಸಮೀಪ ದರ್ಶಕವು **ಇವನ್, ಇವಳ್, ಇವರ್, ಇವು, ಇದು** ಎಂದು ಕಂಡುಬರುತ್ತವೆ. ತೆಲುಗಿನಲ್ಲಿ ದೂರ ದರ್ಶಕ ರೂಪ ‘ಅದಿ’ ಎಂದು ಸಮೀಪ ದರ್ಶಕ ‘ಇದಿ’ ಎಂಬ ರೂಪಗಳ ಪ್ರಯೋಗಗಳಿವೆ”[೮೪]

ಸಮೀಪ ದರ್ಶಕ

ಶಿಷ್ಟಪದ		**ದಾ.ಹೆ.ಯ ಭಾಗ**	**ಜಾಲ ಭಾಗ**
ಏಕವಚನ	ಇವನು	ಇವ್ನು/ಯೀವ್ನು	ಇತ್ನು
	ಈತನು	ಯೀತ	ಇತ್ನು/ಈತ್ನು
	ಇವಳು	ಇವ್ಳು/ಯಿವ್ಳು	ಇವ್ಳು/ಇತ್ಲು
ಬಹುವಚನ	ಇದು	ಇದು	ಇದ/ಇದು
	ಇವು	ಇವು	ಇವ

ದೂರ ದರ್ಶಕ

ಶಿಷ್ಟಪದ		**ದಾ.ಹೆ.ಯ ಭಾಗ**	**ಜಾಲ ಭಾಗ**
ಏಕವಚನ	ಅವನು	ಅವ್ನು	ಆತ್ನು
	ಅವಳು	ಅವ್ಳು	ಅವ್ಳು/ಆತ್ಲು/ಆಕೆ
	ಅದು	ಅದು	ಅದ/ಅದು
ಬಹುವಚನ	ಅವರು	ಅವ್ರು	ಅವ್ರ
	ಅವು	ಅವು	ಅವ

ಬೆಂಗಳೂರು ಗ್ರಾಮೀಣ ಭಾಗವಾದ ದಾ.ಹೆ.ಯ. ಭಾಗವು ಶಿಷ್ಟತೆಯ ಸೌಲಭ್ಯಕಾಂಕ್ಷೆಯನ್ನು ಹೊಂದುತ್ತಿದ್ದು, ಜಾಲ ಭಾಗದಲ್ಲಿ ಪುಲ್ಲಿಂಗ ನಿರ್ದೇಶನವಾಚಿ **ವ್** ಧ್ವನಿಯ ಬದಲು **ತ್** ಧ್ವನಿಯ ಬಳಕೆಯಾಗುತ್ತಿದೆ. ತೆಲುಗಿನಲ್ಲಿ ಬಳಕೆಯಾಗುವ **ಉ** ಧ್ವನಿಯು ಅಂತ್ಯದಲ್ಲಿ ಬಳಕೆಯಾಗಿದ್ದು **ನ್** ಅನುನಾಸಿಕವು ಸೇರುತ್ತಿದೆ. ಪುಲ್ಲಿಂಗ ವಾಚಿಯಾದ **ಅಳು** ವು **ಲ್** ಕಾರವಾಗಿ ಪರಿವರ್ತಿತವಾಗಿ ಬಳಕೆಯಾಗುತ್ತಿದೆ. ಮತ್ತು **ನ್** ಕಾರ ಅನುನಾಸಿಕ ಧ್ವನಿಯು **ತ್** ಧ್ವನಿಯಾಗಿ ಬದಲಾಗಿ ಬಳಕೆಯಾಗುತ್ತಿದೆ.

ಇ ಕಾರವು **ಯ್** (**ಇತನು**>**ಯೀತನು**) ಕಾರವಾಗಿ ಪದಬಳಕೆಯಾಗುವುದು. ಇ ಕಾರವು **ಯ್** ಕಾರವಾಗುವುದು ಆಡು ಭಾಷೆಯಲ್ಲಿ ಸಾಮಾನ್ಯವಾದ ಸಂಗತಿಯಾಗಿದೆ. ಆಡುಮಾತಿನಲ್ಲಿ ಈ ರೀತಿಯ ವ್ಯತ್ಯಾಸಗಳನ್ನು ಕಾಣಬಹುದು. ಹಾಗೂ ಅಂತ್ಯ ಸ್ವರ **ಉ** ಕಾರದ ಬದಲು ಜಾಲದಲ್ಲಿ **ಅ** ಕಾರವಾಗಿ ಬಳಕೆಯಾಗುತ್ತಿದೆ.

೫.೨.೧.೬ ಆತ್ಮಾರ್ಥಕ ಸರ್ವನಾಮ

ಬೆಂಗಳೂರು ಗ್ರಾಮೀಣ ಭಾಗದ ಜನರು ಬಳಸುತ್ತಿರುವ ಆತ್ಮಾರ್ಥಕ ಸರ್ವನಾಮದ ಬಳಕೆಯ ಸ್ವರೂಪವನ್ನು ನೋಡಬಹುದು.

ಸರ್ವನಾಮಗಳ ಬಳಕೆಯ ಬಗೆಗಿನ ಕೆಲವು ದ್ರಾವಿಡ ಭಾಷೆಯ ನಿಯಮಗಳು ಇಂತಿವೆ:

೧. "ದ್ರಾವಿಡ ಭಾಷೆಯಲ್ಲಿ ಆತ್ಮಾರ್ಥಕ ಸರ್ವನಾಮವು ಗೌರವಾರ್ಥವಾಗಿ ಪ್ರಯೋಗಿಸುವುದರ ಮೂಲಕ ಸಾಧಿತವಾಗುತ್ತದೆ. ಸಾಮಾನ್ಯವಾಗಿ 'ತಾಮ್' ಬಹುವಚನ ರೂಪವನ್ನು 'ತಾನ್' ಗೆ ಬದಲಾಗಿ ಹೆಚ್ಚು ಗೌರವಾರ್ಥವಾಗಿ ಪ್ರಯೋಗಿಸಲಾಗುತ್ತದೆ. 'ತಾಮ್' ಪ್ರತ್ಯಯವು 'ತನ್' ಪ್ರತ್ಯಯಕ್ಕೆ ಪ್ರತಿಯಾಗಿ ಬಹುವಚನಾರ್ಥದಲ್ಲಿ ಹೆಚ್ಚಿನ ಗೌರವಾರ್ಥವಾಗಿ ಪ್ರಯೋಗಿಸುವ ಪ್ರತ್ಯಯವಾಗಿದೆ.[೮೫]

೨. "ತೆಲುಗು ಭಾಷೆಯಲ್ಲಿ ಆತ್ಮಾರ್ಥಕ ಸರ್ವನಾಮವು ತಮಿಳು, ಕನ್ನಡ ಭಾಷೆಗಳ ಹಾಗೆಯೇ ರೂಪುಗೊಳ್ಳುತ್ತದೆಯಲ್ಲದೆ ಪುರುಷವಾಚಕಗಳಿಗೆ ಸಂಬಂಧಿಸಿದ ಸಾಧ್ಯತೆಗಳೆಲ್ಲ ಈ ಸಾದೃಶ್ಯತೆಯು ಆತ್ಮಾರ್ಥಕ ಸರ್ವನಾಮಗಳಲ್ಲಿಯೇ ಹೆಚ್ಚಾಗಿ ವ್ಯಕ್ತವಾಗುತ್ತದೆ. ತೆಲುಗಿನಲ್ಲಿ ನಾಮ ವಿಭಕ್ತಿ ರೂಪ ಮತ್ತು ಸಂಬಂಧ ಕಾರಕವು 'ತನ' ಎಂಬುದಾಗಿದೆ. ಇದರ ಬಹುವಚನ ರೂಪ 'ತಾಮು' ಎಂಬುದಾಗಿದೆ. 'ತಾಮು'ಗೆ 'ತಾರು' ಎಂಬ ಪರ್ಯಾಯ ಪ್ರಯೋಗವು ಉಂಟು."[೮೬]

“ದ್ರಾವಿಡ ಭಾಷೆಗಳಲ್ಲಿ ಆತ್ಮಾರ್ಥಕ ಸರ್ವನಾಮವು **ತಾಮ್, ತಾನ್** ಎಂಬುವಾಗಿವೆ. ಪ್ರಥಮ ಪುರುಷ ಏಕವಚನ ಸರ್ವನಾಮವು **ತಾನ್** ಎಂದಾಗಿದೆ. ಇದು ಹೊಸಗನ್ನಡ ಕಾಲದಲ್ಲಿ **ತಾನು** ಎಂದಾಗಿ ಬಳಕೆಯಾಗುತ್ತಿದೆ.”[೮೭] ಅಂತೆಯೇ ಬೆಂಗಳೂರು ಗ್ರಾಮೀಣ ಭಾಗದಲ್ಲಿ ಏಕವಚನ ಉತ್ತಮ ಪುರುಷದಲ್ಲಿ **ತಾನು** ಎಂದೇ ಬಳಕೆಯಾಗುತ್ತಿದೆ. ಆದರೆ ಬಹುವಚನದಲ್ಲಿ **ತಾವು** ಬಳಕೆಯಾಗುತ್ತಿದೆ. ಮೂಲ ದ್ರಾವಿಡದಲ್ಲಿನ ಆತ್ಮಾರ್ಥಕದ **ತಾಮ್** ವು ತೆಲುಗಿನಲ್ಲಿ ಈಗಲೂ ಬಳಕೆಯಾಗುತ್ತಿದ್ದು, ಜಾಲ ಭಾಗದಲ್ಲಿಯೂ **‘ಮ್’** ಕಾರದೊಂದಿಗೆ ‘ಉ’ ಸ್ವರವನ್ನು ಸೇರಿಸಿ ಬಳಸುತ್ತಿದ್ದಾರೆ. ಇದು ತೆಲುಗಿನ ‘ನೀಮು’ ಎಂಬುದರ ಪ್ರಭಾವ ಹೊಂದಿದೆ.

ಶಿಷ್ಟಪದ	**ದಾ.ಹೆ.ಯ ಭಾಗ**	**ಜಾಲ ಭಾಗ**
ತಾನು	ತಾನ್	ತಾನು
ತಾವು	ತಾವು	ತಾಮು/ ತಾನ್

ಬೆಂಗಳೂರು ಗ್ರಾಮೀಣ ಜನರಲ್ಲಿ ಉತ್ತಮ ಹಾಗೂ ಮಧ್ಯಮ ಪುರುಷಗಳಲ್ಲಿನ ಪುರುಷವಾಚಕ ಸರ್ವನಾಮಗಳು ಅವಧಾರಣಾರ್ಥಕ **ಎ/ಏ** ಪ್ರತ್ಯಯವನ್ನು ಸೇರಿಸಿಕೊಂಡು ಆತ್ಮಾರ್ಥಕ ಸರ್ವನಾಮವನ್ನು **(ನಾಂ, ತಾಂ)** ಮಾಡಿಕೊಳ್ಳುತ್ತಾರೆ.

ಶಿಷ್ಟಪದ	**ದಾ.ಹೆ.ಯ ಭಾಗ**	**ಜಾಲ ಭಾಗ**
ನಾನೇ	ನಾನೇ	ನಾನೇ (ನಾನೇ ವಂಟೀನೀ)
ನನ್ನನ್ನೇ	ನನ್ನೇ	ನನ್ನುನ್ನೇ(ನನ್ನುನ್ನೇ ಕರ್ದ್ವಲ್ಲಪ್ಪೋ)
ನೀನೇ	ನೀನೇ	ನಿನ್ನೇ(ನಿನ್ನೆಕರ್ದಾಗ ಹೋಗ್ಬೇಕಾತು)
ನಿನ್ನನ್ನೇ	ನಿನ್ನೇ	ನಿನ್ನುನ್ನೇ (ನಿನ್ನುನ್ನೇ ಬೈತಿದ್ಲು)
ನಿಮ್ಮನ್ನೇ	ನಿಮ್ನೇ	ನಿಮ್ಮುನ್ನೇ (ನಿಮ್ಮುನ್ನೆ ಕರ್ದ್ಬರ್ಬೇಕಾನ್ತು)

ಬೆಂಗಳೂರು ಗ್ರಾಮೀಣ ಭಾಗದ ದಾಸನಪುರದ ಭಾಗದ ಜನರಲ್ಲಿ **ತಾವು** ಎಂಬ ಆತ್ಮಾರ್ಥಕವನ್ನು ಗೌರವಾರ್ಥದಲ್ಲಿ ಬಳಸುತ್ತಿದ್ದಾರೆ. ಮತ್ತು ಕೆಲವು ಸಂಬಂಧಪದಗಳ ಜೊತೆಯಲ್ಲಿ ಈ ಆತ್ಮಾರ್ಥಕವನ್ನು ಬಳಸುತ್ತಿದ್ದಾರೆ. ಉದಾ –**ತಾವ್ ಬರ್ತೀರಾ, ತಮ್ ತಂದೇರು, ತಮ್ ತಾಯೇರು, ತಮ್ ತಮ್ಮೋರು** ಎಂದು ಬಳಸುವುದನ್ನು ಕಾಣಬಹುದು. ಮೂಲ ದ್ರಾವಿಡದ ಸಂಬಂಧವಾಚಕಗಳಲ್ಲಿ ಈ **ತ್** ಧ್ವನಿಯಿಂದ ಆರಂಭವಾಗುವ ಪದಗಳು ಈ ಗೌರವಾರ್ಥವಾಗಿ ಬಳಸುವ ತಾ(ತಾಮ್) ಯಿಂದಲೇ ಬಂದಿರುವುದಾಗಿರಬಹುದು. ಹೀಗೆ ಬೆಂಗಳೂರು ಗ್ರಾಮೀಣ ಜನರಲ್ಲಿ ಆತ್ಮಾರ್ಥಕವು ಬಳಕೆಯಾಗುತ್ತಿದೆ.

೫.೨.೧.೭ ಪ್ರಶ್ನಾರ್ಥಕ ಸರ್ವನಾಮಗಳು

ಪ್ರಶ್ನಾರ್ಥಕ ಸರ್ವನಾಮಗಳ ಬಳಕೆಯ ಬಗೆಗಿನ ಕೆಲವು ದ್ರಾವಿಡ ಭಾಷೆಯ ನಿಯಮಗಳು ಇಂತಿವೆ:

೧. " ದ್ರಾವಿಡಭಾಷೆಯಲ್ಲಿ ಸರ್ವಸಾಧಾರಣವಾಗಿ 'ಎ' ಸ್ವರವೇ ಪ್ರಶ್ನಾರ್ಥಕ ಪೂರ್ವ ಪ್ರತ್ಯಯವಾಗಿದೆ.[೮೮]

೨. "ದ್ರಾವಿಡಭಾಷೆಯಲ್ಲಿ 'ಎ' ಜೊತೆಗೆ ಇನ್ನೊಂದು ಪ್ರಶ್ನಾರ್ಥಕ ಪ್ರಕೃತಿಯೆಂದರೆ 'ಯಾ' ಎಂಬುದಾಗಿದೆ. ತೆಲುಗಿನಲ್ಲಿ 'ಯಾ' ಎಂಬುದರ ಪ್ರಯೋಗವಿಲ್ಲ. ಆದರೆ ಕನ್ನಡದಲ್ಲಿ ಇದರ ಪ್ರಯೋಗವು ವ್ಯಾಪಕವಾಗಿದೆ. ಬಹುಶಃ ಮೂಲತಃ ಒಂದೇ ಒಂದು ಪ್ರಶ್ನಾರ್ಥಕ ಪ್ರಕೃತಿ ರೂಢಿಯಲ್ಲಿರಬೇಕು. ಅದು ಯಾ ಎಂಬುದಾಗಿದ್ದು, ಅದರಿಂದಲೇ ಅಪಭ್ರಂಶವಾಗಿ ಎ ರೂಪವು ಸಾಧಿತವಾಗಿರಬೇಕು"[೮೯]

ಕಾಲ್ಡ್ ವೆಲ್ ಅವರ ಅಭಿಪ್ರಾಯದಂತೆಯೇ, ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಜನರ ಆಡುನುಡಿಯಲ್ಲಿ ಬಳಕೆಯಾಗುವ ಪ್ರಶ್ನೆಗಳನ್ನು ಗಮನಿಸಿದಾಗ ಬೆಂಗಳೂರು ಗ್ರಾಮೀಣ ದಾ.ಹೆ.ಯಶ. ಭಾಗದಲ್ಲಿ **ಏ/ಯಾ** ಎಂಬ ಪ್ರಕೃತಿಯನ್ನು ಸೇರಿಸಿ ಪ್ರಶ್ನಾರ್ಥಕವನ್ನು ಮಾಡಿಕೊಳ್ಳಲಾಗಿದೆ. **ಏ** ಮತ್ತು **ಯಾ**ಪ್ರಕೃತಿಗೆ ವ್ಯಕ್ತಿವಾಚಕ ಸರ್ವನಾಮ ಪ್ರತ್ಯಯಗಳನ್ನು ಸೇರಿಸಿ ಪ್ರಶ್ನಾರ್ಥಕ ಸರ್ವನಾಮವನ್ನು ಮಾಡಿಕೊಳ್ಳಲಾಗಿದೆ. ಕನ್ನಡದಲ್ಲಿ **ಏನು, ಹೇಗೆ, ಯಾಕೆ, ಯಾವಾಗ, ಯಾವುದು** ಮುಂತಾದವುಗಳು ಪ್ರಶ್ನಾರ್ಥಕದಲ್ಲಿ ಬಳಕೆಯಾದರೆ, "ತೆಲುಗಿನಲ್ಲಿ **ಅನ್ದು, ಎನ್ದು, ಇನ್ದು** ಎಂದು ಬಳಕೆಯಾಗುವವು."[೯೦] ಆದರೆ ಬೆಂಗಳೂರಿನ ಜಾಲ ಭಾಗಗಳಲ್ಲಿ **ಉ** ಕಾರದ ಬದಲು **ಅ** ಕಾರವಾಗಿ ಬಳಕೆಯನ್ನು ಮಾಡುತ್ತಿದ್ದಾರೆ.

ಶಿಷ್ಟಪದ	ದಾ.ಹೆ.ಯ ಭಾಗ	ಜಾಲ ಭಾಗ
ಯಾರು	ಯಾರು	ಯಾರ
ಯಾವನು	ಯಾವ್ನು	ಯಾವ್ನ
ಯಾವಳು	ಯಾವಳು	ಯಾವ್ಳು
ಯಾವುದು	ಯಾವ್ದು	ಯಾವ್ದ
ಯಾವುವು	ಯಾವು	ಯಾವ್ವ/ ಯಾವ್ವು
ಏನು	ಯೇನು	ಏನ

ಗೌರವಾರ್ಥ

ಶಿಷ್ಟಪದ	ದಾ.ಹೆ.ಯ ಭಾಗ	ಜಾಲ ಭಾಗ
ಏನ್ರೀ	ಯೇನ್ರಿ	ಏನ್ರಾ
ಯಾರವರು	ಯಾರವ್ರು	ಅವ್ರ್ಯಾರ
ಯಾರವಳು	ಯಾರವ್ಳು	ಅವ್ಳ್ಯಾರ/ಯಾರವ್ಳು

ಬೆಂಗಳೂರು ಗ್ರಾಮೀಣ ಜನರು ಬಳಸುವ ಪ್ರಶ್ನೆಗಳಿಗೆ ಸೇರುವ ಲಿಂಗ ಸೂಚಕ ಪ್ರತ್ಯಯಗಳಲ್ಲಿ ವ್ಯತ್ಯಾಸಗಳಿವೆಯೇ ಹೊರತು ಪ್ರಶ್ನಾರ್ಥಕ ಸರ್ವನಾಮದಲ್ಲಿ ಯಾವುದೇ ವ್ಯತ್ಯಾಸವು ಇಲ್ಲ. ಪ್ರಶ್ನಾರ್ಥಕಗಳಿಗೆ ಸೇರುವ ಲಿಂಗಸೂಚಕ ಪ್ರತ್ಯಯವು ದಾಸನಪುರ ಭಾಗದಲ್ಲಿ **ಉ** ಕಾರವಾಗಿಯೇ ಬಳಕೆಯಾಗುತ್ತಿದ್ದರೆ, ಜಾಲದಲ್ಲಿ **ಅ** ಕಾರಾಂತವಾಗಿ ಬಳಕೆಯಾಗುತ್ತಿದೆ. ಆದರೆ ಜಾಲ ಭಾಗದಲ್ಲಿ ಕೆಲವು **ಅ** ಕಾರಾಂತ ರೂಪಗಳು ಹೆಚ್ಚು ಬಳಕೆಯಾಗುತ್ತಿವೆ.

೫.೨.೧.೮ ಸಾಪೇಕ್ಷಕ ಸರ್ವನಾಮ

ಯಾರು, ಯಾವುದು, ಎಲ್ಲಿಗೆ, ಹೇಗೆ, ಯಾವಾಗ ಎಂಬ ಪ್ರಶ್ನಾರ್ಥಕ ರೂಪಗಳನ್ನು ಬಳಸುವ ಸಂದರ್ಭದಲ್ಲಿ ಸಾಪೇಕ್ಷ ರೂಪದ ರಚನೆಗಳಾದ ಅಂಥಹುದು/ಅಂಥಾದ್ದು, ಆಗ/ಆವಾಗ, ಹಾಗೆ,ಹಾಗ, ಅಲ್ಲಿಗೆ/ಅಲ್ಗ ಎಂಬ ರೂಪಗಳ ಬಳಕೆಯನ್ನು ಮಾಡಲಾಗುವುದು. ಅಂತಹ ಸರ್ವನಾಮ ರೂಪಗಳ ಬಳಕೆ ಬೆಂಗಳೂರು ಗ್ರಾಮೀಣ ಜನರಲ್ಲಿ ಕಾಣಬಹುದು.

ಶಿಷ್ಟಪದ	ದಾ.ಹೆ.ಯ ಭಾಗ	ಜಾಲ ಭಾಗ
ಎಂಥಾದ್ದು	ಯಂತಾದ್	ಎಂತಾದ್ನು
ಅಂಥದ್ದು	ಅಂತಾದ್	ಅಂತಾದ್ನು
ತಗೋ	ತಗೋ	ತಗ/ತಕ
ಅವತ್ತು	ಅವತ್ತು	ಅವತ್ಕ/ಅದ್ಕ
ಇವತ್ತು	ಇವತ್ತು	ಇವತ್ಕ /ಇಂದ್ಕು
ಆವಾಗ	ಆವಾಗ	ಅವಾಗ್ಲೆ

ಬೆಂಗಳೂರು ಗ್ರಾಮೀಣ ಭಾಗದ ಜನರ ಆಡುನುಡಿಯಲ್ಲಿ ಕೃದಂತಗಳ ಬದಲು ಸಾಪೇಕ್ಷಕ ಸರ್ವನಾಮಗಳನ್ನು ಬಳಸುವುದನ್ನು ಕಾಣಬಹುದು. ಇವುಗಳು ವಾಕ್ಯಗಳ ಬಳಕೆಯಲ್ಲಿ ಹೆಚ್ಚು ಬಳಕೆಯಾಗುತ್ತವೆ. ದಾ.ಹೆ.ಯಶ. ಭಾಗದಲ್ಲಿ ಸಂಕ್ಷಿಪ್ತವಾಗಿ ಸಾಪೇಕ್ಷಕ ಸರ್ವನಾಮಗಳು ಬಳಕೆಯಾಗುತ್ತಿವೆ. ಆದರೆ ಜಾಲ ಭಾಗದಲ್ಲಿ ಸಾಪೇಕ್ಷ ರೂಪಗಳು ಕೆಲವು ವ್ಯತ್ಯಾಸವನ್ನು ಮಾಡಿಕೊಂಡು ಬಳಕೆಯಾಗುತ್ತಿವೆ. ಜಾಲದಲ್ಲಿ **ಎ** ಕಾರ **ಯ** ಕಾರವಾಗಿ, **ಎ** ಕಾರ ಸ್ವರದ ಬಳಕೆಯನ್ನು ಕಾಣಬಹುದು. ಆಡುಮಾತಿನಲ್ಲಿ ಸ್ವರವು ಅರೆಸ್ವರ/ಅರೆವ್ಯಂಜನವಾಗಿ (ಯ, ವ) ಬಳಕೆಯಾಗುವುದೇ ಹೆಚ್ಚು. ಇದರೊಡನೆ, ತೆಲುಗು ಭಾಷೆಯಲ್ಲಿನ **ಉ** ಕಾರಕ್ಕೆ **ಅ** ಕಾರ, **ಲ್** ಕಾರದ ಸೇರಿಸುವಿಕೆ, **ಗ್** ಬದಲು **ಕ** ಕಾರದ ಬಳಕೆಯನ್ನು ಜಾಲ ಭಾಗದ ಜನರ ಆಡುಮಾತಿನಲ್ಲಿ ಕಾಣಬಹುದು. ಅದರಲ್ಲೂ ಕೆಳವರ್ಗದ ಮರಸು ವಕ್ಕಲಿಗರಲ್ಲಿ ಇಂತಹದ್ದು ಹೆಚ್ಚು

ಬಳಕೆಯಲ್ಲಿವೆ. ಅವತ್ಕ, ಇವತ್ಕ ಎಂಬ ರೂಪಗಳು ಹೆಚ್ಚು ವ್ಯವಸಾಯವನ್ನು ಮತ್ತು ಪಶುಸಂಗೋಪನೆಯನ್ನು ಮಾಡುತ್ತಿರುವ ಸ್ತ್ರೀ ಪುರುಷ ಇಬ್ಬರಲ್ಲೂ ಪ್ರಯೋಗವಾಗುತ್ತಿವೆ. ಇವುಗಳು ವಾಕ್ಯರಚನೆಗಳಲ್ಲಿ ಹೆಚ್ಚು ಕಾಣಿಸುತ್ತಿವೆ.

೫.೨.೧.೯ ಪರಿಮಾಣ ವಾಚಕ ಸರ್ವನಾಮ

ಅಷ್ಟು, ಇಷ್ಟು ಎಂದು ಪ್ರಮಾಣವನ್ನು ಸೂಚಿಸುವ ಪದಗಳು ಪರಿಮಾಣ ವಾಚಕಗಳಾಗಿವೆ. ಬೆಂಗಳೂರು ಗ್ರಾಮೀಣ ಭಾಗದಲ್ಲಿ ಭಿನ್ನವಾದ ಪರಿಮಾಣ ವಾಚಕವನ್ನು ಬಳಸುತ್ತಾರೆ.

ಶಿಷ್ಟಪದ	ದಾ.ಹೆ.ಯ ಭಾಗ	ಜಾಲ ಭಾಗ
ಒಂದಿಷ್ಟು	ಒಂದಿಸ್ಟು	ಒಂದೀಸ್
ಒಂದಷ್ಟು	ಒಂದಸ್ಟು	ಒಂದಾಸು
ಒಂಚೂರು	ಒಂಚೂರು	ಒಂಚಿಕ್ರ

ಬೆಂಗಳೂರು ಗ್ರಾಮೀಣ ಜನರಲ್ಲಿ **ಇಷ್ಟು ಅಷ್ಟು** ಪದಗಳಲ್ಲಿ **ಷ್** ಬದಲು ದಾ.ಹೆ.ಯ. ಭಾಗದಲ್ಲಿ **ಸ್** ಕಾರವನ್ನು (ಒಂದಿಸ್ಪು) ಬಳಸುತ್ತಿದ್ದಾರೆ. **ಆಸು, ಈಸು** ಪ್ರತ್ಯಯಗಳು ಜಾಲ ಭಾಗದಲ್ಲಿ ಬಳಕೆಯಾಗುತ್ತಿವೆ. **ಚೂರು** ಬದಲು **ಚಿಂಕ್ರ** ಎಂಬ ಪ್ರತ್ಯಯ ಬಳಕೆಯಾಗುತ್ತಿದೆ. ಇಲ್ಲಿ **ಕ್** ಧ್ವನಿಯನ್ನು ಸೇರ್ಪಡೆಯಾಗಿಸಿ ಬಳಸುತ್ತಿದ್ದಾರೆ. ಜಾಲ ಭಾಗದಲ್ಲಿ ಕೂಲಿ ಕೆಲಸ ಮಾಡುವವರು ಊಟದ ಪ್ರಮಾಣವನ್ನು ಕುರಿತು ಹೇಳುವ ಪ್ರಯೋಗಗಳಾಗಿವೆ. ಇಲ್ಲಿ ಕೆಳವರ್ಗದ ಸ್ತ್ರೀ ಪುರುಷರು ಹೊಲದ ಕುಯ್ಲಿನ ಸಂದರ್ಭದಲ್ಲಿ ಈ ಪ್ರಯೋಗಗಳನ್ನು ಮಾಡುತ್ತಿದ್ದಾರೆ.

೫.೨.೧.೧೦ ಹೊಸಪದಗಳು (ನಾಮೀಕರಣ)

ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಜನರ ಆಡುನುಡಿಯಲ್ಲಿ ಬಳಕೆಯಾಗುವ ಕೆಲವು ಕೃದಂತಗಳು, ಗುಣವಾಚಕಗಳು. ಸ್ಥಾನಸೂಚಕಗಳು ಮತ್ತು ಕ್ರಿಯಾವಿಶೇಷಣಗಳಿಗೆ ಪ್ರಥಮ ಪುರುಷ ಸರ್ವನಾಮವಾದ ಅವನು/ಅವ್ನು ಸೇರಿಸುತ್ತಾ ಕೆಲವು ನಾಮಪದಗಳ ಬಳಕೆಯನ್ನು ಮಾಡುತ್ತಿದ್ದಾರೆ. **ವ್** ಧ್ವನಿಯ ಹಿಂದಿನ

ಧ್ವನಿಗಳು ಓ/ಒ ಆಗುವುದು, **ಯ್** ಧ್ವನಿಯ ಹಿಂದಿನ ಧ್ವನಿಯು **ಅ** ಮತ್ತು **ಎ** ಸ್ವರಗಳಾಗಿ ಬದಲಾಗುವುದನ್ನು ಜಾಲ ಭಾಗದಲ್ಲಿ ಕಾಣಬಹುದಾಗಿದೆ. ವ್ಯಂಜನಗಳು ಸ್ವರವಾಗುವುದು ದ್ರಾವಿಡ ಭಾಷೆಯ ಮತ್ತು ಸಾಮಾಜಿಕ ಭಾಷೆಯ ನಿಯಮವೂ ಆಗಿದೆ. ಅದರಂತೆ ಜಾಲ ಭಾಗದಲ್ಲಿ ಹೆಚ್ಚು ಸ್ವರಗಳಾಗಿಸಿ ಪದ ಬಳಕೆ ಮಾಡುವುದನ್ನು ಕಾಣಬಹುದು.

ಶಿಷ್ಟಪದ	**ದಾ.ಹೆ.ಯ ಭಾಗ**	**ಜಾಲ ಭಾಗ**
ದೊಡ್ಡವನು	ದೊಡ್ಡವ್ನು	ದೊಡ್ಡೋನು
ಚಿಕ್ಕವನು	ಚಿಕ್ಕವ್ನು	ಚಿಕ್ಕೋನು
ಬರೆದವನು	ಬರ್ದವ್ನು	ಬರ್ದೋನು
ಮಾಡಿದವನು	ಮಾಡ್ದವ್ನು	ಮಾಡೋನು
ಬಂದವರು	ಬಂದವ್ರು	ಬಂದೋರು
ಹೋದವರು	ಹೋದೋರು	ಹೋಗೋರು
ತಿಂದವಳು	ತಿಂದವ್ಳು	ತಿಂದೋಳು

ಸ್ಥಳವಾಚಕ ನಾಮಪ್ರಕೃತಿಗೆ ಸರ್ವನಾಮ ಪ್ರತ್ಯಯವಾದ ಅವನು/ಅವ್ನು ಎಂಬ ಪ್ರತ್ಯಯವನ್ನು ಸೇರಿಸಿ ಬಳಸುವುದರ ಮೂಲಕ ನಾಮೀಕರಣ ಮಾಡಿಕೊಳ್ಳಲಾಗಿದೆ. ಇಲ್ಲಿ **ವ್** ಕಾರವು ಲೋಪವಾಗಿ **ಒ/ಓ** ಬಳಕೆಯಾಗುವುದನ್ನು ಜಾಲ ಭಾಗದಲ್ಲಿ ಕಾಣಬಹುದು. ಪದಾಂತ್ಯದಲ್ಲಿ **ನ್** ಕಾರಕ್ಕೆ **ಉ** ಕಾರವನ್ನು ಪ್ರಯುಕ್ತಗೊಳಿಸಿ ಬಳಸುವುದನ್ನು ತೆಲುಗಿನಲ್ಲಿ ಕಾಣಬಹುದು. ಅಂತೆಯೇ ಜಾಲ ಭಾಗದಲ್ಲಿ **ಓನ್/ ಓರ್** ಎಂದು ಬಳಕೆಯಾಗುತ್ತಿದೆ. ಆಡುಮಾತಿನಲ್ಲಿ ಭಾವನೆಯನ್ನು ಸೂಚಿಸುವ ದೀರ್ಘಸ್ವರಗಳ ಬಳಕೆ ಹೆಚ್ಚಾಗಿದೆ. ಇಂತಹ ಬಳಕೆಯು ಇಲ್ಲಿಯೂ ಕಂಡುಬರುತ್ತದೆ.

ಶಿಷ್ಟಪದ	**ದಾ.ಹೆ.ಯ ಭಾಗ**	**ಜಾಲ ಭಾಗ**
ಕೆರೆಯವನು(ಕ್ಷೌರಿಕ)	ಕೆರೇವ್ನು	ಕೆರೇನು
ಮಾತಿನವನು	ಮಾತಿನವ್ನು	ಮಾತ್ನೋನು
ಕುರಿಯವನು	ಕುರಿಯವ್ನು	ಕುರ್ಯೋನು
ಮರಿಯವನು	ಮರಿಯವ್ನು	ಮರ್ಯೋನು
ಬಾಲದವನು	ಬಾಲ್ದವ್ನು	ಬಾಲ್ದೋನು
ಬೀಳುವವನು	ಬೀಳ್ವವ್ನು	ಬೀಳ್ವೋನು
ಪೇಟೆಯವನು	ಪೇಟೆಯವ್ನು	ಪ್ಯಾಟೇನು
ಮುತ್ತಿನವನು	ಮುತ್ತಿನವ್ನು	ಮುತ್ತೋನು

ಅವನು ಪ್ರಥಮ ಪುರುಷ ಸರ್ವನಾಮವು ದಾ.ಹೆ.ಯ ಭಾಗದಲ್ಲಿ ಪುಲ್ಲಿಂಗ ಏಕವಚನವು **ಅವ್ನು** ಎಂದು ಶಿಷ್ಟೀಕರಣವಾಗುತ್ತಿದ್ದರೆ, ಜಾಲ ಭಾಗದಲ್ಲಿ **ಒನ್** ಎಂದು ಬಳಕೆಯಾಗುತ್ತಿದೆ. ಬಹುವಚನದಲ್ಲಿ **ಅವರು** ಎಂಬುದು **ಅರ್** ಪ್ರತ್ಯಯವಾಗಿ **(ಅವ್ರು)** ಶಿಷ್ಟೀಕರಣವಾಗುತ್ತಿದ್ದರೆ, ಜಾಲದಲ್ಲಿ **ಓರ್** ಎಂದು ಬಳಕೆಯಾಗುತ್ತಿದೆ. ಕನ್ನಡದಲ್ಲಿ ಪದಾಂತ್ಯ ಪ್ರತ್ಯಯವು **ಅನ್, ಅರ್** ಮತ್ತು **ಇನ್/ಇರ್** ಪ್ರತ್ಯಯದ ಬಳಕೆಗಳಿವೆ. ಆ ಪ್ರತ್ಯಯಗಳಿಗೆ **ಉ** ಪ್ರತ್ಯಯವು ನಾಮಪದದ ಪ್ರಯುಕ್ತವಾಗಿ ಬಳಕೆಯಾಗುವುದು. ಆದರೆ ಜಾಲದಲ್ಲಿ **ಓನ್** ಪ್ರತ್ಯಯವು ಪದಾಂತ್ಯದಲ್ಲಿ ಬಳಕೆಯಾಗುತ್ತಿದ್ದು, **ಉ** ಕಾರ ಪ್ರಯುಕ್ತವಾಗುತ್ತಿದೆ. ತೆಲುಗಿನಲ್ಲಿ **ವ** ಕಾರ ಪದಗಳ ಸ್ಥಾನದಲ್ಲಿ **ಒ/ಓ** ಧ್ವನಿಗಳು ನಿಯತವಾಗಿ ಬರುವುದನ್ನು ಕಾಣಬಹುದು. **ಯ್** ಕಾರವು **ಅ** ಕಾರವಾಗಿ ಮತ್ತು **ಯ್** ಧ್ವನಿಯು **ಎ** ಧ್ವನಿಯಾಗಿ ವ್ಯಂಜನವು ಸ್ವರಾಂತಗಳಾಗುವ ಪ್ರಕ್ರಿಯೆಯು ಜಾಲ ಭಾಗದಲ್ಲಿ ಕಂಡುಬರುತ್ತಿವೆ. ಈ ಪ್ರಯೋಗಗಳು ಅನೌಪಚಾರಿಕವಾಗಿ ಹಿರಿಯರು ಕಿರಿಯರನ್ನು ಮತ್ತು

ಅಪರಿಚಿತರ ಬಗೆಗಿನ ಸಂಬೋಧನೆಯಲ್ಲಿ ಪ್ರಯೋಗವಾಗುತ್ತವೆ. ವಿದ್ಯಾವಂತ ಅವಿದ್ಯಾವಂತರೆಂಬ ಭೇದವಿಲ್ಲದೆ ಪರಿಚಿತರೊಡನೆ ಮಾತನಾಡುವಾಗ ಈ ಪ್ರಯೋಗಗಳು ಕಂಡುಬರುತ್ತವೆ.

ಪೂರ್ವದ ಹಳೆಗನ್ನಡ ಮತ್ತು ಹಳೆಗನ್ನಡದಲ್ಲಿ ವ್ಯಕ್ತಿವಾಚಕ ಸರ್ವನಾಮದಲ್ಲಿ ದೀರ್ಘಗಳು(ಓನ್,ಓರ್) ಹೆಚ್ಚಾಗಿದ್ದವು. ಆಡುಮಾತಿನಲ್ಲಿ ಈಗಲೂ ಇವುಗಳ ಬಳಕೆಯನ್ನು ಕಾಣಬಹುದು.

೫.೨.೧.೧೧ ಜೋಡಿಪದಗಳು

"ಎರಡು ಅಥವಾ ಎರಡಕ್ಕಿಂತ ಹೆಚ್ಚು ಪದಗಳು ಸೇರಿ ಉಂಟಾಗುವ ಪದಗಳಾಗಿವೆ. ಎರಡು ಮತ್ತು ಅದಕ್ಕಿಂತ ಹೆಚ್ಚು ನಾಮಪ್ರಕೃತಿಗಳು ಸೇರುವಿಕೆಯಿಂದ ಕೆಲವು ಜೋಡಿನಾಮಗಳನ್ನು ಮಾಡಿಕೊಳ್ಳಲಾಗುವುದು."[೧] ಬೆಂಗಳೂರು ಗ್ರಾಮೀಣ ಜನರಲ್ಲಿ ಕೆಲವು ಜೋಡಿನಾಮಗಳ ಬಳಕೆಯನ್ನು ಗುರುತಿಸಬಹುದು. ಉದಾಹರಣೆಗಳು ಇಂತಿವೆ:

ಶಿಷ್ಟಪದ	**ದಾ.ಹೆ.ಯ ಭಾಗ**	**ಜಾಲ ಭಾಗ**
ಕಲ್ಲುಹಾಸಿಗೆ	ಕಲ್ಲಾಸ್ಗೆ	ಕಲ್ಲಾಸ್ಕೆ
ಹೆಬ್ಬಾಗಿಲು	ಎಬ್ಬಾಗ್ಲು	ಎಬ್ಬಾಕ್ಲು
ಮುಳ್ಳಗಡ್ಡಿ	ಮುಳ್ಗಡ್ಡಿ	ಮುಳ್ಕಡ್ಡಿ
ಎರಡುತರ	ಎರ್ಡ್ತ್ರ	ಎಲ್ಡ್ತ್ರ
ತಂಗಳಿಟ್ಟು	ತಂಗ್ಳಿಟ್ಟು	ತಂಗ್ಲಿಟ್ಟು
ಕಲ್ಕುಟಿಗ	ಕಲ್ಕುಟ್ಕ	ಕಲ್ಕುಟ್ಯೋನು

ಜೋಡಿ ನಾಮಗಳನ್ನು ಬಳಸುವಾಗ ಬೆಂಗಳೂರು ಗ್ರಾಮೀಣ ಜನರ ಆಡುಮಾತಿನಲ್ಲಿ ಎರಡು ಪದಗಳನ್ನು ಸಂಕ್ಷೇಪಗೊಳಿಸಿ ಬಳಕೆ ಮಾಡುತ್ತಿರುವುದರಿಂದ ಕೆಲವು ಧ್ವನಿಗಳು ಬಿಟ್ಟು ಹೋಗುತ್ತಿವೆ. ಎರಡು

ಪದಗಳ ಸೇರಿಕೆಯ ಸಂದರ್ಭದಲ್ಲಿ ಬೆಂಗಳೂರು ಗ್ರಾಮೀಣ ಭಾಗವಾದ ದಾ.ಹೆ.ಯಶ. ಭಾಗದಲ್ಲಿ ಮತ್ತು ಜಾಲ ಭಾಗದಲ್ಲಿ ಪ್ರತ್ಯೇಕವಾದ ಬದಲಾವಣೆಯುಂಟಾಗುತ್ತಿವೆ. ದಾ.ಹೆ.ಯಶ. ಭಾಗದಲ್ಲಿ **ಗ್** ದ್ವಿತ್ವ ರೂಪವನ್ನು ಪಡೆಯುತ್ತಿದ್ದರೆ, ಜಾಲದಲ್ಲಿ **ಕ್** ಕಾರವಾಗಿ ಬಳಕೆಯಾಗುತ್ತಿದೆ. ತೆಲುಗಿನಲ್ಲಿ **ಗ್** ಕಾರವು **ಕ್** ಕಾರವಾಗಿ ಬಳಕೆಯಾಗುವುದು ಸಾಮಾನ್ಯ ನಿಯಮವಾಗಿದೆ. ಅದರಂತೆ ಜಾಲ ಭಾಗದಲ್ಲಿ **ಗ್** ಕಾರದ ಬದಲು **ಕ್** ಕಾರವು ಬಳಕೆಯಾಗಿತ್ತಿದೆ. **ರ್** ಕಾರವು **ಲ್** ಕಾರವಾಗಿ ಮತ್ತು **ಳ್** ಕಾರವು **ಲ್** ಕಾರವಾಗಿ ಬಳಕೆಯಾಗುತ್ತಿದೆ. ತೆಲುಗು ಭಾಷೆಯಲ್ಲಿ **ಲ್** ಕಾರದ ಬಳಕೆ ಯಥೇಚ್ಛವಾಗಿದೆ. ತೆಲುಗು ಪ್ರತ್ಯಯ **ಓನ್** ಎಂಬ ಪ್ರತ್ಯಯವನ್ನು ಜಾಲ ಭಾಗದಲ್ಲಿ ಬಳಸುತ್ತಿದ್ದಾರೆ. ಹೀಗೆ ಕೆಲವು ಧ್ವನಿ ವ್ಯತ್ಯಾಸಗಳು ಉಂಟಾಗಿರುವುದನ್ನು ಅವರ ಆಡುಮಾತಿನಲ್ಲಿ ಕಾಣಬಹುದಾಗಿದೆ.

೫.೨.೧.೧೨ ಸಂಖ್ಯಾವಾಚಕಗಳು

"ಸಂಖ್ಯಾವಾಚಕಗಳು ಬಹಳವಾಗಿ ಒಂದು ಭಾಷೆಯ ಬದಲಾಗದ ಭಾಷಾರೂಪಗಳನ್ನು ತಿಳಿಸುತ್ತವೆ. ಸಂಖ್ಯಾವಾಚಿಗಳು ಸ್ವತಂತ್ರ ನಾಮಪದದ ವರ್ಗದಲ್ಲಿ ಬಳಕೆಯಾಗುತ್ತವೆ."[೨] ಇವುಗಳು ಮೂಲ ಸಂಖ್ಯೆ ಮತ್ತು ಕ್ರಮವನ್ನು ಸೂಚಿಸುವಲ್ಲಿ ಸ್ಪಷ್ಟವಾಗಿ ಭೇದವನ್ನು ತಿಳಿಸುತ್ತವೆ. ಸಂಖ್ಯಾವಾಚಕಗಳನ್ನು ನಾಮಪದಗಳ ಹಿಂದೆ ಅಥವಾ ಮುಂದೆ ಅವಶ್ಯಕತೆಗೆ ತಕ್ಕಂತೆ ಬಳಸಬಹುದು.

ಉದಾ– ಇಬ್ಬರು ಭಿಕ್ಷುಕರು, ಭಿಕ್ಷುಕರಿಬ್ಬರು

ಇಬ್ಬರು ಗಂಡಂದಿರು, ಗಂಡಂದಿರಿಬ್ಬರು

ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಜನರಲ್ಲಿ ಬಳಕೆಯಾಗುವ ಸಂಖ್ಯಾವಾಚಕಗಳನ್ನು **ಸಂಖ್ಯೇಯ** ಮತ್ತು **ಸಂಖ್ಯಾಂಕ** ಎಂಬ ಎರಡು ರೀತಿಯಲ್ಲಿ ವಿಭಾಗಿಸಿಕೊಳ್ಳಬಹುದು.

೫.೨.೧.೧೨.೧ ಸಂಖ್ಯಾಂಕಗಳು – ಸಂಖ್ಯೆಯನ್ನು ಒಳಗೊಂಡವುಗಳು ಸಂಖ್ಯಾಂಕಗಳಾಗಿವೆ. ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಜನರಲ್ಲಿ ಸಂಖ್ಯಾಂಕಗಳು ಹೀಗೆ ಬಳಕೆಯಾಗುತ್ತವೆ.

ಶಿಷ್ಟಪದ	**ದಾ.ಹೆ.ಯ ಭಾಗ**	**ಜಾಲ ಭಾಗ**
ಎರಡು	ಎರ‍್ಡು	ಎಲ್ಡು
ನಾಲ್ಕು	ನಾಕು	ನಾಲು
ಹತ್ತು	ಅತ್ತು	ಅತ್ತ್ಯ

ಮೇಲಿನ ಸಂಖ್ಯಾವಾಚಕಗಳಲ್ಲಿ ಸಂಖ್ಯಾಂಕಗಳು ಹೆಚ್ಚು ವ್ಯತ್ಯಾಸವಾಗದೆ ಬಳಕೆಯಾಗುತ್ತಿವೆ. ಜಾಲ ಭಾಗದಲ್ಲಿ ಮೂಲಪ್ರಕೃತಿಗಳಿಂದ ನಿಷ್ಪನ್ನವಾಗುವಾಗ ಕೆಲವು ಬದಲಾವಣೆಗಳು ಉಂಟಾಗುತ್ತವೆ. ದಾ,ಹೆ,ಯ ಭಾಗದಲ್ಲಿ **ರ್** ಕಾರದ ಬದಲು **ಲ್** ಕಾರವನ್ನು ಬಳಸುತ್ತಾರೆ. **ನಾಲ್ಕು** ಪದವು ದಾ,ಹೆ,ಯ ಭಾಗದಲ್ಲಿ **ನಾಕು** ಎಂದಾಗಿ ಬಳಕೆಯಾದರೆ, ಜಾಲ ಭಾಗದಲ್ಲಿ **ನಾಲು** ಎಂದಾಗಿ ಬಳಕೆಯಾಗುತ್ತಿದೆ.

ಶಿಷ್ಟಪದ	**ದಾ.ಹೆ.ಯ ಭಾಗ**	**ಜಾಲ ಭಾಗ**
ಒಬ್ಬ ಸಿಪಾಯಿ	ಒಬ್ಬ್ ಸಿಪಾಯಿ	ಒಬ್ನು ಸಿಪಾಯಪ್ನು
ಇಬ್ಬರು ಮಕ್ಕಳು	ಇಬ್ಬರು ಮಕ್ಳು	ಯಿಬ್ರು ಮಕ್ಲು
ಎರಡು ಹಣ್ಣುಗಳು	ಎರ‍್ಡು ಹಣ್ಗಳು	ಎಲ್ಡ್ ಅಣ್ಣುಗ್ಳು
ಒಬ್ಬ ಕಿವುಡ	ಒಬ್ ಕಿವ್ಡ	ಒಂದ್ ಶೆವ್ಡ್ನು

ಮೇಲ್ನೋಟಕ್ಕೆ ಇವು ಒಂದೇ ರೀತಿಯಲ್ಲಿವೆ ಅನ್ನಿಸಿದರೂ ಬಳಕೆಯ ಸಂದರ್ಭದಲ್ಲಿ ಭಿನ್ನವಾಗಿ ಬಳಕೆಯಾಗುತ್ತವೆ. ಇವು ಪೂರಕ ಪ್ರಸಾರ ನಿಯತವಾದಾಗ ಕೆಲವು ಮಹತ್ ಪ್ರಕೃತಿಗಳ ನಡುವೆ ಕಾಣಿಸುತ್ತಿವೆ. **ಒಬ್ಬ** ಎಂಬುದು **ಅನು** ಎಂದು ಪುಲ್ಲಿಂಗಗಳಲ್ಲಿ ಬಳಕೆಯಾಗುತ್ತಿದೆ. **ಇ** ಕಾರವು **ಯ್** ಕಾರವಾಗಿ ಆಡುಮಾತಿನಲ್ಲಿ ಬಳಕೆಯಾಗುತ್ತಿದೆ.

೫.೨.೧.೧೨.೨. ಕ್ರಮಾಂಕಗಳು

ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಜನರಲ್ಲಿ ದಾ,ಹೆ,ಯಶ. ಭಾಗಗಳಲ್ಲಿ ಕ್ರಮಾಂಕವು ಶಿಷ್ಟಪದಗಳಂತೆಯೆ ಬಳಕೆಯಾಗುತ್ತವೆ. **ಅನೇ** ಎಂಬ ಪ್ರತ್ಯಯವನ್ನು ಅಂಟಿಸಿಕೊಳ್ಳುವುದರ ಮೂಲಕ ಅನುಕ್ರಮವನ್ನು ಹೇಳುವ ವಿಶೇಷಣಗಳಾಗಿ ಬಳಕೆಯಾಗುತ್ತವೆ. ಆದರೆ ಜಾಲ ಭಾಗದಲ್ಲಿ ಎಣಿಕೆಯ ಸಂದರ್ಭದಲ್ಲಿ 'ಎಚ್ಚ್ಲಿ', 'ನ್ನೇದು' ಎಂಬ ಪ್ರತ್ಯಯವನ್ನು ಬಳಸುತ್ತಿದ್ದಾರೆ.

ಶಿಷ್ಟಪದ	ದಾ.ಹೆ.ಯ ಭಾಗ	ಜಾಲ ಭಾಗ
ಏಳನೇಯದು	ಏಳ್ನೇದು	ಆರೇಚ್ಲೀ
ಎಂಟನೇಯದು	ಎಂಟ್ನೇದು	ಯಂಟ್ನೇದು
ಒಂದನೇಯದು	ಒಂದ್ನೇದು	ವಂದ್ನೇದು

ಬೆಂಗಳೂರು ಗ್ರಾಮೀಣ ಜನರಲ್ಲಿ ಈ ಕ್ರಮಾಂಕವನ್ನು ಬಳಸುವಾಗ ದಾ.ಹೆ.ಯ. ಭಾಗಗಳಲ್ಲಿ ಹೆಚ್ಚು ವ್ಯತ್ಯಾಸಗಳು ಕಾಣಸಿಗುವುದಿಲ್ಲ. ಜಾಲ ಭಾಗದಲ್ಲಿ ಕೆಲವು ಶುಭ ಅಶುಭ ಸಂದರ್ಭದಲ್ಲಿ ಕೆಲವು ಕ್ರಮಾಂಕ ಪದಗಳ ಬಳಕೆಯನ್ನು ಭಿನ್ನವಾಗಿ ಬಳಸುತ್ತಾರೆ. ಎಣಿಕೆಯ ಮತ್ತು ಅಳೆಯುವ ಸಂದರ್ಭದಲ್ಲಿ ಏಳರ ಬದಲು ಹಿಂದಿನ ಸಂಖ್ಯೆಯಾದ ಆರನ್ನ ಉಪಯೋಗಿಸುತ್ತಾ **ಆರೆಚ್ಲಿ** ಎಂದು ಬಳಸುತ್ತಾರೆ. ಇದು 'ಆರರ ಹೆಚ್ಚುವರಿ' ಎಂಬ ಅರ್ಥದಲ್ಲಿ ಬಳಕೆಯಾಗುತ್ತಿದೆ. ಇದು ಹೆಚ್ಚು ಕೆಳವರ್ಗದ ಪುರುಷರಲ್ಲಿ ಕಂಡುಬರುತ್ತವೆ.
ಹೀಗೆ ಬೆಂಗಳೂರು ಗ್ರಾಮೀಣ ಜನರ ಆಡುನುಡಿಯಲ್ಲಿ ನಾಮಪದಗಳ ಬಳಕೆಯ ಸ್ವರೂಪವನ್ನು ಕಾಣಬಹುದಾಗಿದೆ.

೫.೩ ಕ್ರಿಯಾಪದ

ಕ್ರಿಯಾಪದಗಳು ಭಾಷೆಯ ಸ್ಥಿರವಾದ ಅಂಶಗಳು, ದ್ರಾವಿಡ ಭಾಷೆಗಳಲ್ಲಿ ಬಹಳಷ್ಟು ಧಾತುಗಳು ನಾಮಗಳಂತೆಯೂ ವರ್ತಿಸುತ್ತವೆ. ಕ್ರಿಯಾಪದದ ಮೂಲ ರೂಪವಾದ ಧಾತುವಿಗೆ ಪ್ರತ್ಯಯಗಳು ಸೇರುವಂತೆ

ನಾಮಪದಗಳಿಗೂ ಅಂಟುತ್ತವೆ. ಆದರೇ ಕ್ರಿಯಾರ್ಥಗಳಿಗೆ ಅಂಟುವ ಧಾತು ಮತ್ತು ಪ್ರತ್ಯಯಗಳ ಬಗ್ಗೆ ತಿಳಿಯುವ ಅವಶ್ಯಕತೆಯಿರುವುದರಿಂದ ಅವುಗಳ ಬಳಕೆಯನ್ನು ಗುರುತಿಸಲಾಗಿದೆ.

೫.೩.೧. ಕಾಲಸೂಚಕಗಳು

"ದ್ರಾವಿಡಭಾಷೆಯಲ್ಲಿ ಕ್ರಿಯಾಪದದ ಮೂಲಕವೇ ಕಾಲವಾಚಕವು ರೂಪುಗೊಳ್ಳುತ್ತವೆ."[೯೩] ಬೆಂಗಳೂರು ಗ್ರಾಮೀಣ ಜನರ ಆಡುನುಡಿಯಲ್ಲಿ ವ್ಯಕ್ತವಾಗಿರುವ ಕಾಲವಾಚಕಗಳನ್ನು ಮುಖ್ಯವಾಗಿ ಎರಡು ರೀತಿಯಲ್ಲಿ ಗುರುತಿಸಲಾಗಿದೆ. ೧. ಕೃತ್ ಪ್ರತ್ಯಯದ ಮೂಲಕ ೨. ಪುರುಷವಾಚಕ ಪ್ರತ್ಯಯಗಳ ಮೂಲಕ, ಕಾಲವಾಚಕಗಳಲ್ಲಿ ಭೂತ ಮತ್ತು ಭೂತೇತರ ಎಂಬ ವರ್ಗಗಳಿದ್ದು, ಭೂತೇತರ ವರ್ಗದಲ್ಲಿ ವರ್ತಮಾನ ಮತ್ತು ಭವಿಷ್ಯತ್ ಕಾಲವಾಚಕಗಳನ್ನು ಗುರುತಿಸಬಹುದು. ಬೆಂಗಳೂರು ಗ್ರಾಮೀಣ ಜನರಲ್ಲಿ ಪ್ರಮುಖವಾಗಿ ಭೂತ, ವರ್ತಮಾನ ಮತ್ತು ಅಭೂತ (ಭವಿಷ್ಯತ್) ಎಂಬ ತ್ರಿವಿಧ **ಕಾ**ಲಭೇದವು ಕಂಡುಬರುತ್ತದೆ.

೫.೩.೧.೧ ಭೂತಕಾಲ

ಬೆಂಗಳೂರು ಗ್ರಾಮೀಣ ಜನರಲ್ಲಿ ಕೆಲವು ಪ್ರತ್ಯಯಗಳನ್ನು ಅಥವಾ ಭೂತಕಾಲ ಸೂಚಕವನ್ನು ಪ್ರಯುಕ್ತಗೊಳಿಸುವ ಮೂಲಕ ಭೂತಕಾಲವನ್ನು ಮಾಡಿಕೊಳ್ಳಲಾಗುತ್ತಿದೆ. ಭೂತ ಕಾಲದ ಬಗೆಗಿನ ದ್ರಾವಿಡದ ಕೆಲವು ನಿಯಮವು ಇಂತಿವೆ:

೧. "ಮೂಲ ದ್ರಾವಿಡದ 'ತ್', 'ನ್ತ್', 'ತ್ತ್', ಹಾಗೂ 'ಇ' ಭೂತಕಾಲ ಪ್ರತ್ಯಯಗಳು ಉಳಿದು ಬಂದಿವೆ. ಕನ್ನಡ ಭಾಷೆಯ 'ನ್ತ್' 'ತ್ತ್' ಇವುಗಳನ್ನು ಸಂಕ್ಷೇಪಿಸಿಕೊಂಡಿದೆ. ಆದರೆ ಮಧ್ಯ ದ್ರಾವಿಡ ಭಾಷೆಗಳು ಮೂಲ ಭೂತಕಾಲ ಪ್ರತ್ಯಯಗಳನ್ನು ಬಹಳ ಮಟ್ಟಿಗೆ ಸಂಕ್ಷೇಪಿಸಿಕೊಂಡಿವೆ. ಇ ಪ್ರತ್ಯಯದ ಬಳಕೆ ಇಲ್ಲವೇ ಇಲ್ಲ. ಆದರೇ ತೆಲುಗು ಇತ್ ಎಂದು ಬಳಕೆಯಲ್ಲಿ ಉಳಿಸಿಕೊಂಡು ಬಂದಿದೆ."[೯೪]

೨ "ಹಳೆಯ ತೆಲುಗಿನಲ್ಲಿ ಭೂತ ಕಾಲ ಪ್ರತ್ಯಯ 'ಏ' ಇದುವೆ ಕೆಲವೆಡೆ 'ಇ' 'ಇತಿ' ಎಂದು ಬಳಕೆಗೊಂಡಿದೆ. ಏ ಪ್ರಥಮ ಪುರುಷ ಏಕ ಮತ್ತು ಬಹುವಚನಗಳಲ್ಲಿ ಪ್ರಯೋಗಿಸಲ್ಪಡುತ್ತದೆ. ಇ ಪ್ರತ್ಯಯವು ಬಹುವಚನಗಳಲ್ಲಿ ಪ್ರಯೋಗಿಸಲ್ಪಡುತ್ತವೆ."[೯೫]

ಉದಾ: ಹೇಳಿದಿ > ಚೆಪ್+ಏ+ವು, ಚೆಪ್+ಇನ್+ದಿ > ಹೇಳಿತು/ ಹೇಳಿದಳು

ಬೆಂಗಳೂರು ಗ್ರಾಮೀಣ ಜನರ ಆಡುನುಡಿಯಲ್ಲಿ ಭೂತಕಾಲ ಸೂಚಕ **ದ್** ಕಾರವನ್ನು ಪ್ರಯುಕ್ತಗೊಳಿಸಿ ಭೂತಕಾಲವನ್ನು ಪಡೆಯಲಾಗುವುದು. ಕೆಲವೆಡೆ **ತ್** ಕಾರವು ಬರುವುದು. **ದ್** ಕಾರಕ್ಕೆ ಇ ಸ್ವರವನ್ನು

ಪ್ರಯುಕ್ತಗೊಳಿಸಿ ಭೂತಕಾಲವನ್ನು ಮಾಡಿಕೊಳ್ಳಲಾಗುತ್ತಿದೆ. ಅಂತ್ಯಾಕ್ಷರವಾಗಿ **ಉ** ಮತ್ತು ಇ ಕಾರದ ಬಳಕೆಯು ಭೂತಕಾಲ ಸೂಚಿಯಾಗಿ ಬಳಕೆಯಾಗುವುದು.

ಶಿಷ್ಟಪದ			**ದಾ.ಹೆ.ಯಶ. ಭಾಗ**		**ಜಾಲ ಭಾಗ**	
	ಏಕವಚನ	ಬಹುವಚನ	ಏಕವಚನ	ಬಹುವಚನ	ಏಕವಚನ	ಬಹುವಚನ
ಉ.ಪು	ನೋಡಿದೆ	ನೋಡಿದೆವು	ನೋಡ್ದೆ	ನೋಡ್ದೆವು	ನೋಡಿದ್ದ್ನಿ	ನೋಡಿದ್ದ್ವು
ಮ.ಪು	ನೋಡಿದೆ	ನೋಡಿದ್ದಿರಿ	ನೋಡ್ದ	ನೋಡ್ದೋ	ನೋಡಿದ್ದ್ವಿ	ನೋಡಿದ್ದ್ರಿ
ಪ್ರ.ಪು	ನೋಡಿದನು	ನೋಡಿದ್ದರು	ನೋಡಿದ್ದ	ನೋಡ್ದ್ರು	ನೋಡಿದ್ನು	ನೋಡಿದ್ದ್ರು

ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಭಾಗವಾದ ಜಾಲ ಮತ್ತು ಯಲಹಂಕ ಭಾಗದಲ್ಲಿ ಬಳಕೆಯಾಗುವ ಭಾಗದ ಜನರಲ್ಲಿ ಕೆಲವು **ಇ(ದ್ನಿ) ಇದ್** ಎಂಬ ಕೆಲವು ವ್ಯತ್ಯಾಸಗಳು ಕಾಣುತ್ತಿವೆ. ತೆಲುಗಿನಲ್ಲಿ ಕೆಲವೆಡೆ ಶಿಷ್ಟವಾಗಿ ಭೂತಕಾಲ ಪ್ರತ್ಯಯವನ್ನು **ದ್, ಇದ್, ನ್‌ದ್** ಎಂಬ ಪ್ರತ್ಯಯವನ್ನು ಬಳಸಿ ಪಡೆಯಲಾಗಿದೆ. ಅದರಂತೆ ದಾ.ಹೆ.ಯಶ ಭಾಗದಲ್ಲಿ **ದ್, ತ್, ನ್‌ದ್** ಪ್ರತ್ಯಯಗಳನ್ನು ಬಳಸಿ ಭೂತಕಾಲವನ್ನು ಪಡೆಯಲಾಗಿದೆ. ಆದರೆ ಜಾಲ ಭಾಗದಲ್ಲಿ ಭೂತಕಾಲ ಪ್ರತ್ಯಯ **ಏ, ಇ, ಇತಿ** ಯ ಬಳಕೆಯಿದೆ. ಪ್ರಥಮ ಪುರುಷ ಏಕ ಮತ್ತು ಬಹುವಚನದಲ್ಲಿ **ಏ** ಪ್ರತ್ಯಯ ಪ್ರಯೋಗವಾದರೆ, **ಇ (ಇರಿ)** ಪ್ರತ್ಯಯವು ಪ್ರಥಮ ಪುರುಷದ ಮಹತ್ ಲಿಂಗದ ಬಹುವಚನಗಳಿಗೆ ಮಾತ್ರ ಹತ್ತುತ್ತವೆ. ಹಾಗೆಯೇ **ಇತಿ, ಇನ್** ಪ್ರತ್ಯಯವು ಭೂತಕಾಲ ಸೂಚಕವಾಗಿ ಬಳಕೆಯಾಗುವುದು. **“ಇ ಕಾರವೇ ಭೂತಕಾಲದ ಸೂಚಕದ ಮೂಲ ಪ್ರತ್ಯಯವಾಗಿದೆ. ಇ ಕಾರವು ಸೌಲಭ್ಯಕಾಂಕ್ಷೆಯಿಂದ ಉ ಕಾರಕ್ಕೆ ಬದಲಾಗಿ ಬಳಕೆಯಾಗುತ್ತಿದೆ.”**[೯೬] ಅದರಂತೆ ಜಾಲ ಭಾಗದ ಜನರಲ್ಲಿ ಕೆಲವು ತೆಲುಗಿನ ಭೂತ ಪ್ರತ್ಯಯಗಳು ಬಳಕೆಯಾಗುವುದನ್ನು ಕಾಣಬಹುದು. ‘ನೋಡಿದ್ನು’ ಎಂದು ಮೇಲ್ವರ್ಗದ ಪುರುಷರಲ್ಲಿ ಬಳಕೆಯಾದರೆ. ಎನ್ನುವ ಜಾಲ ಭಾಗದ ಗ್ರಾಮೀಣ ಇಟ್ಟಿಗೆ ಕೆಲಸಗಾರರಲ್ಲಿ ನೋಡ್ನಿ. ನೋಡಿದ್ರಿ ಎಂದು ಬಳಸುವ ಪ್ರಯೋಗಗಳಿವೆ. ಉದಾ : ‘ಈ

ಕಡ್ಕ ವೋಲ್ಪ್ ಒತ್ತಿದ್ನು, ನಾನ್ ಆಗ್ಲೆ ನೋಡ್ನಿ. ನಾಮ್ಮೆಲ್ಲೂ ಮತಾಡ್ಸ್ದ್ನು.' ಎಂದು ಕೆಳವರ್ಗದವರಲ್ಲಿ ಬಳಕೆಯಾದರೆ, ಮೇಲ್ವರ್ಗದ ವಕ್ಕಲಿಗನು 'ಅತ್ ಕಡೀಕೆ ವೊತಿದ್ದ್ ಅಂಗ್ ಕಾಣ್ತು, ನಾನ್ ನೋಡಿದ್ನು' ಎಂದು ಬಳಕೆಯಲ್ಲಿದೆ. ಇಲ್ಲಿ ಮೇಲ್ವರ್ಗದ ಪುರುಷನಿಗೆ ಕನ್ನಡದವನಾಗಿದ್ದು ತೆಲುಗನ್ನು ಅಲ್ಲಲ್ಲಿ ಕಲಿತವನಾಗಿದ್ದಾನೆ. ಆದರೇ ಇಟ್ಟಿಗೆ ಕೆಲಸಗಾರರು ತೆಲುಗು ಮತ್ತು ಕನ್ನಡವನ್ನು ಬಲ್ಲವರಾಗಿದ್ದಾರೆ. ಇಲ್ಲಿ ಜಾತಿ, ವರ್ಗವೂ ಕೂಡ ಭಿನ್ನತೆಗೆ ಕಾರಣವಾಗಿದೆ. ಆದ್ದರಿಂದ ಈ ಜಾಲ ಭಾಗದಲ್ಲಿ ಸಾಕಷ್ಟು ಬದಲಾವಣೆಯು ಉಂಟಾಗುತ್ತಿವೆ.

೫.೩.೧.೨ ವರ್ತಮಾನ ಕಾಲ

"ಕ್ರಿಯಾಪ್ರಕೃತಿಗಳಿಗೆ ವರ್ತಮಾನ ಪ್ರತ್ಯಯ ಸೇರಿ ವರ್ತಮಾನ ಕೃದ್ ರೂಪಗಳಾಗುತ್ತವೆ."[೬೭] ವರ್ತಮಾನ ಕಾಲದ ಬಗೆಗಿನ ದ್ರಾವಿಡದ ಕೆಲವು ನಿಯಮವು ಇಂತಿವೆ:

೧. "ದ್ರಾವಿಡ ಭಾಷೆಗಳು ವರ್ತಮಾನ ಕಾಲ ಹಾಗೂ ಭವಿಷ್ಯತ್ ಕಾಲಗಳನ್ನು ಪ್ರತ್ಯೇಕವಾಗಿ ಬೆಳೆಸಿಕೊಂಡು ಬಂದಿರುವುದು ವೇದ್ಯವಾಗುತ್ತದೆ. ಆದರೂ ಭಿನ್ನತೆ ಮೂಲದಲ್ಲಿಲ್ಲದ್ದು, ಅದು ಏನಿದ್ದರೂ ಅನಂತರ ಬಂದದ್ದು. ಮೂಲ ದ್ರಾವಿಡದಲ್ಲಿ ಭೂತಕಾಲ ಮತ್ತು ಭೂತೇತರ ಕಾಲ ವೆಂಬ ಎರಡು ಭೇದಗಳಿರುವುದು ತಿಳಿಯುತ್ತದೆ."[೬೮]

೨. "ವರ್ತಮಾನ ಕಾಲದ ರಚನೆ ತೆಲುಗಿನಲ್ಲಿ ಕ್ರಿಯಾ ವಿಶೇಷಣ ಹಾಗೂ ಉಂಡು ಎಂಬ ರೂಪದ ಭೂತ ವರ್ತಮಾನ ರೂಪ ಕೂಡಿ ಆಗುತ್ತದೆ. ಆದರೆ ಅದನ್ನು ತುನ್ ಎಂಬ ವರ್ತಮಾನ ಕಾಲ ಸೂಚಕ ಪ್ರತ್ಯಯದಿಂದ ಒಡಗೂಡಿದೆಯೆಂದು ವಿವರಿಸಬಹುದು. ಇಲ್ಲಿ 'ತ್' ಕಾಲ ನಿರಂತರತೆಯ ಪ್ರತ್ಯಯ 'ಉನ್' , 'ತ್ಉನ್' ಪ್ರತ್ಯಯವನ್ನು ಒಳಗೊಂಡಿವೆ. ಉದಾ: ಕೂರುಸ್ತುನ್ನಾಮ್(ಕೂರುತ್ತೇವೆ) ಚೇಸ್ತುನ್ನಾವ್ (ಮಾಡುತ್ತಿರುವೆ)"[೬೯]

ಬೆಂಗಳೂರು ಗ್ರಾಮೀಣ ಭಾಗವಾದ ದಾಸನಪುರಾದಿ ಭಾಗಗಳಲ್ಲಿ ಪ್ರಕೃತಿಗಳು **ಉತ್** ಎಂಬ ಪ್ರತ್ಯಯವನ್ನು ಎಲ್ಲಾ ಪುರುಷ ಪ್ರತ್ಯಯಗಳಲ್ಲಿ ಬಳಸಿಕೊಳ್ಳುತ್ತವೆ. ಜಾಲ ಭಾಗದಲ್ಲಿ ಕೆಲವೊಮ್ಮೆ **ಉತ್** ವಿಕಲ್ಪವಾಗಿ ಬಳಕೆಯಾಗುತ್ತಿವೆ.

ಶಿ.ಕ		ದಾ.ಹೆ.ಯಶ. ಭಾಗ		ಜಾಲ ಭಾಗ	
ಏಕವಚನ	ಬಹುವಚನ	ಏಕವಚನ	ಬಹುವಚನ	ಏಕವಚನ	ಬಹುವಚನ
ಹೋಗುತ್ತೇನಿ	ಹೋಗುತ್ತೇವೆ	ಹೋಗ್ತೇನಿ	ಹೋಗ್ತೇವೆ	ಓತೀನಿ	ಓತೀವಿ
ಹೋಗುತ್ತಾನೆ	ಹೋಗುತ್ತಾರೆ	ಹೋಗ್ತಾನೆ	ಹೋಗ್ತಾರೆ	ಓತಾನ	ಓತ್ತಾರ
ಹೋಗುತ್ತಲೇ		ಹೋಗ್ತಾಲೇ		ಓಗುತ್ಲೇ	

ಶಿಷ್ಟವಾಗಿ ವರ್ತಮಾನ ಪ್ರತ್ಯಯವು **ಉತ್** ಎಂಬ ಪ್ರತ್ಯಯವನ್ನು ಬಳಸಿ ವರ್ತಮಾನ ಕಾಲವನ್ನು ಪಡೆಯಲಾಗುವುದು. ದಾ.ಹೆ.ಯಶ. ಭಾಗದಲ್ಲಿ **ಏನೆ, ಏವೆ** ಎಂಬ ಪ್ರತ್ಯಯವು ಬೆಂಗಳೂರಿನ ಜಾಲ ಜನರಲ್ಲಿ **ಇನಿ, ಇವಿ** ಎಂದು ಬಳಕೆಯಾಗುತ್ತಿದೆ. ವರ್ತಮಾನದ ಬಳಕೆಯು ಹೆಚ್ಚು ವ್ಯತ್ಯಾಸವಾಗದಿದ್ದರೂ ಉಚ್ಚಾರಣೆಯಲ್ಲಿ ಕೆಲವೊಮ್ಮೆ ಜಾಲ ಭಾಗದ ತೆಲುಗು ಭಾಷಿಕ ಕೆಳವರ್ಗದವರಲ್ಲಿ **ಅಲೇ**> **ಅತ್ಲೇ, ಏನಿ**>**ಇನಿ, ಇವಿ** ಯಾಗಿ ಬಳಕೆಯಾಗುತ್ತವೆ.

ಜಾಲ ಭಾಗ ಮತ್ತು ಯಲಹಂಕದ ಪೂರ್ವ ಭಾಗಕ್ಕೆ ಹೊಂದಿಕೊಂಡ ಭಾಗದ ಗ್ರಾಮೀಣ ದನಗಾಹಿಗಳಲ್ಲಿ ಪ್ರಥಮ ಪುರುಷದಲ್ಲಿ ಬಳಕೆಯಾಗುವ ಕೆಲವು ಕನ್ನಡ ಭಾಷಿಕರು 'ಹೋಗ್ತಾಲೇ', 'ವೊಗ್ತಾಲೇ' ಪದವನ್ನು ಬಳಸುತ್ತಿದ್ದಾರೆ. ಇವು ಜಾಲ ಭಾಗದ ದನಕಾಯುವ ತೆಲುಗು ಭಾಷೆ ಬಲ್ಲವರಲ್ಲಿ 'ವೊಗುತ್ಲೆ', 'ಓಗುತ್ಲೆ' ಎಂದು ಬಳಕೆಯಾಗುತ್ತಿವೆ. ಉದಾ: ಕನ್ನಡ ಭಾಷಿಕನು 'ಅಯ್ಯೋ ಹೊಲ್ಕಟ್ಟಿ ಕುರಿಗುಳನ್ನು ಎಲ್ಲೋಗಿದ್ಯೋ, ಅವ್ಕ್ ಏಸ್ ವಡ್ದ್ರು 'ವೋಗ್ತಾಲೇ' ಇಲ್ಲಾ' ಎಂದು ಹೇಳುವ ಸಂಭಾಷಣೆಯಾಗಿದೆ. ತೆಲುಗು ಕುರಿ ಕಾಯುವವನು ಅವನು ಸಂಭಾಷಣೆಯನ್ನು ಅರಿತು ತನ್ನ ಸಂಗಡಿಗನಿಗೆ 'ಆ ಕುರಿಗೈಲ್ವು ಅಯ್ನೋರ್ ತ್ವಾಟ್ಕ ನುಗ್ ರಾಗ್ಯೆಲ್ವುನ್ ಮೇಯ್ದ್ದ ಬುಟ್ಟಾವ್. ಆ ವಯ್ನು ಅಟ್ಟಿದ್ನು. ಇವ್ ಯೇಟ್ ಅಟ್ಟ್ರನು (ಅಟ್ಟಿದರು) 'ಓಗುತ್ಲೆ' ಇಲ್ವಪ್ಪೊ' ಇಲ್ಲಿ ತೆಲುಗು ಭಾಷಿಕನ್ನು ಕನ್ನಡ ಬಲ್ಲವರ ನಡುವೆ ಮಾತನಾಡುವ ಪ್ರಕ್ರಿಯೆಯಾಗಿದೆ. ಅದರಲ್ಲೂ ತಾವು ಮಾಡುವ ವೃತ್ತಿಯು ಭಾಷಾ ಬದಲಾವಣೆಗೆ ಕಾರಣವಾಗುವುದನ್ನು ಈ ವ್ಯತ್ಯಾಸದಿಂದ ತಿಳಿಯಬಹುದು.

೫.೩.೧.೩ ಭವಿಷ್ಯತ್ ಕಾಲ

ಭವಿಷ್ಯತ್ ಕಾಲದ ಬಗೆಗಿನ ದ್ರಾವಿಡದ ಕೆಲವು ನಿಯಮವು ಇಂತಿವೆ:

೧. "ದ್ರಾವಿಡ ಭಾಷೆಗಳಲ್ಲೆಲ್ಲಾ ಅತ್ಯಂತ ಹೆಚ್ಚು ಪ್ರಯೋಗವಾಗುವ ಭವಿಷ್ಯತ್ ಕಾಲ ಸೂಚಕ ವೆಂದರೆ ಕನ್ನಡ, ತಮಿಳು, ತೆಲುಗಿನಲ್ಲಿ ಬಳಕೆಯಾಗುವ 'ವ್' ಕಾರವೇ ಆಗಿದೆ."[೧೦೦]

೨. "ದ್ರಾವಿಡ ಭಾಷೆಗಳಲ್ಲಿ ಪ್ರಕೃತಿ ಮತ್ತು ಸರ್ವನಾಮಗಳ ಪ್ರತ್ಯಯಗಳ ನಡುವೆ ಇಯ್ ಅಥವಾ ಈ ಅಥವಾ ದ್ ಕಾರವನ್ನು ಪ್ರಯುಕ್ತ ಮಾಡುವುದರ ಮೂಲಕ ಹಾಗೂ ಭವಿಷ್ಯತ್ ಕಾಲ ಸೂಚಕದ ಅನಂತರ ಬರುವ ಅಂದರೇ ಸರ್ವನಾಮದ ಆರಂಭದ ಸ್ವರವನ್ನು ದೀರ್ಘೀಕರಣ ಮಾಡುವುದರ ಮೂಲಕ ರೂಪುಗೊಳ್ಳುತ್ತದೆ. ಉದಾ: ಮಾಡಿಯೇನು, ಅಥವಾ ನುಡಿದೇನು, ತೆಲುಗಿನಲ್ಲೂ ಕೂಡ ಇದೇ ರೀತಿಯಲ್ಲಿ ಎರಡು ತೆರನಾದ ಭವಿಷ್ಯತ್ ಕಾಲದ ರೂಪಗಳಿದ್ದು, ಕನ್ನಡದ ಅಯ್ ಅಥವಾ ಈ ಮತ್ತು ದ್ ಕಾರಗಳಿಗೆ ಸಂವಾದಿಯಾದ ರೂಪಗಳಿವೆ."[೧೦೧]

೩. "ಆಧುನಿಕ ತೆಲುಗಿನಲ್ಲಿ ತಾ ಎಂಬ ಪ್ರತ್ಯಯ ಭವಿಷ್ಯತ್ಕಾಲ ಸೂಚಕವಾಗಿ ಬಳಕೆಯಲ್ಲಿದೆ. ಇದು ತುನ್, ಎಂಬುದಾಗಿ ಪ್ರಥಮ ಪುರುಷ ಅಮಹತ್ ಏಕವಚನದಲ್ಲಿ ಬಳಕೆಯಾಗುತ್ತದೆ. ಉದಾ: ಚೇಸ್ತಾನು > ಮಾಡುವೆನು, ಚೇಸ್ತಾವು > ಮಾಡುವಿ, ಚೇಸ್ತಾರು > ಮಾಡುವರು "[೧೦೨]

ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಜನರು **ವ್** ಪ್ರತ್ಯಯವನ್ನು ಪ್ರಕೃತಿಗೆ ಸೇರಿಸಿ ಭವಿಷ್ಯ ಕಾಲವನ್ನುಂಟು ಮಾಡಿಕೊಳ್ಳುವುದು ಕಂಡುಬರುತ್ತದೆ. ಕೆಲವು ಕೃದಂತ ಮತ್ತು ಸಾಪೇಕ್ಷ ಕ್ರಿಯಾಪದಗಳಲ್ಲಿ ಈ ಭವಿಷ್ಯ ಪ್ರತ್ಯಯವು ಸೇರುತ್ತದೆ.

ಶಿ.ಕ		**ದಾ.ಹೆ.ಯಶ. ಭಾಗ**		**ಜಾಲ ಭಾಗ**	
ಏಕವಚನ	ಬಹುವಚನ	ಏಕವಚನ	ಬಹುವಚನ	ಏಕವಚನ	ಬಹುವಚನ
ಮಾಡುವ	ಮಾಡುವರು	ಮಾಡುವನು	ಮಾಡುವ	ಮಾಡುವ್ನ	ಮಾಡುವ್ರು
ಕೊಡುವ	ಕೊಡುವರು	ಕೊಡುವನು	ಕೊಡುವನು	ಕೊಡುವ್ನ	ಕೊಡುವ್ರು

ಭವಿಷ್ಯ ಕಾಲದ **ಅನು, ಅರು** ಎಂಬ ಪ್ರತ್ಯಯಗಳು ಜಾಲ ಭಾಗಗಳಲ್ಲಿ **ಅವು/ಉರು** ಎಂದು ಕೆಲವೊಮ್ಮೆ ಬಳಕೆಯಾಗುತ್ತವೆ. ಅದನ್ನು ಬಿಟ್ಟು ಇದರಲ್ಲಿ ಹೆಚ್ಚು ಭಿನ್ನತೆಯು ಕಂಡುಬರುವುದಿಲ್ಲ. ಹೆಚ್ಚು ಕೃದಂತಗಳಲ್ಲಿ ಬಳಕೆಯಾಗುತ್ತದೆ. ಸಾಮಾನ್ಯವಾಗಿ ಹೆಚ್ಚು ವ್ಯತ್ಯಾಸಗೊಳಿಸದೆ ಗ್ರಾಮೀಣ ಜನರಲ್ಲಿ ಏಕರೂಪವಾಗಿ ಬಳಕೆಯಾಗುತ್ತದೆ.

೫.೩.೨. ನಿಷೇಧಾರ್ಥಕ ಕ್ರಿಯಾಪದ

ನಿಷೇಧಾರ್ಥಕ ಕ್ರಿಯಾಪದದ ಬಗೆಗಿನ ದ್ರಾವಿಡದ ಭಾಷೆಯ ಕೆಲವು ನಿಯಮಗಳು ಇಂತಿವೆ:

೧. " 'ಅ' ನಿಷೇದ ಸೂಚಕವು ಪ್ರತ್ಯಯವು ತಮಿಳು, ಮಲೆಯಾಳಂಗಳಂತೆ ಇಲ್ಲ ಎಂಬ ನಿಷೇಧ ರೂಪವು ಕನ್ನಡದಲ್ಲಿ ಬಳಕೆಯಲ್ಲಿದೆ. ಆದರೆ ಇಲ್ಲ ಅಲ್ಲ ಎಂಬವುಗಳು ನಿಷೇದವಲ್ಲದ ಇಲ್, ಅಲ್, ಎಂಬ ಮೂಲ ರೂಪಗಳಿಗೆ ಅ ನಿಷೇದ ಪ್ರತ್ಯಯ ಸೇರಿ ಸಿದ್ದವಾಗಿವೆ."[೧೦೩]

೨. "ಅದು ಮತ್ತು ಅವು ಏಕಬಹುತ್ವ ನಿಷೇಧ ಸೂಚಕ ರೂಪಗಳಾಗಿದ್ದಂತೆ ತೋರುತ್ತದೆ ಎಂಬ ಅಭಿಪ್ರಾಯಗಳಿವೆ. ಆದರೆ ಯಾವ ದ್ರಾವಿಡ ಭಾಷೆಗಳಲ್ಲಿ ಇವುಗಳ ಸಮಾನ ರೂಪಗಳು ಸಿಗುವುದಿಲ್ಲ"[೧೦೪] (ಪು ೧೯೩. ಭಾ.ವ್ಯಾ, ಸಂ.ಮಠ)

೩. "ತೆಲುಗಿನಲ್ಲಿ 'ಅ' ಎಂಬ ಭವಿಷ್ಯತ್ ಕಾಲ ಪ್ರತ್ಯಯವಿದೆ. ಆಧುನಿಕ ತೆಲುಗು ಭಾಷೆಯಲ್ಲಿ ಭೂತಕಾಲ ಹಾಗೂ ವರ್ತಮಾನ ಕಾಲಗಳಲ್ಲಿ 'ಲೇದು' ಅಂದರೆ 'ಇಲ್ಲ' ವೆಂದರ್ಥ" (ಪು ೧೯೪. ಭಾ.ವ್ಯಾ, ಸಂ.ಮಠ)

ಬೆಂಗಳೂರು ಗ್ರಾಮೀಣ ಭಾಗದ ಜನರಲ್ಲಿ ಬಳಕೆಯಾಗುವ ಕ್ರಿಯಾಪದಗಳಲ್ಲಿ ನಿಷೇಧಾರ್ಥವನ್ನು ಸೂಚಿಸಲು ಎರಡು ವಿಧಾನಗಳಿವೆ. ಒಂದು ನಿಷೇಧ ಪ್ರತ್ಯಯವನ್ನು ಬಳಸುವುದು, ಮತ್ತೊಂದು ನಿಷೇಧ ಅವ್ಯಯವನ್ನು ಬಳಸುವುದಾಗಿದೆ. ಸಾಪೇಕ್ಷ ಕ್ರಿಯಾಪದದಲ್ಲಿ ನಿಷೇಧ ಪ್ರತ್ಯಯವು ಬಳಕೆಯಾದರೆ, ಸಮಾಪಾಕ ಕ್ರಿಯಾಪದಗಳಲ್ಲಿ ನಿಷೇಧಾವ್ಯಯವನ್ನು ಬಳಕೆಯಾಗುವುದು.

೧. ಸರಳ ಸಾಪೇಕ್ಷ ಕ್ರಿಯಾ ರೂಪಗಳಲ್ಲಿ ಪ್ರಕೃತಿಗೆ ನಿಷೇಧ ಪ್ರತ್ಯಯ **ಅ** ಹಾಗೂ **ದೆ** ಪ್ರತ್ಯಯಗಳನ್ನು ಹತ್ತಿಸುವುದರ ಮೂಲಕ ನಿಷೇದಾರ್ಥವನ್ನು ಪಡೆಯಲಾಗುವುದು. ಇವು ಸಾಮಾನ್ಯವಾಗಿ ದಾಸನಪುರ **ಎ** ಕಾರವನ್ನು ಬಳಸುತ್ತಿದ್ದರೆ ಮತ್ತು ಜಾಲ ಭಾಗಗಳಲ್ಲಿ **ಆ** ಕಾರ ದೀರ್ಘವಾಗಿ ಬಳಕೆಯಾಗುತ್ತಿವೆ. **ಅದೆ** ಎಂಬುದಾಗಿ **ಅ** ನಿಷೇಧವು ಬಳಕೆಯಾಗುತ್ತಿದೆ.

ಶಿಷ್ಟಪದ		ದಾ.ಹೆ.ಯಶ. ಭಾಗ	ಜಾಲ ಭಾಗ
ಪ್ರಕೃತಿ	ನಿಷೇಧರೂಪ		
ಮಾಡು	ಮಾಡದೆ	ಮಾಡ್ದೆ	ಮಾಡ್ದಾ
ನೋಡು	ನೋಡದೆ	ನೋಡ್ದೆ	ನೋಡ್ದಾ
ಕೂಡು	ಕೂಡದೆ	ಕೂಡ್ದೆ	ಕೂಡ್ದಾ
ಉಣ್ಣು	ಉಣ್ಣದೆ	ಉಣ್ದೆ	ಉಣ್ದಾ

ತೆಲುಗಿನ ನಿಷೇಧಾರ್ಥಕಗಳನ್ನು ಗಮನಿಸಿದಾಗ **ಆ** ಕಾರವು ಪ್ರಕೃತಿ ಮತ್ತು ಸರ್ವನಾಮ ಪ್ರತ್ಯಯದ ನಡುವೆ ನಿತ್ಯ ಪ್ರಯೋಗವಾಗುವುದನ್ನು ಕಾಣಬಹುದಾಗಿದೆ. **(ಅಕನು>ಕಾನು)** ತೆಲುಗು ಪ್ರಭಾವವನ್ನು ಹೆಚ್ಚು ಹೊಂದಿರುವ ಜಾಲ ಭಾಗದಲ್ಲಿ **ಎ (ಅದೆ)** ಕಾರವು **ಅ** ನಿಷೇಧ ಪ್ರತ್ಯಯವು **ಆ** ದೀರ್ಘ **(ದಾ)** ಕಾರವಾಗಿ ಬಳಕೆಯಾಗುತ್ತಿದೆ. ಇವು ಕಾಲ ಭೇದದ ಹೊರತಾಗಿ ಬಳಕೆಯಾಗುತ್ತಿವೆ.

೨. ಬೆಂಗಳೂರು ಗ್ರಾಮೀಣ ಜನರು ಬಳಸುವ ಭಾವಾರ್ಥಕ ರೂಪಗಳಿಗೆ ಮತ್ತು ಕೃದಂತ ರೂಪಗಳಿಗೆ **ಇಲ್ಲ** ಎಂಬ ಅವ್ಯಯವನ್ನು ಸೇರಿಸಿ ನಿಷೇಧಾರ್ಥವನ್ನು ಪಡೆಯಲಾಗುವುದು. ಬೆಂಗಳೂರು ಭಾಗವಾದ ದಾ, ಹೆ ಭಾಗದ ಜನರಲ್ಲಿ **ಇಲ್ಲ** ಎಂಬ ಪದವು ಬಳಕೆಯಲ್ಲಿದ್ದರೆ ಜಾಲ ಭಾಗದಲ್ಲಿ **ಒಲ್ಲ** ಎಂಬ ಪದ ಬಳಕೆಯನ್ನು ಮಾಡುವುದರ ಮೂಲಕ ನಿಷೇಧ ರೂಪವನ್ನು ಪಡೆಯಲಾಗುತ್ತಿದೆ.

ಶಿಷ್ಟಪದ		**ದಾ.ಹೆ.ಯಶ. ಭಾಗ**	**ಜಾಲ ಭಾಗ**
ಪ್ರಕೃತಿ	ನಿಷೇಧರೂಪ		
ಬಿಡು	ಬಿಡುವುದಿಲ್ಲ	ಬಿಡೋದಿಲ್ಲ	ಬಿಡಲ್ಲ/ಬಿಡೋಲ್ಲ
ಬೀಳು	ಬೀಳುವುದಿಲ್ಲ	ಬೀಳೋದಿಲ್ಲ	ಬೀಳಲ್ಲ/ಬೀಳೋಲ್ಲ
ಮಲಗು	ಮಲಗುವುದಿಲ್ಲ	ಮಲ್ಗೋದಿಲ್ಲ	ಮಲ್ಗಲ್ಲ/ ಮಲ್ಗೋಲ್ಲ
ಕಟ್ಟು	ಕಟ್ಟುವುದಿಲ್ಲ	ಕಟ್ಟೋದಿಲ್ಲ	ಕಟ್ಟಲ್ಲ/ಕಟ್ಟೋಲ್ಲ

ಬೆಂಗಳೂರಿನ ಗ್ರಾಮೀಣ ಭಾಗವಾದ ದಾ.ಹೆ.ಯ ಭಾಗದಲ್ಲಿ ಮಧ್ಯವರ್ಣ **ವ್** ಧ್ವನಿಯು ಲೋಪವಾಗಿ **ಉವುದಿಲ್ಲ** ಎಂಬುದನ್ನು **ಓದಿಲ್ಲ** ಎಂದು ಬಳಕೆಯಾಗುತ್ತಿದೆ. ಆದರೆ ಜಾಲ ಭಾಗವನ್ನು ಒಳಗೊಂಡ ಜಾಲ ಭಾಗವು **ಅಲ್ಲ** ಮತ್ತು **ಒಲ್ಲ** ಎಂಬ ಅವ್ಯಯವನ್ನು ಒಳಗೊಂಡಂತೆ ನಿಷೇಧ ಕ್ರಿಯಾಪದವನ್ನು ಬಳಸುತ್ತಿದ್ದಾರೆ. ತೆಲುಗಿನಲ್ಲಿ **ಅ** ಕಾರವನ್ನೊಳಗೊಂಡ ಪ್ರಕೃತಿಗಳಲ್ಲಿ ನಿಷೇಧಾರ್ಥವು ಒಳಗೊಂಡಿರುವುದು. ಅಂತೆಯೇ ಜಾಲ ಭಾಗದಲ್ಲಿ ಅ ಕಾರ ಮತ್ತು ಒ ಕಾರವನ್ನು ನಿಷೇಧವಾಗಿ ಬಳಸುತ್ತಿದ್ದಾರೆ.

೫.೩.೩. ಪ್ರೇರಣಾರ್ಥಕ ರೂಪಗಳು

"ಕ್ರಿಯಾಧಾತುಗಳಿಗೆ **ಇಸು/ಸು** ಪ್ರತ್ಯಯವನ್ನು ಸೇರಿಸುವುದರೊಂದಿಗೆ ನಾವು ಪ್ರೇರಣಾರ್ಥಕವನ್ನು ಮಾಡಿಕೊಳ್ಳುತ್ತೇವೆ. (ತೆಲುಗಿನಲ್ಲಿ **ಚ್, ವಿಚ್, ಇಚ್, ಪಿಚ್** ಎಂದಿದೆ) ಇ ಎಂಬುದು ಪ್ರೇರಣಾರ್ಥ ರೂಪವಾಗಿದೆ."[೧೦೫] ಪ್ರೇರಣಾರ್ಥಕ ರೂಪದ ಬಗೆಗಿನ ದ್ರಾವಿಡದ ಭಾಷೆಯ ಕೆಲವು ನಿಯಮಗಳು ಇಂತಿವೆ:

೧. ಕನ್ನಡದಲ್ಲಿ ಪ್ರೇರಣಾರ್ಥಕ ಕ್ರಿಯಾಪದಗಳು ‘ಇಸು’ ಪ್ರತ್ಯಯವನ್ನು ಪ್ರಯುಕ್ತ ಮಾಡುವುದರ ಮೂಲಕ ರೂಪಗೊಳ್ಳುತ್ತದೆ. ಉದಾ: ಮಾಡು > ಮಾಡಿಸು. ಇದು ಹಳಗನ್ನಡದಲ್ಲಿ ‘ಇಚು’ ಎಂಬುದಾಗಿತ್ತು. ನಡುಗನ್ನಡದ ಮತ್ತು ಹೊಸಗನ್ನಡ ಭಾಷಿಕ ಅವಸ್ಥೆಗಳಲ್ಲಿ ಇಸು ಪ್ರತ್ಯಯವೇ ಕಂಡುಬರುತ್ತದೆ.”[೧೦೬]

೨. “ತೆಲುಗು ಮತ್ತು ಕನ್ನಡದಲ್ಲಿ ‘ಇ’ ಕಾರವಷ್ಟೇ ಪ್ರೇರಣಾರ್ಥಕ ಕ್ರಿಯಾಪದವಾಗಿದ್ದು, ‘ವ್’ ‘ಬ್’ ಅಥವಾ ‘ಪ್’ ಕಾರಗಳ ಪೂರ್ವದಲ್ಲಿ ಅದು ಪ್ರಯುಕ್ತವಾಗುತ್ತದೆ.”[೧೦೭]

೩. “ಪ್ರೇರಣಾರ್ಥಕ ಕ್ರಿಯಾಪದಗಳು ‘ಸಿ’ ಪ್ರತ್ಯಯವು ಧಾತುವಿಗೆ ಪ್ರಯುಕ್ತವಾಗುವುದರ ಮೂಲಕ ರೂಪಗೊಳ್ಳುತ್ತವೆ. ‘ಸಿ’ ಎಂದರೆ ‘ಮಾಡು’ ಎಂದರ್ಥ”[೧೦೮]

ಬೆಂಗಳೂರು ಗ್ರಾಮೀಣ ಜನರಲ್ಲಿ ಬಳಕೆಯಾಗುವ ಪ್ರೇರಣಾರ್ಥಕವು ಕೆಲವೆಡೆ **ಇಸು** ಪ್ರಯುಕ್ತವಾಗುತ್ತಿದ್ದರೆ, ಜಾಲ ಭಾಗದಲ್ಲಿ **ಇಚು** ಎಂದು ಬಳಕೆಯಾಗುತ್ತಿದೆ.

ಶಿಷ್ಟಪದ	**ದಾ.ಹೆ.ಯಶ. ಭಾಗ**	**ಜಾಲ ಭಾಗ**
ತೊಡಿಸು	ತೊಡ್ಸು	ತೊಡ್ಚು
ಕೂಡಿಸು	ಕೂಡ್ಸು	ಕೂಡ್ಚು
ಪೆಡಸು	ಪೆಡ್ಸು	ಪೆಡ್ಚು
ತರಿಸು	ತರ್ಸು	ತರ್ಚು

ಬೆಂಗಳೂರು ಗ್ರಾಮೀಣ ಭಾಗವಾದ ದಾ.ಹೆ.ಯಶ. ಭಾಗದಲ್ಲಿ **ಇಸು** ಎಂಬುದು ಆಡುಮಾತಿನಲ್ಲಿ ಶಿಷ್ಟದಂತೆ ಬಳಕೆಯಾಗುತ್ತಿದ್ದರೆ, ಜಾಲ ಭಾಗದಲ್ಲಿ **ಸ** ಕಾರದ ಬದಲು **ಚ** (**ಇಚ್**)ಕಾರದ ಬಳಕೆಯಿದೆ. ಈ ಬದಲಾವಣೆಗೆ ಕಾರಣ ಜಾಲ ಭಾಗದಲ್ಲಿ ತೆಲುಗು ಮಾತನಾಡುವ ಜನರಿದ್ದಾರೆ. ತೆಲುಗಿನಲ್ಲಿ **ಪಿಚ್, ಇಚ್** ಎಂಬ ಪ್ರೇರಣಾರ್ಥಕ ಪ್ರತ್ಯಯದ ಬಳಕೆಯಿದೆ. ಅದರ ಪ್ರಭಾವದಿಂದಲೇ ಆ ಭಾಗದಲ್ಲಿ ಬದಲಾವಣೆ

ಕಾಣುತ್ತಿದೆ. ಆದರೆ ಎರಡೂ **ಸ** ಮತ್ತು **ಚ್** ಕಾರದ ಪೂರ್ವದಲ್ಲಿ ಇ ಪ್ರೇರಣಾರ್ಥರೂಪವನ್ನು ಒಳಗೊಂಡಿದೆ. ಜಾಲ ಭಾಗದಲ್ಲಿನ ಮಧ್ಯಮ ವರ್ಗದ ಸ್ತ್ರೀಯರಲ್ಲಿ ತೊಡ್ಚು, ಕೂಡ್ಚು, ಪೆಡ್ಚು, ತರ್ಚು ಎನ್ನುವ ಪದಗಳು ತನ್ನ ಎದುರಿಗೆ ಇರುವ ಬಳೆಯನ್ನು ತೊಡುವ ಸಂದರ್ಭಗಳಲ್ಲಿ ಹೆಚ್ಚು ಕಂಡುಬರುತ್ತವೆ. ಬಳೆಯನ್ನು ತೊಡುವಾಗ ಮಧ್ಯಮ ವಯಸ್ಸಿನ ವಿದ್ಯಾವಂತೆ ಮಹಿಳೆ ಮಧ್ಯಮವರ್ಗದ ಮದುವೆ ಮನೆಯಲ್ಲಿ **"**ಯೇ ಬಳ್ಶೆಟ್ಟಿ ನನ್ಕ ಗುತ್ನಾಗ್ ತೊಡ್ಚು, ಗಲಗಲ ಅನ್ನಂಗ್ ಆಕ್ದಾ ಎಲ್ಬ್ವ ಬಿಸಾಕೋತಿನಿ."ಎಂದು ಹೇಳುತ್ತಾರೆ. ಆಗ ಇನ್ನೊಬ್ಬಸುಮಾರು ೫೮ ವಯಸ್ಸಾದ ವಿವಾಹಿತ ಅವಿದ್ಯಾವಂತ ಮಧ್ಯಮವರ್ಗದ ಮಹಿಳೆಯು **"**ಯಣ್ಣೋ ನೀನ್ಯಾಕ್ ಅಂಗ್ ಪೆಡ್ಸ್ ಪೆಡ್ಸ್ನಾಂಗ್ ಆಕ್ತಿ ತಗ್ಯತ್ತಾ**"** ಇಲ್ಲಿ ಪೆಡ್ಸು ಎನ್ನುವ ಪದ ಬಳಕೆಯು ಹೆಚ್ಚು ಹಿರಿಯರಲ್ಲಿ ಕಂಡುಬಂದರೆ, ತೊಡ್ಚು ಎಂಬುವಂತ ಪದಗಳು ಮಧ್ಯಮ ವಯಸ್ಸಿನ ಮಹಿಳೆಯರಲ್ಲಿ ಬಳಕೆಯಾಗುತ್ತಿವೆ. ಹೀಗೆ ಜಾಲ ಭಾಗದಲ್ಲಿ ಭಿನ್ನತೆಯನ್ನು ಅರಿಯಬಹುದು.

೫.೩.೪. ವಿಧ್ಯರ್ಥಕ ರೂಪಗಳು

"ಕ್ರಿಯಾಪ್ರಕೃತಿಗಳಿಗೆ ವಿಧ್ಯರ್ಥಕ ಪ್ರತ್ಯಯಗಳಾದ **ಅಲಿ, ಓಣ, ಇ/ಇರಿ, ಆನ, ಆವ, ಉವ, ಉವದು** ಎಂಬ ಪ್ರತ್ಯಯಗಳನ್ನು ಅಂಟಿಸುವುದರೊಂದಿಗೆ ವಿಧ್ಯರ್ಥಕ ಕ್ರಿಯಾಪದವನ್ನು ಪಡೆಯಲಾಗುವುದು.**"**[೧೦೯] ಹಾಗೇಯೇ ಬೆಂಗಳೂರು ಗ್ರಾಮಾಂತರದ ವಿವಿಧ ಭಾಗಗಳಲ್ಲಿ ವಿಧ್ಯರ್ಥಕ ರೂಪಗಳು ಭಿನ್ನವಾಗಿ ಬಳಕೆಯಾಗುತ್ತಿವೆ. ವಿಧ್ಯರ್ಥಕ ರೂಪಕ್ಕೆ ಸಂಬಂಧಿಸಿದ ದ್ರಾವಿಡ ನಿಯಮಗಳು ನೋಡುವುದಾದರೆ,

೧. ದ್ರಾವಿಡ ಭಾಷೆಯಲ್ಲಿ ಆಜ್ಞಾರ್ಥಕವು ಕ್ರಿಯಾಪದಕ್ಕೆ 'ಸಿ' ಅಥವಾ ಅದಕ್ಕೆ ಸಂವಾದಿಯಾದ ಪ್ರತ್ಯಯವನ್ನು ಪ್ರಯುಕ್ತಗೊಳಿಸುವುದರ ಮೂಲಕ ಅಥವಾ ಕ್ರಿಯಾಪದದ ಆಜ್ಞಾರ್ಥಕ ರೂಪವನ್ನು ಪ್ರಯುಕ್ತಗೊಳಿಸುವುದರ ಮೂಲಕ ರೂಪುಗೊಳ್ಳುತ್ತದೆ.[೧೧೦]

೨. ತೆಲುಗು ಭಾಷೆಯಲ್ಲಿ ಅತ್ಯಂತ ಪ್ರಾಚೀನವೂ ನಿತ್ಯವೂ ಆದ ಆಜ್ಞಾರ್ಥಕವು ಪ್ರಯೋಗವು ಪ್ರಕೃತಿ ರೂಪಕ್ಕೆ 'ಇನ'ವನ್ನು ಪ್ರಯುಕ್ತ ಮಾಡುವುದರ ಮೂಲಕ ಪಡೆಯಲಾಗುತ್ತದೆ.[೧೧೧]

೩. ತೆಲುಗಿನಲ್ಲಿಯೂ 'ಇನ' ಅಥವಾ 'ನಿ' ಎಂಬುದು ಮೂಲತಃ ತೆಲುಗಿನ ಸಪ್ತಮಿ ವಿಭಕ್ತಿ ಪ್ರತ್ಯಯ 'ನ' ಅಥವಾ 'ನಿಗೆ' ಸಂವಾದಿಯಾದುದೆ ಆಗಿದೆ.[೧೧೨]

ಆದರೆ ಬೆಂಗಳೂರು ಗ್ರಾಮೀಣ ಭಾಗದಲ್ಲಿ ಭಿನ್ನವಾದ ಆಜ್ಞಾರ್ಥಕಗಳ ಬಳಕೆಯನ್ನು ಕಾಣಬಹುದು.

ಶಿ.ಕ			ದಾ.ಹೆ.ಯಶ. ಭಾಗ		ಜಾಲ ಭಾಗ	
ಏಕವಚನ		ಬಹುವಚನ	ಏಕವಚನ	ಬಹುವಚನ	ಏಕವಚನ	ಬಹುವಚನ
ಉ.ಪು	ಅಲಿ	ಓಣ	ಅಲಿ	ಆಣ	ಅಲಿ	ಆನ/ಆವ/ಉವ
ಮ.ಪು	ಉವದು	ಉವರು	ಉದು	ಉದು	ಉ	ಇರಿ/ಇರ್‍ಯಾ
ಪ್ರ.ಪು	ಅಲಿ	ಉವಾ	ಅಲಿ	ಉವ	ಅಲಿ	ಅಲಿ

ಶಿಷ್ಟಪದ			ದಾ.ಹೆ.ಯಶ. ಭಾಗ		ಜಾಲ ಭಾಗ	
ಏಕವಚನ		ಬಹುವಚನ	ಏಕವಚನ	ಬಹುವಚನ	ಏಕವಚನ	ಬಹುವಚನ
ಉ.ಪು	ತಿನ್ನಲಿ	ತಿನ್ನೋಣ	ತಿನ್ಲಿ	ತಿನ್ನಾಣ	ತಿನ್ಲಿ	ತಿನ್ನಾನ/ತಿನ್ನಾವ
ಮ.ಪು	ತಿನೋದು	ತಿನ್ನುವರು	ತಿನ್ನೋದು	ತಿನ್ವರು	ತಿನ್ನು	ತಿನ್ನಿರಿ/ತಿನ್ನರ್‍ಯಾ
ಪ್ರ.ಪು	ತಿನ್ನಲಿ	ತಿನ್ನುವಾ	ತಿನ್ನಲಿ	ತಿನ್ವ	ತಿನ್ನಲಿ	ತಿನ್ನಲಿ

ಬೆಂಗಳೂರು ಗ್ರಾಮೀಣ ಪ್ರದೇಶವಾದ ದಾ.ಹೆ.ಯಶ ಭಾಗದಲ್ಲಿ ಉತ್ತಮ ಪುರುಷ ಏಕವಚನದಲ್ಲಿ ಪ್ರಶ್ನಿಸುವಾಗ ವಾಕ್ಯದಲ್ಲಿ **ಅಲಿ** ಎಂಬ ವಿಧ್ಯರ್ಥಕರೂಪವನ್ನು ಬಳಸುತ್ತಿದ್ದರೆ, ಜಾಲ ಭಾಗದಲ್ಲಿ ಸಂಯುಕ್ತ ಕ್ರಿಯಾಪದವನ್ನು ಬಳಸುತ್ತಾರೆ.

ಉದಾ – ನಾನು ಯಾವ ಕೆಲಸ ಮಾಡಲಿ

ದಾ.ಹೆ.ಯ ಭಾಗ – ನಾನ್ ಯಾವ್ ಕೆಲ್ಸ ಮಾಡ್ಲಿ

ಜಾಲ ಭಾಗ – ನಾನ್ ಯಾವ್ ಕೆಲ್ಸ್ ಮಾಡ್ಬೇಕ್

ಇಲ್ಲಿ **ಅಲಿ** ವಿಧ್ಯರ್ಥಕದ ಬದಲಾದ ರೂಪವಾಗಿ ಸಂಯುಕ್ತ ಕ್ರಿಯಾಪದಗಳ ಬಳಕೆಗಳು ಕಾಣಸಿಗುತ್ತವೆ.

ಜಾಲ ಭಾಗದ ಮಧ್ಯಮ ವಯಸ್ಕರಲ್ಲಿ ಮಧ್ಯಮ ಪುರುಷ ಬಹುವಚನ ತಿನ್ನುವರು ಎಂಬುದನ್ನು ತಿನ್ನರ್ರಾ ಎಂದು ಬಳಕೆಯಲ್ಲಿದೆ. ಉದಾ: 'ಕೋ ಅಕ್ಕ ಏನ್ ಮಾಡ್ದ್ಯ್ಯ' ಎಂದು ನಾಯಕ ಜಾತಿಯ ಯುವಕನು ಪರಿಚಿತ ಮಹಿಳೆಯನ್ನು ಮಹಿಳೆಯನ್ನು ಕೇಳಿದಾಗ 'ಅವರ್ಕೇನ್ ಮಾಡ್ಯಾರ್, ಅವರ್ಯೇನ್ ಇದೆ **ತಿನ್ನರ್ರಾ,** ಏ ಅದೇನಾಗ್ದು ನೀವ್ ಅಂಜ್ಕಂಬೇಡಿ ತಿನ್ನಿರ್ರ್ಯಣ್ನೋ,' 'ಯೇ ನಮ್ಕು ವಟ್ ಅಸಿತಾಯ್ತ್, ಬಂಚೂರ್ **ತಿನ್ನಾವ** ಬರ್‍ತ್ರ' ಎಂದು ಹೇಳುತ್ತಾರೆ. ಇಲ್ಲಿ ಕನ್ನಡದ ಭಾಷಾ ಸಮುದಾಯದಲ್ಲೇ ಮಾತನಾಡಿದರೂ ಹೆಚ್ಚು ಔಪಚಾರಿಕವಾದ ಭಾಷೆ ಬಳಕೆಯಾಗುತ್ತದೆ.

೫.೩.೫. ಸಾಮರ್ಥ್ಯಕ ರೂಪಗಳು

"ಏನು, ಈಯಾ, ಅನು, ಅಳು, ಈರಿ ಎಂಬ ಸಾಮರ್ಥ್ಯಕ ಪ್ರತ್ಯಯಗಳನ್ನು ಭೂತ ಕೃದ್ ರೂಪಗಳಿಗೆ ಸೇರಿಸುವುದರ ಮೂಲಕ ಸಾಮರ್ಥ್ಯಕ ಕ್ರಿಯಾರೂಪವನ್ನು ಪಡೆಯಬಹುದು."[೧೧೩] ಆದರೇ ಬೆಂಗಳೂರು ಗ್ರಾಮೀಣ ಜನರಲ್ಲಿ ಈ ಸಾಮರ್ಥ್ಯಕ ರೂಪಗಳ ಬಳಕೆಯಲ್ಲಿ ಭಿನ್ನತೆಯಿದೆ.

ಶಿಷ್ಟಪದ			**ದಾ.ಹೆ.ಯಶ. ಭಾಗ**		**ಜಾಲ ಭಾಗ**	
ಏಕವಚನ		ಬಹುವಚನ	ಏಕವಚನ	ಬಹುವಚನ	ಏಕವಚನ	ಬಹುವಚನ
ಉ.ಪು	ಏನು	ಏವು	ಏನು	ಏವು	ನೇನು	ಅವ್ನು
ಮ.ಪು	ಈಯಾ	ಈರಿ	ಈಯಾ	ಈರೀ	ಈಯಾ	ಈರಾ
ಪ್ರ.ಪು	ಅನು	ಅರು	ಅನು	ಅರು	ಅನು	ಅರು

ಅಳು	ಅಳು	ಅಳು
ಈತು	ಈತು	ಇತು

ಶಿಷ್ಟಪದ			**ದಾ.ಹೆ.ಯಶ. ಭಾಗ**		**ಜಾಲ ಭಾಗ**	
	ಏಕವಚನ	ಬಹುವಚನ	ಏಕವಚನ	ಬಹುವಚನ	ಏಕವಚನ	ಬಹುವಚನ
ಉ.ಪು	ತಂದೇನು	ತಂದೇವು	ತಂದೇನ್	ತಂದ್ವು	ತಂದ್ನೇನ್	ತಂದವ್ನು
ಮ.ಪು	ತಂದೀಯಾ	ತಂದೀರಿ	ತಂದ್ಯಾ	ತಂದ್ರಾ	ತತ್ತಿಯಾ	ತತ್ತೀರಾ
ಪ್ರ.ಪು	ತಂದಾನು	ತಂದಾರು	ತಂದಾನು	ತಂದಾರು	ತತ್ತಾನು	ತತ್ತಾರು
ತಂದಾಳು		ತಂದಾರು	ತಂದಾಳು	ತಂದಾರು	ತತ್ತಾಳು	ತತ್ತಾರು

ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ದಾ, ಹೆ ಯ ಭಾಗದಲ್ಲಿ ಶಿಷ್ಟತೆಗೆ ಹತ್ತಿರವಾಗಿರುವಂತೆ ಸಾಮರ್ಥ್ಯಕ ರೂಪಗಳು ಬಳಕೆಯಾಗುತ್ತಿವೆ. ಜಾಲ ಭಾಗದಲ್ಲಿ ಕೆಲವು ವ್ಯತ್ಯಾಸಗಳು ಕಾಣುತ್ತಿವೆ. ಉತ್ತಮ ಪುರುಷ ದಲ್ಲಿ **ಏನು** ಎಂಬ ಪ್ರತ್ಯಯದ ಬದಲು ಜಾಲ ಭಾಗದ ಜನರಲ್ಲಿ ಏಕವಚನದಲ್ಲಿ **ನೇನು** ಬಹುವಚನದಲ್ಲಿ **ನವ್ನು** ಎಂದು ಬಳಕೆಯಾಗುತ್ತಿದೆ. ತೆಲುಗಿನಲ್ಲಿ ಭೂತಕಾಲ ಮತ್ತು ಭೂತ ಸಂಬಂಧವಾಚಿಗಳಲ್ಲಿ **ದ್** ಮತ್ತು **ತ್** ಕಾರದ ಬದಲು **ನ್** ಕಾರದ ಬಳಕೆಯಾಗುವುದು. ಕನ್ನಡದಲ್ಲಿ **ದ್** ವತ್ತು ಕೆಲವೆಡೆ **ದ್** ಬದಲು **ತ್** ವು ಭೂತಕಾಲವಾಚಿಯಾಗಿ ಬಳಕೆಯಾಗುವುದು. ಜಾಲ ಭಾಗದಲ್ಲಿ ತೆಲುಗು ಮಾತನಾಡುವವರ ಪ್ರಭಾವದಿಂದ ಕೆಲವು ಪದಗಳು ಈ ರೀತಿಯಲ್ಲಿ ಬದಲಾವಣೆಗೊಂಡು

ಬಳಕೆಯಾಗುತ್ತಿವೆ. **ದ್** ಕಾರದ ಬದಲಾಗಿ ಜಾಲ ಭಾಗದಲ್ಲಿ **ತ್** ಕಾರವನ್ನು ಬಳಸಿ ಭೂತ ಕಾಲದ ಸಾಮರ್ಥ್ಯಕಗಳನ್ನು ಮಾಡಿಕೊಳ್ಳುತ್ತಿರುವುದನ್ನು ಕಾಣಬಹುದು.

೫.೩.೬. ಕ್ರಿಯಾರ್ಥಕ ಅವ್ಯಯ

"ವಾಕ್ಯಗಳಲ್ಲಿ ಕ್ರಿಯಾಪದದಂತೆ ಕರ್ತೃವಿನ ಲಿಂಗ ವಚನ ಪುರುಷಾನುಸಾರಿಯಾಗಿ ರೂಪವು ಬದಲಾವಣೆಯಾಗದೆ ಇರುವ ರೂಪಗಳಲ್ಲಿ ಬಳಕೆಯಾಗುವ ಕ್ರಿಯಾರೂಪಗಳೇ ಕ್ರಿಯಾರ್ಥಕ ಅವ್ಯಯಗಳು."[೧೧೪] ಇವು **ಇದೆ>ಇಲ್ಲ, ಸಾಕು>ಸಾಲ್ದು, ಇದ್ದೀನಿ>ಇದ್ದೀರಿ, ಬೇಡ** >**ಹೋಗ್‌ಬ್ಯಾಡ್ನು** ಇಂತಹ ಅವ್ಯಯಗಳನ್ನು ಬೆಂಗಳೂರು ಗ್ರಾಮೀಣ ಜನರ ಆಡುಮಾತಿನಲ್ಲಿ ಕಾಣಬಹುದು. ಇವರಲ್ಲಿ **ಇರ್** ಧಾತುವಿನ ರೂಪಗಳಿವೆ.

ಶಿಷ್ಟಪದ	**ದಾ.ಹೆ.ಯಶ. ಭಾಗ**	**ಜಾಲ ಭಾಗ**
ಅಲ್ಲಿ ಮನೆಯಿದೆ	ಅಲ್ಲಿ ಮನೆಯಿದೆ	ಅಲ್ಲಿ ಮನೆಯಯ್ತೆ
ಅಲ್ಲಿ ರಾಮನು ಇದ್ದಾನೆ	ಅಲ್ಲೇ ರಾಮನಿದ್ದಾನೆ	ರಾಮ್ನು ಅಲ್ಲೇ ಅವ್ನೆ
ನಾನು ಮನೆಯಲ್ಲಿ ಇದ್ದೇನೆ	ನಾನು ಮನೆಯಲ್ಲಿದ್ದೇನೆ	ನಾನು ಮನೇಗ್ ಇದ್ದೀರಿ
ಅಲ್ಲಿ ನಾಯಿಗಳಿವೆ	ಅಲ್ಲಿ ನಾಯ್ಗಳಿವೆ	ಅಲ್ಲಿ ನಾಯಿಗ್ಳು ಇರ್ತಾವ
ನಾನು ಕೆಲಸ ಕೊಡುತ್ತೇನೆ	ನಾನು ಕೆಲ್ಸ ಕೋಡ್ತೀನಿ	ನಾ ಕೆಲ್ಸವ್ವ ಕೊಡ್ತೀರಿ

ಈ ಮೇಲಿನ ಪಟ್ಟಿಯಲ್ಲಿ ತಿಳಿಸಿರುವಂತೆ ಕ್ರಿಯಾ ರೂಪಗಳಲ್ಲಿ **ಇರ್** ಧಾತುಗಳ ಬಳಕೆಯಲ್ಲುಂಟಾಗುವ ವ್ಯತ್ಯಾಸಗಳು ಜಾಲ ಭಾಗದಲ್ಲಿ ಹೆಚ್ಚು ಕಾಣಿಸುತ್ತಿವೆ. ಜಾಲ ಭಾಗದ ಹಿರಿ-ಕಿರಿಯರು ಎಂದು ಬೇಧವನ್ನು ವಹಿಸದೇ ಎಲ್ಲರಲ್ಲೂ ಈ ಪದಗಳ ಬಳಕೆಯನ್ನು ಕಾಣಬಹುದು. ಅದಕ್ಕೆ ಕಾರಣ ಜಾಲ ಭಾಗದಲ್ಲಿ ತೆಲುಗು ಭಾಷಿಕರ ಒಡನಾಟವು ಹೆಚ್ಚಾಗಿರುವುದರಿಂದ ಕೆಲವು ಕ್ರಿಯಾರ್ಥಕಾವ್ಯಯ ಬಳಕೆಯ ಕ್ರಮದಲ್ಲಿ ಭಿನ್ನತೆಯು ಕಾಣಿಸುತ್ತಿದೆ.

೫.೪ ಅವ್ಯಯಗಳು

"ಕ್ರಿಯಾಪದ ಮತ್ತು ನಾಮಪದ ಗಳಂತೆ ಯಾವುದೇ ಪ್ರತ್ಯಯವನ್ನು ಸೇರದೆ, ರೂಪಭೇದವನ್ನು ಹೊಂದದೆ, ಲಿಂಗ, ವಚನ, ಪುರುಷ, ವಿಭಕ್ತಿ, ಕಾಲಗಳನ್ನು ಹೇಳದ ಪ್ರತ್ಯಯಗಳು ಅವ್ಯಯಗಳಾಗಿವೆ."[೧೧೫] ಕನ್ನಡದಲ್ಲಿ ಅಖ್ಯಾತ ಪ್ರತ್ಯಯಗಳನ್ನು ತೆಗೆದುಕೊಳ್ಳಲಾರದ ಎಲ್ಲಾ ಮುಕ್ತ ಆಕೃತಿಮಾಗಳು ಅವ್ಯಯಗಳು ಎನಿಸಿಕೊಳ್ಳುತ್ತವೆ. ಬೆಂಗಳೂರು ಗ್ರಾಮೀಣ ಜನರಲ್ಲಿ ಅವ್ಯಯಗಳನ್ನು ಬಳಸುವ ರೀತಿಯನ್ನು ಗುರುತಿಸಿ ಹೀಗೆ ವಿಂಗಡಿಸಿಕೊಂಡಿದ್ದೇನೆ.

ಅವ್ಯಯವನ್ನು ಪ್ರಮುಖವಾಗಿ ನಾಲ್ಕು ವರ್ಗಗಳಾಗಿ ವಿಂಗಡಿಸಬಹುದು:

ಸಾಮಾನ್ಯ ಅವ್ಯಯ

ಅನುಸರ್ಗ ಅವ್ಯಯ

ಸಮುಚ್ಚಾಯ ಅವ್ಯಯ

ಭಾವಸೂಚಕ ಅವ್ಯಯ

೫.೪.೧ ಸಾಮಾನ್ಯ ಅವ್ಯಯ

ಇವು ವಾಕ್ಯದಲ್ಲಿ ಯಾವುದಾದರೊಂದು ಕ್ರಿಯೆಯು ನಡೆದ ರೀತಿ ಕಾಲ ಮತ್ತು ಸ್ಥಾನವನ್ನು ಹೇಳುವಂತಹ ಅವ್ಯಯಗಳಾಗಿವೆ. ಇವು ಕ್ರಿಯೆಗೆ ವಿಶೇಷಣಗಳ ರೀತಿಯಲ್ಲಿ ಬಳಕೆಯಾಗುತ್ತಿವೆ. ಅವುಗಳು ಬೆಂಗಳೂರು ಗ್ರಾಮೀಣ ಭಾಗದಲ್ಲಿ ಈ ರೀತಿಯಲ್ಲಿ ವ್ಯಕ್ತವಾಗುತ್ತಿವೆ.

ಶಿಷ್ಟಪದ	ದಾ.ಹೆ.ಯ. ಭಾಗ	ಜಾಲ ಭಾಗ
ಆಮೇಲೆ	ಆಮ್ಯಾಲೆ	ಆಮೇಕ
ಮೊದಲೇ	ಮೋದ್ಲೆ	ಮದ್ಲೆ/ಮದ್ಲು
ಎಷ್ಟುಬಾರಿ	ಎಷ್ಟಾಸ್ರಿ	ಎಷ್ಟಿಕ್ಕತ

ಯಾವಾಗಲೂ	ಯಾವಾಗ್ಲು	ಯಾವಾಗು/ಯಾಪ್ಡು
ಎಲ್ಲರಿಗೂ	ಎಲ್ರಿಗೂ	ಎಲ್ಲೂಕ್ಕೂ
ಬಿಮ್ಮನೆ	ಬಿಮ್ಗೆ	ಬಿಮ್ಕೆ
ಮೆಲ್ಲಗೆ	ಮೆಲ್ಲಗೆ	ಮೆಲ್ಕ

ಬೆಂಗಳೂರು ಗ್ರಾಮೀಣ ಜನರ ಆಡುಮಾತಿನಲ್ಲಿ ಬಳಕೆಯಾದ ಇ ಮೇಲಿನ ಸಾಮಾನ್ಯಾವ್ಯಯಗಳು ಶಿಷ್ಟಪದಗಳನ್ನೇ ಆಡುಮಾತಿನ ರೂಪದಲ್ಲಿ ದಾ.ಹೆ.ಯಶ. ಭಾಗದಲ್ಲಿ ಬಳಸುತ್ತಿದ್ದರೆ. ಜಾಲ ಜನರಲ್ಲಿ ಭಿನ್ನವಾಗಿ ಬಳಕೆಯಾಗಿವೆ. ಅವರಾಡುವ ಮಾತಿನಲ್ಲಿ **ಗ್** ಧ್ವನಿಯ ಬದಲು **ಕ್** ಧ್ವನಿಯೇ ಹೆಚ್ಚು ಬಳಕೆಯಾಗುತ್ತಿದೆ. ಇದು ತೆಲುಗಿನ ಪ್ರಭಾವವಾಗಿದೆ. ಅಲ್ಲಿ ತೆಲುಗು ಭಾಷಿಕರು ಇರುವುದರಿಂದ ಈ ವ್ಯತ್ಯಾಸಗಳಾಗಿವೆ. ಜಾಲ ಭಾಗದಲ್ಲಿ ಬಳಕೆಯಾಗುವ ಕಿತ(ಬಾರಿ), ಯಾಪ್ಡು, ಎಲ್ಕು ಮುಂತಾದ ಪದಗಳು ತೆಲುಗರ ಸಂಪರ್ಕದಿಂದ ಬಂದವುಗಳಾಗಿವೆ. ಇವು ಹೆಚ್ಚು ವಯಸ್ಕರಲ್ಲಿ ಬಳಕೆಯಾಗುತ್ತಿವೆ. ಉದಾ: ಕೂಲಿಗೆ ಕರೆಯುವ ಸಂದರ್ಭದಲ್ಲಿ ಸುಮಾರು ೪೮ ವಯಸ್ಸುಳ್ಳ ವಕ್ಕಲಿಗ ಪುರುಷನು 'ಆತ್ಲು ನಿಮ್ಕ **ಎಷ್ಟಿಕ್ಕಿತ** ಬರ್‍ತಾಳ, ಒತಾಳ, ನೀವ್ ಆಕಿಗಾ ಎನ್ ಕೂಲೀನ್ ಕೊಡ್ತೀದ್ರಿ' ಎಂದು ಕುರುಬರ ಮಹಿಳೆಯನ್ನು ಕೇಳಿದಾಗ 'ಆ ಯಮ್ನು ನಮ್ಕ ನಾಕ್ದಿನ್ ಬಂದಿದ್ಲು' ಎಂಬುದಾಗಿ ಬಳಕೆಯಲ್ಲಿದೆ. 'ಕೆಲ್ಸ್ನ ದಾಡಬಂದಿ ಮಾಡ್ತಾಳೆ, **ಮೆಲ್‌ಮೆಲ್ಕ** ಕಣ್ಮೆಸ್ಕಂಡ್ ಸುಮ್ಕಿರ್ತಾಳಾ, ಅದೇಸ್ಕಿತ ಬಂದ್ಲೋ ನಮ್ಮನೇರ್ಕ ಗೊತ್ತು. ಅದುನ್ ನೋಡ್ ನಮ್ಮನೇರ್ ಬೇಸ್ರು ಪಟ್ಕಂಡ್ ಏಸ್ ಕೊಟ್ರೊ ಗೊತ್ತಿಲ್ ಕಣಣ್ಣೋ' ಎಂಬುದಾಗಿ ಬಳಸುತ್ತಾರೆ. ಈ ಸಂಭಾಷಣೆಯಲ್ಲಿ ಪುರುಷ ವ್ಯಕ್ತಿಯು ತೆಲುಗು–ಕನ್ನಡಬಲ್ಲ ದ್ವಿಭಾಷಿಕನಾಗಿದ್ದು, ಮಹಿಳೆಯು ಕನ್ನಡ ಭಾಷಿಕಳಾಗಿದ್ದಾಳೆ. ಇಬ್ಬರು ಮಧ್ಯಮವರ್ಗದವರಾಗಿದ್ದಾರೆ. ಇಬ್ಬರಲ್ಲೂ ಕೆಲವು ಮಾತಿನ ವ್ಯತ್ಯಾಸಗಳು ಉಂಟಾಗುತ್ತಿವೆ. ಪುರುಷ ಮತ್ತು ಸ್ತ್ರೀಯರ ಅನೌಪಚಾರಿಕ ಸಂಭಾಷಣೆಯಲ್ಲಿ ವಿವಿಧ ಪದ ಬದಲಾವಣೆಗಳು ಕಾಣುತ್ತವೆ. ಹೀಗೆ ಜಾಲ ಭಾಗದಲ್ಲಿ ಅನೌಪಚಾರಿಕ ಸಂದರ್ಭದಲ್ಲಿನ ಅವ್ಯಯಗಳ ಬಳಕೆಯನ್ನು ಕಾಣಬಹುದು.

೫.೪.೨ ಅನುಸರ್ಗ ಅವ್ಯಯ

"ನಾಮಪದದಮುಂದೆ ಅಥವಾ ಕೃದಂತ ವಿಶೇಷಣಗಳ ಮುಂದೆ ಬಳಕೆಯಾಗುವಂತಹ ಅವ್ಯಯಗಳು ಅನುಸರ್ಗ ಅವ್ಯಯಗಳಾಗಿವೆ."[೧೧೬] ಕೆಲವೆಡೆ ಪ್ರತ್ಯೇಕವಾಗಿಯೂ ಬಳಕೆಯಾಗುತ್ತವೆ. ಬೆಂಗಳೂರು ಗ್ರಾಮೀಣ ಜನರಲ್ಲಿ ಇವುಗಳನ್ನು ಹೋಲಿಕೆ, ಅವಧಿ, ಸಹಯೋಗ ಅರ್ಥಗಳನ್ನು ನೀಡುವಾಗ ಬಳಕೆಯಾಗುತ್ತಿವೆ.

ಶಿಷ್ಟಪದ	**ದಾ.ಹೆ.ಯ. ಭಾಗ**	**ಜಾಲ ಭಾಗ**
ಸಲುವಾಗಿ	ಸಲ್ವಾಗಿ	ಸಲ್ಕ/ಸಲ್ಕಾಗಿ
ಸಂಗಡ	ಸಂಗ್ಟ	ಸಂಟ
ತನಕ	ತನ್ಕ	ತಾವ್ಕ
ವರೆಗೆ	ವರ್ಗೆ	ವರ್ಕ
ಒಳಗೆ	ಒಳ್ಗೆ	ಒಳ್ಕ
ಒಸ್ಕರ	ಒಸ್ಕರ	ಒಸ್ಗ
ಗಿಂತ/ಕಿಂತ	ಗಿಂತ/ಕಿಂತ	ಗಿನ್ನ/ಕಿನ್ನ

ಬೆಂಗಳೂರು ಗ್ರಾಮೀಣ ಜನರ ಆಡುಮಾತಿನಲ್ಲಿ ಬಳಕೆಯಾದ ಮೇಲಿನ ಅನುಸರ್ಗಾವ್ಯಯಗಳು, ಶಿಷ್ಟಪದಗಳನ್ನೇ ಅನುಸರಿಸಿ ಆಡುಮಾತಿನ ರೂಪದಲ್ಲಿ ದಾ,ಹೆ,ಯ ಭಾಗದಲ್ಲಿ ಬಳಕೆಯಾಗುತ್ತಿದ್ದರೆ, ಜಾಲ ಜನರಲ್ಲಿ ಭಿನ್ನವಾಗಿ ಬಳಕೆಯಾಗುತ್ತಿವೆ. ಅವರಾಡುವ ಮಾತಿನಲ್ಲಿ **ಗ್** ಧ್ವನಿಯ ಬದಲು ಕ್ ಧ್ವನಿಯೇ ಹೆಚ್ಚು ಬಳಕೆಯಾಗುತ್ತಿದೆ. ಇದು ತೆಲುಗಿನ ಪ್ರಭಾವವಾಗಿದೆ. ಅಲ್ಲಿ ತೆಲುಗಿನ ಭಾಷಿಕರು ಇರುವುದರಿಂದ ಈ ವ್ಯತ್ಯಾಸಗಳಾಗಿವೆ. ಜಾಲ ಭಾಗದಲ್ಲಿ ಬಳಕೆಯಾಗುವ **ಡ್>ಟ ನ್>ವ್** ಕಾರಗಳ ಬಳಕೆಯು ತೆಲುಗಿನಲ್ಲಿ

ಹೆಚ್ಚು ಕಾಣಸಿಗುತ್ತವೆ. ದಂತ್ಯ ವರ್ಣ **ತ್** ಕಾರವು ಅದೇ ವರ್ಗದ ಅನುನಾಸಿಕವನ್ನು ಬಳಸುವುದರ ಮೂಲಕ ಬಳಕೆಯಾಗುತ್ತಿದೆ. ಜಾಲ ಭಾಗದಲ್ಲಿ ಅದೇ ರೀತಿ **ಡ್** ಕಾರವು **ಟ್** ಕಾರವಾಗಿ **(ಸಂಗಡ>ಸಂಟ),** ಮತ್ತು **ನ್** ಕಾರವು **ವ್** ಕಾರವಾಗಿ **(ತನಕ>ತಾವ್ಕ)** ವ್ಯತ್ಯಾಸಗೊಳಿಸಿ ಬಳಸುತ್ತಿದ್ದಾರೆ. ಜಾಲ ಭಾಗದ ಬಿಲ್ಲಮಾರನಹಳ್ಳಿಯಲ್ಲಿ ಮಕ್ಕಳು ಶಾಲೆಗೆ ಹೋಗುವ ಸಂದರ್ಭದಲ್ಲಿ ವ್ಯಕ್ತವಾದ ಮಾತಿನ ದಾಟಿಯಲ್ಲಿ ಬಳಕೆಯಾಗುವ ಅನುಸರ್ಗಾವ್ಯಯವು ಇಂತಿವೆ: ಒಬ್ಬ ಕೆಳವರ್ಗದ ಹುಡುಗನು ಪಕ್ಕದೂರಿಗೆ ಶಾಲೆಗೆ ಹೋಗುವಾಗ ಮತ್ತೊಬ್ಬ ನನ್ನ ಜೊತೆ ಬಾ ಎಂದು ಕರೆಯುವ ಸಂದರ್ಭ– ಹುಡುಗನು "ನಾನ್ ಅವ್ನ **ಸಂಟ** ವೊಗಲ್ಲ. ಬಾಲುನ್ **ಸಂಟ** ಓತೀನೀ ಅವ್ನ್ ಬರೊ**ವರ್ಕ** ಬರೊಲ್ಲಾ. ನೆನ್ನೆ ಅವ**ನೊಸ್ಗ** ಕಾದ್ ಕುಂತ್ರೆ ಬುಟ್ಟ್ ಬಂದ್ನು. ನಮ್ಮ್ ಅಮ್ಮು ಬೈದ್ಲು ಗೊತ್ತಾ" "ಯೇ, ನನ್ತಾವ್ಕ ಅವನು ಬರಲ್ಲಾ ಬಿಡ್ರೊ" ಎಂದು ಮತ್ತೊಬ್ಬನು ಹೇಳುವ ಸಂದರ್ಭದಲ್ಲಿ ಅನೌಪಚಾರಿಕವಾದ ಪದಗಳು ನಮಗೆ ಸಾಕಷ್ಟು ದೊರೆಯುತ್ತವೆ.

೫.೪.೩ ಸಮುಚ್ಚಯ ಅವ್ಯಯ (ನಿಪಾತಾವ್ಯಯ)

"ಎರಡು ಪದ, ಪದ ಸಮುಚ್ಚಯಗಳು ಅಥವಾ ವಾಕ್ಯಗಳೊಡನೆ ಸಂಬಂಧಗೊಳಿಸುವ ಶಬ್ದಗಳು ಸಮುಚ್ಚಯ ಅವ್ಯಯಗಳಾಗಿವೆ."[೧೧೭] ಬೆಂಗಳೂರು ಗ್ರಾಮೀಣ ಜನರಲ್ಲಿ ಬಳಕೆಯಾದ ಸಮುಚ್ಚಯ ಅವ್ಯಯಗಳು 'ಯಾಕಂದ್ರೆ, ಆದರೆ, ಆಮೇಲೆ, ಇಲ್ಲವೆ' ಹೀಗೇ ಮುಂತಾದ ಪದಗಳ ರೂಪದಲ್ಲಿ ಬಳಕೆಯಲ್ಲಿವೆ. ಅವುಗಳ ಬಳಕೆಯ ಸ್ವರೂಪವು ಈ ರೀತಿಯಲ್ಲಿವೆ.

ಶಿಷ್ಟಪದ	**ದಾ.ಹೆ.ಯ. ಭಾಗ**	**ಜಾಲ ಭಾಗ**
ಯಾಕಂದರೆ	ಯಾಕಂದ್ರೆ	ಯಾಕ
ಆದರೆ	ಆದ್ರೆ	ಆದ್ರ
ಅಲ್ಲದೇ	ಅಲ್ದೇ	ಅಲ್ದಾ
ಆಮೇಲೆ	ಆಮೇಕೆ	ಆಮ್ಯಾಕ/ಆಮೇಕ
ಇಲ್ಲವೇ	ಇಲ್ವಾ	ಇಲ್ವಾ

ಬೆಂಗಳೂರು ಗ್ರಾಮೀಣ ಭಾಗದಲ್ಲಿ ಶಿಷ್ಟದಂತೆ ಏ ಕಾರಂತವೇ ಬಳಕೆಯಾಗುತ್ತಿವೆ. ಆದರೆ ಬೆಂಗಳೂರಿನ ಜಾಲ ಭಾಗಗಳಲ್ಲಿ ಏ ಕಾರಾಂತವು ಅ ಕಾರಾಂತವಾಗಿ ಬಳಕೆಯಾಗುತ್ತಿವೆ. ಕೆಲವೆಡೆ ದೀರ್ಘ ಏ ಕಾರವು ದೀರ್ಘ ಆ ಕಾರವು ಬಳಕೆಯಾಗುತ್ತಿದೆ. ಜಾಲ ಭಾಗದ ಜನರ ಮಾತುಗಳಲ್ಲಿ ನಿಪಾತವ್ಯಯಗಳ ಬಳಕೆಯ ಮಾದರಿಯನ್ನು ಗಮನಿಸಿದಾಗ ಹಲವು ನಿಪಾತಾವ್ಯಯಗಳು ಕಾಣಿಸುತ್ತವೆ. ಅವು ಹೀಗಿವೆ: ನಾಯಕರು ಮತ್ತು ಹೊಲೆಯ ವರ್ಗದವನು ಉಳುಮೆ ಮಾಡುವಾಗ ಮಾತನಾಡುವ ಸಂಭಾಷಣೆಯಾಗಿದೆ. ಇವರು ಕೆಳವರ್ಗದವರಾಗಿದ್ದು, ಇವರು ಮಾತನಾಡುವ ಬಗೆಯು ಹೀಗಿದೆ:

೧. 'ನಾನ್ ಮೊದ್ಲೊಗ್ ವಲ್ಕ್ ರಾಗ್ಯ ಅಟ್ ಬತ್ತೀನಿ ಆಮ್ಯಾಕ ನೀನ್ ಬಂತ್ತುನ್ ಸಾಲ್ ವಡಿ'

೨. ಇಲ್ಲೊಂದ್ ಮೇಣ್ಗಡ್ಡಿ ಇತ್ತೆಲ್ಲಾ ಇಲ್ವಾ, ಯೇ ಅಲ್ಲೇ ಅಲ್ದಾ ಎತೊಂಟೋದಾತ್ ನೋಡ್ಲೋ' ಎಂದು ಬಳಕೆಯಾಗುವಾಗ ಹಲವು ನಿಪಾತಾವ್ಯಯಗಳನ್ನು ಆಡುಮಾತಿನಲ್ಲಿ ತಂದಿರುವುದನ್ನು ಕಾಣಬಹುದು. ಆದರೆ ದಾಸನಪುರಾದಿ ಭಾಗದಲ್ಲಿ ಶಿಷ್ಟತೆಯಂತೆ ಸಂಕ್ಷೇಪಿಸಿ ಬಳಕೆ ಮಾಡಲಾಗುತ್ತದೆ. ಇದು ಬೆಂಗಳೂರು ಉತ್ತರ ತಾಲ್ಲೂಕಿನ ಜಾಲ ಮತ್ತು ಯಲಹಂಕ ಪೂರ್ವ ಭಾಗದ ಮೇಲೆ ತೆಲುಗು ಜನರ ಸಂಪರ್ಕವಾದ್ದರಿಂದ ಅವರ ಭಾಷೆಯಲ್ಲಿ ಭಿನ್ನತೆ ಉಂಟಾಗುತ್ತಿದೆ.

೭.೪ ಭಾವಸೂಚಕ ಅವ್ಯಯ

ಆಶ್ಚರ್ಯ, ಸಂಭ್ರಮ, ಸಂಶಯ, ಪ್ರಶ್ನೆ, ತಿರಸ್ಕಾರ, ದುಃಖಗಳನ್ನು ಸೂಚಿಸುವ ಅವ್ಯಯಗಳು ಭಾವಸೂಚಕ ಅವ್ಯಯವಾಗಿವೆ. ಬೆಂಗಳೂರು ಗ್ರಾಮೀಣ ಜನರಲ್ಲಿ ಭಾವಸೂಚಕ ಅವ್ಯಯಗಳು ಈ ರೀತಿಯಲ್ಲಿ ವ್ಯಕ್ತವಾಗುತ್ತಿವೆ.

ಶಿಷ್ಟಪದ	**ದಾ.ಹೆ.ಯ. ಭಾಗ**	**ಜಾಲ ಭಾಗ**
ಅಲ್ಲವೇ	ಅಲ್ವೇ	ಅಲಾ
ಎಲಾ	ಎಲಾ	ಏರಾ
ಅಮ್ಮಾ	ಅಮ್ಮೋ	ಅಮ್ಮಯ್ಯೋ
ಓ	ವೋ	ಹೋ
ಅರೆ	ಅರೆ	ಅರರೆ

ಬೆಂಗಳೂರು ಗ್ರಾಮೀಣ ಭಾಗದಲ್ಲಿ ಶಿಷ್ಟದಂತೆ ಏ ಕಾರಂತವೇ ಬಳಕೆಯಾಗುತ್ತಿವೆ. ಆದರೆ ಬೆಂಗಳೂರಿನ ಜಾಲ ಭಾಗಗಳಲ್ಲಿ ಏ ಕಾರಾಂತವು ಅ ಕಾರಾಂತವಾಗಿ ಬಳಕೆಯಾಗುತ್ತಿವೆ. ಕೆಲವೆಡೆ ದೀರ್ಘ 'ಏ' ಕಾರ ಮತ್ತು ದೀರ್ಘ 'ಆ' ಕಾರವು ಬಳಕೆಯಾಗುತ್ತಿದೆ. ಇದು ಆ ಭಾಗದಲ್ಲಿ ತೆಲುಗು ಜನರ ಸಂಪರ್ಕದಿಂದ ಭಿನ್ನವಾಗಿ ಬಳಕೆಯಾಗುತ್ತಿದೆ. ಈ ಭಾವಸೂಚಕ ಅವ್ಯಯಗಳಲ್ಲಿ ಕೆಲವು ಅರ್ಥವಿಲ್ಲದಂತಹ ಶಬ್ದಗಳು ಬಳಕೆಯಾಗುತ್ತಿವೆ. ಕೆಲವು ವಿಭಿನ್ನವಾದ ಪದಗಳ ಮೂಲಕ ಭಾವಸೂಚಕ ಅವ್ಯಯಗಳನ್ನು ತಿಳಿಯಬಹುದಾಗಿದೆ.

ಬೆಂಗಳೂರಿನ ಗ್ರಾಮೀಣ ಭಾಗದ ಜನರ ಆಡುನುಡಿಯಲ್ಲಿನ ಅವ್ಯಯಗಳ ಬಳಕೆಯಲ್ಲಿ ಹೆಚ್ಚು ವ್ಯತ್ಯಾಸವು ಕಂಡುಬರುವುದಿಲ್ಲ. ಕೆಲವು ಸಂದರ್ಭದಲ್ಲಿ ಭಿನ್ನ ಭಿನ್ನ ಸಂದರ್ಭದಲ್ಲಿ ಬಳಕೆಯಾದ ಅವ್ಯಯಗಳನ್ನು ಕಲೆ ಹಾಕಲಾಗಿದೆ. ದಾ.ಹೆ.ಯಶ ಭಾಗದಲ್ಲಿನ ಬಳಕೆಗಿಂತ ಜಾಲ ಭಾಗದಲ್ಲಿ ಹೆಚ್ಚು ವ್ಯತ್ಯಾಸವಾದ ಶಬ್ದಗಳು ಸಿಗುತ್ತವೆ. ಅದಕ್ಕೆ ಕಾರಣ ಆ ಭಾಗದಲ್ಲಿ ಸಂಭವಿಸಿದ ತೆಲುಗು ಭಾಷೆಯ ಸಂಪರ್ಕವೇ ಆಗಿದೆ.

ಒಟ್ಟಾರೆಯಾಗಿ ಬೆಂಗಳೂರು ಗ್ರಾಮೀಣ ಜನರ ಆಡುಮಾತನ್ನು ಗಮನಿಸಿದಾಗ ದಾಸನಪುರ, ಹೆಸರಘಟ್ಟ, ಯಶವಂತಪುರ ಭಾಗಕ್ಕಿಂತ ಜಾಲ ಮತ್ತು ಯಲಹಂಕ ಭಾಗದಲ್ಲಿ ತುಂಬಾ ಭಿನ್ನವಾದ ಭಾಷಾ ಬಳಕೆಯಾಗುತ್ತಿವೆ. ಈ ಭಾಗದ ಜನರ ಆಡುಮಾತಿನಲ್ಲಿ ತೆಲುಗು ಪದಗಳ ಬಳಕೆ ಹೆಚ್ಚಾಗಿವೆ. ಕೆಲವೆಡೆ ತೆಲುಗು ಪ್ರಭಾವದಿಂದ ಕನ್ನಡಪದದಲ್ಲಿ ಬದಲಾವಣೆಯು ಉಂಟಾಗಿದೆ. ನಾಮೀಕರಣ ವಿಷಯದಲ್ಲಿ ನಾಮಪ್ರಕೃತಿಗಳಾದ ಏಟು, ಮುದ್ದೆ, ಮಾತು, ಇತ್ಯಾದಿ ಪದಗಳಲ್ಲಿ 'ಅಂತಾರ್ನ್ಲೋರು', 'ಇಂತಾರ್ನ್ಲೋರ್' ಎಂಬುದಾಗಿ ಬಳಕೆಗೊಳ್ಳುತ್ತಿವೆ. 'ಕೆಲವೆಡೆ' 'ಮುದ್ದೆಗ್ಳೋನು', 'ಮಾತುಗ್ಳೋನು' ಎಂಬುವವು ಭಿನ್ನತೆಯನ್ನು ಪಡೆದಿವೆ. ಪುಲ್ಲಿಂಗದ 'ಅ'ಕಾರಾಂತ ಅನ್ವರ್ಥಕ ನಾಮಪ್ರಕೃತಿಗಳಾದ ಕುರುಡ, ಕುಂಟ ಎಂಬುವವು 'ಕುಲ್ಡು', 'ಕುಂಟ್ಟು' ಎಂದು ತೆಲುಗಿನ ಪ್ರಭಾವವನ್ನೆ ಆಗುಮಾಡಿಕೊಂಡು ಬಳಕೆಯಾಗುತ್ತಿವೆ. 'ಎ' ಕಾರಾಂತ ನಪುಂಸಕ ಪ್ರಕೃತಿಗಳಿಗೆ ಸರ್ವನಾಮ ಪ್ರತ್ಯಯಗಳು ಸೇರಿ ನಾಮೀಕರಣಗೊಂಡ ರೂಪದಲ್ಲಿ 'ಕುರುಡೇವ್ನು', 'ಶೌಟೇವ್ನು', 'ಕುಂಟೇವ್ನು' ಎಂದು ಬಳಕೆಯಾಗುತ್ತವೆ. ಚತುರ್ಥಿಯ 'ಕಿ' ಪಂಚಮಿಯ 'ಇಂಕ/ಇಂಚಿ' ಪ್ರತ್ಯಯಗಳನ್ನು ಕೆ, ಗೆ, ಪ್ರತ್ಯಯಗಳಿಗಿಂತ ಪ್ರತ್ಯೇಕ ರೂಪದಲ್ಲಿ ಬಳಕೆ ಮಾಡಿಕೊಳ್ಳುತ್ತಿವೆ. ಜಾಲ ಭಾಗದಲ್ಲಿ 'ಅದಿರಿಂಚಿ', 'ಅತ್ನಿಂಚಿ' ಎಂಬ ರೂಪಗಳು 'ಇಂಚಿ'ಯಾಗಿ ತೆಲುಗಿನ ಪಂಚಮಿ ವಿಭಕ್ತಿಯನ್ನೇ ಬಳಕೆ ಮಾಡಿಕೊಳ್ಳುತ್ತಿವೆ. ಕ್ರಿಯಾಪದದಲ್ಲಿನ ಪುರುಷವಾಚಕ ಪ್ರತ್ಯಯಗಳು ಪ್ರಥಮ ಪುರುಷವಾಚಕದಲ್ಲಿ ಅವು/ಎ ಎಂದಾಗಿ ಕಾಣಿಸಿದರೆ ಜಾಲ ಭಾಗದಲ್ಲಿ ಎ/ಅ ಎಂದಾಗಿ ಕಾಣಿಸಿಕೊಳ್ಳುತ್ತವೆ. ದಾಸನಪುರದ ಭಾಗದಲ್ಲಿ ಪ್ರತಿಷೇಧಾರ್ಥಕವನ್ನು

ಬಾರದು, ಕೂಡದು ಎಂಬ ಅವಧಾರಿತ ತರ ತಮವನ್ನು ಹೇಳುವ ರೂಪಗಳ ಬಳಕೆಯಿದ್ದರೆ ಜಾಲ ಭಾಗದಲ್ಲಿ ಕೂಡ್ದು, ಮಾಡ್ದು ಎಂಬ ರೂಪಗಳ ಬಳಕೆ ಇವೆ. ಬಂದಿರಲು, ಮಾಡಿರಲು ಮುಂತಾದ ಭಾವಾರ್ಥಕ ರೂಪಗಳಿಗೆ ಸಂವಾದಿಯಾಗಿ ಜಾಲ ಭಾಗದಲ್ಲಿ ಬಂದಿರ, ಮಾಡಿರ ಎಂಬಂತಹ ರೂಪಗಳು ಕಾಣಸಿಗುತ್ತವೆ. ಅವ್ಯಯಗಳ ವಿಷಯದಲ್ಲಿ ಜಾಲ ಭಾಗದಲ್ಲಿ ತಿರ್ಗಿ, ಕಿತ, ಪಟ್ಗೆ ಎಂಬಂತಹ ಸಾಮಾನ್ಯ ಅವ್ಯಯಗಳ ಬಳಕೆಯಿದೆ. ಇವು ತೆಲುಗು ಭಾಷಿಕರ ನಡುವೆ ಪ್ರಯೋಗವಾಗುವ ಶಾನೆ, ಮುಂದ್ಗಾ, ತಿರ್ಗಾ, ಉಂಟ್ಲೆ ಮುಂತಾದ ಅವ್ಯಯಗಳ ಪ್ರಯೋಗವಾಗಿವೆ. ಹೀಗೆ ಜಾಲ ಮತ್ತು ಯಲಹಂಕ ಪೂರ್ವ ಭಾಗವನ್ನು ಭಿನ್ನವಾಗಿಡುವ ಸಂಗತಿಗಳ ಬಗ್ಗೆ ಅರಿತಾಗ ಜಾಲ ಭಾಗದಲ್ಲಿ ಇರುವ ತೆಲುಗರ ಸಂಪರ್ಕವೇ ಈ ಬದಲಾವಣೆಗೆ ಕಾರಣವೆಂಬುದು ಕಂಡುಬರುತ್ತಿದೆ. ಸಾಮಾನ್ಯವಾಗಿ ಅನೌಪಾಚಾರಿಕ ವಲಯದಲ್ಲಿ ಇಂತಹ ವ್ಯತ್ಯಾಸಗಳು ಹೆಚ್ಚು ಕಂಡುಬರುತ್ತಿವೆ.

ಕೊನೆ ಟಿಪ್ಪಣಿಗಳು :

೧. ಡಾ. ಮಾಧವ ಪೆರಾಜೆ, *ತೌಲನಿಕ ದ್ರಾವಿಡ ವ್ಯಾಕರಣ*, ಪುಟ ೨೦.

೨. ಅದೇ, ಪುಟ ೩೮.

೩. ಡಾ. ಹಂಪ ನಾಗರಾಜಯ್ಯ, *ದ್ರಾವಿಡ ಭಾಷಾ ವಿಜ್ಞಾನ,* ಪುಟ ೨೦೭

೪. ಅದೇ, ಪುಟ ೨೦೭.

೫. ಅದೇ ಪುಟ ೨೦೭.

೬. ಡಾ. ಸಂಗಮೇಶ ಸವದತ್ತಿ ಮಠ, *ತೌಲನಿಕ ದ್ರಾವಿಡ ಭಾಷಾ ವಿಜ್ಞಾನ,* ಪುಟ ೧೦೬

೭. ಅದೇ, ಪುಟ ೧೦೭.

೮. ಡಾ. ಮಾಧವ ಪೆರಾಜೆ, *ತೌಲನಿಕ ದ್ರಾವಿಡ ವ್ಯಾಕರಣ,* ಪುಟ ೪೦.

೯. ಡಾ. ಸಂಗಮೇಶ ಸವದತ್ತಿ ಮಠ, *ದ್ರಾವಿಡ ಭಾಷಾ ವ್ಯಾಸಂಗ,* ಪುಟ ೧೦೫.

೧೦. ಡಾ. ಮಾಧವ ಪೆರಾಜೆ, *ತೌಲನಿಕ ದ್ರಾವಿಡ ವ್ಯಾಕರಣ,* ಪುಟ ೪೨.

೧೧. ಅದೇ, ಪುಟ ೯೭.

೧೨. ಡಾ. ಸಂಗಮೇಶ ಸವದತ್ತಿ ಮಠ, *ದ್ರಾವಿಡ ಭಾಷಾ ವ್ಯಾಸಂಗ,* ಪುಟ ೯೬

೧೩. ಅದೇ, ಪುಟ ೯೭.

೧೪. ಡಾ. ಸಂಗಮೇಶ ಸವದತ್ತಿ ಮಠ, *ತೌಲನಿಕ ದ್ರಾವಿಡ ಭಾಷಾ ವಿಜ್ಞಾನ,* ಪುಟ ೧೨೦.

೧೫. ಅದೇ, ಪುಟ ೯೭.

೧೬. ಅದೇ, ಪುಟ ೧೨೧.

೧೭. ಅದೇ, ಪುಟ ೧೨೧,

೧೮. ಡಾ. ಮಾಧವ ಪೆರಾಜೆ, *ತೌಲನಿಕ ದ್ರಾವಿಡ ವ್ಯಾಕರಣ,* ಪುಟ ೩೯.

೧೯. ಡಾ. ಸಂಗಮೇಶ ಸವದತ್ತಿ ಮಠ, *ತೌಲನಿಕ ದ್ರಾವಿಡ ಭಾಷಾ ವಿಜ್ಞಾನ,* ಪುಟ ೧೨೦.

೨೦. ಡಾ. ಮಾಧವ ಪೆರಾಜೆ, *ತೌಲನಿಕ ದ್ರಾವಿಡ ವ್ಯಾಕರಣ,* ಪುಟ ೪೧.

೨೧. ಅದೇ, ಪುಟ ೬೧.

೨೨. ಅದೇ, ಪುಟ ೬೧.

೨೩. ಅದೇ, ಪುಟ ೭೨.

೨೪. ಅದೇ, ಪುಟ ೭೪.

೨೫. ಅದೇ, ಪುಟ ೭೨.

೨೬. ಅದೇ, ಪುಟ ೪೮.

೨೭. ಅದೇ, ಪುಟ ೫೦.

೨೮. ಅದೇ, ಪುಟ ೪೦.

೨೯. ಅದೇ, ಪುಟ ೪೦.

೩೦. ಅದೇ, ಪುಟ ೫೧.

೩೧. ಅದೇ, ಪುಟ ೫೧.

೩೨. ಅದೇ, ಪುಟ ೫೧.

೩೩. ಡಾ. ಎಂ. ಚಿದಾನಂದ ಮೂರ್ತಿ, *ಭಾಷಾ ವಿಜ್ಞಾನದ ಮೂಲತತ್ವಗಳು.* ಪುಟ ೪೯.

೩೪. ಡಾ. ಕೃಷ್ಣ ಪರಮೇಶ್ವರ ಭಟ್ಟ, *ತೆಲುಗು-ಕನ್ನಡ ದ್ವಿಭಾಷಿಕ ಅಧ್ಯಯನ,* ಪುಟ ೫೨.

೩೫. ಡಾ. ಸಂಗಮೇಶ ಸವದತ್ತಿ ಮಠ, *ತೌಲನಿಕ ದ್ರಾವಿಡ ಭಾಷಾ ವಿಜ್ಞಾನ,* ಪುಟ ೭೯.

೩೬. ಅದೇ, ಪುಟ ೬೮.

೩೭. ಅದೇ, ಪುಟ ೬೫.

೩೮. ಅದೇ, ಪುಟ ೬೬.

೩೯. ಅದೇ, ಪುಟ ೮೧.

೪೦. ಡಾ. ಮಾಧವ ಪೆರಾಜೆ, *ತೌಲನಿಕ ದ್ರಾವಿಡ ವ್ಯಾಕರಣ,* ಪುಟ ೧೬೩.

೪೧. ಅದೇ, ಪುಟ ೧೬೩.

೪೨. ಅದೇ, ಪುಟ ೧೮೨.

೪೩. ಅದೇ, ಪುಟ ೧೬೫.

೪೪. ಡಾ. ಸಂಗಮೇಶ ಸವದತ್ತಿ ಮಠ, *ದ್ರಾವಿಡ ಭಾಷಾ ವ್ಯಾಸಂಗ,* ಪುಟ ೧೩೧

೪೫. ಡಾ. ಸಂಗಮೇಶ ಸವದತ್ತಿ ಮಠ, *ತೌಲನಿಕ ದ್ರಾವಿಡ ಭಾಷಾ ವಿಜ್ಞಾನ,* ಪುಟ ೯೯.

೪೬. ಡಾ. ಕೃಷ್ಣ ಪರಮೇಶ್ವರ ಭಟ್ಟ, *ತೆಲುಗು-ಕನ್ನಡ ದ್ವಿಭಾಷಿಕ ಅಧ್ಯಯನ,* ಪುಟ ೫೭.

೪೭. ಡಾ. ಸಂಗಮೇಶ ಸವದತ್ತಿ ಮಠ, *ತೌಲನಿಕ ದ್ರಾವಿಡ ಭಾಷಾ ವಿಜ್ಞಾನ,* ಪುಟ ೭೬.

೪೮. ಡಾ. ಮಾಧವ ಪೆರಾಜೆ, *ತೌಲನಿಕ ದ್ರಾವಿಡ ವ್ಯಾಕರಣ,* ಪುಟ ೧೫೩.

೪೯. ಅದೇ, ಪುಟ ೧೫೬.

೫೦. ಡಾ. ಸಂಗಮೇಶ ಸವದತ್ತಿ ಮಠ, *ತೌಲನಿಕ ದ್ರಾವಿಡ ಭಾಷಾ ವಿಜ್ಞಾನ,* ಪುಟ ೬೫.

೫೧. ಅದೇ, ಪುಟ ೧೪೪.

೫೨. ಅದೇ, ಪುಟ ೧೪೪.

೫೩. ಅದೇ, ಪುಟ ೧೪೮.

೫೪. ಅದೇ, ಪುಟ ೧೪೭.

೫೫. ಡಾ. ಕೃಷ್ಣ ಪರಮೇಶ್ವರ ಭಟ್ಟ, *ತೆಲುಗು-ಕನ್ನಡ ದ್ವಿಭಾಷಿಕ ಅಧ್ಯಯನ,* ೧೯೯೫, ಪುಟ ೫೨.

೫೬. ಅದೇ, ಪುಟ ೫೩.

೫೭. ಡಾ. ಸಂಗಮೇಶ ಸವದತ್ತಿ ಮಠ, *ತೌಲನಿಕ ದ್ರಾವಿಡ ಭಾಷಾ ವಿಜ್ಞಾನ,* ಪುಟ ೧೪೮.

೫೮. ಅದೇ ಪುಟ ೧೪೮.

೫೯. ಅದೇ ಪುಟ ೧೪೯

೬೦. ಅದೇ, ಪುಟ ೧೪೯

೬೧. ಡಾ. ಮಾಧವ ಪೆರಾಜೆ, *ತೌಲನಿಕ ದ್ರಾವಿಡ ವ್ಯಾಕರಣ,* ಪುಟ ೨೦೦.

೬೨. ಡಾ. ಸಂಗಮೇಶ ಸವದತ್ತಿ ಮಠ, *ದ್ರಾವಿಡ ಭಾಷಾ ವ್ಯಾಸಂಗ,* ಪುಟ ೧೩೮.

೬೩. ಅದೇ, ಪುಟ ೧೫೩.

೬೪. ಡಾ. ಸಂಗಮೇಶ ಸವದತ್ತಿ ಮಠ, *ದ್ರಾವಿಡ ಭಾಷಾ ವ್ಯಾಸಂಗ,* ಪುಟ ೧೪೧.

೬೫. ಅದೇ, ಪುಟ ೧೪೨.

೬೬. ರಾ.ಯ ಧಾರವಾಡಕರ, ೧೯೯೦, *ಕನ್ನಡ ಭಾಷಾಶಾಸ್ತ್ರ,* ಪುಟ ೩೦೧.

೬೭. ಡಾ. ಸಂಗಮೇಶ ಸವದತ್ತಿ ಮಠ, *ತೌಲನಿಕ ದ್ರಾವಿಡ ಭಾಷಾ ವಿಜ್ಞಾನ,* ಪುಟ ೨೩೧.

೬೮. ಡಾ. ಸಂಗಮೇಶ ಸವದತ್ತಿ ಮಠ, *ದ್ರಾವಿಡ ಭಾಷಾ ವ್ಯಾಸಂಗ,* ಪುಟ ೧೪೦.

೬೯. ಡಾ. ಕೃಷ್ಣ ಪರಮೇಶ್ವರ ಭಟ್ಟ, *ತೆಲುಗು-ಕನ್ನಡ ದ್ವಿಭಾಷಿಕ ಅಧ್ಯಯನ.* ೧೯೯೫, ಪುಟ ೬೬.

೭೦. ಅದೇ, ಪುಟ ೬೬.

೭೧. ಅದೇ, ಪುಟ ೬೬.

೭೨. ಡಾ. ಸಂಗಮೇಶ ಸವದತ್ತಿ ಮಠ, *ದ್ರಾವಿಡ ಭಾಷಾ ವ್ಯಾಸಂಗ,* ಪುಟ ೧೪೩.

೭೩. ಅದೇ, ಪುಟ ೧೪೩.

೭೪. ಡಾ. ಕೃಷ್ಣ ಪರಮೇಶ್ವರ ಭಟ್ಟ, ೧೯೯೫, *ತೆಲುಗು-ಕನ್ನಡ ದ್ವಿಭಾಷಿಕ ಅಧ್ಯಯನ.* ಪುಟ ೭೩.

೭೫. ಅದೇ, ಪುಟ ೭೮.

೭೬. ಡಾ. ಸಂಗಮೇಶ ಸವದತ್ತಿ ಮಠ, *ದ್ರಾವಿಡ ಭಾಷಾ ವ್ಯಾಸಂಗ,* ಪುಟ ೧೫೧.

೭೭. ಅದೇ, ಪುಟ ೧೫೨.

೭೮. ಡಾ. ಮಾಧವ ಪೆರಾಜೆ, *ತೌಲನಿಕ ದ್ರಾವಿಡ ವ್ಯಾಕರಣ,* ಪುಟ ೩೬೦.

೭೯. ಅದೇ, ಪುಟ ೩೯೮.

೮೦. ಅದೇ, ಪುಟ ೩೯೮.

೮೧. ಡಾ. ಸಂಗಮೇಶ ಸವದತ್ತಿಮಠ, *ದ್ರಾವಿಡ ಭಾಷಾ ವ್ಯಾಸಂಗ,* ಪುಟ ೧೪೯.

೮೨. ಡಾ. ಮಾಧವ ಪೆರಾಜೆ, *ತೌಲನಿಕ ದ್ರಾವಿಡ ವ್ಯಾಕರಣ,* ಪುಟ ೩೯೦.

೮೩. ಡಾ. ಸಂಗಮೇಶ ಸವದತ್ತಿಮಠ, *ತೌಲನಿಕ ದ್ರಾವಿಡ ಭಾಷಾ ವಿಜ್ಞಾನ,* ಪುಟ ೧೭೧.

೮೪. ಡಾ. ಸಂಗಮೇಶ ಸವದತ್ತಿಮಠ, *ದ್ರಾವಿಡ ಭಾಷಾ ವ್ಯಾಸಂಗ,* ಪುಟ ೧೫೩.

೮೫. ಡಾ. ಮಾಧವ ಪೆರಾಜೆ, *ತೌಲನಿಕ ದ್ರಾವಿಡ ವ್ಯಾಕರಣ,* ಪುಟ ೪೧೯.

೮೬. ಅದೇ, ಪುಟ ೪೦೭.

೮೭. ಡಾ. ಕೃಷ್ಣ ಪರಮೇಶ್ವರ ಭಟ್ಟ, *ತೆಲುಗು-ಕನ್ನಡ ದ್ವಿಭಾಷಿಕ ಅಧ್ಯಯನ.* ೧೯೯೫, ಪುಟ ೧೦೨.

೮೮. ಡಾ. ಮಾಧವ ಪೆರಾಜೆ, *ತೌಲನಿಕ ದ್ರಾವಿಡ ವ್ಯಾಕರಣ,* ಪುಟ ೪೩೮.

೮೯. ಅದೇ, ಪುಟ ೪೪೦.

೯೦. ಡಾ. ಕೃಷ್ಣ ಪರಮೇಶ್ವರ ಭಟ್ಟ, *ತೆಲುಗು–ಕನ್ನಡ ದ್ವಿಭಾಷಿಕ ಅಧ್ಯಯನ.* ೧೯೯೫, ಪುಟ ೧೦೨.

೯೧. ಅದೇ, ಪುಟ ೧೧೨.

೯೨. ಅದೇ, ಪುಟ ೧೧೨.

೯೩. ಡಾ. ಸಂಗಮೇಶ ಸವದತ್ತಿಮಠ, *ತೌಲನಿಕ ದ್ರಾವಿಡ ಭಾಷಾ ವಿಜ್ಞಾನ,* ಪುಟ ೧೮೮.

೯೪. ಡಾ. ಸಂಗಮೇಶ ಸವದತ್ತಿ ಮಠ, *ದ್ರಾವಿಡ ಭಾಷಾ ವ್ಯಾಸಂಗ,* ಪುಟ ೧೭೬.

೯೫. ಅದೇ, ಪುಟ ೧೭೬.

೯೬. ಡಾ. ಕೃಷ್ಣ ಪರಮೇಶ್ವರ ಭಟ್ಟ, *ತೆಲುಗು–ಕನ್ನಡ ದ್ವಿಭಾಷಿಕ ಅಧ್ಯಯನ.* ಪುಟ ೧೯೩.

೯೭. ಅದೇ, ಪುಟ ೧೦೨.

೯೮. ಅದೇ, ಪುಟ ೧೦೨.

೯೯. ಡಾ. ಸಂಗಮೇಶ ಸವದತ್ತಿ ಮಠ, *ದ್ರಾವಿಡ ಭಾಷಾ ವ್ಯಾಸಂಗ,* ಪುಟ ೧೮೪.

೧೦೦. ಡಾ. ಮಾಧವ ಪೆರಾಜೆ, *ತೌಲನಿಕ ದ್ರಾವಿಡ ವ್ಯಾಕರಣ,* ಪುಟ ೫೭೪.

೧೦೧. ಅದೇ, ಪುಟ ೫೭೬.

೧೦೨. ಡಾ. ಸಂಗಮೇಶ ಸವದತ್ತಿ ಮಠ, *ದ್ರಾವಿಡ ಭಾಷಾ ವ್ಯಾಸಂಗ,* ಪುಟ ೧೮೫.

೧೦೩. ಅದೇ, ಪುಟ ೧೯೧.

೧೦೪. ಅದೇ, ಪುಟ ೧೯೩.

೧೦೫. ಅದೇ, ಪುಟ ೧೧೨.

೧೦೬. ಡಾ. ಮಾಧವ ಪೆರಾಜೆ, *ತೌಲನಿಕ ದ್ರಾವಿಡ ವ್ಯಾಕರಣ,* ಪುಟ ೪೯೨.

೧೦೭. ಅದೇ, ಪುಟ ೪೯೨.

೧೦೮. ಡಾ. ಸಂಗಮೇಶ ಸವದತ್ತಿ ಮಠ, *ದ್ರಾವಿಡ ಭಾಷಾ ವ್ಯಾಸಂಗ,* ಪುಟ ೧೮೮.

೧೦೯. ಡಾ. ಮಾಧವ ಪೆರಾಜೆ, *ತೌಲನಿಕ ದ್ರಾವಿಡ ವ್ಯಾಕರಣ,* ಪುಟ ೫೮೫.

೧೧೦. ಅದೇ, ಪುಟ ೫೮೫.

೧೧೧. ಅದೇ, ಪುಟ ೫೯೦.

೧೧೨. ಅದೇ, ಪುಟ ೫೯೦.

೧೧೩. ಡಾ. ಕೃಷ್ಣ ಪರಮೇಶ್ವರ ಭಟ್ಟ, *ತೆಲುಗು–ಕನ್ನಡ ದ್ವಿಭಾಷಿಕ ಅಧ್ಯಯನ.* ಪುಟ ೧೯೧.

೧೧೪. ಅದೇ, ಪುಟ ೧೧೧.

೧೧೫. ಅದೇ, ಪುಟ ೧೧೧

೧೧೬. ಅದೇ, ಪುಟ ೧೨೬.

೧೧೭. ಅದೇ, ಪುಟ ೧೨೮.

****

ಅಧ್ಯಾಯ – ೬.

ಬೆಂಗಳೂರು ಗ್ರಾಮೀಣ ಜನರ ಭಾಷಾ ಸ್ವರೂಪದಲ್ಲಿ ಉಂಟಾಗಿರುವ ಬದಲಾವಣೆಯ ವಿವೇಚನೆ

೬.೧ ಬೆಂಗಳೂರು ಗ್ರಾಮೀಣ ಕನ್ನಡ ಭಾಷೆಯ ಮೇಲೆ ಉಂಟಾದ ಬದಲಾವಣೆಯ ಸ್ವರೂಪ

ಬೆಂಗಳೂರು ಉತ್ತರ ತಾಲ್ಲೂಕಿನ ಜಾಲ ಮತ್ತು ಯಲಹಂಕ ಭಾಗವು ಉಳಿದ ದಾಸನಪುರ, ಹೆಸರುಘಟ್ಟ, ಯಶವಂತಪುರ ಭಾಗಗಳಲ್ಲಿನ ಭಾಷಾರಚನೆಗಳು ಬೇರೆ ಬೇರೆ ಹಂತಗಳಲ್ಲಿ ಅಂದರೆ ಧ್ವನಿಮಾ, ಆಕೃತಿಮಾ, ಶಬ್ದಕೋಶಗಳಲ್ಲಿ ಭಿನ್ನವಾಗಿ ಬಳಕೆಯಾಗುತ್ತಿರುವುದನ್ನು ಹಿಂದಿನ ಅಧ್ಯಾಯದಲ್ಲಿ ತಿಳಿಸಿದ್ದೇನೆ. ಈ ವ್ಯತ್ಯಾಸಗಳು ಜನರಾಡುವ ಆಡುನುಡಿಯನ್ನು ಒಳಗೊಂಡಿವೆ. "ಒಂದು ಭಾಷೆಯಲ್ಲಿ ಕಂಡು ಬರುವ ಶಬ್ದ ಸಮೂಹ ಆ ಭಾಷೆಯ ಪರಿಸರ ಹಾಗೂ ಪರಿಸ್ಥಿತಿಗಳಿಗೆ ಅನುಗುಣವಾಗಿ ಸಿದ್ದವಾಗಿರುತ್ತದೆ. ಇಲ್ಲವೆ ಅವುಗಳಲ್ಲಿ ಕೆಲವು ಬೇರೆ ಬೇರೆ ಭಾಷೆಗಳಿಂದ ಬಂದಂತಹವುಗಳಾಗಿರುತ್ತವೆ. ಶಬ್ದಕ್ಕೆ ಅರ್ಥ ಎಂಬುದು ಅದನ್ನು ಆಡುವ ಜನರ ಸಾಮಾಜಿಕ ಸಂಪ್ರದಾಯ ಹಾಗೂ ಸಂಸ್ಕೃತಿಗಳಿಗೆ ಅನುಗುಣವಾಗಿ ರೂಢಿಗೆ ಬಂದಿರುತ್ತದೆ."[೧] ಅದರಂತೆ ಜಾಲ ಭಾಗದ ಜನರಲ್ಲಿ ಕನ್ನಡದೊಂದಿಗೆ ತೆಲುಗು ಭಾಷೆಯ ಸಂಪರ್ಕದಿಂದ ಹಲವು ಪರಿಸ್ಥಿತಿಗಳಿಗೆ ಅನುಗುಣವಾಗಿ ಭಿನ್ನತೆಗಳು ಉಂಟಾಗಿವೆ. "ಸಮಾಜವೊಂದು ವಿಸ್ತಾರವಾದ ಪ್ರದೇಶದಲ್ಲಿ ಹರಡಿಕೊಂಡಂತೆ ಅನೇಕ ಜಾತಿ ವರ್ಗಗಳಾಗಿ ಒಡೆದಂತೆ ವ್ಯವಹಾರ ಜೀವನ ವಿದಾನಗಳು ಬಹುಮುಖವಾದಂತೆ ಅದು ಬಳಸುವ ಭಾಷೆ ಒಂದೇ ಎಂದು ಕರೆಯಿಸಿಕೊಂಡರೂ ಅದು ಬಹುರೂಪಿಯಾಗಿರುತ್ತದೆ."[೨] ಇಂತಹ ಬದಲಾವಣೆಗಳು ಬೆಂಗಳೂರು ಉತ್ತರ ತಾಲ್ಲೂಕಿನ ಜಾಲ ಮತ್ತು ಯಲಹಂಕ ಪೂರ್ವ ಭಾಗದ ಗ್ರಾಮೀಣ ಭಾಗದಲ್ಲಿ ಕಂಡುಬರುತ್ತಿವೆ. ಈ ಜನರಲ್ಲಿ ವ್ಯಕ್ತವಾಗುವ ಧ್ವನಿಗಳ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚು ಬದಲಾವಣೆಗಳು ಕಾಣುತ್ತಿವೆ. ಅಂತಹ ಬದಲಾವಣೆಗಳೆಂದರೆ, ಜಾಲ ಭಾಗದ ಜನರ ಆಡುನುಡಿಯಲ್ಲಿ ಅಘೋಷ ಧ್ವನಿಗಳು ಘೋಷಧ್ವನಿಗಳಾಗಿ ಬದಲಾವಣೆಯಾಗುತ್ತಿವೆ. ಉದಾ: **ಅನುಕು** > **ಅನ್ಕು, ಕರಿಕ್ಲು** > **ಗರಿಗ್ಲು,** ಎಂಬ ಪ್ರಯೋಗಗಳಿವೆ. ಜಾಲ ಭಾಗದ ಜನರಾಡುವ ಮಾತಿನಲ್ಲಿ ಘೋಷ **ಗ್** ಧ್ವನಿಯ ಬದಲು ಅಘೋಷವಾದ **ಕ್** ಧ್ವನಿಯೇ ಹೆಚ್ಚು ಬಳಕೆಯಾಗುತ್ತಿದೆ. ಉದಾ: **ಗುಳ>ಕುಳ, ಯಾರಿಗೆ>ಯಾರ್ಕ. ಇಂಗು>ಇಂಕ.** ಇವುಗಳು ತೆಲುಗಿನ ಪ್ರಭಾವದಿಂದ ಬಳಕೆಯಾಗುತ್ತಿವೆ. ಜಾಲದಲ್ಲಿ ತೆಲುಗಿನ ಭಾಷಿಕರು ಹೆಚ್ಚಾಗಿ ಇರುವುದರಿಂದ ಈ ವ್ಯತ್ಯಾಸಗಳಾಗಿವೆ. ಜಾಲ ಭಾಗದಲ್ಲಿ ಬಳಕೆಯಾಗುವ **ಡ್>ಟ, ನ್>ವ್** ಕಾರಗಳ ಬಳಕೆಯು ತೆಲುಗಿನಲ್ಲಿ ಹೆಚ್ಚು ಕಂಡುಬರುತ್ತವೆ. ದಂತ್ಯ ವರ್ಣ **ತ್** ಕಾರವು ಅದೇ ವರ್ಗದ ಅನುನಾಸಿಕವನ್ನು ಬಳಸಿ ಉಚ್ಚಾರವಾಗುತ್ತಿದೆ. ಈ ತೆಲುಗಿನ ಪದಗಳನ್ನು ಕನ್ನಡದೊಡನೆ ಬಳಕೆ

ಮಾಡಲಾಗುತ್ತಿದೆ. ಘರ್ಷ ಉಚ್ಚಾರಣೆಯಲ್ಲಿ ಹಲವು ಹಂತಗಳಲ್ಲಿ ಭಿನ್ನತೆಗೊಳಗಾಗಿ ಬಳಕೆಯಾಗುತ್ತಿವೆ. ಉದಾ– **ಚೀಲ>ಶೀಲ, ಸೀಗೆಕಾಯಿ>ಶೀಗೆಕಾಯಿ (ಚೀಕಾಯ್ಲು), ಚಾಪೆ>ಸಾಪ** ಹೀಗೆ ಪದೋಚ್ಚಾರಣೆಯಿವೆ. ಜಾಲ ಭಾಗದ ಜನರಲ್ಲಿ ತಾಲವ್ಯಗಳ ಬದಲು ವರ್ತ್ಸ್ಯ ಉಚ್ಚಾರಣೆಗಳ ಬಳಕೆಯಿವೆ. ಕೆಲವೆಡೆ ಅ ಸ್ವರವು ಆ ಕಾರವಾಗಿ ದೀರ್ಘೀಕರಣವಾಗಿ ಬಳಕೆಯಾಗಿವೆ. ಉದಾ: **ಅವನು>ಆತ್ನು(ಆಡುಮಾತು), ಅಷ್ಟು>ಆಸು, ಗದ್ದಿಗೆ>ಗಾದಿ**. ಈ ಪದಗಳು ಕನ್ನಡವಾಗಿದ್ದು ಜಾಲಭಾಗದಲ್ಲಿ **ಆತಡು, ಅಂತೇಸು, ಗಾದಿ** ಎಂಬ ಬಳಕೆಯಿದೆ. ಈ ಪದಗಳು ಕನ್ನಡ ಭಾಷಿಕರ ಮೇಲೆ ಪ್ರಭಾವ ಉಂಟುಮಾಡುತ್ತಾ ಬದಲಾವಣೆಗಳನ್ನು ತರುತ್ತಿವೆ.

"ಸಾಮಾಜಿಕ ಉಪಭಾಷೆಗಳ ಮೇಲೆ ಅಲ್ಲಲ್ಲಿಯ ಪ್ರಾದೇಶಿಕ ಕನ್ನಡಗಳ ಅಥವಾ ಇತರ ಸಮಾಜಗಳ ಕನ್ನಡಗಳ ಪ್ರಭಾವವು ಉಂಟಾಗಿ ಒಂದೇ ಸಮಾಜದ ಭಾಷೆ ಬೇರೆ ಬೇರೆ ದಿಕ್ಕಿನಲ್ಲಿ ಬದಲಾಗುತ್ತಿರುವುದು. ಇದರಿಂದ ಕೆಲವು ಸಾಮಾಜಿಕ ವ್ಯತ್ಯಾಸವು ಹೆಚ್ಚು ಸ್ಪಷ್ಟವಾಗಿ ತೋರುವುದು"[೩] ಇದರಂತೆ ಬೆಂಗಳೂರು ಗ್ರಾಮೀಣ ಪ್ರಾದೇಶಿಕವಾದ 'ಜಾಲ' ಭಾಗದಲ್ಲಿ ಕೆಲವು ತೆಲುಗು ಪದಗಳನ್ನು ಬಳಸಿಕೊಂಡು ಕ್ರಮೇಣ ತಮ್ಮದೇ ಆದ ಪದವೆಂಬಂತೆ ಕನ್ನಡದ ಜೊತೆ ಜೊತೆಯಲ್ಲಿಯೆ ಬಳಕೆ ಮಾಡುತ್ತಿದ್ದಾರೆ. ಉದಾಹರಣೆಗೆ– ಕನ್ನಡಿ ಎಂಬ ಕನ್ನಡ ಪದದ ಬದಲು 'ಅದ್ದ' ಎಂದು ಬಳಕೆಯಲ್ಲಿದೆ. ಇದು ತೆಲುಗಿನಲ್ಲಿ 'ಅದ್ದಮು' ಎಂದು ಬಳಕೆಯಲ್ಲಿದೆ. 'ಏರು' ಎಂಬ ಕನ್ನಡದ ಪದವನ್ನು ಜಾಲ ಭಾಗದಲ್ಲಿ 'ಎಕ್ಕು' ಎಂದು ಬಳಸುತ್ತಿದ್ದಾರೆ. ತೆಲುಗಿನಲ್ಲಿ 'ಎಕ್ಕು' ಎಂದೇ ಈ ಪದಬಳಕೆಯಲ್ಲಿದೆ. 'ಗಿಳಿ' ಎಂಬ ಪದವನ್ನು ಬೆಂಗಳೂರು ಗ್ರಾಮೀಣ ಭಾಗವಾದ ದಾಸನಪುರದಲ್ಲಿ 'ಗಿಣಿ' ಎಂದು ಬಳಸಿದರೆ ಜಾಲ ಭಾಗದಲ್ಲಿ 'ಸಿಲ್ಕುಲು' ಎಂದು ಬಳಸುತ್ತಿದ್ದಾರೆ. ಇದು ತೆಲುಗಿನಲ್ಲಿ 'ಚಿಲುಕ' ಎಂದು ಬಳಕೆಯಾಗುತ್ತಿದೆ. ಈ ರೀತಿಯಲ್ಲಿ ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ದ್ವಿಭಾಷಿಕತೆಯ ಪರಿಸರವು ನಿರ್ಮಾಣವಾಗಿದೆ.

ಜಾಲ ಭಾಗದ ಜನರಲ್ಲಿ ನ್ ಧ್ವನಿಯು ಮ್ ಅನುನಾಸಿಕವಾಗಿ ವ್ಯತ್ಯಾಸವಾಗಿ ಬಳಕೆಯಾಗುವುದು ಸಾಮಾನ್ಯವಾಗಿ ಕಾಣಿಸುತ್ತಿವೆ. ಉದಾ: **ನುಗ್ಗೆ>ಮುಗ್ಗೆ**ಯಾಗಿ, **ನುಲಿಕೆಕಾಯಿ>ಮುಲ್ಕೆಕಾಯಿ**ಯಾಗಿ ಬಳಕೆಯಾಗುವುದು. ಪದಾರಂಭದ **ನ್** ಧ್ವನಿಯು **ಮ್** ಧ್ವನಿಯಾಗಲು ತೆಲುಗಿನ **ಮುಗ್ಗೆ, ಮುಲಿಕ** ಪದ ಬಳಕೆಯು ಕಾರಣವಾಗಿದೆ. ಆದರೆ **ನುಲಿಕೆ** ಎಂಬುದು ತೆಲುಗು ಪದವಾದರೆ, ಅದಕ್ಕೆ ಕನ್ನಡದ **ಕಾಯಿ** ಪದ ಸೇರಿರುವುದು ಮುಖ್ಯವಾದ ಅಂಶವಾಗಿದೆ. ಜಾಲ ಭಾಗದಲ್ಲಿ 'ರ್' ಕಾರವು 'ಡ್' ಕಾರವಾಗಿ ಬದಲಾಗಿರುವುದನ್ನು ಕಾಣಬಹುದು. ಮತ್ತು ಆಡುಮಾತಿನಲ್ಲಿ 'ರ್' ಕಾರವು 'ಯ್' ಕಾರವಾಗಿಯೂ ಬದಲಾವಣೆಯಾಗುತ್ತಿದೆ. ಮತ್ತು ಸ್ವರಗಳ ಕಾರಣದಿಂದ 'ರ್' ವ್ಯಂಜನ ಬಳಕೆಯಲ್ಲಿ ಕೆಲವು ವ್ಯತ್ಯಾಸಗಳು

ಉಂಟಾಗಿರುವುದು ತಿಳಿಯುತ್ತದೆ. ಉದಾ: **ಕೂರಿಗೆ** ಎಂಬುದನ್ನು **ರ** ಮೂರ್ಧ ಧ್ವನಿಗೆ ಯಲ. ಮತ್ತು ಜಾಲ ಭಾಗದಲ್ಲಿ **ಡ್** ಮೂರ್ಧಧ್ವನಿಗೆ **ಗ್** ಕಂಠ್ಯಧ್ವನಿಯು ಸೇರಿಕೊಂಡು **(ಕೂರ್ಗೆ>ಕೂಡ್ಗೆ)** ಉಚ್ಚಾರವಾಗುತ್ತಿವೆ. ಪ್ರಶ್ನಾರ್ಥಕ ಪದ **ಯಾರಿಗೆ** ಎಂಬುದನ್ನು ದಾಸನಪುರಾದಿಯಲ್ಲಿ **ರ** ಧ್ವನಿ **ಗ** ವು ವಿಜಾತೀಯ ದ್ವಿತ್ವವಾಗಿ **ಎ** ಕಾರಾಂತ್ಯಗೊಂಡು ಬಳಕೆಯಾಗುತ್ತಿದೆ. ಆದರೆ ಜಾ. ಯಲ ದಲ್ಲಿ **ರ** ಮೂರ್ಧಧ್ವನಿಗೆ ಕಂಠ್ಯಧ್ವನಿ **ಕ** ವು ಸಂಕ್ಷೇಪವಾಗಿ ಸೇರಿಕೊಂಡು **ಅ** ಕಾರಾಂತ್ಯವಾಗಿ **(ರ್ಗೆ>ರ್ಕ)** ಬಳಕೆಯಾಗುತ್ತಿದೆ. ಇದು ಜಾಲ ಜನರ ಧ್ವನಿಯಲ್ಲಾಗುವ ಬದಲಾವಣೆಗಳಾಗಿವೆ.

"ಸಾಮಾಜಿಕವಾಗಿ ಕೆಳಕೂಲಿಕಾರ ವರ್ಗದ ಭಾಷಾ ಸಾಮರ್ಥ್ಯವು ಕೇವಲ ಸೀಮಿತ ವಲಯನ್ನು ಮಾತ್ರ ಒಳಗೊಂಡಿದ್ದರೆ, ಮಧ್ಯಮ ವರ್ಗದ ಮಕ್ಕಳು ಮೇಲ್ವರ್ಗ ಮತ್ತು ಕೆಳವರ್ಗದ ಎರಡು ಭಾಷಾವಲಯಗಳಲ್ಲಿ ಪರಿಚಿತರಾಗಿರುತ್ತಾರೆ. ತಂದೆ, ತಾಯಿ, ಮಗ, ಮಗಳು ಹೀಗೆ ಸಂದರ್ಭಕ್ಕೆ ತಕ್ಕಂತೆ ವಿದೇಯರಾಗಿ ಭಾಷೆಯನ್ನು ಬಳಸುವ ಕುಟುಂಬ ವ್ಯವಸ್ಥೆಯಿರುತ್ತದೆ."[೪] ಇವು ಭಾಷೆಯ ಭಿನ್ನತೆಯನ್ನು ಸೃಷ್ಟಿಸಲು ಕಾರಣವಾಗುತ್ತದೆ. ಇದರಂತೆ ಬೆಂಗಳೂರಿನ ಉತ್ತರ ತಾಲ್ಲೂಕಿನ ಜಾಲ ಭಾಗದಲ್ಲಿ ಭಿನ್ನತೆಯುಂಟಾಗುತ್ತಿವೆ. ಈ ರೀತಿಯ ಸಾಮಾಜಿಕ ನಿಯಮದಂತೆ ಬೆಂಗಳೂರು ಉತ್ತರ ತಾಲ್ಲೂಕಿನ ಜಾಲ ಭಾಗದಲ್ಲಿ ಉಳಿದ ಹೋಬಳಿಗಿಂತ ನಾಮಾಕೃತಿಮಾಗಳಲ್ಲಿ ಬಳಕೆಯಲ್ಲಿ ಗಮನಾರ್ಹವಾದ ವ್ಯತ್ಯಾಸಗಳು ಉಂಟಾಗುತ್ತಿವೆ. ಇಲ್ಲಿ ಪುರುಷ, ಲಿಂಗ, ವಚನಸೂಚಕ **ನ್** ಪ್ರತ್ಯಯವು ದ್ವಿತ್ವವಾಗಿ ಬಳಕೆಯಾಗಿದೆ. ತೆಲುಗಿನಲ್ಲಿ ಈ ಪ್ರತ್ಯಯವು **ಡ್** ಎಂದಾಗಿದ್ದು, ಜಾಲ ಭಾಗದ ಜನರಲ್ಲಿ ನಿಯತವಾಗಿ **ನ್** ಅಂತ್ಯವಾಗಿ ಬಳಕೆಯಾಗಿದೆ. **ಆತ್ನು. ಇತ್ನು, ಶೀನ್ನು, ಪೂಜಾರ್ನು** ಆಗಿ ಕಾಣಿಸಿಕೊಳ್ಳುತ್ತಿವೆ. ಇವು ಮಧ್ಯಮ ವರ್ಗದ ಹಿರಿಯರಲ್ಲಿ ಹೆಚ್ಚು ಕಾಣಿಸುತ್ತವೆ. ಜಾಲ ಭಾಗದಲ್ಲಿ ಮಧ್ಯಮವರ್ಗದ ಜನರು ಕನ್ನಡ ಮತ್ತು ತೆಲುಗು ಎರಡು ಸಮಾಜದಲ್ಲಿ ನಿಕಟ ಸಂಪರ್ಕವಿರುವುದು ಕಾಣಿಸುತ್ತದೆ. ಆದ್ದರಿಂದ ಇವರಲ್ಲಿ ತೆಲುಗು ಮತ್ತು ಕನ್ನಡ ಭಾಷೆಯ ಪದಗಳನ್ನು ಸಮಾನವಾಗಿ ಸ್ವೀಕಾರ ಮಾಡಿಕೊಂಡ ಬದಲಾವಣೆಗಳು ಕಾಣಿಸುತ್ತವೆ. ಪುಲ್ಲಿಂಗ ನಿರ್ದೇಶನವಾಚಿ **ವ್** ಧ್ವನಿಯ ಬದಲು **ತ್** ಧ್ವನಿಯ **(ಇವನು>ಇತ್ನು)** ಬಳಕೆಯಾಗುತ್ತಿದೆ. ತೆಲುಗಿನಲ್ಲಿ ಬಳಕೆಯಾಗುವ **ಉ** ಧ್ವನಿಯು ಅಂತ್ಯದಲ್ಲಿ ಬಳಕೆಯಾಗಿದ್ದು **ನ್** ಅನುನಾಸಿಕವು ದ್ವಿತ್ವವಾಗುತ್ತಿದೆ. ಪುಲ್ಲಿಂಗವಾಚಿಯಾದ **ನ್** ಕಾರ ಅನುನಾಸಿಕ ಧ್ವನಿಯು **ತ್** ಧ್ವನಿಯಾಗಿ **(ಇತ್ನು,ಆತ್ನು)** ಬದಲಾಗಿ ಬಳಕೆಯಾಗುತ್ತಿದೆ.

ಮಾನವವಾಚಕ ಪ್ರಕೃತಿಯಲ್ಲಿ ಕೆಲವು ಸಂದರ್ಭದಲ್ಲಿ **ಅ** ಕಾರಾಂತವು ನಪುಂಸಕ 'ಲ್' ವಾಗಿ ಬಳಕೆಯಾಗುತ್ತಿದೆ. ತೆಲುಗು ಭಾಷೆಯಲ್ಲಿ ನಾಮಪದಗಳಲ್ಲಿ ಅಂತ್ಯ **'ನ್'** ಪ್ರತ್ಯಯದ ಬಳಕೆಯು ಹೆಚ್ಚು

ಕಂಡುಬರುತ್ತವೆ. **(ಉನ್ಡು, ಅನ್ಡು, ವಾನ್ಡು)** ಅದರಂತೆ ತೆಲುಗಿನ ಪ್ರಭಾವದಿಂದ ಜಾಲ ಜನರಲ್ಲಿ **ನ್** ಕಾರದ ಬಳಕೆಯನ್ನು ಕಾಣಬಹುದು. ಆದರೆ ದಾಸನಪುರ ಭಾಗದಲ್ಲಿ ಹೆಚ್ಚು ಶಿಷ್ಟತೆಗೆ ಹತ್ತಿರವಾದ ಪದಬಳಕೆಯು ಕಂಡುಬರುತ್ತಿದೆ. ಕೆಲವು ಅಮಹತ್ ಪ್ರಕೃತಿಯಲ್ಲಿ ಬಳಕೆಯಾಗುವ ನಪುಂಸಕ ಪದಗಳು ಹೆಚ್ಚು ಪದಶಃ ವ್ಯತ್ಯಾಸವನ್ನು ತೆಲುಗಿನ ಪ್ರಭಾವದಿಂದ ಮಾಡಿಕೊಳ್ಳಲಾಗುತ್ತಿದೆ. ಉದಾ: ಜಾಲ ಭಾಗದ ದನಕಾಯುವ ಮಹಿಳೆಯರಲ್ಲಿ ಬೆಕ್ಕನ್ನು 'ಊನೆ'ಯೆಂದು, ಅಳಿಲನ್ನು 'ಉಡ್ತೆ' ಎಂದು ಭಿನ್ನತೆಯನ್ನು ಪಡೆಯುವ ಪದಗಳ ಪ್ರಯೋಗಗಳನ್ನು ಕಾಣಬಹುದು. ಇವು ಜಾಲ ಭಾಗದ ಕೆಲವು ಮೇಲ್ವರ್ಗದವರಲ್ಲಿ 'ಬೆಕ್ಕು', 'ಅಳುವ' ಎಂದು ಬಳಕೆಯಲ್ಲಿವೆ. ಮದ್ಯಮವರ್ಗದಲ್ಲಿ ಬೆಕ್ಕನ್ನು 'ಶೀಬಿ' ಎಂಥಲೂ ಪ್ರಯೋಗಿಸುವುದು ಅಲ್ಲಲ್ಲಿ ಕಾಣಬಹುದು. ಪುಲ್ಲಿಂಗ ವಾಚಿ **ಗಾರ/ದಾರ** ಎಂಬುದು ದಾ,ಹೆ,ಯ ಭಾಗದಲ್ಲಿ ಶಿಷ್ಟತೆಗೆ ಹತ್ತಿರವಾದಂತೆ ಬಳಕೆಯಾಗುತ್ತಿದ್ದರೆ, ಜಾಲಭಾಗದಲ್ಲಿ **ಗಾರ್ಲು** ಎಂದು ಬಳಕೆಯಾಗುತ್ತಿದೆ. ತೆಲುಗಿನಲ್ಲಿ **ಗಾರ್ಲು** ಪದಬಳಕೆಯಿದೆ. ಆ ಪದ ಪ್ರಭಾವವು ಜಾಲದ ಜನರಲ್ಲಿ ಕಂಡುಬರುತ್ತಿದೆ. ಈ ಪದಗಳು ತೆಲುಗು ಕನ್ನಡ ಭಾಷೆಯನ್ನು ಅರಿತಂತಹ ಕೂಲಿ ಮಾಡುವ ಸ್ತ್ರೀ ಪುರುಷರಿಬ್ಬರಲ್ಲೂ ಬಳಕೆಯಾಗುತ್ತಿವೆ. ಇವು ಜಾಲ ಭಾಗದಲ್ಲಿ ಕೆಲವೆಡೆ ಗೌರವ ಸೂಚಕವಾಗಿಯೂ ಬಳಕೆಯಲ್ಲಿವೆ. ಇಂತಹ ಬದಲಾವಣೆಗೆ ಕಾರಣ ಆ ಭಾಗದಲ್ಲಿ ತೆಲುಗು ಮಾತನಾಡುವವರು ಹೆಚ್ಚಾಗಿರುವುದಾಗಿದೆ.

ಬೆಂಗಳೂರು ಗ್ರಾಮೀಣ ಭಾಗದ ಜಾಲ ಜನರ ಆಡುನುಡಿಯಲ್ಲಿ ಕೆಲವು ಜೀವಾರೋಪಿತ ನಾಮರೂಪಗಳಲ್ಲಿ ಇ ಕಾರದ ಬಳಕೆಯಿದೆ. ಕೆಲವು **ಅ** ಕಾರಾಂತ್ಯವಾಗಿ ಜಾಲ ಭಾಗದಲ್ಲಿ ಬಳಕೆಯಲ್ಲಿವೆ. ಶಿಷ್ಟ **ಹ್** ಕಾರವು ದಾಸನಪುರ ಭಾಗಗಳಲ್ಲಿ **ವ್** ಕಾರವಾಗಿ ಜಾಲ ಭಾಗದಲ್ಲಿ **ಉ (ಹುಲಿ>ವುಲಿ>ಉಲಿ)** ಕಾರವಾಗುತ್ತಿದೆ. ಆಡುಮಾತಿನ ಭಾಷಾ ಬಳಕೆಯಲ್ಲಿ ಮಹಾಪ್ರಾಣ **ಹ್** ಕಾರ ವ್ಯಂಜನವು ಸ್ವರವಾಗುವ ಪ್ರಕ್ರಿಯೆಯು ಸಾಮಾನ್ಯವಾಗಿ ನಡೆಯುತ್ತಿದೆ. ಆದರೆ ಅದರ ಪ್ರಮಾಣವು ಜಾಲ ಭಾಗದಲ್ಲಿ ಹೆಚ್ಚಾಗಿರುವುದನ್ನು ಕಾಣಬಹುದು. ಜಾಲ ಭಾಗದಲ್ಲಿ ಕೆಲವು ಪ್ರಾಣಿವಾಚಿಗಳ ಮೇಲೆ ತೆಲುಗಿನ ಪ್ರಭಾವವನ್ನು ಕಾಣಬಹುದು. ತೆಲುಗಿನ (ಗಿಳಿ) **'ಚಿಲುಕ'**ವು **ಸಿಲ್ಕುಲು/ಶಿಲ್ಕುಲು** ಎಂದು ಬಳಕೆಯಾಗುತ್ತಿದೆ. ಜಾಲ ಜನರಲ್ಲಿ ಚ್ ಕಾರದ ಬದಲು ಸ್/ಶ್ ಕಾರವು ಬದಲಾಗಿ ಬಳಕೆಯಾಗುವುದು ಕಾಣಬಹುದು. **ಲ್** ಕಾರವು ತೆಲುಗಿನಲ್ಲಿ ಅಮಹತ್ ರೂಪದಲ್ಲಿ ಬಳಕೆಯಾಗುವ ಪ್ರತ್ಯಯವಾಗಿದೆ. ಜಾಲ ಭಾಗದ ಜನರು ತೆಲುಗು ಭಾಷಿಕರೊಡನೆ ವೃತ್ತಿಯ ಪರಿಸರದಲ್ಲಿ ಇಂತಹ ಸಾಕಷ್ಟು ವಿಭಿನ್ನ ಪದಗಳ ಪ್ರಯೋಗಗಳು ಕಾಣುತ್ತಿವೆ. ಹೀಗೆ ಹಲವು ಭಿನ್ನಬಳಕೆಗೆ ಔದ್ಯೋಗಿಕ ವಲಯದಲ್ಲಿ ತೆಲುಗರು ಮತ್ತು ಕನ್ನಡ ಭಾಷಿಕರ ಸಂಪರ್ಕದಿಂದ ಉಂಟಾಗಿವೆ.

ಈ ಬಾಕ್ಲು, ವಾಕ್ಲು, ಅದ್ದ, ಅನ್ಗು, ಗುಡ್ಡ ಮುಂತಾದ ಧ್ವನಿವ್ಯತ್ಯಾಸಗಳು ತೆಲುಗು ಭಾಷೆಯ ಪ್ರಭಾವದಿಂದ ಕನ್ನಡ ಪ್ರದೇಶವಾದ ಜಾಲ, ಯಲಹಂಕ ಭಾಗದಲ್ಲಿ ಉಂಟಾಗುತ್ತಿದೆ. ಈ ಭಾಗದಲ್ಲಿ ಸ್ವರ ಮತ್ತು ವ್ಯಂಜನಗಳ ಬದಲಾವಣೆಯನ್ನು ಗುರುತಿಸಬಹುದು. ಸ್ವರ ಮತ್ತು ವ್ಯಂಜನಗಳ ಬದಲಾವಣೆಯಲ್ಲಿ ಆಡುಮಾತಿನ ಸೌಲಭ್ಯಾಕಾಂಕ್ಷಿಯ ನೆಲೆ ಇದ್ದರೂ(ಅಂದರೆ ವ್ಯಂಜನವು ಸ್ವರವಾಗುವ ಕ್ರಿಯೆ), ಈ ಸೌಲಭ್ಯಾಕಾಂಕ್ಷೆಯು ತೆಲುಗು ಭಾಷೆಯ ಸ್ವರೂಪಕ್ಕೆ ಅನುಗುಣವಾಗಿ ವ್ಯಂಜನದಲ್ಲಿ ಮತ್ತು ಸ್ವರದಲ್ಲಿ ವ್ಯತ್ಯಾಸಗೊಳ್ಳುವ ಪ್ರಕ್ರಿಯೆ ಗಮನಾರ್ಹ ಅಂಶವಾಗಿದೆ.

"ಭಾಷೆಯ ಸಾಮಾಜಿಕ ಚಹರೆಗಳನ್ನು ವ್ಯಕ್ತಗೊಳಿಸುವಲ್ಲಿ ಮುಖ್ಯವಾದುದು ಗೌರವ ಸೂಚಕ ನುಡಿಗಳ ಬಳಕೆ. ಪರಸ್ಪರ ಗೌರವ ಸೂಚಿಸಲು ಭಾಷೆಯಲ್ಲಿ ನಿರ್ದಿಷ್ಟ ರೂಪಗಳಿರುತ್ತವೆ. ಸಂಬೋಧನಾ ಮಾದರಿಗಳು ಬಹುವಚನಗಳ ಬಳಕೆಯಲ್ಲಿ ವ್ಯಕ್ತವಾಗುತ್ತವೆ. ಗೌರವ ಸೂಚನೆಗೆ ಬಳಕೆಯಾಗುವ ಸಂದರ್ಭ, ಪ್ರಯೋಗಿಸುವ ಮತ್ತು ಸ್ವೀಕರಿಸುವ ವ್ಯಕ್ತಿಗಳನ್ನು ಅವಲಂಬಿಸಿ ವಿಭಿನ್ನ ಭಾಷಾರೂಪಗಳು ಪ್ರಯೋಗಗೊಳ್ಳುತ್ತವೆ. ಇವು ವ್ಯಕ್ತಿಗಳ ನಡುವಿನ ಅಂತರ, ಸಾಮೀಪ್ಯ, ವಯಸ್ಸು, ಲಿಂಗ, ಜಾತಿ, ರಕ್ತಸಂಬಂಧ, ಧಾರ್ಮಿಕ ಸ್ಥಾನಮಾನ ಇತ್ಯಾದಿ ಅಂಶಗಳಿಂದ ಪ್ರೇರೇಪಿತವಾಗುವವು"[೫] "ಕನ್ನಡದಲ್ಲಿ ವಯಸ್ಸಿನ ಅಂತರ ನಿರ್ವಹಣೆಗೆ ಹಿರಿಯರಿಗೆ ಗೌರವ ಸೂಚಕ ಬಹುವಚನ ರೂಪಗಳನ್ನು ಉಲ್ಲೇಖ ಮತ್ತು ಸಂಬೋಧನಾ ಸಂದರ್ಭಗಳಲ್ಲಿ ಬಳಸುತ್ತಾರೆ. ಕಿರಿಯರಿಗೆ ಏಕವಚನವನ್ನು ಬಳಸುತ್ತಾರೆ. ಹಾಗೆಯೆ ಜಾತಿ ಶ್ರೇಣಿಕರಣದಲ್ಲಿ ವಯಸ್ಸಿಗಿಂತ ಹೆಚ್ಚಾಗಿ ಆ ಜಾತಿಯ ಸಾಮಾಜಿಕ ಶ್ರೇಣಿ ಮುಖ್ಯ ಪಾತ್ರ ವಹಿಸುತ್ತದೆ."[೬] ಈ ನಿಯಮದಂತೆ ಬೆಂಗಳೂರು ಗ್ರಾಮೀಣ ಭಾಗದ ಜನರ ಆಡುನುಡಿಯಲ್ಲಿ ನಾಮ ಮತ್ತು ಸರ್ವನಾಮಗಳಲ್ಲಿ ಬಹುವಚನ ಪ್ರತ್ಯಯಗಳು ಹಲವು ರೂಪಗಳಲ್ಲಿ ಬಳಕೆಯಾಗುತ್ತವೆ. ಬಹುವಚನ ಪ್ರತ್ಯಯಗಳಾದ **ಗಳು, ಅರು**>**ರು ಅಂದಿರು**>**ದ್ರು, ಇರು**>**ಒರ್, ಎರ್**>**ಓರು, ಗೊಳು**>**ಗ್ಳು, ಗ್ಲು, ಲು** ಎಂಬಿತ್ಯಾದಿ ಪ್ರತ್ಯಯಗಳ ಬಳಕೆಯನ್ನು ಮಾಡುತ್ತಿದ್ದಾರೆ. (**ಅಗಸರು**> **ಅಗುಸ್ರ** > **ಅಕ್ಸ್ರ, ಮನುಷ್ಯರು** > **ಮನುಸ್ರು** > **ಮನುಶ್ರು, ಹುಡುಗರು** > **ಹುಡುಗ್ರು** > **ಉಡುಗ್ರು. ಹುಡುಗಿಯರು** > **ಹುಡ್ಗೀರು** > **ಉಡ್ಗೀರು**) ಪುಲ್ಲಿಂಗ ಮತ್ತು ಸ್ತ್ರೀಲಿಂಗ ಬಹುವಚನ ಪ್ರತ್ಯಯ **ಅಂದಿರು** ಎಂಬ ಶಿಷ್ಟರೂಪವು ದಾಸನಪುರಾದಿ ಭಾಗಗಳಲ್ಲಿ **ಅಂದ್ರು/ಏರ್** ಎಂದು ಬಳಕೆಯಾಗುತ್ತಿದೆ. ಜಾಲದಲ್ಲಿ **ಓರ್** ಎಂದು ಬಳಕೆಯಾಗುತ್ತಿದೆ. ಅನುಸ್ವಾರದ ಬದಲು ತೆಲುಗಿನಲ್ಲಿ **ನ್** ಅನುನಾಸಿಕಗಳ ಬಳಕೆಯಾಗುವುದು. ಜಾಲ ಭಾಗದಲ್ಲಿ **ದ್** ಕಾರವು **ನ್** ಕಾರವಾಗಿ **ಒರ್** ಎಂದು ಬಳಕೆಯಾಗುತ್ತಿದೆ. **ಅಂದಿರು** ಎಂಬ ಪ್ರತ್ಯಯವು ಸಂಬಂಧಸೂಚಕ ಪದಗಳಲ್ಲಿ ಬಳಕೆಯಾಗುವುದು. **ಉದಾ: ಅಣ್ಣಂದಿರು** >**ಅಣ್ದೇರು/ಅಣ್ಣೋರು. ತಮ್ಮಂದಿರು** > **ತಮ್ನೋರು. ಮಾವಂದಿರು** > **ಮಾವ್ನೋರು. ಅತ್ತೆಯಂದಿರು**>**ಅತ್ಯೋರು. ತಂಗಿಯಂದಿರು** > **ತಂಗ್ಯೋರು**

ಎಂಬ ವ್ಯತ್ಯಾಸವಾಗಿ ಬಳಕೆಯಾಗಿವೆ. ಸಂಬಂಧಸೂಚಕಗಳಲ್ಲಿ ಬಳಕೆಯಾಗುವ **ಅಂದಿರು** ಎಂಬ ಬಹುವಚನವು ಜಾಲ ಭಾಗದಲ್ಲಿ **ಓರ್** ಎಂದು ಮತ್ತೆ ಕೆಲವರಲ್ಲಿ **ಇರ್/ಈರ್** ಆಗಿ ಬಳಕೆಯಾಗುತ್ತದೆ. ತೆಲುಗು ಭಾಷೆಯಲ್ಲಿ ನಪುಂಸಕಲಿಂಗ ಬಹುವಚನ ಪ್ರತ್ಯಯವು ಕ್ರಿಯಾಪದ ಸೂಚಕವಾದ **ಅ** ಕಾರ ಪ್ರತ್ಯಯವು **ಇ** ಕಾರವಾಗಿ ಪರಿವರ್ತನೆಯಾಗಿ ಬಳಕೆಯಾಗುತ್ತವೆ. ಈ ಪದಗಳು ಮಧ್ಯಮ ವರ್ಗದ ಮಕ್ಕಳಲ್ಲಿ ಬಳಕೆಯಾಗುತ್ತಿವೆ. ಜಾಲ ಭಾಗದಲ್ಲಿ ಮಧ್ಯಮ ವರ್ಗದ ಮಕ್ಕಳು ತೆಲುಗು ಮತ್ತು ಕನ್ನಡ ಎರಡೂ ಭಾಷಿಕ ವ್ಯವಸ್ಥೆಗೆ ಸೇರಿದವರಾಗಿದ್ದು, ಇವರು ಹಿರಿಯರಿಗೆ ಗೌರವವನ್ನು ಕೊಡಬೇಕು, ದೊಡ್ಡವರಿಗೆ ವಿದೇಯರಾಗಿರಬೇಕು ಎಂಬ ಸಾಮಾಜಿಕ ನಿಯಂತ್ರಣಗಳು ಅವರ ಭಾಷಿಕ ವಲಯವನ್ನು ನಿಯಂತ್ರಿಸುತ್ತಿರುತ್ತವೆ. ಅವು ಮಧ್ಯಮವರ್ಗದ ಮಕ್ಕಳಲ್ಲಿ ಕಾಣಿಸುತ್ತವೆ. ಅದರಲ್ಲೂ ತೆಲುಗು ಪದವನ್ನು ಕನ್ನಡವೇ ಎಂಬತೆ ಈ ಜನರು ಬಳಸುತ್ತಾರೆ. ಅಂತಹ ಬದಲಾವಣೆಗಳು ಜಾಲ ಭಾಗದಲ್ಲಿ ಸಾಕಷ್ಟು ಗೋಚರವಾಗುತ್ತಿವೆ. ಉದಾ: **ಅಣ್ಣಂದಿರು** > **ಅಣ್ಣಂದ್ರು** > **ಅಣ್ದೀರು/ಅಣ್ಣೋರು. ತಮ್ಮಂದಿರು** > **ತಮ್ಮಂದ್ರು** > **ತಮ್ದೀರು, ಮಾವಂದಿರು** > **ಮಾವಂದು** > **ಮಾವ್ದೀರು** ಇವುಗಳ ಬಳಕೆಯಲ್ಲೂ ವೈವಿಧ್ಯತೆಯಿರುವುದನ್ನು ಕಾಣಬಹುದು.

ಬೆಂಗಳೂರು ಗ್ರಾಮೀಣ ಭಾಗವಾದ ದಾ.ಹೆ.ಯ ಭಾಗದಲ್ಲಿ ಚತುರ್ಥಿ ವಿಭಕ್ತಿಯಾದ **ಗೆ/ಕೆ** ಯು ಮಾನವವಾಚಿ ಮತ್ತು ಪ್ರಾಣಿವಾಚಿಗಳಿಗೆ **ಗೆ (ಇಗೆ)** ಎಂದು ಬಳಕೆಯಾಗುತ್ತವೆ. ಪರಿಸರವಾಚಿ ಏಕವಚನ ಪದಗಳಲ್ಲಿ **ಕೆ(ಅಕ್ಕೆ)** ಎಂದು ಬಳಕೆಯಾಗುತ್ತಿವೆ. ಅದು ದಾಸನಪುರಾದಿ ಭಾಗದಲ್ಲಿ ಸೌಲಭ್ಯವಾಗಿ ವರ್ತಿಸಿ ಬಳಕೆಯಾಗುತ್ತಿದೆ. ಆದರೆ ಜಾಲ ಭಾಗದಲ್ಲಿ **ಗೆ/ಕೆ** ಜಾಗದಲ್ಲಿ **ಕ್** ವು ಬಳಕೆಯಾಗುತ್ತಿದೆ. ಕೆಲವೆಡೆ ದ್ವಿತ್ವವಾಗಿ **ಕ್** ವು ಸೇರುತ್ತಿದೆ. ತೆಲುಗಿನಲ್ಲಿ **ಕ್** ಧ್ವನಿಯು ಸಂಪ್ರದಾನ ಕಾರಕವಾಗಿ ಪೂರ್ವಸ್ವರ ಇ ಕಾರಾಂತವಾಗಿ **ಕಿ** ಎಂದು ಅಥವಾ **ಉ** ಕಾರಾಂತವಾಗಿ **ಕು** ಎಂದು ಬಳಕೆಯಾಗುತ್ತಿದೆ. ಜಾಲದಲ್ಲಿ **ಅ** ಕಾರಾಂತವಾಗಿ ಬಳಕೆಯಾಗುವುದು. ಉದಾ: **ರಾಜನಿಗೆ**>**ರಾಜಂಗೆ**>**ರಾಜುಂಕ. ರಾಜರಿಗೆ**>**ರಾಜ್ರೆಗೆ**> **ರಾಜುರ್ಕ. ಗಿಡಕ್ಕೆ**>**ಗಿಡುಕ್ಕೆ** >**ಗಿಡುಕ್ಕ/ ಗಿಡ್ಕ.** ಇಲ್ಲಿ **ಎ (ಗಿಡಕ್ಕೆ)** ಕಾರವು **ಅ (ಗಿಡ್ಕ)** ಕಾರವಾಗಿ ಬಳಕೆಯಾಗುತ್ತಿದೆ. ಇವುಗಳು ಜಾಲ ಭಾಗದ ಕೆಳವರ್ಗದವರಲ್ಲಿ ಹೆಚ್ಚು ಬದಲಾವಣೆಯನ್ನು ಉಂಟುಮಾಡುತ್ತಿವೆ. ಕೆಳವರ್ಗದವರಲ್ಲಿ ಹೆಚ್ಚು ತೆಲುಗು ಪದಗಳು ಕನ್ನಡದ ಜೊತೆ ಸೇರಿ ಬಳಕೆಯಾಗುತ್ತಿವೆ.

ಬೆಂಗಳೂರು ಗ್ರಾಮೀಣ ಜನರ ಆಡುಮಾತಿನಲ್ಲಿ ಬಳಕೆಯಾಗುವ ಅನುಸರ್ಗಾವ್ಯಯಗಳು ಜಾಲ ಜನರ ಆಡುಮಾತಿನಲ್ಲಿ **ಸಲ್ವಾಗಿ, ಸಂಗ್ಟ, ತನ್ಕ, ವರ್ಗೆ, ಒಳ್ಗೆ** ಎಂದು ಮೇಲ್ವರ್ಗದವರಲ್ಲಿ ಬಳಕೆಯಾದರೆ,

ಕೆಳವರ್ಗದವರಲ್ಲಿ **ಸಲ್ಕ, ಸಂಟ, ತಾವ್ಕ, ವರ್ಕ, ಒಳ್ಕ** ಎಂದು ವ್ಯತ್ಯಸ್ಥವಾಗಿ ಬಳಕೆಯಾಗುತ್ತಿವೆ. ಅವರಾಡುವ ಮಾತಿನಲ್ಲಿ **ಗ್** ಧ್ವನಿಯ ಬದಲು **ಕ್** ಧ್ವನಿಯೇ ಹೆಚ್ಚು ಬಳಕೆಯಾಗುತ್ತಿದೆ. ಇದು ತೆಲುಗಿನ ಪ್ರಭಾವವಾಗಿದೆ. ಅಲ್ಲಿ ತೆಲುಗಿನ ಭಾಷಿಕರು ಇರುವುದರಿಂದ ಈ ವ್ಯತ್ಯಾಸಗಳಾಗಿವೆ. ಮೇಲ್ವರ್ಗದವರು ಬಳಕೆಯಲ್ಲಿ ಹೆಚ್ಚು ಕನ್ನಡವನ್ನೆ ಬಳಸುತ್ತಿದ್ದಾರೆ. ಆರ್ಥಿಕವಾಗಿ ಹಿಂದುಳಿದು ಕೂಲಿಯನ್ನು ಮಾಡುವ ಸಂದರ್ಭದಲ್ಲಿ ಈ ಪದ ಪ್ರಯೋಗಗಳು ಬಳಕೆಯಾಗಿವೆ. ಇಲ್ಲಿ ಪ್ರಧಾನವಾದ ಕನ್ನಡ ಭಾಷೆಯನ್ನು ಮೇಲ್ವರ್ಗದವರು ಬಳಸುತ್ತಿದ್ದರೆ, ಕೆಳವರ್ಗದವರ ಮಾತಿನಲ್ಲಿ ಹೆಚ್ಚು ತೆಲುಗು ಭಾಷೆಯ ಪದಗಳು ಸೇರಿಕೊಂಡು ಬಳಸುತ್ತಿದ್ದಾರೆ. ಆದರೆ ಇಲ್ಲಿ ತೆಲುಗು ಭಾಷೆಯನ್ನು ಅದೀನ ಭಾಷೆಯೆಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಮಧ್ಯಮವರ್ಗದವರ ಆಡುಮಾತಿನಲ್ಲಿ ಹೇರಳವಾಗಿ ತೆಲುಗು ಪ್ರಭಾವಿತ ಪದಗಳು ದೊರೆಯುವುದನ್ನು ಕಾಣಬಹುದು. ಕೆಲವೆಡೆ ತೆಲುಗಿನವರಲ್ಲಿ ಕನ್ನಡವು ಸಮಾನವಾಗಿ ಸ್ವೀಕಾರವಾಗುವುದು ಕ್ಷೇತ್ರಾಧ್ಯಯನದಲ್ಲಿ ಕಂಡುಬಂದಿವೆ. ಹೀಗೆ ಜಾಲ ಭಾಗದಲ್ಲಿ ವ್ಯತ್ಯಾಸಗಳು ಮಾರ್ಪಾಟ್ಟಿವೆ. ಅದಲ್ಲದೆ. ದಂತ್ಯ ವರ್ಣ **ತ್** ಕಾರವು ಅದೇ ವರ್ಗದ ಅನುನಾಸಿಕವನ್ನು ಬಳಸುವುದರ ಮೂಲಕ ಪದೋಚ್ಚಾರವಾಗುತ್ತಿದೆ. ಜಾಲ ಭಾಗದಲ್ಲಿ ಅದೇ ರೀತಿ **ಡ್** ಕಾರವು **ಟ್** ಕಾರವಾಗಿ **(ಸಂಗಡ>ಸಂಟ),** ಮತ್ತು **ನ್** ಕಾರವು **ವ್** ಕಾರವಾಗಿ **(ತನಕ>ತಾವ್ಕ)** ವ್ಯತ್ಯಸ್ಥಗೊಳಿಸಿ ಬಳಸುತ್ತಿದ್ದಾರೆ. ಜಾಲ ಭಾಗದಲ್ಲಿ ಬಳಕೆಯಾಗುವ **ಡ್>ಟ, ನ್>ವ್** ಕಾರಗಳ ಬಳಕೆಯನ್ನು ಕಾಣಬಹುದು. ಅವು ತೆಲುಗಿನ ಬದಲಾವಣೆಯ ಸ್ವರೂಪದಂತೆ ಕಂಡು ಬರುತ್ತಿವೆ, ಸಮುಚ್ಚಯ ಅವ್ಯಯಗಳು ಬೆಂಗಳೂರು ಗ್ರಾಮೀಣ ಭಾಗವಾದ ದಾಸನಪುರಾದಿ ಭಾಗದಲ್ಲಿ ಶಿಷ್ಟತೆಯನ್ನು ಅನುಸರಿಸಿ ಆಡುಮಾತಿನ ರೂಪದಲ್ಲಿ **ಯಾಕಂದ್ರೆ, ಆದ್ರೆ, ಅಲ್ದೇ, ಆಮೇಕೆ, ಇಲ್ವಾ** ಎಂದು ಬಳಕೆಗಳಿವೆ. ಅವು ಜಾಲ ಭಾಗದಲ್ಲಿ **ಯಾಕ, ಆದ್ರ, ಅಲ್ದಾ, ಆಮ್ಯಾಕ, ಇಲ್ವಾ** ಎಂಬ ಪದ ಬಳಕೆಯನ್ನು ವ್ಯತ್ಯಾಸಗೊಳಿಸಿ ಬಳಸುತ್ತಿದ್ದಾರೆ. ಜಾಲ ಭಾಗಗಳಲ್ಲಿ **ಏ** ಕಾರಾಂತವು **ಅ** ಕಾರಾಂತವಾಗಿ ಬಳಕೆಯಾಗುತ್ತಿವೆ. ಕೆಲವೆಡೆ ದೀರ್ಘ **ಏ** ಕಾರವು ದೀರ್ಘ **ಆ** ಕಾರವು ಬಳಕೆಯಾಗುತ್ತಿದೆ. ಇದು ಆ ಭಾಗದಲ್ಲಿ ತೆಲುಗು ಜನರ ಸಂಪರ್ಕದಿಂದ ಭಿನ್ನವಾಗಿ ಬಳಕೆಯಾಗುತ್ತಿದೆ. ಸಾಮಾನ್ಯಾವ್ಯಯಗಳು ಶಿಷ್ಟಪದಗಳನ್ನೇ ಆಡುಮಾತಿನ ರೂಪದಲ್ಲಿ ಬೆಂಗಳೂರು ಗ್ರಾಮೀಣ ಜಾಲ ಹೊರತುಪಡಿಸಿ ಇತರ ಭಾಗದಲ್ಲಿ ಬಳಕೆಯಾಗುತ್ತಿದ್ದರೆ, ಜಾಲ ಭಾಗದಲ್ಲಿ ಭಿನ್ನವಾಗಿ ಬಳಕೆಯಾಗುತ್ತಿವೆ. ದಾ.ಹೆ, ಭಾಗದಲ್ಲಿ **ಆಮ್ಯಾಲೆ, ಮೊದ್ಲೆ, ಎಷ್ಟ್ಸಾರಿ, ಯಾವಾಗ್ಲು, ಎಲ್ರಿಗೂ. ಮೆಲ್ಲಗೆ** ಎಂಬ ಅವ್ಯಯಗಳು ಬಳಕೆಯಾಗುತ್ತಿವೆ. ಜಾಲ ಭಾಗದಲ್ಲಿ **ಆಮೇಕ. ಮದ್ಲೆ, ಎಷ್ಟ್ಕಿತ, ಯಾಪ್ಡು, ಎಲ್ಲೂಕ್ಕ, ಬಿಮ್ಕೆ, ಮೆಲ್ಕ** ಎಂಬ ಅವ್ಯಯಗಳ ಬಳಕೆಯಿದೆ. ಬೆಂಗಳೂರು ಗ್ರಾಮೀಣಿಗರಾದ ಜಾಲ ಜನರಾಡುವ ಮಾತಿನಲ್ಲಿ **ಗ್** ಧ್ವನಿಯ ಬದಲು ಕ್ ಧ್ವನಿಯೇ ಹೆಚ್ಚು ಬಳಕೆಯಾಗುತ್ತಿದೆ. ಇದು ತೆಲುಗಿನ ಪ್ರಭಾವವಾಗಿದೆ. ಆ ಭಾಗದಲ್ಲಿ ತೆಲುಗಿನ

ಭಾಷಿಕರು ಇರುವುದರಿಂದ ಈ ವ್ಯತ್ಯಾಸಗಳಾಗಿವೆ. ಜಾಲ ಭಾಗದ ಬಿಲ್ಲಮಾರನಹಳ್ಳಿಯಲ್ಲಿ ಮಕ್ಕಳು ಶಾಲೆಗೆ ಹೋಗುವ ಸಂದರ್ಭದಲ್ಲಿ ವ್ಯಕ್ತವಾದ ಮಾತಿನ ದಾಟಿಯಲ್ಲಿ ಬಳಕೆಯಾಗುವ ಅನುಸರ್ಗಾವ್ಯಯವು ಇಂತಿವೆ: ಒಬ್ಬ ಕೆಳವರ್ಗದ ಹುಡುಗನು ಪಕ್ಕದೂರಿಗೆ ಶಾಲೆಗೆ ಹೋಗುವಾಗ ಮತ್ತೊಬ್ಬ ನನ್ನ ಜೊತೆ ಬಾ ಎಂದು ಕರೆಯುವ ಸಂದರ್ಭ– ಹುಡುಗನು "ನಾನ್ ಅವ್ನ **ಸಂಟ** ವೊಗಲ್ಲ. ಬಾಲುನ್ **ಸಂಟ** ಓತೀನೀ ಅವ್ನ್ ಬರೊ**ವರ್ಕ** ಬರೊಲ್ಲಾ. ನೆನ್ನೆ ಅವ**ನೊಸ್ಗ** ಕಾದ್ ಕುಂತ್ರೆ ಬುಟ್ಟ್ ಬಂದ್ನು. ನಮ್ಮ್ ಅಮ್ನು ಬೈದ್ಲು ಗೊತ್ತಾ" "ಯೇ, ನನ್ತಾವ್ಕ ಅವನು ಬರಲ್ಲಾ ಬಿಡ್ರೊ" ಎಂದು ಬಳಕೆಯಾಗುವುದನ್ನು ಕಾಣಬಹುದು. ಜಾಲ ಭಾಗದಲ್ಲಿ ಬಳಕೆಯಾಗುವ **ಕಿತ(ಬಾರಿ), ಯಾಪ್ಡು, ಎಲ್ಕು** ಮುಂತಾದ ಪದಗಳು ತೆಲುಗರ ಸಂಪರ್ಕದಿಂದ ಬದಲಾದವುಗಳಾಗಿವೆ. ಇವು ಹೆಚ್ಚು ವಯಸ್ಕರಲ್ಲಿ ಬಳಕೆಯಾಗುತ್ತಿವೆ. ಇವೆಲ್ಲವೂ ಕನ್ನಡದ ಭಾಷೆಯ ಮೇಲೆ ಪರಿಣಾಮವನ್ನು ಉಂಟು ಮಾಡುತ್ತಿವೆ.

"ಸಾಮಾಜಿಕ ಅನನ್ಯತೆ ಮತ್ತು ಅಂತರ ನಿರ್ವಹಣೆಯಲ್ಲಿ ಒಂದೇ ಭಾಷೆಯ ಭಿನ್ನ ರೂಪಗಳು ಬಳಕೆಯಾದಂತೆ ಒಂದೇ ಸಮಾಜದಲ್ಲಿ ಬೇರೆ ಬೇರೆ ಭಾಷೆಗಳು ಬಳಕೆಯಾಗುತ್ತವೆ. ಇದು ದ್ವಿಭಾಷಿಕ ಸಮಾಜಗಳಲ್ಲಿ ಹೆಚ್ಚು ಸಾಮಾಜಿಕ ಸಂದರ್ಭವನ್ನು ಒಳಗೊಂಡಿರುತ್ತವೆ."[೭] ಹೀಗೆ ಬೆಂಗಳೂರು ಗ್ರಾಮೀಣ ಜನರಲ್ಲಿ ಅವರಾಡುವ ಆಡುನುಡಿಯ ಭಾಷಾ ಬಳಕೆಯ ಸ್ವರೂಪದಲ್ಲಿ ಭಿನ್ನವಾಗಿದ್ದು ಅಧ್ಯಯನದ ಮಹತ್ವವನ್ನು ಪಡೆದಿವೆ.

೬.೨ ಕನ್ನಡ ಭಾಷೆಯ ಮೇಲೆ ದ್ರಾವಿಡದ ಇತರ ಭಾಷೆಯ ಪ್ರಭಾವದ ಸ್ವರೂಪ:

ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಜನರ ಆಡುಮಾತನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಕನ್ನಡ ಭಾಷೆಯ ಮೇಲೆ ಇತರೆ ದ್ರಾವಿಡ ಭಾಷೆಗಳಾದ ತೆಲುಗು ಮತ್ತು ತಮಿಳಿನ ಪ್ರಭಾವವಿರುವುದು ಜಾಲ ಮತ್ತು ಯಲಹಂಕ ಭಾಗಗಳಲ್ಲಿ ಕಂಡುಬರುತ್ತಿದೆ. ದ್ರಾವಿಡ ಭಾಷಾ ಮೂಲವಾದ ಕನ್ನಡ ಸೋದರ ಭಾಷೆಗಳಾದ ತೆಲುಗು, ತಮಿಳು ಭಾಷೆಗಳು ಪರಸ್ಪರ ತನಗರಿವಿಲ್ಲದಂತೆ ಪ್ರಭಾವವನ್ನು ಬೀರುತ್ತಿವೆ. "ಒಂದು ಸಮಾಜದವರ ಭಾಷೆಯ ಮೇಲೆ ಅಲ್ಲಲ್ಲಿಯ ಪ್ರಾದೇಶಿಕ ಕನ್ನಡಗಳ ಅಥವಾ ಇತರ ಸಮಾಜಗಳ ಕನ್ನಡಗಳ ಪ್ರಭಾವಗಳು ಉಂಟಾಗಿ ಬಂದೇ ಸಮಾಜದ ಭಾಷೆ ಬೇರೆ ಬೇರೆ ದಿಕ್ಕಿನಲ್ಲಿ ಬದಲಾಗುತ್ತಿರುವುದು. ಇದರಿಂದ ಸಾಮಾಜಿಕ ವ್ಯತ್ಯಾಸವು ಹೆಚ್ಚು ಸ್ಪಷ್ಟವಾಗಿ ತೋರುತ್ತದೆ."[೮] ಈ ನಿಟ್ಟಿನಲ್ಲಿ ಕನ್ನಡ ಭಾಷೆಯ ಮೇಲೆ ತೆಲುಗು ಭಾಷೆಯ ಪ್ರಭಾವವು ಬೆಂಗಳೂರು ಉತ್ತರ ಭಾಗದ ಗ್ರಾಮೀಣ ಪ್ರದೇಶದಲ್ಲಿ ಆಡುನುಡಿಯಲ್ಲಿ ಹೆಚ್ಚು ವ್ಯತ್ಯಾಸವಾಗುತ್ತಿರುವುದು ಜಾಲ ಹೋಬಳಿಯ ಭಾಗದಲ್ಲಿ ಗೋಚರವಾಗುತ್ತಿವೆ. ಇಲ್ಲಿ ತೆಲುಗು

ಮಾತನಾಡುವವರು ಕನ್ನಡ ಮಾತನಾಡುವವರ ಜೊತೆಯಲ್ಲಿಯೆ ನೆಲೆಸಿದ್ದಾರೆ. ತೆಲುಗು ಮತ್ತು ಕನ್ನಡ ಭಾಷೆಗಳು ದ್ರಾವಿಡ ಭಾಷೆಗಳಾಗಿದ್ದು, ಇವು ಒಂದೇ ಭಾಷಾವಂಶಕ್ಕೆ ಸೇರಿದ ಭಾಷೆಯಾಗಿವೆ. ಇವು ಹಿಂದಿನಿಂದಲೂ ಹೆಚ್ಚು ಸಂಪರ್ಕದಲ್ಲಿರುವ ಭಾಷೆಗಳೂ ಆಗಿವೆ. ಬೆಂಗಳೂರು ಗ್ರಾಮೀಣ ಜನರಾಡುವ ಕನ್ನಡ ಭಾಷೆಯ ಮೇಲೆ ಇತರ ದ್ರಾವಿಡ ಭಾಷೆಯಾದ ತೆಲುಗು ಭಾಷೆಯ ಪ್ರಭಾವ ಹೆಚ್ಚಾಗಿವೆ. ತಮಿಳಿನ ಪ್ರಭಾವ ಅತಿ ಕಡಿಮೆ ಇದೆ. ಪ್ರಮುಖವಾಗಿ ಕನ್ನಡ ತೆಲುಗು ಭಾಷಾ ಸಂಪರ್ಕದ ಪ್ರದೇಶವಾದ ಚಿಕ್ಕಬಳ್ಳಾಪುರ ಮತ್ತು ದೇವನಹಳ್ಳಿಯಲ್ಲಿ ತೆಲುಗು ಭಾಷೆಯ ಪ್ರಭಾವ ಹೆಚ್ಚಾಗಿದ್ದು ಈ ಭೌಗೋಳಿಕ ವ್ಯಾಪ್ತಿಯನ್ನು ಹೊಂದಿದ ಜಾಲ ಪ್ರದೇಶಕ್ಕೆ ತೆಲುಗು ಕ್ರಮೇಣ ಪ್ರವೇಶಿಸಿರಬೇಕು. ಈ ರೀತಿಯಲ್ಲಿ ಪ್ರವೇಶ ಪಡೆದ ತೆಲುಗಿನ ಭಾಷೆಯ ಪ್ರಭಾವ ಜಾಲ ಭಾಗಗಳಲ್ಲಿ ಜನರ ಧ್ವನಿಗಳಲ್ಲಿ ಮತ್ತು ಪದಗಳಲ್ಲಿ ವ್ಯತ್ಯಾಸಗಳು ಉಂಟಾಗುತ್ತಿವೆ. ಜಾಲ ಭಾಗದಲ್ಲಿ ಉಂಟಾಗುತ್ತಿರುವ ವ್ಯತ್ಯಾಸಗಳನ್ನು ಮೂರು ಮುಖ್ಯ ರೀತಿಯಲ್ಲಿ ಗುರುತಿಸಲಾಗಿದೆ.

೧. ತೆಲುಗು ಭಾಷಾಪರಿಸರದ ಪ್ರಭಾವದಿಂದ ಉಂಟಾದ ಸ್ವರ ಬದಲಾವಣೆಗಳು
೨. ತಮಿಳು ಭಾಷಾ ಪ್ರಭಾವದಿಂದಾದ ನಾಮಪದಗಳಲ್ಲಿನ ಬದಲಾವಣೆಗಳು
೩. ಕನ್ನಡ ಪದಗಳು ಸ್ವರಾನೂರೂಪತೆ, ಸೌಲಭ್ಯಕಾಂಕ್ಷೆಯಿಂದ ಆದ ಧ್ವನಿಗಳ ಬದಲಾವಣೆಗಳು

ಬೆಂಗಳೂರು ಗ್ರಾಮೀಣ ಜನರ ಆಡುಮಾತನ್ನು ಗಮನಿಸಿದಾಗ ದಾಸನಪುರ, ಹೆಸರಘಟ್ಟ, ಯಶವಂತಪುರ ಭಾಗಕ್ಕಿಂತ ಜಾಲ ಮತ್ತು ಯಲಹಂಕ ಭಾಗದಲ್ಲಿ ತುಂಬಾ ಭಿನ್ನವಾದ ಧ್ವನಿ ಬಳಕೆಯಾಗುತ್ತಿವೆ. "ಒಂದು ನಿರ್ದಿಷ್ಟ ಭಾಷೆಯನ್ನು ಬಳಸುತ್ತಿರುವ ಭಾಷಿಕರು ಒಂದು ಸಲ ಮಾತನಾಡಿದ ಹಾಗೆ ಮತ್ತೊಮ್ಮೆ ಮಾತನಾಡುವುದಿಲ್ಲ. ಸಮುದಾಯದ ಜೊತೆ ಭಾಷಿಕರು ಬೆರೆಯುವುದು ಹೆಚ್ಚಾದ ಹಾಗೆ ಮತ್ತು ಅವರ ಜೀವನದ ಕ್ಷೇತ್ರಗಳು ಬದಲಾದ ಹಾಗೆ ಭಾಷೆಯಲ್ಲಿ ವೈಯಕ್ತಿಕವಾಗಿ ಹಾಗೂ ಸಾಮಾಜಿಕವಾಗಿ ಬದಲಾವಣೆಗಳಾಗಿರುತ್ತವೆ. ಭಾಷಿಕರು ಹೊಸ ಪದಗಳನ್ನೊ, ಉಚ್ಚಾರಣೆಯನ್ನೊ ಕಲಿಯುತ್ತಾ ಹೋಗುತ್ತಾರೆ. ಕೆಲವು ಸಂದರ್ಭಗಳಲ್ಲಿ ಪದಗಳನ್ನೊ, ಧ್ವನಿಗಳನ್ನೊ, ಭಾಷಿಕರು ಆಕಸ್ಮಿಕವಾಗಿ ಬಳಸಬಹುದು. ಇದನ್ನು ಸಮುದಾಯವು ಒಪ್ಪಿಕೊಂಡಾಗ ಭಾಷಾವ್ಯತ್ಯಾಸಗಳಾಗುತ್ತವೆ."[೯] ಹೀಗೆ ಜಾಲ ಭಾಗದಲ್ಲಿ ಬದಲಾವಣೆಯು ಉಂಟಾಗುತ್ತಿವೆ. ಬೆಂಗಳೂರು ಗ್ರಾಮೀಣ ಭಾಗವಾದ ಜಾಲ ಭಾಗದ ಜನರ ಆಡುಮಾತಿನಲ್ಲಿ ತೆಲುಗು ಪದಗಳ ಬಳಕೆಯಿಂದ ಹಲವು ಭಾಷಾವ್ಯತ್ಯಾಸಗಳು ಉಂಟಾಗಿವೆ. ಅಂತಹ ಕೆಲವು ವ್ಯತ್ಯಾಸಗಳನ್ನು ಈ ಪಟ್ಟಿಯಲ್ಲಿ ಕೊಡಲಾಗಿದೆ.

ಕನ್ನಡ ಪದ	**ತೆಲುಗು**	**ಜಾಲ, ಯಲಹಂಕ**	**ದಾ, ಹೆ, ಯಶ**
ಅವನು	ಅತಡು	ಆತ್ನು	ಅವ್ನು
ಅಷ್ಟು	ಅಂತೇಸು	ಆಸು	ಅಸ್ಟು
ಆರಿದ್ರಾ	ಆರ್ದ್ದೆ	ಆರ್ದ್ದೆ	ಆದ್ರಿ
ಏರು	ಎಕ್ಕು	ಎಕ್ಕು	ಅತ್ತು
ಡೊಂಕು	ದೊಂಕ	ದೊಂಕ	ಡೊಂಕ
ಕನ್ನಡಿ	ಅದ್ದಮು	ಅದ್ದ	ಕನ್ನುಡಿ
ಗದ್ದಿಗೆ	ಗಾದಿ	ಗಾದಿ	ಗದ್ಗೆ
ಡಾಂಬರು	ಡಾಮರು	ಡಾರು	ಟಾರು
ಮುದುಕಿ	ಮುಸಲಿ	ಮುಶ್ಲಿ	ಮುದ್ಕಿ
ಕೂದಲು	ಕುರುಲು	ಕೂರ್ಲು	ಕೂದ್ಲು
ಸತ್ತೆ	ಸಪ್ಪ	ಸಪ್ಪೆ	ಸತ್ತೆ
ಬೆಳ್ಳಗೆ	ತೆಲ್ಲಗ	ತೆಳ್ಗೆ	ಬೆಳ್ಗೆ
ಕೊಳಾಯಿ	ಕುಳಾಯಿ	ಕುಳಾಯಿ	ಕೊಳಾಯಿ
ಈರಲು	ಈರಳು	ಇರ್ಳು	ಈರ್ಳು
ಕೂರಿಗೆ	ಕೂಡಿಗ	ಕೂಡ್ಗೆ	ಕೂರ್ಗೆ
ಹಿತ್ತಾಳೆ	ಇತ್ತಡಿ	ಇತ್ತಾಡೆ	ಇತ್ತಾಡೆ
ಹಿಕ್ಕೆ	ಪಿಕ್ಕೆ	ಪಿಕ್ಕೆ	ಪಿಚ್ಕೆ

“ಎರಡು ವಿಭಿನ್ನ ಸಮಾಜಗಳ ಆರ್ಥಿಕ ಹಾಗೂ ಸಾಮಾಜಿಕ ಅಂತರ ಹಾಗೂ ಸಂಪರ್ಕ ವಲಯದ ಸ್ವರೂಪಗಳು ಮತ್ತು ಸಂಪರ್ಕದಲ್ಲಿರುವ ಸಮಾಜಗಳು ಒಂದೇ ಭಾಷೆಯ ಬೇರೆ ಬೇರೆ ಪ್ರಭೇದಗಳನ್ನು ಮಾತೃಭಾಷೆಯನ್ನಾಗಿ ಉಳ್ಳವರ ಸಂಪರ್ಕದಿಂದ ಭಾಷೆಯ ಸಂಗತಿಗಳ ಮೇಲೆ ಪ್ರಭಾವ ಬೀರುತ್ತವೆ.**”**[೧೦] ಈ ರೀತಿಯಲ್ಲಿ ಬೆಂಗಳೂರು ಗ್ರಾಮೀಣ ಜಾಲ ಮತ್ತು ಯಲಹಂಕ ಭಾಗದಲ್ಲಿ ತೆಲುಗು ಭಾಷೆಯ ಸಂಪರ್ಕ ಹೆಚ್ಚಾಗಿ ಅಲ್ಲಿನ ಜನರ ಆಡುಮಾತಿನಲ್ಲಿ ಪ್ರಭಾವ ಬೀರಿರುತ್ತಿವೆ. ಇದನ್ನು ಮೇಲಿನ ಪಟ್ಟಿಯ ಮೂಲಕ ಗುರುತಿಸಿದ್ದೇನೆ. ಜಾಲ ಭಾಗದಲ್ಲಿ ತೆಲುಗಿನ ಪ್ರಭಾವದಿಂದ **ಅ** ಕಾರವು **ಆ** ಕಾರ ಸ್ವರ ದೀರ್ಘವಾಗುವುದು, **ಷ್** ಕಾರವು **ಸ್** ಕಾರವಾಗಿ,(ಅಷ್ಟು>ಆಸು) ಬಳಕೆಯಾಗುತ್ತಿದೆ. **ಏ** ಕಾರವು **ಆ** ಕಾರವಾಗಿ (ಗದ್ದೆ>ಗಾದಿ) ಬದಲಾಗಿದೆ. **ಡ್** ಕಾರವು **ಟ್** ಕಾರವಾಗಿ (ಡಾಂಬರು>ಡಾರು>ಟಾರು) ಬಳಕೆಯಾಗುತ್ತಿದೆ. **ಒ** ಕಾರವು **ಉ** ಕಾರವಾಗಿ (ಕೊಳಾಯಿ>ಕುಳಾಯಿ) ಬಳಕೆಯಾಗುತ್ತಿದೆ. ಹೀಗೆ ತೆಲುಗಿನ ಪ್ರಭಾವದಿಂದ ಹಲವು ಬದಲಾವಣೆಗಳು ಜಾಲ ಭಾಗದಲ್ಲಿ ಉಂಟಾಗುತ್ತಿವೆ. ಈ ಪದಗಳು ತೆಲುಗಿನ ಆಡುಮಾತಿನ ಪರಿಸರದ ಹಿನ್ನಲೆಯಲ್ಲಿ ಬದಲಾವಣೆಯನ್ನು ಮಾಡಿಕೊಳ್ಳುತ್ತಿವೆ. ಜಾಲ ಭಾಗದಲ್ಲಿ ಕೆಲವು ಕನ್ನಡ ಭಾಷಿಕರು ವಾಕ್ಯರಚನೆಯೊಳಗೆ ಕನ್ನಡ ಪದಗಳನ್ನಲ್ಲದೆ ತೆಲುಗು ಭಾಷೆಯ ಪದಗಳನ್ನು ಬಳಕೆ ಮಾಡುತ್ತಿದ್ದಾರೆ. ಇಂತಹ ರಚನೆಗಳು ಮಧ್ಯಮ ಮತ್ತು ಕೆಳಮಧ್ಯಮ ಸ್ಥಿತಿಯಲ್ಲಿರುವವರು ಅನೌಪಚಾರಿಕವಾಗಿ ಮಾತನಾಡುವಾಗ, ಕೆಲಸ ಮಾಡುವಾಗ ಇಂತಹ ಪದಗಳ ಬಳಕೆಯು ಹೆಚ್ಚು ಪ್ರಯೋಗಗಳು ಸಿಗುತ್ತವೆ. ಕೆಲವು ಮೇಲ್ವರ್ಗದವರು ಕೆಳವರ್ಗದವರ ಜೊತೆಯಲ್ಲಿ ಮಾತನಾಡುವ ಸಂದರ್ಭದಲ್ಲಿ ಕೆಳವರ್ಗದವರಂತೆ ತೆಲುಗು ಪದಗಳು ಅಲ್ಲಲ್ಲಿ ಬಳಸುತ್ತಿದ್ದಾರೆ. ಅದು ಅವರಿಗೆ ಅರಿವಿಗೆ ಬರದಂತೆ ಬಳಕೆಯಾಗುತ್ತಿರುವವು. **“**ಭಾರತದಲ್ಲಿ ವಿದ್ಯಾಭ್ಯಾಸದ ಪರಿಣಾಮವಾಗಿ ದೈನಂದಿನ ವ್ಯವಹಾರಗಳಲ್ಲಿ ಜಾತಿಯ ಪಾತ್ರ ಗೌಣವಾದಂತೆ, ಮೊದಲು ಜಾತಿಯೇ ವರ್ಗ ಸೂಚಕದ ಕಾರಣದಿಂದ ಕಾಣಿಸಿಕೊಂಡ ಭಿನ್ನತೆಯು ಕ್ರಮೇಣ ಪ್ರಧಾನ ಕಾರಣವಾಗಿ ವರ್ಗವ್ಯತ್ಯಾಸ ಭಿನ್ನತೆಯನ್ನು ಉಂಟುಮಾಡುತ್ತದೆ.**”**[೧೧] ಈ ರೀತಿಯಲ್ಲಿ ಜಾಲ ಭಾಗದಲ್ಲಿ ಜಾತಿ ಮತ್ತು ವರ್ಗವು ಮುಖ್ಯವಾದ ಭಿನ್ನತೆಗೆ ಕಾರಣವಾಗಿದೆ. ಜಾಲ ಭಾಗದಲ್ಲಿ ಸಾಮಾನ್ಯವಾಗಿ ಕೆಳವರ್ಗದವರು ತೆಲುಗು ಬಲ್ಲವರಾಗಿದ್ದಾರೆ. ಇದು ಕೆಳವರ್ಗದ ಜನರು ತೆಲುಗು ಭಾಷಿಕರೆಂಬ ಅರಿವಿನಿಂದ ಮೇಲ್ವರ್ಗದವರ ಮಾತಿನಲ್ಲೂ ಬದಲಾವಣೆಗಳು ಉಂಟಾಗುತ್ತಿವೆ.

ಬೆಂಗಳೂರು ಗ್ರಾಮೀಣ ಜನರಲ್ಲಿ ಬಳಕೆಯಾಗುತ್ತಿರುವ ಸಪ್ತಮಿ ವಿಭಕ್ತಿಗೆ ಸಂಬಂಧಿಸಿದಂತೆ ದಾ.ಹೆ.ಯ. ಭಾಗದಲ್ಲಿ **ಅಲ್ಲಿ** ಎಂದು ಬಳಕೆಗಳಿದ್ದು, ಜಾಲ ಭಾಗದಲ್ಲಿ **ಆಗ, ನ್ಗ. (ನನ್,ಗ) (ಆನ್,ಗ)** ಪ್ರಯೋಗಗಳಿವೆ. **ನ್** ಧ್ವನಿಯು ಸಂಕ್ಷೇಪವಾಗಿ ಸೇರಿ ಬಳಕೆಯಾಗುತ್ತವೆ. ತೆಲುಗು ಭಾಷಿಕರಲ್ಲಿ **ನನ್, ಆನ್,** ನಿ, **ಲೋ, ಅಂದು**

ಎಂಬ ಪ್ರತ್ಯಯಗಳ ಬಳಕೆಯಿದೆ.ತೆಲುಗಿನ ಅಮಹತ್ ರೂಪಗಳ ನಾಮಪದಗಳಿಗೆ ಸಂಬಂಧಿಸಿದಂತೆ **ನ್** ಪ್ರತ್ಯಯವು ನಿ ಎಂದು ಬಳಕೆಯಾಗುವುದು. ಕನ್ನಡದಲ್ಲಿ ದೂರ ದರ್ಶಕ ಸರ್ವನಾಮ **ಅಲ್ಲಿ,** ಸಮೀಪ ದರ್ಶಕ ಸರ್ವನಾಮ **ಇಲ್ಲಿ,** ಯು ಕ್ರಮವಾಗಿ **ನ್,** ನಿ ಎಂದಾಗಿ ತೆಲುಗಿನಲ್ಲಿ ರೂಪಾಂತರವಾಗಿ ಬಳಕೆಯಾಗುವುದು. ಅದರ ಪ್ರಭಾವವು ಜಾಲದಲ್ಲಿ ಕಾಣುತ್ತಿದ್ದು ಅಲ್ಲಿ **ನನ್, ನ್ಗ, ಆಗ** ಎಂದು ಬಳಕೆಯಾಗುತ್ತಿದೆ. **ಳ್** ಕಾರ ವು **ಲ್** ಕಾರವಾಗಿ ಬಳಕೆಯಾಗುವುದು ತೆಲುಗಿನ ಭಾಷಾ ಸ್ವರೂಪವನ್ನು ತೋರಿಸುತ್ತಿದೆ. ಜಾಲ ಭಾಗದಲ್ಲಿ ಭಾಷಿಕ ವ್ಯತ್ಯಾಸವಾಗುವುದಕ್ಕೆ ಜಾತಿ ಮತ್ತು ವರ್ಗವು ಪ್ರಮುಖ ಕಾರಣವಾಗುತ್ತದೆ. ಉದಾ – ಬೆಂಗಳೂರಿನ 'ಜಾಲ' ಭಾಗದ ವಕ್ಕಲಿಗರಲ್ಲಿ ಹೆಚ್ಚು ತೆಲುಗು ಮಾತನಾಡುವವರಿದ್ದಾರೆ. ಅವರು 'ಮರಸು' ವಕ್ಕಲಿಗರಾಗಿದ್ದು, ಅವರ ಮೂಲವು ಆಂಧ್ರವಾಗಿದೆ. ಹೀಗಾಗಿ ಅವರಿಗೆ ತೆಲುಗು ಮೂಲ ಭಾಷೆಯಾಗಿತ್ತು. ತದನಂತರ ಬೆಂಗಳೂರಿನತ್ತ ಧಾವಿಸಿದಂತಹ ತೆಲುಗು ಸಮಾಜದವರು ಕನ್ನಡವನ್ನು ಕಲಿತು ಕನ್ನಡಿಗರಾಗಿಯೇ ಈ ಸಮಾಜದಲ್ಲಿ ವ್ಯವಹರಿಸುವುದನ್ನು ಕಾಣಬಹುದು. ಉದಾಹರಣೆಗೆ– ಜಾಲದಲ್ಲಿ ನಾಯಕ ಜಾತಿಯವನು 'ಏನೋ ನಿಂದ್ ಕತೆ, ಇದೇನಾ ನೀನ್ ಸ್ಕೂಲ್ಕ ವೋಗ್ ಕಲ್ಯಾದು' ಎಂದು ಬಳಸಿದರೇ ಮರಸು ವಕ್ಕಲಿಗರಾದವನು 'ಏನ್ಲೊ ನಿನ್ ಕತಾ, ಇದ್ಯಾ ನಿನ್ಕ ಸ್ಕೂಲ್ನಾಕ್ ವೋಗ್ ಕಲ್ತಿ' ಎಂದು ಬಳಸುತ್ತಾನೆ. ಇಲ್ಲಿ ಬದಲಾವಣೆಗೆ ಪ್ರಮುಖವಾಗಿ ತೆಲುಗು ಮೂಲದವರಾಗಿರುವುದು ಕಾರಣವಾಗಿದೆ. ಹೀಗೆ ತೆಲುಗು ಮತ್ತು ಕನ್ನಡ ಮಾತನಾಡುವಂತಹ ದ್ವಿಭಾಷಿಕರು ವೈವಾಹಿಕ ಸಂಬಂಧವನ್ನು ಪರಸ್ಪರ ಬೆಳೆಸಿದ್ದಾರೆ. ಇನ್ನೊಂದು ವ್ಯತ್ಯಾಸಕ್ಕೆ ಕಾರಣ ಜಾತಿಯಾಗಿದೆ. ಮೇಲ್ಜಾತಿ ಮತ್ತು ಕೆಳಜಾತಿಯವರು ಮಾತನಾಡುವ ರೀತಿಯು ಭಿನ್ನವಾಗಿರುತ್ತದೆ. ಉದಾಹರಣೆಗೆ 'ಏನ್ ಇವುನ್ಕ ಇರೋ ಕೊಬ್ಬ್' ಎಂದು ಬಳಸಿದರೇ ಕೆಳವರ್ಗದವರು 'ಏಸ್ ಅಯ್ತ್ ಚರ್ಬು ಇವ್ನ್ಕ' ಎಂದು ಬಳಸುತ್ತಾರೆ. ಇಲ್ಲಿ ಮೇಲ್ವರ್ಗದ ಜನರು ಕನ್ನಡ ಪದ ಬಳಕೆಯನ್ನು ಹೆಚ್ಚು ಬಳಸುತ್ತಿದ್ದರೆ, ಕೆಳವರ್ಗದ ಜನರು ತೆಲುಗು ಪದಗಳನ್ನು ಹೆಚ್ಚು ಬಳಸುತ್ತಾರೆ.

"ಒಂದು ಭಾಷಾ ಸಮಾಜವು ಬೇರೊಂದು ಪ್ರಧಾನ ಭಾಷೆಯ ಪರಿಸರದ ಮಧ್ಯೆ ವಲಸೆ ಹೋಗಿ ನೆಲೆಸಿ ದ್ವಿಭಾಷಿಕವಾದ ಸಮಾಜವು ಅನ್ಯ ಭಾಷೆಯ ಶಬ್ದಗಳನ್ನು ಅಲ್ಪಸ್ವಲ್ಪ ವ್ಯತ್ಯಾಸಗಳೊಡನೆ ನೇರವಾಗಿ ಸ್ವೀಕರಿಸುತ್ತವೆ. ಆದರೆ ಹೋಲಿಕೆ ಹೆಚ್ಚಿದಷ್ಟು ಮಾತೃಭಾಷೆಯ ಶಬ್ದಗಳನ್ನು ಅರ್ಥಾಂತರಗೊಳಿಸಿ ಸ್ವೀಕರಿಸುವ ಪ್ರವೃತ್ತಿ ಹೆಚ್ಚಾಗಿರುತ್ತದೆ."[೧೨] ಈ ರೀತಿಯಲ್ಲಿ ಯಲಹಂಕ ಪೂರ್ವ ಭಾಗದ ಹಳ್ಳಿಗಳಲ್ಲಿ ಹಾಗೂ ಜಾಲ ಭಾಗದಲ್ಲಿ ವಲಸೆ ಬಂದ ತಮಿಳರು ಬಂಡೆಕೆಲಸದ ನಿಮಿತ್ತ ಬಂದು ನೆಲೆಸಿದ್ದಾರೆ. ಜಾಲ ಭಾಗದಲ್ಲಿ ತಮಿಳು ಹೆಚ್ಚು ಗೋಚರವಾಗದಿದ್ದರೂ, ಅಲ್ಲಿನ ಜನರ ಬಳಸುವ ಪದಗಳಲ್ಲಿ ಕೆಲವು ತಮಿಳು ಭಾಷೆಯ ಪದಗಳು

ಸೇರುತ್ತಿವೆ. ಅವುಗಳೆಂದರೆ ತಮಿಳು ಪದಗಳಾದ **ಅವನುಕ್** > **ಅವುಂಕ (ಅವನಿಗೆ), ಎದಕು** > **ಏಂಕ(ಏತಕ್ಕೆ), ಯಾರ್ಕ್** > **ಯಾರ್ಕ (ಯಾರಿಗೆ) ಕುಳಾಯ್** > **ಕುಳಾಯಿ** ಎಂಬ ಇನ್ನಿತರೆ ಪದಗಳು ಜಾಲ ಭಾಗದ ಜನರಲ್ಲಿ ಬಳಕೆಯಾಗುತ್ತಿವೆ.

ಕನ್ನಡ ಪದ	**ತಮಿಳು**	**ಜಾಲ, ಯಲಹಂಕ**	**ದಾ, ಹೆ, ಯಶ**
ಅವನಿಗೆ	ಅವನುಕ್	ಅವುಂಕ	ಅವನ್ಗೆ
ಏತಕ್ಕೆ	ಎದಕು	ಏಂಕ/ಯೇಂದ್ಕ	ಏನ್ಕೆ
ಕೊಳಾಯಿ	ಕುಳಾಯ್	ಕುಳಾಯಿ	ಕೊಳಾಯಿ
ಬೆಕ್ಕು	ಪೂಣೆ	ಊನೆ	ಬೆಕ್ಕು
ಚಪ್ಪರ ಅವರೆಕಾಯಿ	ಚಿಕ್ಕಡಿ	ಸಿಕ್ಡಿಗಾಯ್	ಚಪ್ರ್ರವ್ರೆಕಾಯ್

ಜಾಲ ಮತ್ತು ಯಲಹಂಕ ಭಾಗದಲ್ಲಿ ತಮಿಳು ಭಾಷಿಕರ ಪ್ರಭಾವವು ಸ್ವಲ್ಪ ಮಟ್ಟಿಗೆ ಈ ಭಾಗದ ಜನರ ಆಡುನುಡಿಯಲ್ಲಿ ಕಂಡು ಬರುತ್ತಿವೆ. ಜಾಲ ಭಾಗದಲ್ಲಿ ಬಂಡೆಹೊಡೆಯುವ ಕಾಯಕವನ್ನು ಮಾಡುತ್ತಿರುವವರಲ್ಲಿ ಕನ್ನಡದವರ ಜೊತೆಗೆ ತಮಿಳರು ಉದ್ಯೋಗವನ್ನು ಪಡೆದ್ದಾರೆ. "ಉದ್ಯೋಗಾನ್ವೇಷಣೆಯಲ್ಲಿ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳಲು ಬಹಳ ಜನರು ಒಂದು ಕಡೆಯಿಂದ ಮತ್ತೊಂದು ಕಡೆಗೆ ವಲಸೆ ಹೋಗುತ್ತಾರೆ. ವಲಸೆ ಹೋಗಿ ಅನ್ಯ ಭಾಷಿಕ ಸಮಾಜದೊಂದಿಗೆ ನೆಲೆಸಿ ಅಲ್ಲಿನ ಜನರ ಜೀವನವಿಧಾನ ಮತ್ತು ಭಾಷೆಯ ಮೇಲೆ ನಿಕಟ ಸಂಪರ್ಕವನ್ನು ಹೊಂದುತ್ತವೆ"[೧೩] ಈ ರೀತಿ ಬಂದ ತಮಿಳರು ಜಾಲ ಮತ್ತು ಯಲಹಂಕ ಪೂರ್ವದ ಭಾಗದಲ್ಲಿ ನೆಲೆಸಿದ್ದಾರೆ. ಈ ಸಮಾಜದವರು ಕೆಲಸ ಮತ್ತಿತರ ವ್ಯವಹಾರದಿಂದ ಜಾಲ ಭಾಗದ ಜನರ ಸಂಪರ್ಕದಿಂದ ಕೆಳವರ್ಗದ ಮತ್ತು ಮಧ್ಯಮವರ್ಗದವರಲ್ಲಿ ಭಾಷೆಯಲ್ಲಿ ಬದಲಾವಣೆಗಳನ್ನು ತಂದೊಡ್ಡುತ್ತಿವೆ.

"ಭಾಷಿಕರು ಬಾಷೆಯನ್ನು ಎಷ್ಟು ಸಾಧ್ಯವೊ ಅಷ್ಟು ಮೊಟಕುಗೊಳಿಸಿ ಮಾತನಾಡಲು ಪ್ರಯತ್ನಿಸುತ್ತಾರೆ. ಕೆಲವು ಧ್ವನಿ ಧ್ವನಿರಚನೆಗಳು ಕ್ರಮೇಣ ಭಾಷೆಯಲ್ಲಿ ಸರಳವಾಗುತ್ತವೆ. ಉಚ್ಚಾರಣೆಯ ಸೌಲಭ್ಯಕ್ಕಾಗಿ ಭಾಷೆಯಲ್ಲಿ ಬದಲಾವಣೆಗಳಾಗುತ್ತವೆ."[೧೪] (ಭಾಷೆ, ಪು೨೯೮) ಈ ರೀತಿಯಲ್ಲಿ ಬೆಂಗಳೂರು ಗ್ರಾಮೀಣ

ಜನರ ಆಡುಮಾತಿನಲ್ಲಿ ಕೆಲವೊಂದು ಕನ್ನಡ ಪದಗಳು ಸ್ವರಪಲ್ಲಟ, ಸ್ವರಾನೂರೂತೆ, ಸೌಲಭ್ಯಕಾಂಕ್ಷೆಯಿಂದ ಕೆಲವು ಧ್ವನಿಗಳ ಬದಲಾವಣೆಯಾಗುತ್ತಿವೆ. ಹೀಗೆ ಬೆಂಗಳೂರು ಗ್ರಾಮೀಣ ಜನರಲ್ಲಿ ವ್ಯತ್ಯಾಸಗಳು ಕಾಣುತ್ತಿವೆ. ಉಚ್ಚರಣಾ ಸೌಲಭ್ಯಕ್ಕಾಗಿ ಪದದಲ್ಲಿ ಹೊಸ ಧ್ವನಿಯನ್ನು ತಂದು ಸೇರಿಸುವ ಪ್ರಕ್ರಿಯೆಗಳಿವೆ. ಉದಾ: ತಾಮ್ರ > ತಾಂಬ್ರ, ಆಮ್ಲಜನಕ > ಆಂಬ್ಲಜನಕ, ಹಿತ್ತಾಳೆ > ಹಿತ್ತಾಡೆ ಯಾಗಿರುವ ಬದಲಾವಣೆಗಳ ರೂಪಗಳಿವೆ. ಕೆಲವು ವರ್ಣಪಲ್ಲಟಗಳಿಂದಲೂ ಭಾಷಾವ್ಯತ್ಯಾಸಗಳು ಉಂಟಾಗುತ್ತಿವೆ. ಉದಾ: ಕಾಗ್ದ> ಕಾದ್ಗ. ಅವರೆಕಾಯಿ> ಅರವೆಕಾಯ್. ಹೀಗೆ ವ್ಯತ್ಯಾಸದ ಪ್ರಯೋಗಗಳು ಜಾಲ ಭಾಗದಲ್ಲಿ ಕಂಡು ಬರುತ್ತಿವೆ. ಇವು ಹೆಚ್ಚು ಅವಿದ್ಯಾವಂತ ಕೆಳ ಸಮುದಾಯದವರಲ್ಲಿ ಕಾಣಿಸುತ್ತವೆ. ಉಚ್ಚಾರಣೆಯ ಅನೂಕೂಲವಾಗಿಯೂ ಕೆಲವು ವ್ಯತ್ಯಾಸಗಳು ಉಂಟಾಗುತ್ತಿವೆ.

ಬೆಂಗಳೂರು ಗಾಮೀಣ ಪ್ರದೇಶದ ಜಾಲ ಭಾಗದಲ್ಲಿ ತೆಲುಗು ಮತ್ತು ಕನ್ನಡ ಮಾತನಾಡುವವರಾಗಿದ್ದಾರೆ. ಆದರೆ ಅವರ ಆಡುಮಾತಿನಲ್ಲಿ ತೆಲುಗು ಮತ್ತು ಕನ್ನಡ ಭಾಷೆಯಲ್ಲಿ ಬಳಕೆಯಿಲ್ಲದ ಬೇರೊಂದು ಪದಗಳ ಬಳಕೆಗಳು ಕಂಡುಬರುತ್ತಿವೆ. ಅಂದರೆ ತೆಲುಗು, ಕನ್ನಡಕ್ಕೆ ಹೊರತಾದ ಬೇರೊಂದು ಸ್ವತಂತ್ರ ಅರ್ಥ ಬರುವ ಪದಗಳ ಬಳಕೆಗಳು ಕಾಣುತ್ತಿವೆ. “ಎರಡು ಬೇರೆ ಬೇರೆ ಭಾಷೆಗಳನ್ನು ಆಡುವ ಜನರು ಸಂಪರ್ಕ ಸಾಧಿಸಲು ಆ ಎರಡು ಭಾಷೆಗಳಿಂದ ಉಂಟಾದ ಮಿಶ್ರ ಭಾಷೆಯನ್ನು ಬಳಸುವರು ಇದನ್ನು ಪಿಜಿನ್ ಎಂದು ಗುರುತಿಸಲಾಗುವುದು”[೧೫] ಈ ರೀತಿಯಲ್ಲಿ ನಿಧಾನವಾಗಿ ಜಾಲ ಭಾಗಗಳಲ್ಲಿ ಪಿಜನ್ ಅವಸ್ಥೆಯು ಉಂಟಾಗುವುದು ಗೋಚರವಾಗಿತ್ತಿವೆ. ಇದು ಜಾಲ ಮತ್ತು ಯಲಹಂಕ ಪೂರ್ವ ಭಾಗದ ಪಿಜನ್ ರೂಪದ ಭಾಷಾ ಬದಲಾವಣೆಯ ಪ್ರಾರಂಭಿಕವಾದ ಅವಸ್ಥೆಯಾಗಿ ಕಾಣಿಸುತ್ತಿದೆ. ಅವುಗಳನ್ನು ಈ ಶಬ್ದಗಳ ಮೂಲಕ ತಿಳಿಯಲಾಗಿದೆ. ಅವು ಈ ರೀತಿಯಲ್ಲಿವೆ.

ಕನ್ನಡ	**ತೆಲುಗು**	**ತಮಿಳು**	**ಪಿಜನ್ ಆಗುವ ಪದಗಳು**
ಮುದುಕಿ	ಮುಸಲಿ	ಮುದಿಯಾಳ್	ಮುಶ್ಲಿ/ ಮುಷ್ಲಿ
ಜಿಮಣ	ಪಿತಿನಾರಿ	ಕಂಜ್ಕಿತ್ನಾರಿ	ಬಂಕ
ಇಲಿ	ಎಲುಕ	ಎಲಿ	ತ್ವಾಡ/ಇಲ್ಕ
ಬೆಕ್ಕು	ಪಿಲ್ಲಿ	ಪೂಣೆ	ಊನೆ

ಬೆಳಗ್ಗೆ	ಪದ್ದುನ್ನಿ	ಕಾಲ್ಯೆ	ಒತ್ತುಂಟ್ಲೇ
ಅಮ್ಮ	ಅಮ್ಮ	ಅಮ್ಮನ್	ದೋ/ದಮ್ಮೋ
ಚಿಕ್ಕಪ್ಪ	ಪಿನ್ನಯ್ಯ	ಚಿತ್ತಪ್ಪ	ಚಿಚ್ಚ
ಕೊನೆ/ಕಡೆ	ಕೊನಾ	ಕಡೈಸಿಯಾ	ಆಖ್ರಿ
ನೇಗಿಲು	ನಾಂಗೇಲು	ನಾಂಜಿಲ್	ಮಡ್ಕ
ಕುರುಡ	ಗುಡ್ಡ	ಕುರುಡನ್	ಕುಡ್ಡ
ಚೆಂದಿ	ಚಿತ್ತು	ಕಿಳಿಂಜಿ	ಸೆಜ್ಲು
ವಂಗೆಮರ	ಕಾನ್ಗಾಯ್	ಪುಂಗಮರಂ	ಕಾನ್ಕಾಯಿ
ಸುರಿ	ಪೂಯ್(ನೀಳ್ಪೋಯ್)	ಉರಿಂಜು	ಅಟ್ಟಿ/ ಅಟ್ಟು
ಬೆಂಕಿಪೆಟ್ಟಿ	ಅಗ್ಗಿಪೆಟ್ಟೆ	ವೊತ್ತಿಪಟ್ಟಿ/ತಿಪೆಟ್ಟಿ	ಕಿಸ್ಪೆಟ್ಟಿ

ಹೀಗೆ ಪಿಜನ್ ಆಗುವ ಲಕ್ಷಣಗಳು ಬೆಂಗಳೂರು ಗ್ರಾಮೀಣ ಭಾಗವಾದ ಯಲಹಂಕದ ಪೂರ್ವ ಭಾಗಗಳಲ್ಲಿ ಮತ್ತು ಜಾಲ ಭಾಗಗಳಲ್ಲಿ ಕಾಣಿಸುತ್ತಿವೆ. ಈ ಪಿಜನ್ ಹಂತವೂ ಮುಂದುವರೆದಲ್ಲಿ ಸ್ವತಂತ್ರವಾದ ಭಾಷೆಯಾಗಿ ಮಾರ್ಪಾಡಾಗುತ್ತದೆ. ಇದನ್ನು ಕ್ರಯೋಲ್ ಹಂತ ಎಂದು ಗುರುತಿಸಲಾಗುವುದು. ಆದರೆ ಜಾಲ ಭಾಗದ ಜನರಾಡುವ ನುಡಿಯಲ್ಲಿ ಪಿಜನ್ ಸೂಕ್ಷ್ಮವಾಗಿ ಕಾಣಿಸುತ್ತಿವೆ. ಹೀಗೆ ಬೆಂಗಳೂರು ಗ್ರಾಮೀಣ ಭಾಗದ ಕನ್ನಡ ಭಾಷೆಯ ಮೇಲೆ ಇತರೆ ದ್ರಾವಿಡ ಭಾಷೆಯಗಳು ಪ್ರಭಾವ ಬೀರಿ ಭಿನ್ನತೆಯನ್ನು ಉಂಟುಮಾಡುತ್ತಿವೆ.

೬.೩ ಕನ್ನಡವು ಇತರ ಭಾಷೆಗಳಿಂದ ಸ್ವೀಕರಿಸಿದ ನೆಲೆಗಳು:

ಬೆಂಗಳೂರು ಗ್ರಾಮೀಣ ಜನರಾಡುವ ಕನ್ನಡ ಭಾಷೆಯ ಮೇಲೆ ಇತರ ದ್ರಾವಿಡ ಭಾಷೆಗಳಾದ ತೆಲುಗು ಭಾಷೆಯ ಪ್ರಭಾವ ಹೆಚ್ಚಾಗಿವೆ. ತಮಿಳಿನ ಪ್ರಭಾವ ಅತೀ ಕಡಿಮೆಯಲ್ಲಾಗಿದೆ. ಪ್ರಮುಖವಾಗಿ ಕನ್ನಡ ತೆಲುಗು ಭಾಷಾ ಸಂಪರ್ಕದ ಪ್ರದೇಶವಾದ ಚಿಕ್ಕಬಳ್ಳಾಪುರ ಮತ್ತು ದೇವನಹಳ್ಳಿಯಲ್ಲಿ ತೆಲುಗು ಪ್ರಭಾವವು

ಹೆಚ್ಚಾಗಿದ್ದು, ಈ ಭೌಗೋಳಿಕ ವ್ಯಾಪ್ತಿಗೆ ಜಾಲವು ಗ್ರಾಮೀಣ ಪ್ರದೇಶವು ಸೇರಿದ್ದರಿಂದ ತೆಲುಗು ಭಾಷೆಯ ಪ್ರಭಾವವುಂಟಾಗಿದೆ. ಅನಂತರ ಜಾಲ ಭಾಗದ ಮೂಲಕ ಬೆಂಗಳೂರಿನ ಇತರ ಭಾಗಗಳಿಗೆ(ಯಲಹಂಕದ ಪೂರ್ವ ಭಾಗ) ಪ್ರವೇಶಿಸಿರಬೇಕು.

"ಸಾಮಾಜಿಕ ಭಾಷೆಗಳ ಮೇಲೆ ಅಲ್ಲಲ್ಲಿಯ ಪ್ರಾದೇಶಿಕ ಭಾಷೆಗಳು ಅಥವಾ ಇತರ ಸಮಾಜದ ಭಾಷೆಗಳು ಕನ್ನಡದ ಮೇಲೆ ಪ್ರಭಾವ ಉಂಟಾಗಿ ಒಂದೇ ಸಮಾಜದ ಭಾಷೆ ಬೇರೆ ಬೇರೆ ದಿಕ್ಕಿನಲ್ಲಿ ಬದಲಾಗುತ್ತಿರುವುದು"[೧೬] ಇದರಂತೆ ಪ್ರಸ್ತುತ ಜಾಲ ಭಾಷಿಕರ ಆಡುನುಡಿಯಲ್ಲಿರುವ ಪ್ರಾದೇಶಿಕ ಶಬ್ದಗಳು ತೆಲುಗು ಮತ್ತು ಕನ್ನಡ ಎರಡೂ ಭಾಷೆಗಳಲ್ಲಿ ಬದಲಾವಣೆಯಾಗುತ್ತಿವೆ. ಜಾಲ ಭಾಷಿಕರ ಆಡುನುಡಿಯಲ್ಲಿ ಕನ್ನಡ ಮತ್ತು ತೆಲುಗು ಭಾಷೆಯ ಶಬ್ದಗಳ ಪ್ರಯೋಗಗಳಿವೆ. ಅವು ಮೂಲತಃ ಯಾವ ಭಾಷೆಯಿಂದ ಯಾವುದನ್ನು ಪಡೆದಿದೆ ಎಂಬುವ ಗೊಂದಲ ಸಹಜವಾಗಿ ಇರುವುದಾಗಿದೆ. ಆದರೆ ಇಲ್ಲಿ ಕನ್ನಡ ಪ್ರಾದೇಶಿಕ ಭಾಷೆಯಾಗಿದ್ದು, ಆ ಭಾಗದಲ್ಲಿ ತೆಲುಗು ಭಾಷಿಕರೆ ಬೆಂಗಳೂರಿನ ಭಾಗಗಳಿಗೆ ಬಂದಿರುವುದರಿಂದ ತೆಲುಗು ಭಾಷೆಯೆ ಕನ್ನಡದೊಡನೆ ಸೇರಿದೆಯೆಂದು ಇಲ್ಲಿ ತಿಳಿದಿದ್ದೇನೆ. ಆದರೆ ಇವುಗಳ ನಿರ್ಣಯವನ್ನು ಯಾವ ಭಾಷೆಯ ಬಳಕೆಯಲ್ಲಿನ ಶಬ್ದಗಳಲ್ಲಿ ರಚನಾವ್ಯವಸ್ಥೆಯಿಂದ ವ್ಯತ್ಯಾಸವಾಗಿದೆ ಎಂದು ತಿಳಿಯುವುದು ಪ್ರಮುಖವಾದುದಾಗಿದೆ. ಹೀಗೆ ತೆಲುಗು ಭಾಷೆಯಿಂದ ಕನ್ನಡದ ಜಾಲ ಭಾಗದ ಜನರ ಬಳಕೆಯಲ್ಲಿ ವ್ಯತ್ಯಾಸಗಳು ಉಂಟಾಗಿವೆ. "ಒಂದು ಭಾಷಿಕ ವಲಯದ ಪ್ರಾದೇಶಿಕ ಅಂತರ ಹೆಚ್ಚುತ್ತಾ ಹೋದಂತೆ ಸಂಪರ್ಕದ ಸ್ವರೂಪ, ಪ್ರಮಾಣಗಳೂ ಹೆಚ್ಚುತ್ತಾ ಹೋಗುತ್ತವೆ. ಇದರಿಂದಾಗಿ ಭಾಷಾ ಭಿನ್ನತೆಗಳು ಉಂಟಾಗಿ ಒಂದೇ ಭಾಷೆಯನ್ನಾಡುವ ಪ್ರದೇಶದಲ್ಲಿ ಅದರ ಭಾಷಿಕ ಸಮಾಜಗಳು ಹುಟ್ಟಿಕೊಳ್ಳುವುದು ನೀರಿಕ್ಷಿಸಿದ ಸಂಗತಿಯಾಗಿದೆ"[೧೭] ಇಂತಹ ಸಂಗತಿಗಳಿಂದ ಹಲವು ಭಾಷಾ ಭಿನ್ನತೆ ಜಾಲ ಮತ್ತು ಯಲಹಂಕ ಪೂರ್ವ ಗ್ರಾಮೀಣ ಪ್ರದೇಶಗಳಲ್ಲಿ ಉಂಟಾಗುತ್ತಿವೆ. ಅಂತಹ ವ್ಯತ್ಯಾಸಗಳೆಂದರೆ ಕನ್ನಡದ ತೆಳ್ಳಗೆ, ಬೆಳ್ಳಗೆ, ಮೆಲ್ಲಗೆ ಎಂಬ ಪದಗಳು ತೆಲುಗಿನ **'ಗಾ'** ಪ್ರತ್ಯಯವುಳ್ಳ ಶಬ್ದಗಳಾಗಿ ಭಿನ್ನತೆಯನ್ನು ಹೊಂದುತ್ತಿವೆ. ಜಾಲಭಾಗದ ಜನರ ಕೆಳ ಮಧ್ಯಮವರ್ಗದವರ ಆಡುಮಾತಿನಲ್ಲಿ **ತೆಲ್ಲಗಾ, ಬೆಳ್ಳಗಾ, ಮೆಲ್ಲಗಾ, (ಮೆಲ್ಕಾ)** ಎಂಬ ಅಂತ್ಯಪ್ರತ್ಯಯವಾಗಿ **ಗ್** ಸಹಿತವಾದ ಪ್ರತ್ಯಯ ಬಳಕೆಗಳಿವೆ. ತೆಲುಗಿನಲ್ಲಿರುವ ತಾಲವ್ಯಸ್ವರ/ತಾಲವ್ಯ ಉಚ್ಚರಣೆಯ ಹಿಂದೆ ವರ್ತ್ಸ್ಯಧ್ವನಿ ಉಚ್ಚಾರಣೆಗಳಿರುತ್ತವೆ. ಅದೇ ರೀತಿಯಲ್ಲಿ ಜಾಲ ಭಾಗದಲ್ಲಿ ತಾಲವ್ಯಗಳ ಹಿಂದಿನಲ್ಲಿ ವರ್ತ್ಸ್ಯಗಳ ಉಚ್ಚಾರಣೆಗಳಿವೆ ಉದಾ: **ಬಚ್ಚಲು>ಚಸ್ಲು, ಚಿದ್ದಲು>ಶಿಜ್ಲು, ಈಚ್ಲು>ಯೀಸ್ಲು** ಬಳಕೆಯಲ್ಲಿವೆ. ಇದಕ್ಕೆ ತೆಲುಗುವಿನಲ್ಲಿ **'ಚ್'** ಕಾರ **'ಶ್'** ಕಾರದ ಪ್ರಯೋಗಗಳಿವೆ. ಇವುಗಳೆ ಜಾಲಭಾಗದಲ್ಲಿ

ಭಾಷಿಕ ಬದಲಾವಣೆಗೆ ಕಾರಣವಾಗಿವೆ. ಇವುಗಳು ಮಧ್ಯಮ ವರ್ಗದ ಪುರುಷರಲ್ಲಿ ಇಂತಹ ಪ್ರಯೋಗಗಳು ಕಾಣುತ್ತಿವೆ.

ನಾಮಪದದ ರಚನೆಗೆ ಸಂಬಂಧಿಸಿದಂತೆ **ಡ್>ನ್** ಬಳಕೆಯು ತೆಲುಗಿನಲ್ಲಿ ಹೆಚ್ಚು ಕಾಣುತ್ತವೆ. ತೆಲುಗಿನ ನಾಮಪ್ರಕೃತಿಗಳಲ್ಲಿ ಕಾಣಿಸಿಕೊಳ್ಳುವ ಪುರುಷ, ಲಿಂಗ, ವಚನಸೂಚಿಯಾಗಿ **ಡ್/ಡು** ಪ್ರತ್ಯಯದ ಬಳಕೆಯ ಬದಲು ಜಾಲದಲ್ಲಿ **ನ್** ಪ್ರತ್ಯಯ ಬಳಕೆಯಲ್ಲಿದೆ. ತೆಲುಗಿನ **ಉನ್ಡು, ಅನ್ಡು, ವಾನ್ಡು** ಪದಗಳಂತೆ ಜಾಲ ಭಾಗದಲ್ಲಿ **ನ್** ಕಾರವನ್ನು ಬಳಸಿ **ರಾಜ್ನು, ಆವಾಡ್ನು, ಆರಂಭಗಾರ್ನು, ಎವಸಾಯ್ಗಾರ್ನು,** ಎಂದು ಭಿನ್ನವಾಗಿ ಬಳಸಲಾಗಿದೆ. ವ್ಯವಸಾಯ ಸಂಬಂಧಿ ಚಟುವಟಿಕೆಯನ್ನು ಮಾಡುವ ನಾಯಕ ಮತ್ತು ವಕ್ಕಲಿಗ ಬೇಸಾಯಗಾರರಲ್ಲಿ ಇಂತಹ ಬದಲಾವಣೆಯು ಉಂಟಾಗುತ್ತಿವೆ. ಬಳಕೆದಾರರು ತೆಲುಗನ್ನು ಸ್ವಲ್ಪ ಮಟ್ಟಿಗೆ ಅರಿತವರಾದ ಕನ್ನಡ ಮಾತೃಭಾಷಿಕರಾಗಿದ್ದಾರೆ. ಇವು ತೆಲುಗಿನ ಗಾರ್ನು ಎಂಬ ಪದಬಳಕೆಯ ಪ್ರಭಾವದಿಂದ ಬದಲಾಗುತ್ತಿದೆ.

“ಒಂದೇ ಜಾತಿಗೆ ಸೇರಿದ ಜನರ ಸಂಖ್ಯೆ ಹೆಚ್ಚಿರಲಿ ಅಥವಾ ಕಡಿಮೆ ಇರಲಿ ಅವರ ಜೀವನ ಆಚಾರ, ವಿಚಾರ, ನಡೆನುಡಿ ಮುಂತಾದವು ಒಂದೇ ಆಗಿರಲಿ ಇಲ್ಲವೆ ಬೇರೆ ಬೇರೆಯಾಗಿರಲಿ ಇಂತಹ ಸಾಮಾಜಿಕ ಅಂಶಗಳು ಅವರ ಭಾಷೆಯಲ್ಲಿ ಬೇರೆ ಬೇರೆ ಭಾಷಾ ರೂಪಗಳು ರೂಪುಗೊಳ್ಳಲು ಕಾರಣವಾಗಿರುತ್ತದೆ”[೧೮] ಇಂತಹ ಭಿನ್ನತೆಯು ಬೆಂಗಳೂರು ಗ್ರಾಮೀಣ ಜಾಲ ಭಾಗದಲ್ಲಿ ಉಂಟಾಗುತ್ತಿದೆ. ಈ ಜನರ ಆಡುನುಡಿಯಲ್ಲಿ ವಿಭಕ್ತಿ ಬಳಕೆಯಲ್ಲಿ ತೃತೀಯ ವಿಭಕ್ತಿ **ಇಂದ** ವು ತೆಲುಗಿನಲ್ಲಿ ಕರಣಾರ್ಥ ಸ್ಥಾನದಲ್ಲಿ ತೃತೀಯದ ಬದಲು ಸಪ್ತಮಿಯ ಬಳಕೆಯಾಗಿದೆ. ಪಂಚಮಿಯಲ್ಲಿ ಇಂದವು ಇಂಚಿಯಾಗಿ ಬಳಕೆಯಾಗುತ್ತದೆ. ಜಾಲ ಭಾಗದಲ್ಲಿ ಇಂದ ಪ್ರತ್ಯಯವು ತೃತೀಯ ಸ್ಥಾನದಲ್ಲಿ ಬಳಕೆಯಾಗುತ್ತದೆ, ಉದಾ: ಗಿಡ್ನಿಂಕ, ಅಸ್ನಿಂಕ ಅಸ್ಗುಳ್ಳಿಂಕ, ರಾಜ್ನಿಂಕ, ಎಂದು ಬಳಕೆಯಾಗುತ್ತಿದೆ. ಇವು ತೆಲುಗಿನ **ಇಂಚಿ** ಯ ಚತುರ್ಥಿಯ ಕಿ ಪ್ರತ್ಯಯ ಜಾಲ ಭಾಗದಲ್ಲಿ **‘ಕ್’** ದ್ವಿತ್ವವಾಗಿ **‘ಕ್’** (ಕ್ಕು, ಕ್ಕೆ, ಕು, ಕಿ)ರೂಪಗಳಲ್ಲಿ ಬಳಕೆಯಾಗುತ್ತದೆ. ಆದರೆ ಉಳಿದ ಭಾಗಗಳಲ್ಲಿ **ಇಗೆ** ಎಂದು ಬಳಕೆಯಾಗುತ್ತಿವೆ. ಇವುಗಳು ಜಾಲ ಭಾಗದಲ್ಲಿ ಸಾಮಾನ್ಯವಾಗಿ ಮಧ್ಯಮ ಮತ್ತು ಕೆಳವರ್ಗದ ಸ್ತ್ರೀ ಪುರುಷರಲ್ಲಿ ಕನ್ನಡ ಮತ್ತು ತೆಲುಗು ಮಾತನಾಡುವವರೆಲ್ಲರಲ್ಲೂ ಈ ರೂಪಗಳು ಕಾಣಿಸುತ್ತಿವೆ.

ಜಾಲ ಜನರಲ್ಲಿ ಸಪ್ತಮಿ ವಿಭಕ್ತಿ **ನ್.ಗ (ನನ್.ಗ)ಆಗ್.ಗ** ಬಳಕೆಯಿವೆ. ಅದರಂತೆ ತೆಲುಗು ಭಾಗದಲ್ಲಿ ಅಲ್ಲಿ ಎಂದು ಬಳಕೆಯಾಗುತ್ತಿದೆ. ತೆಲುಗಿನ ಭಾಷಿಕದಲ್ಲಿರುವ ಸಪ್ತಮಿ **ನನ್, ಆನ್,** ನಿ **ಲೋವು ನನ್, ನಾಗ್. ಆಗ**

ಎಂದು ಬಳಕೆಯಾಗುತ್ತಿವೆ. ಉದಾ: ರಾಜ್ರಾಗ, ಅಸುವ್ನಾಗ, ಅಸುಗಳ್ನಾಗ, ಅಸುಗ್ಲಾಗ ಎಂಬ ಪದ ಬಳಕೆಯಿವೆ.

"ಸಾಮಾಜಿಕವಾಗಿ ಮೇಲ್ವರ್ಗದಲ್ಲಿರುವ ಕಿರಿಯ ವಯಸ್ಸಿನವರು ಸಾಮಾಜಿಕವಾಗಿ, ಆರ್ಥಿಕವಾಗಿ ಕೆಳವರ್ಗದಲ್ಲಿರುವ ತಮ್ಮ ಕೆಲಸಗಾರರಿಗೆ ಏಕವಚನದಲ್ಲಿ ಸಂಭೋದಿಸುವವರು, ಅದೇ ವಯಸ್ಸಿನಿಂದ ಹಿರಿಯರಾದ ಕೆಳವರ್ಗದವರು ಮೇಲ್ವರ್ಗದ ಕಿರಿಯ ವಯಸ್ಕರಿಗೂ ಗೌರವ ಸೂಚಕ ಬಹುವಚನ ಪ್ರತ್ಯಯವನ್ನು ಹಚ್ಚಿಯೇ ಮಾತನಾಡುವುದು"[೧೯] ಈ ಪ್ರವೃತ್ತಿಯು ಬೆಂಗಳೂರು ಗ್ರಾಮೀಣ ಭಾಗದಲ್ಲೂ ಇದೆ. ಬೆಂಗಳೂರಿನ ಗ್ರಾಮೀಣ ಜಾಲ ಭಾಗದಲ್ಲಿ ಗೌರವಾರ್ಥದಲ್ಲಿ ಬರುವ ಬರ್, ಯೋರ್, ಒಗ್, ಎಂಬುವ ಏಕವಚನ ಪ್ರತ್ಯಯವು ಬಳಕೆಯಿದೆ. **ಅರ್/ ಆರ್** ಪ್ರತ್ಯಯಗಳಿಗೆ ಓರ್ ಎಂದು ಬಳಕೆಯಾಗಿವೆ. ತೆಲುಗಿನಲ್ಲಿ **ಅವರ್, ವಾರ್. ಗಾರ್** ಎಂಬ ಗೌರವಸೂಚಿ ಪದಗಳಿವೆ. ಇವಲ್ಲದೆ ತೆಲುಗಿನ **ಮಾಡ್ಗಾಡ್ಲು, ಗೊರ್ಲೋಡು** ಎಂಬ ಪದಗಳಿಂದಲೆ **ಏಟುಗ್ಗೋನು, ಕುರಿಗ್ಗೋನು, ಅಸುಗ್ಗೋನು, ಸುಳ್ಳುಗ್ಗೋನು, ಬೂಸಿಗ್ಗೋನು** ಎಂಬ ಶಬ್ದಗಳ ಪ್ರಯೋಗವು ಜಾಲದಲ್ಲಿ ಕಾಣಸಿಗುತ್ತವೆ. ಈ ಪದಗಳು ಮಧ್ಯಮ ವರ್ಗದ ಸ್ತ್ರೀ ಪುರುಷರಲ್ಲಿ ಮತ್ತು ಕೆಲವು ಹರೆಯದ ಮಕ್ಕಳಲ್ಲಿ ಬಳಕೆಯಾಗುತ್ತಿವೆ. ಜಾಲ ಭಾಗದಲ್ಲಿ ಮಧ್ಯಮ ವರ್ಗದ ಮಕ್ಕಳು ತೆಲುಗು ಮತ್ತು ಕನ್ನಡ ಎರಡೂ ಭಾಷಿಕ ವ್ಯವಸ್ಥೆಗೆ ಸೇರಿದವರಾಗಿದ್ದು, ಇವರು ಹಿರಿಯರಿಗೆ ಗೌರವವನ್ನು ಕೊಡಬೇಕು, ದೊಡ್ಡವರಿಗೆ ವಿದೇಯರಾಗಿರಬೇಕು ಎಂಬ ಸಾಮಾಜಿಕ ನಿಯಂತ್ರಣಗಳು ಅವರ ಭಾಷಿಕ ವಲಯವನ್ನು ನಿಯಂತ್ರಿಸುತ್ತಿರುತ್ತವೆ. ಅವು ಮಧ್ಯಮವರ್ಗದ ಮಕ್ಕಳಲ್ಲಿ ಕಾಣಿಸುತ್ತವೆ. ಸ್ತ್ರೀ ಪುರುಷರಲ್ಲಿ ತಮ್ಮ ಆಪ್ತ ಪರಿಚಿತರ ಜೊತೆಯಾಡುವ ಮಾತುಗಳಲ್ಲಿ ಇಂತಹ ಪದಗಳು ಬಳಕೆಯಾಗುತ್ತಿವೆ. ಅದರಲ್ಲೂ ತೆಲುಗು ಪದವನ್ನು ಕನ್ನಡವೇ ಎಂಬತೆ ಇವರು ಕನ್ನಡದ ಜೊತೆ ಜೊತೆಗೆ ಬಳಸುತ್ತಾರೆ. ಇಂತಹ ಸಾಕಷ್ಟು ಬದಲಾವಣೆಗಳು ಜಾಲ ಭಾಗದಲ್ಲಿ ಗೋಚರವಾಗುತ್ತಿವೆ.

ಕನ್ನಡ ಭಾಷೆಯ ಮೇಲೆ ಇಂದು ಇಂಗ್ಲಿಷ್ ಭಾಷೆಗಳಿಂದ ಪ್ರಾದೇಶಿಕ ಭಾಷೆಗಳಿಗೆ (ಕನ್ನಡ ತೆಲುಗು ತಮಿಳು)ಹೆಚ್ಚು ಒತ್ತಡಕ್ಕೊಳಗಾಗುತ್ತಿವೆ. ಪ್ರಾದೇಶಿಕ ಭಾಷೆಗಳು ಹೆಚ್ಚು ಹಿಂದಿ ಇಂಗ್ಲಿಷ್ ಎಂಬ ವ್ಯವಹಾರ ಭಾಷೆಗಳಿಂದ ಮಾನ್ಯತೆ ಕಳೆದುಕೊಳ್ಳುತ್ತಿವೆ. ಹಾಗೂ ಪ್ರಾದೇಶಿಕ ಭಾಷೆಯ ಸ್ಥಾನದಲ್ಲಿ ಬಂದು ಸೇರುತ್ತಿವೆ. ಎಂದು ಆತಂಕಪಡುವ ಈ ಸಂದರ್ಭದಲ್ಲಿ ದ್ರಾವಿಡ ಭಾಷಾ ಮೂಲವಾದ ಅಂದರೆ ತಮ್ಮ ಸೋದರ ಭಾಷೆಗಳಿಂದಲೆ (ತೆಲುಗು/ತಮಿಳು) ಕನ್ನಡ ಭಾಷೆಯಲ್ಲಿ ಸಂಭವಿಸುತ್ತಿರುವ ಬದಲಾವಣೆಗಳನ್ನು ಕುರಿತು ಅಧ್ಯಯನ ಮಾಡಿದ್ದೇನೆ. ಪ್ರಾದೇಶಿಕ ಭಾಷೆಗಳು ಮತ್ತೊಂದು ಪ್ರಾದೇಶಿಕ ಭಾಷೆಯನ್ನು ಹೇಗೆ ತನ್ನೊಳಗೆ

ಆಗು ಮಾಡಿಕೊಳ್ಳುವುದು ಎಂಬುದು ಇಲ್ಲಿ ಮುಖ್ಯವಾಗುತ್ತದೆ. ನಮ್ಮ ಸೋದರ ಭಾಷೆಗಳಾದ /ಸೋದರ ಭಾಷೆಯಾಗಿ ಗಡಿಯನ್ನು ಹಂಚಿಕೊಂಡ ತೆಲುಗು ಮತ್ತು ತಮಿಳು ಭಾಷೆಗಳಲ್ಲಿ ಕನ್ನಡವು ಬೆರೆತು ಹೋಗುತ್ತಿರುವುದನ್ನು ಕಾಣಬಹುದಾಗಿದೆ. ಅದರಲ್ಲಿ ಜಾಲ ಭಾಗಗಳಲ್ಲಿ ತೆಲುಗು ಬಳಕೆಯು ಅಧಿಕವಾಗಿದೆ. ಹೊಸದಾಗಿ ಭಿನ್ನತೆಯನ್ನು ಮೂಡಿಸಿದೆ. ಕನ್ನಡದ ಪ್ರದೇಶವಾಗಿರುವ ವಿಶಾಲವಾದ ಬೆಂಗಳೂರು ಗ್ರಾಮೀಣ ಭಾಗವನ್ನು ಆವರಿಸುತ್ತಿದೆ. ಅವುಗಳಿಗೆ ಹಲವು ಕಾರಣಗಳಿವೆ. ಅವುಗಳನ್ನು ಹಿಂದಿನ ಅಧ್ಯಯನದಲ್ಲಿ ತಿಳಿಸಲಾಗಿದೆ. ಅವುಗಳಲ್ಲಿ ಮುಖ್ಯವಾದವು

೧. ವಲಸೆ

೨. ಗಡಿ ವಿಭಾಗ

೩. ಬೆಂಗಳೂರು ನಗರದ ಆಕರ್ಷಣೆ

೪. ರಾಜಕೀಯ ಬದಲಾವಣೆಗಳು

೫. ಹೊಸ-ಹೊಸ ಭಾಷೆ ಕಲಿಯುವ ಹಂಬಲ ಮುಂತಾದವುಗಳಾಗಿವೆ.

ಅದೇ ರೀತಿಯಲ್ಲಿ ತೆಲುಗಿನಂತೆ ತಮಿಳು ಭಾಷೆಯು ಕೂಡ ತನ್ನ ಪ್ರಭಾವವನ್ನು ಬೀರುತ್ತಿವೆ. ಹೊಸೂರು ಭಾಗಳಲ್ಲಿ ತಮಿಳು ಭಾಷೆಗಳಲ್ಲಿನ ಗಡಿ ಹಂಚಿಕೊಂಡಿರುವ ಆನೇಕಲ್ಲು ಭಾಗಗಳಲ್ಲಿ ತಮಿಳು ಭಾಷೆ ಪ್ರಭಾವ ಹೆಚ್ಚಾಗಿದೆ. ಅದು ಹೊಸಕೋಟೆ ಭಾಗದವರೆಗೂ ಹಬ್ಬಿದೆ. ಹೊಸಕೋಟೆ ಪ್ರದೇಶದೊಡನೆ ಕೊಂಡಿಯಂತೆ ಸ್ವಲ್ಪ ನರೆಹೊರೆ ಹೊಂದಿದ ಮತ್ತು ಕೆಲವು ಸಾಮಾಜಿಕವಾಗಿ ವ್ಯವಹರಿಸುವ ಸಂದರ್ಭದಲ್ಲಿ, ಜಾಲ ಭಾಗದಲ್ಲಿ ಕೆಲವೊಂದು ಚಿಕ್ಕ ವ್ಯತ್ಯಾಸಗಳು ಆಗಿರುವುದು ಕಾಣುತ್ತಿದೆ. ಅದರ ಹೊರತು ತಮಿಳಿನ ಪ್ರಭಾವ ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ವ್ಯಾಪಕವಾಗಿಲ್ಲ. ಆದರೆ ಹೆಚ್ಚು ಬದಲಾವಣೆಯು ತೆಲುಗು ಭಾಷೆಯಿಂದಲೇ ಉಂಟಾಗಿದೆ.

೬.೪ ಕನ್ನಡದಿಂದ ಇತರ ಭಾಷೆಗಳು ಸ್ವೀಕರಿಸಿರುವ ನೆಲೆಗಳು:

ಕನ್ನಡ ಭಾಷೆಯಿಂದ ದ್ರಾವಿಡದ ಇತರ ಭಾಷೆಗಳಾದ ತೆಲುಗು ಮತ್ತು ತಮಿಳು ಭಾಷೆಗಳು ಕೆಲವು ಭಾಷಿಕಾಂಶಗಳನ್ನು ಸ್ವೀಕರಣವನ್ನು ಮಾಡಿದೆ. ಬೆಂಗಳೂರು ಗ್ರಾಮೀಣ ಭಾಗವಾದ ಜಾಲ ಭಾಗದಲ್ಲಿ ಜನರ ಆಡುಮಾತಿನಲ್ಲಿ ಹಲವು ತೆಲುಗು ಭಾಷಿಕರಲ್ಲಿ ಕನ್ನಡದ ಪದಗಳನ್ನು ಸ್ವೀಕಾರ ಮಾಡುತ್ತಿದ್ದಾರೆ. "ಒಂದು ಸಮಾಜದ ಜನರು ಬೇರೊಂದು ಪ್ರಧಾನ ಭಾಷೆಯ ಪರಿಸರದ ಮಧ್ಯೆ ವಲಸೆ ಹೋಗಿ ನೆಲೆಸಿ ದ್ವಿಭಾಷಿಕವಾದ ಸಮಾಜವು ಅನ್ಯಭಾಷಾ ಶಬ್ದಗಳನ್ನು ಅಲ್ಪಸ್ವಲ್ಪ ವ್ಯತ್ಯಾಸಗಳೊಡನೆ ನೇರವಾಗಿ

ಸ್ವೀಕರಿಸುತ್ತದೆ."[೨೦] ಹೀಗೆ ಜಾಲ ಭಾಗ ಮತ್ತು ಯಲಹಂಕ ಪೂರ್ವ ಭಾಗದಲ್ಲಿ ತೆಲುಗಿನವರಲ್ಲಿ ಕನ್ನಡ ಸ್ವೀಕಾರವು ನಡೆಯುತ್ತಿದೆ. ಇಂತಹ ಸ್ವೀಕರಣ ಕ್ರಿಯೆಯು ಶುದ್ದ ಸ್ವೀಕರಣ, ಅಸಮಾವಿಷ್ಟ ಸ್ವೀಕರಣ, ಮಿಶ್ರ ಸ್ವೀಕರಣ, ಮತ್ತು ಭಾಷಾಂತರ ಸ್ವೀಕರಣ ನೆಲೆಗಟ್ಟಿನಲ್ಲಿ ಕಂಡುಬರುತ್ತವೆ. ಜಾಲ ಭಾಗದ ತೆಲುಗು ಭಾಷಿಕರಲ್ಲಿ ಸ್ವೀಕಾರವಾಗಿರುವ ಕನ್ನಡ ಭಾಷಿಕಾಂಶಗಳು ಈ ಮುಂದಿನಂತಿವೆ.

ಶುದ್ಧ ಸ್ವೀಕೃತಗಳು : ಒಂದು ಭಾಷೆಯಲ್ಲಿನ ಮೂಲ ರೂಪಗಳನ್ನು ಹಾಗೇಯೇ ಉಳಿಸಿಕೊಂಡು ಸ್ವೀಕಾರವನ್ನು ಪಡೆಯುವ ಶಬ್ದಗಳು ಶುದ್ದ ಸ್ವೀಕೃತವಾಗಿವೆ. ಇಲ್ಲಿ ಜಾಲ ಭಾಗದಲ್ಲಿ ಕನ್ನಡ ಮತ್ತು ತೆಲುಗಿನ ರೂಪಗಳನ್ನು ಪಡೆದು ಶಬ್ದ ಸ್ವೀಕಾರವನ್ನು ಪಡೆದಿವೆ.

ಸ್ವೀಕೃತ ಶಬ್ಧ	ಕನ್ನಡ	ತೆಲುಗು
ಕೊಂಡ್ಬೆಟ್ಟ,	ಬೆಟ್ಟ	ಕೊಂಡ
ದೋಸ್ಪೆನ್ಮು	ಕಾವಲಿ	ಪೆನ್ಮು
ಗಮ್ಲ್ವಾಸ್ನೆ	ವಾಸನೆ	ಗಮ್ಲು

ಅಸಮಾವಿಷ್ಟ ಸ್ವೀಕೃತ : ಒಂದು ಭಾಷೆಯ ಮೂಲ ರೂಪಗಳನ್ನು ಕೆಲವೊಂದು ಮಾರ್ಪಾಡುಗಳೊಂದಿಗೆ ಸ್ವೀಕಾರ ಮಾಡುವಂತಹುಗಳು ಅಸಮಾವಿಷ್ಟ ಸ್ವೀಕೃತ ಶಬ್ದಗಳಾಗಿವೆ. ಜಾಲ ಭಾಗದಲ್ಲಿ ಕೆಲವು ತೆಲುಗಿನ ಮಾರ್ಪಾಡುಗಳೊಂದಿಗೆ ಶಬ್ದ ಸ್ವೀಕಾರ ಮಾಡುತ್ತಿವೆ.

ಸ್ವೀಕೃತ ಶಬ್ಧ	ಕನ್ನಡ	ತೆಲುಗು
ಪಂಗ	ಕೆಲಸ	ಪಂಗ
ಎಮ್ಕೆ	ಎಮಕೆ	ಎಮುಖ
ವಾಮೆ	ವಾಮೆ	ವಾಮುಲು

ಮಿಶ್ರ ಸ್ವೀಕರಣ : ಜಾಲ ಭಾಗದಲ್ಲಿ ಕನ್ನಡ ಮತ್ತು ತೆಲುಗು ರೂಪಗಳೆರಡೂ ಸೇರಿ ಉಂಟಾದ ಸರಳ ಮತ್ತು ಸಮಾಸ ಪದಗಳ ಮಿಶ್ರರೂಪ ಪ್ರಯೋಗಗಳಿವೆ. ಇವು ಮಿಶ್ರ ಸ್ವೀಕೃತವಾಗಿವೆ

ಸ್ವೀಕೃತ ಶಬ್ಧ	ಕನ್ನಡ	ತೆಲುಗು
ಕಿಸ್‌ಪೆಟ್ಟಿ	ಬೆಂಕಿಪೆಟ್ಟಿ	ತೆಪೆಟ್ಟಿ
ಕಣ್ಣದ್ದು	ಅದ್ದಮು	ಕನ್ನಡಕ
ಬೆಟ್ಟಬೆರ್ಲು	ಬೊಟನ್	ಹೆಬ್ಬೆರಳು
ಗಿತ್ತಸು	ಗಿತ್ತಲು	ಗಿಡ್ಡಹಸು

ಭಾಷಾಂತರ ಸ್ವೀಕರಣ : ಬೆಂಗಳೂರು ಗ್ರಾಮೀಣ ಜಾಲ ಹೋಬಳಿಯ ಜನರಾಡುವ ನುಡಿಯಲ್ಲಿ ತೆಲುಗು ಮತ್ತು ಕನ್ನಡ ಪದಗಳನ್ನು ಒಳಗೊಂಡಂತೆ ಭಾಷಾಂತರಗೊಳಿಸಿ ಪದಗಳ ಬಳಕೆಯನ್ನು ಮಾಡುತ್ತಿದ್ದಾರೆ. ಇವುಗಳು ಭಾಷಾಂತರ ಸ್ವೀಕರಣವಾಗಿವೆ.

ಸ್ವೀಕೃತ ಶಬ್ಧ	ಕನ್ನಡ	ತೆಲುಗು
ಕಿಸ್‌ಪೆಟ್ಟಿ	ಬೆಂಕಿಪೆಟ್ಟಿ	ತೆಪೆಟ್ಟಿ
ಇಂಪಿಚ್ಚುಕೋನು	ತೆಗೆದುಕೋ	ಇಚಿಕೋ/ಇಸ್ಕೋ/ಇಚ್ಕೋ
ನಂದಿಕೊಂಡ	ನಂದಿಬೆಟ್ಟ	ನಂದಿಕೊಂಡ
ಕೊಂಡಪ್ಪ	ಬೆಟ್ಟಪ್ಪ	ಕೊಂಡಬ್ಬ

ತೆಲುಗಿನ ನಾಮಪದಗಳ ಬಳಕೆಯಿಂದ ಕೆಲವು ವಿಶೇಷಣಗಳನ್ನು ಬಳಸಿ ಸ್ವೀಕರಣ ಕ್ರಿಯೆ ನಡೆಯುತ್ತಿದೆ. ಹೀಗೆ ಕನ್ನಡ–ತೆಲುಗು ಗಳ ಮಧ್ಯೆ ಸ್ವೀಕರಣ ಕ್ರಿಯೆ ನಡೆದಿದೆ. ಈ ಸ್ವೀಕರಣಗಳು ಆರ್ಥಿಕವಾಗಿ ಪ್ರಬಲವಾದವರಿಗಿಂತ ಕೆಳವರ್ಗದವರಲ್ಲಿ ಹೆಚ್ಚು ಕಂಡುಬರುತ್ತಿವೆ.

"ದ್ವಿಭಾಷಿಕರಾಗುವ ಸಮಾಜವು ಅನ್ಯಭಾಷಾ ಶಬ್ದಗಳನ್ನು ಮೂಲ ಉಚ್ಚಾರಣೆ, ಅರ್ಥಗಳನ್ನು ಬಹುಮಟ್ಟಿಗೆ ಉಳಿಸಿಕೊಂಡು ಸ್ವೀಕರಿಸುತ್ತಾರೆ. ಹೆಚ್ಚು ಹೆಚ್ಚು ದ್ವಿಭಾಷಿಕರಾಗುತ್ತಾ ಹೋದಂತೆ ಅನ್ಯಭಾಷೆಯ ಶಬ್ದಗಳನ್ನು ಮಾತೃಭಾಷೆಗೆ ತಕ್ಕಂತೆ ಅಳವಡಿಸಿಕೊಳ್ಳಲಾಗುತ್ತದೆ."[೨೧] ಇದರಂತೆ ಜಾಲ ಭಾಗದಲ್ಲಿ ಕನ್ನಡ ರೂಪಗಳು ಕೆಲವು ತೆಲುಗು ರೂಪಗಳೊಂದಿಗೆ ಸೇರುವುದರೊಂದಿಗೆ ಕೆಲವು ಸರಳ ಹಾಗೂ ಹೊಸಪದಗಳನ್ನು ಸೃಷ್ಟಿಸಿಕೊಳ್ಳಲಾಗಿದೆ. ಇವು ತೆಲುಗು ಮತ್ತು ಕನ್ನಡ ತಿಳಿದಿರುವ ದ್ವಿಭಾಷಿಕರಲ್ಲಿ ಕಂಡುಬರುತ್ತವೆ. ಮತ್ತು ಕನ್ನಡ ಭಾಷಿಕರು ತೆಲುಗನ್ನು ಅಲ್ಪಸ್ವಲ್ಪ ತಿಳಿದಿದ್ದವರು ಅನೌಪಚಾರಿಕವಾಗಿ ಮಾತನಾಡುವಾಗ ಇಂತಹ ಸ್ವೀಕರಣಗಳನ್ನು ಮಾಡಿಕೊಳ್ಳುತ್ತಿದ್ದಾರೆ.

ಕನ್ನಡರೂಪ > **ತೆಲುಗು ಮತ್ತು ಕನ್ನಡರೂಪ ಸೇರಿಕೆ (ಜಾಲ ಮತ್ತು ಯಲಹಂಕ ಭಾಗದಲ್ಲಿ)**

ಬೆಂಕಿಪಟ್ಣ > ಕಿಸ್‌ಪಟ್ಟಿ/ಕಿಸ್ಪಟ್ಣ (ತೆ–ಕಿಸ್)

ಸೌತೇಕಾಯಿ > ದೋಸ್ಕಾಯಿ (ತೆ– ದೋಸ್)

ತೂಗುಕಾಲ್ವೆ > ತೂಮ್ಕಾಲ್ವೆ (ತೆ– ತೂಮು)

ತೆಂಗಿನಕಾಯಿ > ತೆಂ(ಟೇಂ)ಕಾಯ್(ತೆ– ಟೇಂ)

ಗಿಡ್ಡಸು > ಗಿತ್ತಸು (ತೆ– ಗಿತ್ತ)

ಅರಳೀಮರ > ರಾಗೀಮರ (ತೆ– ರಾಗೀ)

"ಸಾಮಾಜಿಕ ಅನನ್ಯತೆ ಮತ್ತು ಅಂತರ ನಿರ್ವಹಣೆಯಲ್ಲಿ ಒಂದೇ ಭಾಷೆಯ ಭಿನ್ನ ರೂಪಗಳು ಬಳಕೆಯಾದಂತೆ, ಒಂದೇ ಸಮಾಜದಲ್ಲಿ ಬೇರೆ ಬೇರೆ ಭಾಷೆಗಳು ಬಳಕೆಯಾಗುತ್ತವೆ."[೨೨] ಇದರಂತೆ ಕನ್ನಡದ ಕೆಲವು ಘೋಷ ಧ್ವನಿಮಾಗಳಿಂದ ಆರಂಭವಾಗುವ ಪದಗಳ ಸ್ವೀಕಾರವನ್ನು ಜಾಲ ಭಾಗದ ಕೆಳವರ್ಗದ ಮತ್ತು ಮಧ್ಯಮ ವರ್ಗದವರ ಕನ್ನಡ ಮತ್ತು ತೆಲುಗು ಭಾಷಿಕರ ಆಡುಮಾತಿನ ಬಳಕೆಯಲ್ಲಿ ಸೇರಿವೆ.

ಉದಾ – ಗದ್ದಿಗೆ > ಗಾದೀ

ಜಗಳ > ಜಗ್ಡ (ಜಗಡ)

ಬೀಗ > ಬೀಗ್ಮು

ದಟ್ಟ > ದಟ್ಟಮು

ಗುಗ್ಗರಿ > ಗುಗ್ಗಿಳು

ಎಂಬ ಪದಗಳು ಕೆಳವರ್ಗದವರು ಮತ್ತು ಮಧ್ಯಮವರ್ಗದ ಅವಿದ್ಯಾವಂತ ಸ್ತ್ರೀ ಪುರುಷರಲ್ಲಿ ಬಳಕೆಯಾಗುತ್ತಿವೆ. ಈ ಪದಗಳು ಕನ್ನಡ ಮತ್ತು ತೆಲುಗನ್ನು ಅರಿತ ಭಾಷಿಕರಲ್ಲಿ ಬಳಕೆಯಾಗುತ್ತಿವೆ.

"ದ್ವಿಭಾಷಾ ವಲಯವಿದ್ದಾಗ ಬಹುಸಂಖ್ಯಾತ ಅಥವಾ ಪ್ರಭಾವಿ ಭಾಷೆ ಅಲ್ಪಸಂಖ್ಯಾತ ಭಾಷೆಯ ಮೇಲೆ ಪ್ರಭಾವ ಬೀರುತ್ತದೆ."[೨೩] ಅಂತೆಯೆ ಜಾಲ ಭಾಗದಲ್ಲಿ ಬಹುಸಂಖ್ಯಾತ ಕನ್ನಡವು ಅಲ್ಪಸಂಖ್ಯಾತ ತೆಲುಗಿನವರ ಭಾಷೆಯಲ್ಲಿ ಸ್ವೀಕಾರವಾಗುತ್ತಿದೆ. ಕನ್ನಡದ ಕೆಲವು ಘೋಷಧ್ವನಿಗಳು ಅಘೋಷವಾಗಿ ಸ್ವೀಕರಿಸಿ ತೆಲುಗು ಭಾಷಿಕರು ಪದ ಬಳಕೆಯನ್ನು ಮಾಡುತ್ತಿದ್ದಾರೆ. ಉದಾ – ಕಳ್ಳ>ಗಳ್ಳ, ಜೊಲ್ಲು > ಜೊಲ್ಲ. ದಿನ್ನೆ>ದಿನ್ನಾ ವಾಗಿ ಬಳಕೆಯನ್ನು ಮಾಡುತ್ತಾರೆ.

ತೆಲುಗು ಭಾಷೆಯಲ್ಲಿನ ವಾರು ಎಂಬ ಸರ್ವನಾಮವನ್ನು ಕನ್ನಡದ ಅವ್ರು ಎಂಬ ಪದ ಬಳಕೆಯನ್ನು ಮಾಡುತ್ತಿದ್ದಾರೆ. ಕನ್ನಡದ ತಾಲವ್ಯ ಧ್ವನಿಯು ತೆಲುಗಿನಲ್ಲಿ ಘರ್ಷಧ್ವನಿಯಾಗಿ ಬದಲಾಗಿ ಬಳಕೆಯನ್ನು ಮಾಡುತ್ತಿದ್ದಾರೆ. ಅಂದರೆ ತಾಲವ್ಯ ಧ್ವನಿ ಚ್ ಕಾರ ಘರ್ಷಧ್ವನಿ ಸ ಕಾರವಾಗಿ ಬಳಕೆಯಾಗುತ್ತಿದೆ. ಈಚಲು>ಈಸಲಿ(ತೆ). ಚಿಮ್ಮಟ>ಸಿಮುಟ(ತೆ). ಅಣಚು >ಅಣ್ಚು/ಅಣಸು(ತೆ). ಚಮ್ಮಟಿಗೆ >ಚಮ್ಟಿ/ಸಮ್ಮೆಟ(ತೆ). ಸಹಿಸು>ಸಯ್ಚು/ಸಯಿಂಚು(ತೆ), ಚೇಳು>ಸೇಳ್(ತೆ) ಮತ್ತು ತರಗು>ಸರಗು(ತೆ) ಎಂಬುದರಲ್ಲಿ ತ ಕಾರ ಸ ಕಾರವಾಗಿಯು ಬಳಕೆಯಾಗುವುದು.

"ಒಂದು ಸಮಾಜದಲ್ಲಿ ಬಳಕೆಯಾಗುವ ಶಬ್ದ ಮೂಲ ಭಾಷೆಯಲ್ಲಿ ಹೇಗಿದೆಯೋ ಅದೇ ರೂಪದಲ್ಲಿ ಬಳಕೆಯಾಗದೆ ರೂಪ ವ್ಯತ್ಯಾಸವನ್ನು ಹೊಂದಿ ಇನ್ನೊಂದು ಭಾಷೆಯಲ್ಲಿ ಬಳಕೆಯಾಗುತ್ತಿದ್ದರೆ ಅದನ್ನು ಎರಡನೇ ಭಾಷೆಯಲ್ಲಿ ಸ್ವೀಕೃತವಾದುದಾಗಿರುತ್ತದೆ."[೨೪] ಇಂತಹ ಸ್ವೀಕರಣಗಳು ಜಾಲ ಭಾಗದಲ್ಲಿ ಕಾಣಿಸುತ್ತಿವೆ. ಬೆಂಗಳೂರು ಗ್ರಾಮೀಣ ಕನ್ನಡದಲ್ಲಿನ ನ್ ಧ್ವನಿಯು ತೆಲುಗಿನಲ್ಲಿ ಮ್ ಅನುನಾಸಿಕವಾಗಿ ಬಳಕೆಯಾಗುತ್ತಿದೆ. ಪದಾರಂಭದ ನ್ ಧ್ವನಿಯು ಮ್ ಧ್ವನಿಯಾಗಿ ವ್ಯತ್ಯಾಸಗೊಂಡು ಬಳಕೆಯಾಗುತ್ತಿವೆ. ನುಗ್ಗೆ>ಮುಗ್ಗೆ(ತೆ), ನುಲ್ಕೆಕಾಯಿ >ಮುಲ್ಕಾಯಿ(ತೆ), ನುಲ್ಕೆ >ಮುಲಿಕೆ(ತೆ). ಅರೆಸ್ವರಗಳಾದ ಹ್ ಕಾರವು ಯ್ ಕಾರವು ಮತ್ತು ತೆಲುಗಿನಲ್ಲಿ ಇ/ಎ ಕಾರವಾಗಿ ಬಳಕೆಯಾಗುವುದು. ಹಿಪ್ಪೆ>ಯಿಪ್ಪೆ> ಇಪ್ಪಲು(ತೆ) ಮತ್ತು ಹೀಗೆ >ಯಿಂಗೆ >ಇಂಗ(ತೆ) . ಹಿಂಗು> ಇಂಗು >ಇಂಗುವ(ತೆ) ಕನ್ನಡದಲ್ಲಿನ ಹ್ ಕಾರವು ತೆಲುಗಿನಲ್ಲಿ ಪ್ ಕಾರವಾಗುವುದು. ಹಾವು>ಪಾಮಿ ಮತ್ತು ಹಲ್ಲಿ>ಪಲ್ಲಿ ಎಂದು ಬಳಕೆಯಾಗುವ ಪದವು ತೆಲುಗಿನಲ್ಲಿ ಪಾಮು,

ಪಲ್ಲಿ ಎಂದಾಗಿ ಬದಲಾಗಿ ಬಳಕೆಯಾಗುತ್ತಿದೆ. ಹೀಗೆ ಜಾಲ ಭಾಗದಲ್ಲಿ ಕೆಲವು ತೆಲುಗು ಭಾಷಿಕರು ಕನ್ನಡವನ್ನು ಅನುಸರಿಸುವುದರ ಮೂಲಕ ವ್ಯತ್ಯಾಸಗಳು ಉಂಟಾಗುತ್ತಿವೆ.

೬.೫ ಯಾವ ಪ್ರದೇಶದಲ್ಲಿ ಹೆಚ್ಚು ಬದಲಾವಣೆಯಾಗಿದೆ, ಏಕೆ?

ಬೆಂಗಳೂರು ಗ್ರಾಮೀಣ ಜನರ ಭಾಷೆಯಲ್ಲಿ **ಜಾಲ ಮತ್ತು ಯಲಹಂಕದ** ಪೂರ್ವ ಭಾಗದ ಹಳ್ಳಿಗಳ ಭಾಗದಲ್ಲಿ ಇತರ ಹೋಬಳಿಗಳಿಗಿಂತ ಹೆಚ್ಚು ಭಾಷಿಕ ಬದಲಾವಣೆಯನ್ನು ಹೊಂದಿದೆ. ಅದಕ್ಕೆ ಕಾರಣವೆಂದರೆ ಕನ್ನಡ ಮತ್ತು ತೆಲುಗು ಭಾಷಿಕ ಸಮಾಜದವರ ಸಂಪರ್ಕವೇ ಪ್ರಮುಖ ಕಾರಣವಾಗಿದೆ. "ಒಂದು ಸಮಾಜದ ಭಾಷಿಕರು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೋದಾಗ ಒಂದು ಪ್ರದೇಶದ ಭಾಷೆಯ ಮೇಲೆ ಪ್ರಭಾವ ಬೀರುತ್ತದೆ. ಏಕೆಂದರೆ ಎರಡೂ ಗುಂಪುಗಳು ಬೇರೆ ಬೇರೆ ಅನುಭವ ಮತ್ತು ಆಲೋಚನೆಗಳನ್ನು ಹೊಂದಿರುತ್ತವೆ. ಎರಡೂ ಭಾಷೆಗಳ ಅನುಭವಗಳು ಆಲೋಚನೆಗಳು ಒಂದು ಹಂತದಲ್ಲಿ ಧ್ವನಿ ಮತ್ತು ಶಬ್ದಕೋಶದ ಬದಲಾವಣೆಗೆ ಕಾರಣವಾಗುತ್ತಲೇ ವೃತ್ತಿಗಳು ಪರಸ್ಪರ ಸಂಪರ್ಕಕ್ಕೆ ಬಂದಾಗ ಭಾಷೆಯೂ ಒಂದರ ಜೊತೆಗೆ ಇನ್ನೊಂದು ಬೆರೆಯುತ್ತದೆ."[೨೫] ಹೀಗೆ ಸಂಪರ್ಕವನ್ನು ಜಾಲ ಭಾಗವು ಒಳಗೊಂಡು ಭಾಷೆ ಬದಲಾವಣೆಗೆ ಕಾರಣವಾಗುತ್ತಿದೆ. ಬೆಂಗಳೂರು ಉತ್ತರ ತಾಲ್ಲೂಕಿನ ಜಾಲ ಭಾಗವು ದೇವನಹಳ್ಳಿ, ದೊಡ್ಡಬಳ್ಳಾಪುರಕ್ಕೆ ಹೊಂದಿಕೊಂಡಿದ್ದು, ಹೆಚ್ಚು ವ್ಯಾಪಾರಕ್ಕಾಗಿ ಮತ್ತು ದಿನನಿತ್ತಯದ ವ್ಯವಹಾರಗಳಿಗೆ ಆಯಾ ಪ್ರದೇಶಗಳ ನಿಕಟ ಸಂಪರ್ಕವನ್ನು ಅವಲಂಬಿಸಿದೆ. ಸಂಪರ್ಕವನ್ನು ಪಡೆದ ಪ್ರದೇಶಗಳಾದ ದೊಡ್ಡಬಳ್ಳಾಪುರ, ದೇವನಹಳ್ಳಿಯು ಚಿಕ್ಕಬಳ್ಳಾಪುರ ಮತ್ತು ಕೋಲಾರಕ್ಕೆ ಸಮೀಪವಾಗಿದೆ. ಇಲ್ಲಿನ ಜನರು ತೆಲುಗು ಮತ್ತು ಕನ್ನಡ ಭಾಷೆಬಲ್ಲವರಾಗಿದ್ದು ಆ ಸಮಾಜದವರ ಪರಸ್ಪರ ನಿಕಟ ಸಂಪರ್ಕದಿಂದ ಜಾಲ ಹೋಬಳಿಗಳ ಮೇಲೆ ಕ್ರಮೇಣ ಅವರ ಆಡುಮಾತಿನಲ್ಲಿ ಬದಲಾವಣೆ ಉಂಟಾಗಲು ಕಾರಣವಾಗಿದೆ.

ಜಾಲ ಭಾಗದಲ್ಲಿ ಬದಲಾವಣೆಗೆ ಉಂಟಾಗಿರುವ ಸಂಪರ್ಕದ ಸನ್ನಿವೇಶಗಳು : ಜನರು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೋದಾಗ ಒಂದು ಪ್ರದೇಶದ ಭಾಷೆ ಇನ್ನೊಂದು ಪ್ರದೇಶದ ಭಾಷೆಯ ಮೇಲೆ ಪ್ರಭಾವ ಬೀರುತ್ತದೆ. ಕಾರಣ ಎರಡು ಭಿನ್ನ ಭಾಷೆಗಳು ಬೇರೆ ಬೇರೆ ಆಲೋಚನೆಗಳು ಮತ್ತು ಅನುಭವಗಳನ್ನು ಹೊಂದಿರುತ್ತವೆ. ಹೀಗೆ ಪರಸ್ಪರ ಸಂಪರ್ಕವು ಉಂಟಾದಾಗ ಆ ಜನರ ಭಾಷೆಯಲ್ಲಿಯೂ ಬದಲಾವಣೆಯಾಗುತ್ತವೆ. "ಒಂದು ಪ್ರದೇಶವನ್ನು ಗೆದ್ದು ರಾಜಕೀಯವಾಗಿ ಅದನ್ನು ಮೊದಲಿನ ಭಾಗಕ್ಕೆ ಸೇರಿಸುವುದು, ತಮ್ಮ ಜನರ ಪುರ್ನವಸತಿ ಮತ್ತು ಇತರೆ ರಾಜಕೀಯ ಕಾರಣದಿಂದ ಜನರನ್ನು ಸೇರಿಸುವುದರ ಪರಿಣಾಮ ಆ ಸಮಾಜದ ಭಾಷೆಯ ಮೇಲೆ ಪರಿಣಾಮವನ್ನು ತೋರಿಸುತ್ತವೆ."[೨೬] ಇದರಂತೆ

ಬೆಂಗಳೂರಿಗೆ ವಿಜಯನಗರ ಮತ್ತು ಕೆಂಪೇಗೌಡರ ಕಾಲದಲ್ಲಿ ಹಲವು ತೆಲುಗು ಭಾಷಿಕರು ತಮ್ಮ ನೆಲೆಗಾಗಿ ಬೆಂಗಳೂರಿನ ಯಲಹಂಕ ಮತ್ತು ಜಾಲ ಭಾಗವನ್ನು ಒಂದು ಸೇರಿರುವುದು ಆ ಪ್ರದೇಶದ ಭಾಷೆ ಭಿನ್ನವಾಗಲು ಕಾರಣವಾಗಿದೆ.

"೧೯೮೩ ರಲ್ಲಿ ದೇವನಹಳ್ಳಿ ತಾಲ್ಲೂಕಿಗೆ ಒಳಪಟ್ಟ ಜಾಲ ಹೋಬಳಿಯನ್ನು ಬೆಂಗಳೂರು ಉತ್ತರ ತಾಲ್ಲೂಕಿಗೆ ಭೌಗೋಳಿಕವಾಗಿ ಸೇರಿಸಲಾಗಿತು."[೨೭] ಇದರಿಂದ ಕನ್ನಡ ಮತ್ತು ತೆಲುಗು ಬಲ್ಲವರಾದ ಇವರ ಆಡುಮಾತಿನಲ್ಲಿ ಉತ್ತರ ತಾಲ್ಲೂಕಿನ ಬೇರೆ ಹೋಬಳಿಗಳಿಗಿಂತ (ದಾಸನಪುರ, ಹೆಸರಘಟ್ಟ, ಯಶವಂತಪುರ) ಭಿನ್ನವಾದ ಭಾಷಾಪ್ರಯೋಗಗಳು ಬಳಕೆಯಲ್ಲಿವೆ. ಹೀಗೆ ದ್ವಿಭಾಷಿಕ ಪರಿಸರ ನಿರ್ಮಾಣವಾದರ ಪ್ರತಿಫಲದಿಂದ ಜಾಲ ಮತ್ತು ಯಲಹಂಕ ಪೂರ್ವದ ಹಳ್ಳಿಯ ಜನರ ಆಡುಮಾತಿನಲ್ಲಿ ಬದಲಾವಣೆಗಳು ಉಂಟಾಗಿವೆ. ಹಾಗೂ ೧೯೮೩ ರಲ್ಲಿ ದೇವನಹಳ್ಳಿ ತಾಲ್ಲೂಕಿಗೆ ಒಳಪಟ್ಟ ಜಾಲ ಹೋಬಳಿಯನ್ನು ಬೆಂಗಳೂರು ಉತ್ತರ ತಾಲ್ಲೂಕಿಗೆ ಸೇರಿಸಿದ್ದು ಆ ಜನರ ವ್ಯವಹಾರ ಸಂಬಂಧಗಳು, ವ್ಯಾಪಾರ ಸಂಬಂಧಗಳು, ತಾಲ್ಲೂಕಿನ ಜಮೀನು ಆಸ್ತಿಯ ವಿಚಾರಗಳಿಗೆ ನಗರವನ್ನು ಅವಲಂಭಿಸುತ್ತಾರೆ. ಆಗ ಭಿನ್ನ ಪರಿಸರದಲ್ಲಿ ಉಂಟಾಗುವ ಸಂಪರ್ಕದಿಂದ ದ್ವಿಭಾಷಿಕ ಪರಿಸರ ನಿರ್ಮಾಣವಾಗಿದೆ. ಹೀಗೆ ಸಂಪರ್ಕವುಂಟಾದುದು ಜಾಲ ಭಾಗದ ಜನರ ಆಡುಮಾತುಗಳಲ್ಲಿ ಬದಲಾವಣೆಯನ್ನು ತಂದೊಡ್ಡಿವೆ. ಹೀಗೆ ಕನ್ನಡ ಮತ್ತು ತೆಲುಗು ಭಾಷೆ ಬಲ್ಲವರಾದ ಜಾಲ ಜನರ ಆಡುಮಾತಿನಲ್ಲಿ ಬೆಂಗಳೂರಿನ ಉತ್ತರ ತಾಲ್ಲೂಕಿನ ಬೇರೆ ಹೋಬಳಿಗಳಿಗಿಂತ (ದಾಸನಪುರ, ಹೆಸರಘಟ್ಟ, ಯಶವಂತಪುರ) ಭಿನ್ನವಾದ ಭಾಷಾಪ್ರಯೋಗಗಳು ಬಳಕೆಯಲ್ಲಿವೆ.

"ಉದ್ಯೋಗಾನ್ವೇಷಣೆಯಲ್ಲಿ ಜೀವನಮಟ್ಟವನ್ನು ಸುಧಾರಿಸಿಕೊಳ್ಳಲು ಬಹಳ ಜನರು ಒಂದು ಕಡೆಯಿಂದ ಮತ್ತೊಂದು ಕಡೆಗೆ ವಲಸೆ ಹೋಗುತ್ತಾರೆ."[೨೮] ಈ ಕಾರಣವು ಜಾಲ ಭಾಗದಲ್ಲಿ ಭಾಷಾ ಭಿನ್ನತೆಗೆ ಕಾರಣವಾಗಿದೆ "೧೯೬೨ ರಿಂದ ೧೮೯೩ ರ ವರೆಗೆ ಬೆಂಗಳೂರಿನಿಂದ ಪ್ರಮುಖ ನಗರಗಳಿಗೆ ರೈಲ್ವೆಮಾರ್ಗಗಳನ್ನು ನಿರ್ಮಿಸಲಾಯಿತು. ಅದರಲ್ಲಿ ಬೆಂಗಳೂರು ಜೋಲಾರಪೇಟೆಗೆ ಮಾರ್ಗ ತಯಾರಿಸಿ ಮದ್ರಾಸ್ ಬಂದರಿಗೆ ಸಂಪರ್ಕ ಕಲ್ಪಿಸಲಾಗಿತ್ತು. ಉದ್ಯೋಗ ಹರಸಿ ಬಂದ ಜನರಲ್ಲಿ ಸಾಕಷ್ಟು ಕನ್ನಡಿಗರಲ್ಲದೆ, ತಮಿಳು, ತೆಲುಗಿನವರು ಉದ್ಯೋಗ ಪಡೆದರು."[೨೯] ಅದರಲ್ಲಿ ತೆಲುಗು ಭಾಷಿಕರೆ ಹೆಚ್ಚಾಗಿ ಬಂದು ಜಾಲ ಭಾಗದಲ್ಲಿ ನೆಲೆಸಿದ್ದು ದ್ವಿಭಾಷಿಕ ಪರಿಸರ ನಿರ್ಮಾಣಕ್ಕೆ ಅನುವಾಯಿತು. ಇದು ಜಾಲದ ಜನರ ಭಾಷೆಯ ಬದಲಾವಣೆಗೆ ಕಾರಣವಾಗಿದೆ. ಕೊನೆಗೆ ಆ ಜನರು ರೈಲ್ವೆ ಕೆಲಸ ಮುಗಿದ ನಂತರ ಕುಲಕಸುಬಾದ ವ್ಯವಸಾಯದ ಮೊರೆ ಹೋಗಿ ಜಾಲ ಮತ್ತು ಯಲಹಂಕದ ಪೂರ್ವ ಭಾಗದ ಪ್ರದೇಶದಲ್ಲಿ ನೆಲೆ ನಿಂತಿದ್ದಾರೆ. ಪ್ರಸ್ತುತ ಸ್ಥಳೀಯರಾಗೆ ನೆಲೆಯನ್ನು ಕಂಡುಕೊಂಡಿದ್ದಾರೆ.

"ಪ್ರವಾಹಗಳು, ಲಾವವನ್ನು ಹೊರಚೆಲ್ಲುವ ಜ್ವಾಲಾಮುಖಿಗಳು, ಕ್ಷಾಮಗಳು ಇತರ ಇಂತಹ ಘಟನೆಗಳೂ ಸಹ ಹೆಚ್ಚು ಜನಸಂಖ್ಯೆಯನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಒಯ್ಯಲು ಕಾರಣವಾಗುತ್ತದೆ. ಆಗ ಹೊಸ ಭಾಷಾ ಸಂಪರ್ಕಗಳು ಮರುವಸತಿ ಪಡೆದಂತೆ ಪ್ರಾರಂಭವಾಗುತ್ತವೆ"[೩೦] ಈ ರೀತಿಯಲ್ಲಿ "ವಿಜಯನಗರದ ಆಳ್ವಿಕೆಯ ಕಾಲದಲ್ಲಿ ಆಂಧ್ರದಲ್ಲಿ ಬರಗಾಲ ಬಂದು, ದೊಡ್ಡ ಸಂಖ್ಯೆಯಲ್ಲಿ ರೈತರು, ನೇಕಾರರು ಬೆಂಗಳೂರಿಗೆ ಬಂದರು"[೩೧] ಹಾಗೂ "೧೮೭೬–೭೮ ರಲ್ಲಿ ಬೆಂಗಳೂರು ನಗರದಲ್ಲಿ ಎರಡು ವರ್ಷ ಭೀಕರ ಕ್ಷಾಮವಾಗಿ ೯ ಲಕ್ಷ ಜನರು ಸಾವನ್ನಪ್ಪಿದರು. ಬೆಂಗಳೂರಿನಿಂದ ರೈಲ್ವೆ ಸಂಚಾರ ಕಲ್ಪಿಸಿದ ಕೋಲಾರ ಮತ್ತು ತುಮಕೂರು ಭಾಗಗಳಿಗೂ ಪ್ಲೇಗ್ ಮಹಾಮಾರಿ ಹರಡಿತ್ತು. ಅವರು ಚಿಕಿತ್ಸೆಗಾಗಿ ಬೆಂಗಳೂರಿಗೆ ಬಂದಿದ್ದರು. ಹೀಗೆ ಬಂದವರಿಗೆ ಭಿನ್ನಮಂಗಲ, ಯಲಹಂಕ, ಕಂಟೋನ್ಮೆಂಟ್, ಕೆ.ಆರ್.ಪುರಂ ಪ್ರದೇಶಗಳಲ್ಲಿ ಗಂಜಿಕೇಂದ್ರಗಳನ್ನು ತೆರೆಯಲಾಗಿತ್ತು."[೩೨] ಇದನ್ನು ಈಶ್ವರ ಧಾತು ಕ್ಷಾಮ ಎಂದು ಕರೆಯಲಾಗಿದೆ. ಹೀಗೆ ಪ್ಲೇಗ್ ಮಹಾಮಾರಿಯಿಂದ ಕಂಗಾಲಾದವರು ಬೆಂಗಳೂರಿನ ನಗರಪ್ರದೇಶದಿಂದ ಬೆಂಗಳೂರಿನ ಇತರೆ ಗ್ರಾಮೀಣ ಭಾಗಗಳಿಗೆ ವಲಸೆ ಹೋಗಿ ನೆಲೆಸಲು ಮುಂದಾದರು. ಹೀಗೆ ನೆಲೆಸಲು ಮುಂದಾದ ತೆಲುಗು ಭಾಷಿಕರು ದೇವನಹಳ್ಳಿ. ದೊಡ್ಡಬಳ್ಳಾಪುರದ ಕಡೆಹೋಗಿ ಜಾಲ ಪ್ರದೇಶದಲ್ಲಿ ನೆಲೆಸಿದರೆ, ತಮಿಳು ಭಾಷಿಕರು ಹೊಸಕೋಟೆ ಮತ್ತು ಆನೇಕಲ್ಲು ಭಾಗಗಳಿಗೆ ಹೋಗಿ ನೆಲೆಸಿದರು.

ಭಾಷಾ ಬದಲಾವಣೆಗೆ ಇನ್ನಿತರೆ ಕಾರಣಗಳನ್ನು ಗಮನಿಸಿದಾಗ ತೆಲುಗು ಮಾತನಾಡುವ ಕೋಲಾರ ಚಿಕ್ಕಬಳ್ಳಾಪುರದ ಸಂಪರ್ಕವು ಜಾಲ ಮತ್ತು ಯಲಹಂಕದ ಭಾಗದಲ್ಲಿ ಹೆಚ್ಚಾಗಿದ್ದು, ಅಲ್ಲಿನ ಜನರಲ್ಲಿ ಹಲವರು ತೆಲುಗು ಬಲ್ಲವರಾಗಿರುವುದಾಗಿದೆ. "ಒಂದು ಸಮಾಜವು ಬೆಳೆದಂತೆಲ್ಲಾ ಮಾನವ ತನ್ನ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಮತ್ತೊಂದು ಸಮಾಜದ ಸಂಪರ್ಕವನ್ನು ಇರಿಸಿಕೊಂಡ ಕಾರಣ ಒಂದು ಸಮಾಜದ ಭಾಷೆಯ ಪ್ರಭಾವ ಮತ್ತೊಂದು ಸಮಾಜದ ಭಾಷೆಯ ಮೇಲಾಗುವುದು ಕಾಣಬಹುದು"[೩೩] ಹೀಗೆ ಮಾನವನ ಅವಶ್ಯಕತೆಗೆ ಪೂರಕವಾಗಿ ಬೆಂಗಳೂರು ಸಮಾಜವು ಬೆಳವಣಿಗೆಯನ್ನು ಹೊಂದಿತ್ತು. ಬೆಂಗಳೂರು ಹೊರವಲಯದಲ್ಲಿ ಅಭಿವೃದ್ಧಿಗೆ ಪೂರಕವಾಗಿ ಉದ್ಯೋಗ, ಜೀವನ ನಿರ್ವಹಣೆ, ಶಿಕ್ಷಣ, ವೈದ್ಯಕೀಯ ಸೌಲಭ್ಯಗಳ ಸೆಳೆತಗಳು ಮತ್ತು ಗುಳೆ. ಪ್ರತಿಕೂಲ ಪರಿಸ್ಥಿತಿಯಿಂದ ತಳ್ಳುವ ಕ್ರಿಯೆಗಳಿಂದ ಜನರು ವಲಸೆ ಬಂದು ಕೊನೆಗೆ ಗ್ರಾಮೀಣ ಪ್ರದೇಶದಲ್ಲಿ ಒಂದು ನೆಲೆಸಿರುವುದರಿಂದ ಜಾಲ ಭಾಗದಲ್ಲಿ ಭಾಷಾ ಬದಲಾವಣೆಗೆ ಕಾರಣವಾಗಿದೆ.

ಅದಲ್ಲದೆ ಬೆಂಗಳೂರು ಪ್ರದೇಶಗಳಲ್ಲಿ "೧೮೩೧ ರಲ್ಲಿ ಬೆಂಗಳೂರು ರಸ್ತೆಗಳ ಜಾಲ ಬೆಳೆದು ಹೊಸಪೇಟೆಗಳು ಉದಯಿಸಿದವು. ವಲಸಿಗರ ಸಂಖ್ಯೆ ಹೆಚ್ಚಿದವು, ಗುಡಿಕೈಗಾರಿಕೆಗಳು ಹೆಚ್ಚಿದವು. ಸಮಗಾರ,

ಬಡಗಿ, ತಮಿಳಿನ ಹೂಬೆಳೆಯುವವರು, ತಡಿಕೆ ತಯಾರಕರು ಜಟ್ಟಿಗಳನ್ನು ಬೆಂಗಳೂರಿಗೆ ಕರೆತರಲಾಯಿತು”[೩೪] ಎಂಬ ವಿಚಾರಗಳು ಬೆಂಗಳೂರಿನ ಗ್ರಾಮೀಣ ಪರಿಸರದ ಮೇಲೆ ಅನ್ಯಭಾಷಿಕರು ಅಂದು ಬೀರಬಹುದಾದ ಪ್ರಭಾವವನ್ನು ತಿಳಿಸುತ್ತವೆ. ಇವರು ಕ್ರಮೇಣ ಜಾಲ ಭಾಗದಲ್ಲಿ ನೆಲೆಯಾಗಿ ನಿಂತಿರುವುದು ಭಾಷಾ ಬದಲಾವಣೆಗೆ ಕಾರಣವಾಗಿದೆ.

“೮೦ ದಶಕದಲ್ಲಿ ಫಲವತ್ತತೆಯಿಂದ ಕೂಡಿದ ಬೆಂಗಳೂರು ಪರಿಸರದಲ್ಲಿ ಬೆಳೆಗೆ ತಕ್ಕ ಮಾರುಕಟ್ಟೆ ನಿರ್ಮಾಣವಾದದ್ದರಿಂದ ಹೆಚ್ಚು ಜನರು ಗುಳೆ ಬಂದರು”[೩೫] ಬಂದವರು ಇಲ್ಲಿಯೇ ನೆಲೆಸಿ ಉದ್ಯೋಗವನ್ನು ಕಟ್ಟಿಕೊಂಡು ವ್ಯವಹರಿಸಲು ಮುಂದಾದರು. ಇವುಗಳು ಜಾಲ ಪ್ರದೇಶದ ಭಾಷಿಕರೊಡನೆ ಸಂಪರ್ಕ ಹೊಂದಿ ವ್ಯತ್ಯಾಸಗಳು ಉಂಟಾದವು. ಈ ವ್ಯವಹಾರ ಸಂಪರ್ಕವೇ ಮೂಲ ಕಾರಣವಾಗಿ ಬೆಂಗಳೂರಿನ ಜಾಲ ಮತ್ತು ಯಲಹಂಕ ಪೂರ್ವ ಭಾಗದ ಜನರಲ್ಲಿ ಭಾಷಿಕ ವ್ಯತ್ಯಾಸಗಳು ಉಂಟಾಗಿವೆ.

ಹೀಗೆ ಒಂದು ಭಾಷೆಯ ಜನರು ಮತ್ತೊಂದು ಭಾಷೆಯ ಸಂಪರ್ಕವನ್ನು ಹೊಂದಿ ಮೂಲ ಪ್ರಾದೇಶಿಕ ಭಾಷೆಯ ಅಂತರ ಹೆಚ್ಚುತ್ತಾ ಹೋದಂತೆಲ್ಲಾ ಸಂಪರ್ಕದ ಸ್ವರೂಪ ಮತ್ತು ಪ್ರಮಾಣಗಳಲ್ಲಿ ಭಿನ್ನತೆಗಳು ಉಂಟಾಗುತ್ತವೆ. ಪ್ರಾದೇಶಿಕ ಅಂತರವನ್ನು ಹೊಂದಿದ್ದ ಸಮಾಜದ ಜನರು ಹೊಸ ಸಮಾಜದ ಸಂಪರ್ಕಕ್ಕೆ ತಕ್ಕಂತೆ ತಾವಾಡುವ ಭಾಷೆಯಲ್ಲಿ ಭಿನ್ನತೆಯನ್ನು ಹೊಂದುತ್ತವೆ. ಹೀಗೆ ಭಿನ್ನತೆಯನ್ನು ಹೊಂದುತ್ತಾ ಹೊಸ ಸಂಪರ್ಕದ ಭಾಷೆಗೆ ಕಾರಣವಾಗುತ್ತವೆ. “ಒಂದು ಪ್ರದೇಶ ಬೇರೆ ಬೇರೆ ಮಾತೃಭಾಷಿಕರಿಂದ ಕೂಡಿದ್ದು ಇತರ ಭಾಷಿಕ ಪಂಗಡಗಳ ಜೊತೆಗೆ ವ್ಯವಹಾರಕ್ಕಾಗಿ ಬೇರೊಂದು ಭಾಷೆಯ ಅವಶ್ಯಕತೆಯುಂಟಾಗಬಹುದು. ಅಥವಾ ವ್ಯಾಪಾರ ಮತ್ತಿತರ ಕಾರಣಗಳಿಂದ ಇತರ ಪ್ರದೇಶಗಳಲ್ಲಿಯ ಇತರ ಮಾತೃಭಾಷಿಕ ಪಂಗಡಗಳ ನಡುವೆ ಸಂಪರ್ಕಿಸುವ ಅವಶ್ಯಕತೆಯುಂಟಾಗಬಹುದು. ಇಂತಹ ಸಂದರ್ಭಗಳಲ್ಲಿ ಉಂಟಾಗುವ ಭಾಷೆ ಸಂಪರ್ಕಭಾಷೆಯಾಗಿದೆ.”[೩೬] ಹೀಗೆ ಅವಶ್ಯಕತೆಯೇ ಕಾರಣವಾಗಿ ರೂಪುಗೊಂಡಿದ್ದ ಭಾಷೆಯಲ್ಲಿ ಹಲವು ಹೊಸ ಹೊಸ ಪದಗಳ ಸೃಷ್ಟಿಗೆ ಕಾರಣವಾಗುತ್ತದೆ. ಹೀಗೆ “ಎರಡು ಬೇರೆ ಬೇರೆ ಸಮಾಜದ ಬೇರೆ ಬೇರೆ ಭಾಷೆಗಳನ್ನು ಆಡುವ ಜನರು ಸಂಪರ್ಕ ಸಾಧಿಸಲು ಆ ಎರಡೂ ಭಾಷೆಗಳ ಮಿಶ್ರ ಭಾಷೆಗಳನ್ನು ಬಳಸುವರು ಇದನ್ನು ಪಿಜಿನ್ ಮತ್ತು ಕ್ರಯೋಲ್‌ಗಳ ಅವಸ್ಥೆಗಳು ಎನ್ನುವರು”[೩೭] ಬೆಂಗಳೂರಿನ ಜಾಲ ಭಾಗಗಳ ಜನರಾಡುವ ನುಡಿಯಲ್ಲಿ ಪಿಜನ್ ಅವಸ್ಥೆಯ ಪ್ರಾರಂಭಿಕ ಸುಳಿವು ಗೋಚರವಾಗುತ್ತಿದೆ. ಆ ಜನರಲ್ಲಿ ಕನ್ನಡ ತೆಲುಗು ಮತ್ತು ತಮಿಳಿನಲ್ಲಿ ಇಲ್ಲದೆ ಹಾಗೂ ಇರುವ ಪದಗಳನ್ನು ಮಿಶ್ರಗೊಳಿಸಿ ಪ್ರಯೋಗವಾಗುತ್ತಿರುವುದು ಕಂಡುಬಂದಿವೆ.

೬.೬ ಜಾಲ ಭಾಗದಲ್ಲಿ ಪಿಜನ್ ಅವಸ್ಥೆಯ ಪ್ರಾರಂಭಿಕ ಕ್ರಿಯೆಯ ಸುಳಿವು

"ಪಿಜನ್ ಎಂಬ ಶಬ್ಧದ ಅರ್ಥ ಹಣನೀಡಿಕೆ ಅಥವಾ ವ್ಯಾಪಾರ ಎಂದರ್ಥ. ಇದು ಪೇ–ಶಿನ್ ಎಂಬ ಚೀನಿ ಮೂಲದಿಂದ ನಿಷ್ಪನ್ನವಾಗಿದೆ."[೩೮] ಈ ಪ್ರಕ್ರಿಯೆಯನ್ನು ನಮ್ಮ ಕನ್ನಡದಲ್ಲಿ ಯಾಚುಮಾತು, ಬೆರ್ಕೆಬಾಸೆ, ಬೆಕ್ಕೆಮಾತು ಎಂದು ಬಳಸುತ್ತಾರೆ. "ಪಿಜಿನ್ ಮತ್ತು ಕ್ರಯೋಲ್ ಪ್ರಮುಖವಾಗಿ ವ್ಯಾಪಾರಿಗಳು ಮತ್ತಿತರರು ಬಳಸುವ ಮಿಶ್ರಭಾಷೆಯಾಗಿದೆ. ಪಿಜನ್ ಒಂದು ಪ್ರಧಾನ ಭಾಷೆ ಮತ್ತು ಕೆಲವು ಭಾಷೆಗಳ ಮಿಶ್ರಣವಾದರೆ, ಕ್ರಯೋಲ್ ಅನೇಕ ಭಾಷೆಗಳ ಮಿಶ್ರಣವಾಗಿರುತ್ತದೆ"[೩೯]

"ಪಿಜನ್ ಎಂದು ಗುರುತಿಸುವ ಭಾಷೆಯೊಂದು ಯಾವುದೇ ಬಾಷಿಕರ ಮಾತೃಭಾಷೆಯಾಗಿರುವುದಿಲ್ಲ ಆದರೆ ಅದು ಅಂಥ ಸಾಮಾನ್ಯ ಭಾಷೆಯನ್ನಾಡದ ಆದರೆ ಪರಸ್ಪರ ಸಂವಹನಕ್ಕಾಗಿ ವಯಸ್ಕ ಜನರೊಂದಿಗೆ ನಡೆಯುವ ಒಂದು ಭಾಷಿಕ ವ್ಯವಸ್ಥೆಯಾಗಿದೆ. ಮುಖ್ಯವಾಗಿ ವ್ಯಾಪಾರವೇ ಮೊದಲಾದ ವ್ಯಾವಹಾರಿಕ ಸಂವಹನದ ಅಗತ್ಯಕ್ಕಾಗಿ ಏರ್ಪಡುತ್ತದೆ. ಇವನ್ನು ಅಂಚಿನ ಪರಿಕರ ಭಾಷೆಗಳು ಎಂದು ಕರೆಯುವುದು ವಾಡಿಕೆ"[೪೦]

"ಪಿಜನ್ ಎಂಬುದು ವಲಸೆಗಾರ ವ್ಯಾಪಾರಿಗಳೊಡನೆ ವ್ಯವಹರಿಸಲು ಜನಸಮುದಾಯ ರೂಪಿಸಿಕೊಂಡ ಭಾಷೆಯಾಗಿರುತ್ತದೆ"[೪೧] ಹೀಗೆ ರೂಪುಗೊಂಡ ಪಿಜನ್ ಸ್ವರೂಪವು ಜಾಲ ಭಾಗದ ಆಡುನುಡಿಯಲ್ಲಿ ಕಾಣಬಹುದು.

"ಪಿಜನ್ ಭಾಷೆಯು ಎರಡು ಮುಖ್ಯ ಕಾರಣಗಳಿಗಾಗಿ ಹುಟ್ಟುತ್ತವೆ

೧. ವಸಾಹತು ರಾಷ್ಟ್ರಗಳಲ್ಲಿ ವಸಾಹತುಶಾಹಿಗಳು ಸ್ಥಳೀಯ ಜನರ ಸಂಪರ್ಕ ಹೊಂದುವ ಸಂದರ್ಭದಲ್ಲಿ
೨. ವ್ಯಾಪಾರ ವಾಣಿಜ್ಯ ಉದ್ಯಮಗಳನ್ನು ಹುಡುಕುತ್ತಾ ವಲಸೆ ಬಂದಾಗ, ವಲಸಿಗರು ಮಾಡಿಕೊಂಡ ಭಾಷಾ ಪರಿವರ್ತನೆಯ ಹಂತದಲ್ಲಿ"[೪೨]

ಬೆಂಗಳೂರಿನ ಜಾಲ ಭಾಗಗಳ ಜನರಾಡುವ ನುಡಿಯಲ್ಲಿ ಪಿಜನ್ ಅವಸ್ಥೆಯ ಪ್ರಾರಂಭಿಕ ಸುಳಿವು ಗೋಚರವಾಗುತ್ತಿದೆ. ಆ ಜನರಲ್ಲಿ ಕನ್ನಡ ತೆಲುಗು ಮತ್ತು ತಮಿಳಿನಲ್ಲಿ ಇಲ್ಲದೆ ಹಾಗೂ ಇರುವ ಪದಗಳನ್ನು ಮಿಶ್ರಗೊಳಿಸಿ ಪ್ರಯೋಗವಾಗುತ್ತಿರುವುದು ಕಂಡುಬಂದಿವೆ. ಬೆಂಗಳೂರು ಗ್ರಾಮೀಣ ಪರಿಸರದ ಜಾಲ ಮತ್ತು ಯಲಹಂಕ ಪೂರ್ವ ಭಾಗದಲ್ಲಿ ಪಿಜನ್ ಅವಸ್ಥೆಯನ್ನು ತೊರುವ ಕೆಲವು ಶಬ್ದಗಳು ಈ ರೀತಿಯಲ್ಲಿವೆ.

ಕನ್ನಡ	ತೆಲುಗು	ತಮಿಳು	ಪಿಜನ್ ಆಗುವ ಪದಗಳು
ಮುದುಕಿ	ಮುಸಲಿ	ಮುದಿಯಾಳ್	ಮುಶ್ಲಿ/ ಮುಷ್ಲಿ
ಜಿಪುಣ	ಪಿತಿನಾರಿ	ಕಂಜ್ಕಿತ್ನಾರಿ	ಬಂಕ
ಇಲಿ	ಎಲುಕ	ಎಲಿ	ತ್ವಾಡ/ಇಲ್ಕ
ಬೆಕ್ಕು	ಪಿಲ್ಲಿ	ಪೂಣೆ	ಊನೆ
ಬೆಳಗ್ಗೆ	ಪದ್ದುನ್ನಿ	ಕಾಲೈ	ಒತ್ತುಂಟ್ಲೇ
ಅಮ್ಮ	ಅಮ್ಮ	ಅಮ್ಮನ್	ದೋ/ದಮ್ಮೋ
ಚಿಕ್ಕಪ್ಪ	ಪಿನ್ನಯ್ಯ	ಚಿತ್ತಪ್ಪ	ಚಿಚ್ಚ
ಕೊನೆ/ಕಡೆ	ಕೊನಾ	ಕಡೈಸಿಯಾ	ಆಖ್ರಿ
ನೇಗಿಲು	ನಾಂಗೇಲು	ನಾಂಜಿಲ್	ಮಡ್ಕ
ಕುರುಡ	ಗುಡ್ಡ	ಕುರುಡನ್	ಕುಡ್ಡ
ಚಿಂದಿ	ಚಿತ್ತು	ಕಿಳಿಂಜಿ	ಸೆಜ್ಲು
ವಂಗೆಕಾಯಿ	ಕಾನ್ಗಾಗಿಯ್	ಪುಂಗಾಯ್	ಕಾನ್ಕಾಯಿ
ವಂಗೆಮರ	ಕಾನ್‌ಮಾನ್ರು	ಪುಂಗಮರಂ	ಕಾನ್ಮರ
ಸುರಿ	ಪೂಯ್(ನೀಳ್ಪೋಯ್)	ಉರಿಂಜು	ಅಟ್ಟಿ/ ಅಟ್ಟು
ಬೆಂಕಿಪೆಟ್ಟಿ	ಅಗ್ಗಿಪೆಟ್ಟಿ	ವೊತ್ತಿಪಟ್ಟಿ/ತಿಪೆಟ್ಟಿ	ಕಿಸ್ಪೆಟ್ಟಿ
ಚಪ್ಪರದವರೆಕಾಯಿ		ಚಿಕ್ಡಿ/ಚಿಕ್ಕಡಿ	ಸಿಕ್ಡಿಕಾಯ್

ಪಿಜನ್ ಭಾಷೆಯು ಪದಗಳನ್ನು ಮೇಲು ಭಾಷೆಯಿಂದ ವ್ಯಾಕರಣವನ್ನು ಕೆಳವರ್ಗದ ಭಾಷೆಯು ಬಳಸಿ ಅವಶ್ಯಕತೆಗೆ ಅನುಸಾರವಾಗಿ ಬಳಸಿಕೊಳ್ಳುತ್ತದೆ. ಎರಡೂ ಭಾಷೆಗಳ ವ್ಯಾಕರಣಾಂಶಗಳನ್ನು ಒಂದು ಮೂಲ

ಭಾಷೆಗಳಿಗಿಂತ ಭಿನ್ನವಾಗಿರುವುದಾಗಿದೆ. “ಪಿಜನ್ ಭಾಷೆಯಾಗಿ ಪರಿವರ್ತನೆಯಾಗಲು ವಚನ, ಲಿಂಗ, ವಿಭಕ್ತಿ, ಪುರುಷ ಕಾಲ, ವಿಧಿರೂಪಗಳು ಕರ್ತರಿ ಕರ್ಮಿಣಿ ಪ್ರಯೋಗಗಳ ಬಳಕೆಯ ಸಮಸ್ಯೆಯು ಹೆಚ್ಚು ಕಡಿಮೆ ಪಿಜನ್ ಭಾಷೆಗೆ ಇರುವುದಿಲ್ಲ. ಈ ಭಾಷೆಗಳಿಗೆ ವ್ಯಾಕರಣವಿಲ್ಲದೆ ಪ್ರಧಾನವಾದ ಭಾಷಾ ಭಾಷೆಯ ವ್ಯಾಕರಣವನ್ನೇ ಅವಲಂಬಿಸಿರುವರು.”[೪೩] ಇದರಂತೆ ಮೇಲಿನ ಪಟ್ಟಿಯಲ್ಲಿ ಉದಾಹರಣೆ: ಬೆಂಕಿಪೆಟ್ಟಿಗೆ ಎಂಬುದನ್ನು ಬೆಂಗಳೂರಿನ ಗ್ರಾಮೀಣ ಪ್ರದೇಶದ ದಾ.ಹೆ.ಯಶ. ಭಾಗದಲ್ಲಿ ಬೆಂಕಿಪಟ್ನ ಎಂದು ಬಳಸಿದರೆ, ತೆಲುಗಿನಲ್ಲಿ ಅಗ್ಗಿಪೆಟ್ಟಿ ಎಂದಿದೆ. ತಮಿಳಿನಲ್ಲಿ ತಿಪೆಟ್ಟಿ ಅಥವಾ ವೊತ್ತಿಪೆಟ್ಟಿ ಎಂದಿದೆ ಆದರೆ ಜಾಲ ಭಾಗದಲ್ಲಿ ಕೆಸ್ಪೆಟ್ಟಿ ಎಂದು ಬಳಸುತ್ತಿದ್ದಾರೆ. ಕಿಸೆ ಎಂದೆ ಜೇಬು, ಜೇಬಿನಲ್ಲಿ ಇರಿಸಬಹುದಾದ ಪೆಟ್ಟಿ ಎಂಥಲೇ ಭಿನ್ನವಾಗಿ ಬಳಸುತ್ತಿದ್ದಾರೆ. ಮೇಲಿನ ಪಟ್ಟಿಯಲ್ಲಿ ಬೇರೆ ಬೇರೆ ಭಾಷೆಯ ಧ್ವನಿಗಳನ್ನು ಮಿಶ್ರಗೊಳಿಸಿ ಪಿಜನ್ ರೀತಿಯಲ್ಲಿ ಜಾಲ ಜನರು ಬಳಸುತ್ತಿರುವುದು ಕಂಡುಬರುತ್ತಿದೆ.

“ಪಿಜನ್ ಭಾಷೆಯು ಅನೇಕ ಕ್ರಮೇಣ ಉಳಿಯುತ್ತವೋ ಅಥವಾ ಅಷ್ಟಕ್ಕೆ ಮೊಟಕಾಗುತ್ತವೋ ಎಂಬುದನ್ನು ನಿಖರವಾಗಿ ಹೇಳಲು ಸಾಧ್ಯವಾಗುವುದಿಲ್ಲ. ಕಾರಣ ಅವು ಹಾಗೇ ಉಳಿದರೇ ಸ್ವತಂತ್ರ್ಯ ಭಾಷೆಯಾಗಿ ಮಾರ್ಪಾಡುತ್ತವೆ. ಕಾರಣ ಅವು ಹಾಗೇ ಸ್ವತಂತ್ರವಾಗಿ ಉಳಿದರೇ ಅದು ಕ್ರಯೋಲ್ ಅವಸ್ಥೆಯಾಗುತ್ತದೆ. ಪಿಜನ್ ಪ್ರಾರಂಭದಲ್ಲಿ ಕೆಲವು ಸೂಕ್ಷ್ಮ ಬದಲಾವಣೆ ಹೊಂದಿದ್ದು, ಅದು ಹೆಚ್ಚು ಬದಲಾವಣೆಯಾಗಿ ಸ್ವತಂತ್ರತೆ ಪಡೆದುಕೊಂಡಾಗ ಕ್ರಯೋಲ್ ಆಗಿ ಸಾಮಾಜಿಕವಾಗಿ ಬಳಕೆಯಾಗುತ್ತದೆ.”[೪೪] ಆದರೇ ಜಾಲ ಭಾಗದಲ್ಲಿ ಕೆಲವೊಂದು ತೆಲುಗು ಮತ್ತು ಕನ್ನಡ ಮಾತನಾಡುವವರು ಹೆಚ್ಚಾಗಿದ್ದಾರೆ. ಅವರ ಆಡುಮಾತಿನಲ್ಲಿ ತೆಲುಗು ಮತ್ತು ಕನ್ನಡ ಭಾಷೆಯಲ್ಲಿ ಬಳಕೆಯಿಲ್ಲದ ಬೇರೊಂದು ಪದಗಳ ಬಳಕೆಗಳು ಕಂಡುಬರುತ್ತಿವೆ. ಅಂದರೆ ತೆಲುಗು ಕನ್ನಡಕ್ಕೆ ಹೊರತಾದ ಬೇರೊಂದು ಸ್ವತಂತ್ರ ಅರ್ಥ ಬರುವ ಪದಗಳ ಬಳಕೆಗಳು ಕಾಣುತ್ತಿವೆ. ಇದ್ದರಿಂದ ನಿಧಾನವಾಗಿ ಜಾಲ ಭಾಗಗಳಲ್ಲಿ ಪಿಜನ್ ಅವಸ್ಥೆಯು ಉಂಟಾಗುತ್ತಿದೆ ಎಂಬುದನ್ನು ಅಧ್ಯಯನದ ಮೂಲಕ ಕಂಡುಕೊಂಡಿದ್ದೇನೆ.

ಇದು ಜಾಲ ಭಾಗದಲ್ಲಿ ಅಲ್ಲದೆ ಹೊಸಕೋಟೆ, ಮಾಲೂರು, ಆನೇಕಲ್ಲು ಭಾಗಗಳಲ್ಲಿ ತಮಿಳು ತೆಲುಗು ಮತ್ತು ಕನ್ನಡ ಭಾಷೆಗಳ ಅಧಿಕ ಸಂಪರ್ಕದಿಂದ ಆ ಜನರ ಆಡುಮಾತಿನಲ್ಲಿ ಸಾಕಷ್ಟು ಹೊಸ ಹೊಸ ಪದಗಳು ಕಂಡುಬರುತ್ತವೆ. ಅಲ್ಲಿಯೂ ಸೂಕ್ಷ್ಮವಾಗಿ ಪಿಜನ್ ಸ್ವರೂಪದ ಬದಲಾವಣೆಗಳು ಕಾಣಿಸುತ್ತವೆ. ಆ ಭಾಗದ ಜನರು ಆ ಭಾಷಿಕರಾಡುವ ಭಾಷೆಯನ್ನು ತಿಗಳಾರಿ ಭಾಷೆ ಮತ್ತು ಅರಹು ಭಾಷೆಯೆಂದು ಗುರುತಿಸುತ್ತಾರೆ. ಆದರೆ ಅರಹು ಭಾಷೆಯ ಸೃಷ್ಟಿಯಾಗಲು ಪಿಜನ್ ರೂಪದ ಮುಂದಿನ ಹಂತ ಕ್ರಯೋಲ್ ಆಗಿರಬೇಕು ಎಂದು ನನ್ನ ನಿಲುವು. ಆದರೆ ಜಾಲ ಭಾಗದಲ್ಲಿ ಪಿಜನ್ ಸ್ವರೂಪವು ಸೂಕ್ಷ್ಮವಾಗಿ

ಗೋಚರವಾಗುತ್ತಿದೆ. ಅದು ಮುಂದುವರೆಯಲುಬಹುದು ಅಥವಾ ಮೊಟಕಾಗಬಹುದು ಅದನ್ನು ಕಾದು ನೋಡಬೇಕಾಗಿದೆ.

ಕೊನೆಟಿಪ್ಪಣಿಗಳು :

೧. ಡಾ. ಕೆ. ಕೆಂಪೇಗೌಡ, *ಸಾಮಾನ್ಯ ಭಾಷಾ ವಿಜ್ಞಾನ,* ಪುಟ ೨೫.

೨. ಡಾ. ಕೃಷ್ಣ ಪರಮೇಶ್ವರ ಭಟ್ಟ, *ಭಾಷೆ ಮತ್ತು ಸಾಮಾಜಿಕ ಸಂದರ್ಭ,* ಪುಟ ೫೩.

೩. ಅದೇ, ಪುಟ ೩೯.

೪. ಅದೇ, ಪುಟ ೪೩.

೫. ಡಾ. ಕೆ.ವಿ. ನಾರಾಯಣ(ಸಂ), *ಭಾಷೆ(ವಿಶ್ವಕೋಶ ೧),* ಪುಟ ೫೨.

೬. ಅದೇ, ಪುಟ ೫೩.

೭. ಅದೇ, ಪುಟ ೫೩.

೮. ಡಾ. ಕೃಷ್ಣ ಪರಮೇಶ್ವರ ಭಟ್ಟ, *ಭಾಷೆ ಮತ್ತು ಸಾಮಾಜಿಕ ಸಂದರ್ಭ,* ಪುಟ ೩೯.

೯. ಡಾ. ಕೆ.ವಿ. ನಾರಾಯಣ(ಸಂ), ಭಾಷೆ(ವಿಶ್ವಕೋಶ ೧), ಪುಟ ೨೯೫.

೧೦. ಡಾ. ಕೃಷ್ಣ ಪರಮೇಶ್ವರ ಭಟ್ಟ, *ಭಾಷೆ ಮತ್ತು ಸಾಮಾಜಿಕ ಸಂದರ್ಭ,* ಪುಟ ೩೯.

೧೧. ಅದೇ, ಪುಟ ೪೨.

೧೨. ಡಾ. ಕೃಷ್ಣ ಪರಮೇಶ್ವರ ಭಟ್ಟ, *ತೆಲುಗು-ಕನ್ನಡ ದ್ವಿಭಾಷಿಕ ಅಧ್ಯಯನ.* ಪುಟ ೮.

೧೩. ಡಾ. ಕೆ.ವಿ. ನಾರಾಯಣ(ಸಂ), *ಭಾಷೆ(ವಿಶ್ವಕೋಶ ೧),* ಪುಟ ೩೩೭.

೧೪. ಅದೇ, ಪುಟ ೨೯೮.

೧೫. ಡಾ. ಕೆ. ಕೆಂಪೇಗೌಡ, *ಸಾಮಾನ್ಯ ಭಾಷಾ ವಿಜ್ಞಾನ,* ಪುಟ ೭೬.

೧೬. ಡಾ. ಕೃಷ್ಣ ಪರಮೇಶ್ವರ ಭಟ್ಟ, *ಭಾಷೆ ಮತ್ತು ಸಾಮಾಜಿಕ ಸಂದರ್ಭ,* ಪುಟ ೩೬.

೧೭. ಅದೇ, ಪುಟ ೧೯.

೧೮. ಡಾ. ಕೆ. ಕೆಂಪೇಗೌಡ, *ಸಾಮಾನ್ಯ ಭಾಷಾ ವಿಜ್ಞಾನ,* ಪುಟ ೨೬.

೧೯. ಡಾ. ಕೆ.ವಿ. ನಾರಾಯಣ(ಸಂ), *ಭಾಷೆ(ವಿಶ್ವಕೋಶ ೧),* ಪುಟ ೫೨.

೨೦. ಡಾ. ಕೃಷ್ಣಪರಮೇಶ್ವರ ಭಟ್ಟ, *ತೆಲುಗು-ಕನ್ನಡ ದ್ವಿಭಾಷಿಕ ಅಧ್ಯಯನ.* ಪುಟ ೮.

೨೧. ಡಾ. ಕೃಷ್ಣಪರಮೇಶ್ವರ ಭಟ್ಟ, *ಭಾಷೆ ಮತ್ತು ಸಾಮಾಜಿಕ ಸಂದರ್ಭ,* ಪುಟ ೮.

೨೨. ಡಾ. ಕೆ.ವಿ. ನಾರಾಯಣ(ಸಂ), *ಭಾಷೆ(ವಿಶ್ವಕೋಶ ೧),* ಪುಟ ೫೩.

೨೩. ಅದೇ, ಪುಟ ೨೯೭.

೨೪. ಡಾ. ಕೃಷ್ಣಪರಮೇಶ್ವರ ಭಟ್ಟ, *ಭಾಷೆ ಮತ್ತು ಸಾಮಾಜಿಕ ಸಂದರ್ಭ,* ಪುಟ ೧೦೨.

೨೫. ಡಾ. ಕೆ.ವಿ. ನಾರಾಯಣ(ಸಂ), *ಭಾಷೆ(ವಿಶ್ವಕೋಶ ೧),* ಪುಟ ೨೯೭.

೨೬. ಅದೇ, ಪುಟ ೩೩೬.

೨೭. ಸೂರ್ಯನಂದ ಕಾಮತ್, *ಬೆಂಗಳೂರು ಗೆಜೆಟರೆರಿಯರ್,* ಪುಟ ೧೬.

೨೮. ಡಾ. ಕೆ.ವಿ. ನಾರಾಯಣ(ಸಂ), *ಭಾಷೆ(ವಿಶ್ವಕೋಶ ೧),* ಪುಟ ೩೩೬.

೨೯. ಸೂರ್ಯನಂದ ಕಾಮತ್, *ಬೆಂಗಳೂರು ಗೆಜೆಟರೆರಿಯರ್,* ಪುಟ ೯೦.

೩೦. ಡಾ. ಕೆ.ವಿ. ನಾರಾಯಣ(ಸಂ), *ಭಾಷೆ(ವಿಶ್ವಕೋಶ ೧),* ಪುಟ ೩೩೯.

೩೧. ಅದೇ, ಪುಟ ೯೦.

೩೨. ಡಾ. ಕೆ. ಕೆಂಪೇಗೌಡ, *ಸಾಮಾನ್ಯ ಭಾಷಾ ವಿಜ್ಞಾನ,* ಪುಟ ೫೩.

೩೩. ಡಾ. ಕೆ.ವಿ. ನಾರಾಯಣ(ಸಂ), *ಭಾಷೆ(ವಿಶ್ವಕೋಶ ೧),* ಪುಟ ೩೩೯.

೩೪. ಡಾ. ಕೆ. ಕೆಂಪೇಗೌಡ, *ಸಾಮಾನ್ಯ ಭಾಷಾ ವಿಜ್ಞಾನ,* ಪುಟ ೫೪.

೩೫. ರಾಂ.ನಂ.ಚಂದ್ರಶೇಖರ್, *ಚಳುವಳಿಯ ನೆಲೆ ಬೆಲೆ. (ಬೆಂಗಳೂರು ದರ್ಶನ-೧)* ಪುಟ ೫.

೩೬. ಡಾ. ಕೃಷ್ಣ ಪರಮೇಶ್ವರ ಭಟ್ಟ, *ಭಾಷೆ ಮತ್ತು ಸಾಮಾಜಿಕ ಸಂದರ್ಭ,* ಪುಟ ೬೨.

೩೭. ಸೂರ್ಯನಂದ ಕಾಮತ್, *ಬೆಂಗಳೂರು ಗೆಜೆಟರೆರಿಯರ್,* ಪುಟ ೭೬.

೩೮. ಡಾ. ಕೃಷ್ಣ ಪರಮೇಶ್ವರ ಭಟ್ಟ, *ಭಾಷೆ ಮತ್ತು ಸಾಮಾಜಿಕ ಸಂದರ್ಭ,* ಪುಟ ೬೨.

೩೯. ಅದೇ, ಪುಟ ೬೪.

೪೦. ಡಾ. ಕೆ.ವಿ. ನಾರಾಯಣ(ಸಂ), *ಭಾಷೆ(ವಿಶ್ವಕೋಶ ೧),* ಪುಟ ೩೦೨.

೪೧. ಅದೇ, ಪುಟ ೩೦೨.

೪೨. ಡಾ. ಕೃಷ್ಣ ಪರಮೇಶ್ವರ ಭಟ್ಟ, *ಭಾಷೆ ಮತ್ತು ಸಾಮಾಜಿಕ ಸಂದರ್ಭ,* ಪುಟ ೬೨.

೪೩. ಡಾ. ಕೆ. ಕೆಂಪೇಗೌಡ, *ಸಾಮಾನ್ಯ ಭಾಷಾ ವಿಜ್ಞಾನ,* ಪುಟ ೭೬.

೪೪. ಡಾ.ಕೃಷ್ಣ ಪರಮೇಶ್ವರ ಭಟ್ಟ, *ಭಾಷೆ ಮತ್ತು ಸಾಮಾಜಿಕ ಸಂದರ್ಭ,* ಪುಟ ೬೪.

****

ಅಧ್ಯಾಯ ೭

ಉಪಸಂಹಾರ

ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಭಾಗದ ಭಾಷೆಯನ್ನು ಗಮನಿಸಿದಾಗ ಈ ಕೆಳಕಂಡ ಅಂಶಗಳು ಕಂಡು ಬರುತ್ತವೆ:

ಮೊದಲನೆಯದಾಗಿ, ವಿಜಯನಗರ ಮತ್ತು ಕೆಂಪೇಗೌಡರ ಕಾಲದಲ್ಲಿ ಬೆಂಗಳೂರು ನಗರ ಭಾಗಕ್ಕೆ ವಿವಿಧ ವೃತ್ತಿಯನ್ನು ಮಾಡುವ ಜನರನ್ನು ಕರೆತರಲಾಗಿತ್ತು. ಅದರಲ್ಲಿ ತೆಲುಗು ಮತ್ತು ತಮಿಳು ಜನರು ಬಹುಸಂಖ್ಯೆಯಲ್ಲಿ ಇದ್ದರು. ೧೮೭೬ ರಲ್ಲಿ ಬೆಂಗಳೂರು ಹೊಸ ನಗರವಾದ ಮಾರುಕಟ್ಟೆ ಪ್ರದೇಶದಲ್ಲಿ ಸಂಭವಿಸಿದ ಈಶ್ವರಧಾತು ಕ್ಷಾಮ ಬಂದು ಪ್ಲೇಗ್ ಪಿಡುಗಿನಿಂದ ಜನರು ತತ್ತರಿಸಿ ಬೆಂಗಳೂರಿನ ಗ್ರಾಮೀಣ ಭಾಗಗಳಿಗೆ ಬಂದು ನೆಲೆಸಿದರು. ಅದೇ ಕಾಲಘಟ್ಟ ದಲ್ಲಿ ಬೆಂಗಳೂರು ಉತ್ತರ ತಾಲ್ಲೂಕಿನ ದೇವನಹಳ್ಳಿ ನೆಲಮಂಗಲ ದೊಡ್ಡಬಳ್ಳಾಪುರವು ಪ್ರಮುಖ ವ್ಯಾಪಾರ ಕೇಂದ್ರವಾಗಿ ಬೆಳೆದಿತ್ತು. ಬೆಂಗಳೂರಿನ ಯಲಹಂಕ ಭಾಗದಲ್ಲಿ ಅನೇಕ ಕೈಗಾರಿಕೆಗಳು ಸರಿಸುಮಾರಿನಲ್ಲಿ ಅಭಿವೃದ್ಧಿಯಾಗಿದ್ದವು. ಇಂತಹ ಕಾರಣಗಳಿಂದ ಬೆಂಗಳೂರಿನ ನಗರ ಭಾಗದಲ್ಲಿದ್ದ ತೆಲುಗು ಮತ್ತು ತಮಿಳು ಭಾಷಿಕರು ಬೆಂಗಳೂರು ನಗರ ಭಾಗದಿಂದ ಗ್ರಾಮೀಣ ಪ್ರದೇಶಗಳಿಗೆ ವಲಸೆ ಬರುವುದು ಹೆಚ್ಚಾಯಿತು. ತೆಲುಗಿನವರು ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರ ಪ್ರದೇಶಗಳತ್ತ ವಲಸೆ ಬಂದರೆ, ತಮಿಳರು ಆನೇಕಲ್ ಮತ್ತು ಹೊಸೂರು ಭಾಗಗಳಿಗೆ ವಲಸೆ ಹೋದರು. ಇದು ಬೆಂಗಳೂರಿನ ಉತ್ತರ ತಾಲ್ಲೂಕಿನ ಗ್ರಾಮೀಣ ಪ್ರದೇಶದ ಕನ್ನಡ ಭಾಷೆಯ ಬದಲಾವಣೆಗೆ ಕಾರಣವಾಯಿತು. ಇದನ್ನು ಸಾಮಾಜಿಕ ಭಾಷಾಹಿನ್ನಲೆಯಲ್ಲಿ ವಲಸೆಯನ್ನು ತಳ್ಳುವ ಪ್ರಕ್ರಿಯೆಯಾಗಿ ನೋಡುತ್ತೇವೆ. ಬದುಕುವ ಅವಕಾಶಗಳು ಇರುವ ಸ್ಥಳಗಳಿಗೆ ಜನರ ವಲಸೆಯು ಸಾಗಿಬರುತ್ತದೆ. ಈಗಲೂ ಇಂತಹ ವಲಸೆಯ ಪ್ರಕ್ರಿಯೆ ಮುಂದುವರಿದಿದೆ. ಅದರಲ್ಲೂ ಮುಖ್ಯವಾಗಿ ಜಾಲ ಮತ್ತು ಯಲಹಂಕದ ಪೂರ್ವ ಗ್ರಾಮೀಣ ಭಾಗಗಳಲ್ಲಿ ಈ ವಲಸೆಯ ಪ್ರಯುಕ್ತ ಕನ್ನಡದ ಕೆಲವು ಪದಗಳಲ್ಲಿ ಧ್ವನಿ ಬದಲಾವಣೆ ಕಾಣಿಸಿಕೊಂಡಿದೆ.

ಎರಡನೆಯದಾಗಿ, ಹೀಗೆ ಕಂಡು ಬರುವ ಧ್ವನಿ ಬದಲಾವಣೆಗಳೆಂದರೆ ಸರ್ವನಾಮಗಳಲ್ಲಿ ಕಂಡುಬರುವ ಬದಲಾವಣೆಗಳಾಗಿವೆ. ಉದಾಹರಣೆಗೆ– ಅವನು > ಆತ್ನು. ಯಾರಿಗೆ>ಯಾರ್ಕ. ಕೆಲವು ನಾಮಪದಗಳಲ್ಲೂ ಬದಲಾವಣೆಗಳಾಗಿವೆ. ಉದಾಹರಣೆಗೆ– ಬೆಕ್ಕು>ಊನೆ, ಮುದುಕಿ>ಮುಶ್ಲಿ, ಇಲಿ>ತ್ವಾಡ, ಜಿಪುಣ>ಬಂಕ, ಗಿಳಿ>ಶಿಲುಕ, ಹಿತ್ತಾಳೆ>ಇತ್ತಾಡೆ, ಬೆಂಕಿಪೆಟ್ಟಿಗೆ>ಕಿಸ್ಪೆಟ್ಟಿ, ನೇಗಿಲು>ಮಡ್ಕ, ಚಿಕ್ಕಪ್ಪ>ಚಿಚ್ಚ– ಹೀಗೆ ಸಾಕಷ್ಟು

ಪದಗಳು ಕಂಡು ಬರುತ್ತವೆ. ಇವುಗಳಲ್ಲಿ ಕೆಲವು ತೆಲುಗು ಭಾಷೆಯ ಪ್ರಭಾವದಿ ಂದಾದರೆ ಇನ್ನು ಕೆಲವು ತಮಿಳು ಭಾಷೆಯ ಪ್ರಭಾವದಿಂದಾಗಿವೆ. ಆದರೆ ಈ ಎರಡು ಭಾಷೆಗಳಲ್ಲಿ ಜಾಲ ಮತ್ತು ಯಲಹಂಹ ಪೂರ್ವ ಭಾಗದ ಪ್ರದೇಶಗಳಲ್ಲಿ ತೆಲುಗಿನ ಪ್ರಭಾವ ಅಧಿಕವಾಗಿದೆ. ಗಮನಾರ್ಹವಾದ ಪ್ರಮುಖ ಅಂಶವೆಂದರೆ ಹೀಗೆ ಬದಲಾಗುತ್ತಿರುವ ಪದಗಳು ತಮಿಳಿನಲ್ಲೂ ಇಲ್ಲದ ತೆಲುಗಿನಲ್ಲೂ ಇಲ್ಲದ ಪದಗಳಾಗಿವೆ. ಕನ್ನಡ ತೆಲುಗು ತಮಿಳು ಮೂರು ಭಾಷೆಗಳು ಬೆರೆತು ವಿಭಿನ್ನ ಪದಗಳು ಆಡುಮಾತಿನಲ್ಲಿ ಬಳಕೆಯಾಗುತ್ತಿವೆ. ಉದಾಹರಣೆಗೆ ಬೆಕ್ಕು ತೆಲುಗಿನಲ್ಲಿ 'ಪಿಲ್ಲಿ'ಯಾದರೆ, ತಮಿಳಿನಲ್ಲಿ 'ಪೂಣೆ' ಯಾಗಿದೆ. ಆದರೆ ಜಾಲ ಮತ್ತು ಯಲಹಂಕ ಭಾಗದಲ್ಲಿ 'ಊನೆ'ಯಾಗಿ ಪರಿವರ್ತನೆಯಾಗಿದೆ.

ಮೂರನೆಯದಾಗಿ, ಈ ಅಧ್ಯಯನದಿಂದ ಭಾಷೆಗಳ ಪರಸ್ಪರ ಸಂಪರ್ಕವು ಎಂತಹ ಬದಲಾವಣೆಗೆ ಕಾರಣವಾಗುತ್ತದೆ ಎಂಬುದನ್ನು ಗುರಿತಿಸಿಕೊಳ್ಳಲು ಸಾಧ್ಯವಾಗುತ್ತಿದೆ. ಕನ್ನಡ ತೆಲುಗು ತಮಿಳು ಭಾಷೆಗಳಿಗೆ ಹೊರತಾದ ಪದಗಳ ಸೃಷ್ಟಿಯು, ಮೊದಲು ಪದಗಳಲ್ಲಿನ ಧ್ವನಿ ವ್ಯತ್ಯಾಸದಲ್ಲಿ ಕಂಡು ಬರುತ್ತಿದೆ. ಹೊಸ ಪದಗಳನ್ನು ಸೃಷ್ಟಿ ಮಾಡಿಕೊಳ್ಳುವ ಹಂತದಲ್ಲಿ ಹೆಚ್ಚು ತೆಲುಗು ಭಾಷೆಯ ಸಂಪರ್ಕವು ಈ ಭಾಗದಲ್ಲಿದ್ದರೂ, ತಮಿಳಿನ ಉಚ್ಚಾರಣೆಯೂ ಪ್ರಭಾವ ಬೀರುತ್ತಿರುವುದನ್ನು ಕಾಣಬಹುದಾಗಿದೆ. ಉದಾಹರಣೆಗೆ ಕನ್ನಡದಲ್ಲಿ 'ಇಲಿ' ಎಂಬುದು ತೆಲುಗಿನಲ್ಲಿ 'ಎಲುಕ' ತಮಿಳಿನಲ್ಲಿ 'ಎಲಿ' ಎಂಬುದಾಗಿದೆ. ಆದರೆ ಜಾಲ ಮತ್ತು ಯಲಹಂಕ ಭಾಗದಲ್ಲಿ 'ಇಲ್ಕ' ಅಥವಾ 'ತ್ವಾಡ' ಎಂಬುದಾಗಿ ಬದಲಾಗಿರುವುದು ಕಂಡು ಬರುತ್ತದೆ. ತೆಲುಗಿನ ಎಲುಕ ತಮಿಳಿನ 'ಎಲಿ' ಎಂಬುದು ಈ ಭಾಗದ ಆಡುಮಾತಿನಲ್ಲಿ 'ಇಲ್ಕ' ಎಂಬ ಈ ಪದದಲ್ಲಿ ಕನ್ನಡದ 'ಇ' ಕಾರವನ್ನು ಆಯ್ಕೆ ಮಾಡಿಕೊಂಡು ತೆಲುಗಿನ ಮತ್ತು ಕನ್ನಡ ಎರಡನ್ನು 'ಲು' ಸೇರಿಸಿ 'ಉ' ಸ್ವರವನ್ನು ಲೋಪ ಮಾಡಿಕೊಂಡು ಎರಡು ಧ್ವನಿಯನ್ನು ಒಟ್ಟಿಗೆ ಸೇರಿಸಿಕೊಳ್ಳುತ್ತಿರುವುದು ಕಾಣಿಸುತ್ತದೆ. ಈ ರೀತೀಯ ಧ್ವನಿ ಬದಲಾವಣೆ ಹೊಸದಾಗಿ ಉಂಟಾಗುತ್ತಿದೆ.

ಸಾಮಾಜಿಕ ಭಾಷಾಸಂಪರ್ಕದಲ್ಲಿ ಹಲವು ಕಾರಣಗಳಿಂದ ಉಂಟಾಗುವ ಸಂಪರ್ಕದಲ್ಲಿ ಆರ್ಥಿಕತೆ ಪ್ರಮುಖ ಪಾತ್ರವನ್ನು ವಹಿಸುತ್ತಿದೆ. ವಲಸೆಯ ಕಾರಣವಾಗಿ ಇಲ್ಲಿಗೆ ಬಂದ ಅನ್ಯ ಭಾಷೆಯ ಜನ ಕನ್ನಡ ಭಾಷೆಯನ್ನಾಡುವ ಜನರೊಡನೆ ಸೇರುತ್ತಿದ್ದರೂ ದ್ರಾವಿಡದ ಮೂರು ಭಾಷೆಯ (ಕನ್ನಡ, ತೆಲುಗು ಮತ್ತು ತಮಿಳು) ಸಂಪರ್ಕವು ಹೊಸ ಪದಗಳನ್ನು ಸೃಷ್ಟಿಸುತ್ತಿರುವುದು ಕುತೂಹಲದಾಯಕವಾಗಿವೆ. ಇಂತಹ ಹಂತವನ್ನು 'ಪಿಜನ್' ಎಂದು ಕರೆಯಲಾಗುತ್ತದೆ. ಆಡುಮಾತಿನಲ್ಲಿ 'ಬೆರ್ಕೆಮಾತು', 'ಯಾಚುಭಾಷೆ' ಎಂದು ಕರೆದರೂ ಇಂತಹದೊಂದು ಹಂತವು ಒಂದು ಭಾಷಾವರ್ಗದ ಪ್ರಭೇದದ ಸೃಷ್ಟಿಯ ಆರಂಭಿಕ ಹಂತವಾಗಿದೆ.

ಈ ಹಂತದಿಂದ ಮುಂದುವರೆದ ಭಾಗವೇ ಕ್ರಯೋಲ್ ಹಂತ. ಆದರೆ ಪ್ರಸ್ತುತ ಜಾಲ ಮತ್ತು ಯಲಹಂಕದ ಆಡುನುಡಿಯಲ್ಲಿ ಒಂದು ಹೊಸ ಪ್ರಭೇದದ ಆರಂಭದ ಹಂತದ ಕುರುಹುಗಳನ್ನ ಗುರುತಿಸಲು ಸಾಧ್ಯವಾಗಿದೆ. ಇದು ನನ್ನ ಅಧ್ಯಯನದ ಫಲಿತವಾಗಿದೆ.

****

ಆಧಾರ ಗ್ರಂಥಗಳು

೧. ಎನ್ ಅಂಗಡಿ, ೨೦೦೦, *ಕನ್ನಡ ಕ್ರಿಯಾರೂಪಗಳು,* ಹಂಪಿ ವಿಶ್ವವಿದ್ಯಾಲಯ.

೨. ಚಿದಾನಂದ ಮೂರ್ತಿ, ೧೯೮೧, *ವಾಗರ್ಥ,* ಬಾಪ್ಕೊ ಪ್ರಕಾಶನ, ಬೆಂಗಳೂರು.

೩. ಡಾ. ಆರ್. ಗೋಪಾಲ್, ೨೦೧೨, *ಬೆಂಗಳೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ,* ಪ್ರಾಚ್ಯ ವಸ್ತು ಸಂಗ್ರಹಾಲಯ ಇಲಾಖೆ, ಮೈಸೂರು.

೪. ಕಲ್ಬುರ್ಗಿ ಎಂ. ಎಂ, ೧೯೯೯, *ಪ್ರಾಚೀನ ಕರ್ನಾಟಕ ಆಡಳಿತ ವಿಭಾಗಗಳು,* ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫. ಕಲ್ಬುರ್ಗಿ ಎಂ. ಎಂ, ೧೯೮೯, *ಕನ್ನಡ ನಾಮ ವಿಜ್ಞಾನ,* ಬೆಂಗಳೂರು ವಿಶ್ವವಿದ್ಯಾಲಯ.

೬. *ಕರ್ನಾಟಕ ಪರಂಪರೆ ಭಾಗ ೧ ಮತ್ತು ೨, ೨೦೦೬,* ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು.

೭. ಕುಶಾಲಪ್ಪಗೌಡ, ೧೯೭೮, *ಕನ್ನಡ ಭಾಷೆ ಮತ್ತು ವ್ಯಾಕರಣಗಳ ಒಂದು ಅಧ್ಯಯನ,* ಮೈಸೂರು.

೮. ಕೃಷ್ಣ ಪರಮೇಶ್ವರ ಭಟ್ಟ, ೧೯೮೫, *"ಕನ್ನಡ-ತೆಲುಗು ದ್ವಿಭಾಷಿಕ ಅಧ್ಯಯನ",* ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೯. ಕೃಷ್ಣ ಪರಮೇಶ್ವರ ಭಟ್ಟ , ೨೦೧೧, *ಅರ್ಥರೇಖೆ,* ಅಭಿನವ ಪ್ರಕಾಶನ, ಬೆಂಗಳೂರು.

೧೦. ಕೃಷ್ಣ ಪರಮೇಶ್ವರ ಭಟ್ಟ, ೨೦೧೩, *ಭಾಷೆ ಮತ್ತು ಸಾಮಾಜಿಕ ಸಂಧರ್ಭ,* ಅಭಿನವ ಪ್ರಕಾಶನ, ಬೆಂಗಳೂರು.

೧೧. ಕೃಷ್ಣರಾವ್ ಕೆ.ಎಂ, ೧೯೬೮, *ಕನ್ನಡ ಭಾಷಾಸ್ವರೂಪ,* ಉಷಾ ಸಾಹಿತ್ಯಮಾಲೆ. ಮೈಸೂರು.

೧೨. ಎಂ.ಎಚ್ ಕೃಷ್ಣಯ್ಯ ಮತ್ತು ಡಾ. ವಿಜಯ, ೨೦೦೫, *ಬೆಂಗಳೂರು ದರ್ಶನ ಸಂಪುಟ ೧,* ಉದಯಭಾನು ಕಲಾ ಸಂಘ, ಕೆಂಪೇಗೌಡ ನಗರ. ಬೆಂಗಳೂರು.

೧೩. ಡಾ. ಕೆ. ಕೆಂಪೇಗೌಡ, ೧೯೯೬, *ಸಾಮಾನ್ಯ ಭಾಷಾವಿಜ್ಞಾನ,* ಪ್ರಸಾರಾಂಗ, ಮೈಸೂರು ವಿಶ್ವ ವಿದ್ಯಾಲಯ.

೧೪. ಡಾ. ಕೆ.ಕೆಂಪೇಗೌಡ, ೨೦೦೯, *ಉಪಭಾಷಾವಿಜ್ಞಾನ,* ಲೇಖಕ ಪ್ರಕಾಶನ, ಮೈಸೂರು ವಿಶ್ವ ವಿದ್ಯಾಲಯ.

೧೫. ಡಾ. ಕೆ.ಕೆಂಪೇಗೌಡ, ೧೯೯೦, *ವಾಕ್ಯವಿಜ್ಞಾನ,* ಭಾಷಾ ವಿಜ್ಞಾನ ಭಾರತಿ, ಮೈಸೂರು.

೧೬. ಎಂ. ಎಚ್ ಕೃಷ್ಣಯ್ಯ ಮತ್ತು ಡಾ. ವಿಜಯಾ(ಸಂ), ೨೦೦೫. *ಬೆಂಗಳೂರು ದರ್ಶನ ೧, ೨,*

ಕರ್ನಾಟಕ ಸರ್ಕಾರ. ಬೆಂಗಳೂರು.

೧೭. ಮಾಧವ ಪೆರಾಜೆ, ೨೦೦೫, *ತೌಲನಿಕ ದ್ರಾವಿಡ ವ್ಯಾಕರಣ,* ಪ್ರಸಾರಾಂಗ ಕನ್ನಡ ವಿವಿ, ಹಂಪಿ.

೧೮. ಎನ್. ಜಿ. ಮಹದೇವಪ್ಪ, ೧೯೭೭, *ತತ್ವಶಾಸ್ತ್ರ ಪಾರಿಭಾಷಿಕ ಪದಕೋಶ,* ಕನ್ನಡ ಅಧ್ಯಯನ ಪೀಠ, ಧಾರವಾಡ.

೧೯. ಕೆ.ವಿ. ನಾರಾಯಣ, ೧೯೯೯, *ಕೃಷಿಪದ ಕೋಶ ೧ ಮತ್ತು ೨ (ಸಂ)* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೦. ಕೆ. ವಿ. ನಾರಾಯಣ, ೨೦೦೯, *ಭಾಷೆ ವಿಶ್ವಕೋಶ ೧,* ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೧. ಹಂ.ಪ. ನಾಗರಾಜಯ್ಯ, ೨೦೧೪, *ದ್ರಾವಿಡ ಜ್ಞಾತಿ ಪದಕೋಶ,* ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು

೨೨. ಹಂ. ಪ. ನಾಗರಾಜಯ್ಯ, ೧೯೯೮, ದ್ರಾವಿಡ ಭಾಷಾವಿಜ್ಞಾನ, ಡಿ.ವಿ.ಕೆ ಮೂರ್ತಿ ಪ್ರಕಾಶನ, ಮೈಸೂರು.

೨೩. ಬಿ. ರಾಮಚಂದ್ರರಾವ್ : ೧೯೯೮ – *ಕನ್ನಡ ಭಾಷೆಯ ಇತಿಹಾಸ,* ಡಿ.ವಿ.ಕೆ ಮೂರ್ತಿ ಪ್ರಕಾಶನ. ಮೈಸೂರು

೨೪. ಡಿ.ಎನ್. ಶಂಕರಭಟ್ಟ, ೨೦೦೭, *ಕನ್ನಡ ನುಡಿ ನಡೆದು ಬಂದ ದಾರಿ,* ಬಾಶಾ ಪ್ರಕಾಶನ, ಹೆಗ್ಗೋಡು,

೨೫. ಡಿ.ಎನ್. ಶಂಕರಭಟ್ಟ , ೨೦೦೭, *ಕನ್ನಡ ಬರಹದ ಸೊಲ್ಲರಿಮೆ,* ಬಾಶಾ ಪ್ರಕಾಶನ, ಹೆಗ್ಗೋಡು

೨೬. ಡಿ.ಎನ್. ಶಂಕರಭಟ್ಟ , ೨೦೧೩, *ಕನ್ನಡ ಸರ್ವನಾಮಗಳು,* ಬಾಶಾ ಪ್ರಕಾಶನ, ಹೆಗ್ಗೋಡು.

೨೭. ಡಿ.ಎನ್. ಶಂಕರಭಟ್ಟ , ೨೦೦೭, *ಕನ್ನಡ ಬರಹದ ಸೊಲ್ಲರಿಮೆ ೩,* ಬಾಶಾ ಪ್ರಕಾಶನ ಹೆಗ್ಗೋಡು.

೨೮. ಡಿ.ಎನ್.ಶಂಕರಭಟ್ಟ , ೨೦೦೮ , *ಮಾತಿನ ಒಳಗುಟ್ಟು* – ಬಾಶಾ ಪ್ರಕಾಶನ, ಹೆಗ್ಗೋಡು.

೨೯. ಡಿ.ಎನ್.ಶಂಕರಭಟ್ಟ , ೨೦೧೦, *ಕನ್ನಡ ಪದಗಳ ಒಳರಚನೆ* – ಬಾಶಾ ಪ್ರಕಾಶನ, ಹೆಗ್ಗೋಡು

೩೦. ಡಿ.ಎನ್.ಶಂಕರಭಟ್ಟ , ೨೦೦೬, *ಕನ್ನಡ ವಾಕ್ಯಗಳ ಒಳರಚನೆ* – ಬಾಶಾ ಪ್ರಕಾಶನ, ಹೆಗ್ಗೋಡು

೩೧. ಶ್ರೀಧರ್ ಎಸ್.ಎನ್, ೨೦೦೮, *ಇಂದಿನ ಕನ್ನಡ : ರಚನೆ ಮತ್ತು ಬಳಕೆ*, ಅಭಿನವ ಪ್ರಕಾಶನ, ಬೆಂಗಳೂರು

೩೨. ಸಂಗಮೇಶ ಸವದತ್ತಿ ಮಠ, ೨೦೦೩, *ಭಾಷಾ ಸಂಗಮ*, ರೂಪದರ್ಶಿ ಪ್ರಕಾಶನ, ಗುಲಬರ್ಗಾ.

೩೩. ಸಂಗಮೇಶ ಸವದತ್ತಿ ಮಠ, ೨೦೦೩, *ಕನ್ನಡ ಭಾಷಾ ಸ್ವರೂಪ*, ರೂಪದರ್ಶಿ ಪ್ರಕಾಶನ, ಗುಲಬರ್ಗಾ.

೩೪. ಸಂಗಮೇಶ ಸವದತ್ತಿ ಮಠ, ೨೦೦೩, *ಭಾಷಾ ಲೇಖ*, ರೂಪದರ್ಶಿ ಪ್ರಕಾಶನ, ಗುಲಬರ್ಗಾ.

೩೫. ಸಾಂಬಮೂರ್ತಿ, ೧೯೯೮, *ನೇಕಾರರ ವೃತ್ತಿ ಪದಕೋಶ*, ಪ್ರಸಾರಾಂಗ. ಕನ್ನಡ ವಿ.ವಿ. ಹಂಪಿ.

೩೬. ಸೂರ್ಯನಾಥ ಕಾಮತ್, ೧೯೯೦, *ಬೆಂಗಳೂರು ಗೆಜೆಟಿಯರ್*, ಕರ್ನಾಟಕ ಸರ್ಕಾರ. ಬೆಂಗಳೂರು.

೩೭. ಸೇಡಿಯಾಪು ಕೃಷ್ಣಭಟ್ಟ, ೧೯೯೮, *ಕನ್ನಡ ವರ್ಣಗಳು*, ಕ.ಸಂ.ಸಂ. ಮಂಗಳೂರು.

೩೮. *ಸಂಕ್ಷಿಪ್ತ ಕನ್ನಡ ನಿಘಂಟು*, ೨೦೧೧, ಕನ್ನಡ ಸಾಹಿತ್ಯ ಪರಿಷತ್ತು.

೩೯. ಪಾ.ಶ. ಶ್ರೀನಿವಾಸ, ೨೦೦೬, *ತಮಿಳು ಕನ್ನಡ ದ್ವಿಭಾಷಾ ನಿಘಂಟು*, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು

೪೦. ವಿಲ್ಯಂಮಾಡ್ತ, ೧೯೭೫, *ಕನ್ನಡ ಭಾಷೆಯ ರೂಪುರೇಷೆಗಳು*, ಕನ್ನಡ ಅಧ್ಯಯನ ಪೀಠ, ಧಾರವಾಡ.

೪೧. ವಿಲ್ಯಂಮಾಡ್ತ, ೧೯೭೬, *ಕಾರಕ ಮತ್ತು ವಿಭಕ್ತಿ*, ಕರ್ನಾಟಕ ವಿ.ವಿ, ಧಾರವಾಡ.

೪೨. ವೆಂಕಟಾಚಲ ಶಾಸ್ತ್ರಿ, ೧೯೯೯, *ಶ್ರೀ ವತ್ಸ ನಿಘಂಟು*, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೪೩. Francis Buchanan, 1999, **A *Journey from madras through the countries of Mysore Canara and Malbar,*** vol-1, London, Public Asian Education Services, New Delhi.

೪೪. Robin Johnson, 2008 , ***Sound Change,*** publisher Crabtree Publishing Company. Delhi

****

ಅಧ್ಯಾಯ – ೮

ಅನುಬಂಧ

೮.೧ ವಕ್ತೃಗಳ ಸಂಭಾಷಣೆ.

ಬೆಂಗಳೂರು ಗ್ರಾಮೀಣ ಭಾಗದಲ್ಲಿ ಕ್ಷೇತ್ರಾಧ್ಯಯನದ ಮೂಲಕ ಸಂಕಲಿಸಿದ ಹಲವು ಸಂಭಾಷಣೆಯನ್ನು ಇಲ್ಲಿ ನೀಡಲಾಗಿದೆ. ಅದರ ಮೂಲಕ ಭಿನ್ನ ಭಾಷಾವಲಯದಲ್ಲಿ ಜನರು ಭಿನ್ನ ವರ್ಗದವರು ಹೇಗೆ ಮಾತಿನ ಮೂಲಕ ವ್ಯವಹರಿಸುತ್ತಾರೆ ಎಂಬ ವಿಷಯವು ತಿಳಿಯಬಹುದಾಗಿದೆ. ಸಾರ್ವಜನಿಕ ವಲಯಗಳಾದ ಕೆರೆ, ಜಮೀನಿನಲ್ಲಿ ಕೆಲಸ ಮಾಡುವಾಗ, ಅಂಗಡಿಯ ಹತ್ತಿರ ಹೀಗೆ ಹಲವು ಹಲವು ವಲಯಗಳಲ್ಲಿ ಸಂಭಾಷಣೆಯ ಮಾದರಿಗಳನ್ನು ಕಲೆಹಾಕಿದ್ದೇನೆ. ಅವುಗಳು ಈ ರೀತಿಯಲ್ಲಿವೆ.

ಬೆಂಗಳೂರು ಗ್ರಾಮೀಣ ಭಾಗದ ಆಡುಮಾತಿನ ಮಾದರಿಗಳು:

ಅನೌಪಚಾರಿಕ ಸಂದರ್ಭದ ಸಂಭಾಷಣೆ – ೧

ಗ್ರಾಮ: ಕುಲುಮೆ ನಾರಾಯಣಪುರ, ವಲಯ: ದನ ಮೇಯಿಸುವಾಗ.

(ಪೃ– ಪೃಚ್ಛಕ: ಅ–ಪ್ರತಿವಕ್ತಳು: (ವಯಸ್ಸು: ೬೦ ವರ್ಷ, ಜಾತಿ–ವಕ್ಕಲಿಗ, ವಿದ್ಯೆ–ಅವಿದ್ಯಾವಂತೆ, ಉದ್ಯೋಗ–ವ್ಯವಸಾಯ) ಬ: ಪ್ರತಿವಕ್ತಳು(ವಯಸ್ಸು– ಸು, ೪೨ ವರ್ಷ, ಜಾತಿ–ವಕ್ಕಲಿಗ, ವಿದ್ಯೆ–ಅವಿದ್ಯಾವಂತೆ, ಉದ್ಯೋಗ–ಹೈನುಗಾರಿಕೆ. ಕ– ವಯಸ್ಸು: ೫೮ ವರ್ಷ, ಜಾತಿ–ವಕ್ಕಲಿಗ, ವಿದ್ಯೆ–ಅವಿದ್ಯಾವಂತೆ, ಉದ್ಯೋಗ– ಹೈನುಗಾರಿಕೆ)

ಪೃ: ಅಜ್ಜಿ ಏನ್ ಊಟ ಆಯ್ತಾ, ಎನ್ ಸಮಾಚಾರ, ಏನ್ ನೀವು ದೇವ್ರಾಡುಗಳನ್ನು ಚೆಂದಾಕ್ ಆಡ್ತಿರಂತೆ. ಕತೆ ಗಿತೆಯೆಲ್ಲಾ ಚೆನ್ನಾಗ್ ಹೇಳ್ತೀರಂತೆ.

ಕ: ಇಲ್ಲಾಮಿ, ನಮ್ ಮಕ್ ಅದೆಲ್ ಬರ್ಬೇಕ್ ಯೇಳಿ. ಏನ್ ಸೆಂದನೋ, ಯಾ ಕತ್ಗುಳ್ನ ಕೇಳ್ತಿರ್ ಸಾಮೀ ನಮ್ದೇಯಾ ದೊಡ್ ಕತೆಯಾಗ್ಬುಟ್ಟದೆ. ಆ ಯಮ್ ಹೇಳ್ತಾಳ್ ಕೇಳ್, ಆಯಮ್ನು ಮತ್ ಇಯಮ್ನು ಹೇಳ್ತಾಳ್ ಕೇಳ್ರ. ನೀಲಮ್ಮ ದೇವ್ರ್ ಕೊಟ್ಲೆ ಮೈಮೇಲ್ ಬಂದಾಂಗ್ ಸೆಂದಾಕ್ ಆಡ್ತಾಳೆ. ಈ ಯಮ್ಮುನ್ನ ಕೇಳಪ್ಪೋ, ಏ

ಒಂಚೂರ್ ನೀಲಮ್ಮುನ್ ಪಾಟ್ ಹೇಳ ಅವುರ್ಕ.

ಅ: ಯೀ ನನ್ಕ ಏನ್ ತೆಲಿದು ಸಾಮೀ, ಅವ್ಳ್ ಯೇಳ್ತಾಳಂತಾ ಕೇಳ್ಬೇಡ್ ಪೋ,

ಬ: ದೋಸ್ಕಾಯ್ ಯೆಸ್ಟ್ ಕೆಜಿಕ್ಯ, ಎನ್ ಅಂಗ್ ವಂಟೋತಿದ್ದಿ ಬಾಯಿಲ್ಕ ನಾವ್ ಯಂಗವಂತಾ ನೋಡಾನಾ.

ಪೃ: ಏ ಹೇಳಮ್ಮ ಒಂದ್ ಕತೆನೋ ಆಡ್ನೋ(ವಕ್ತೃಗಳ ಭಾಷೆಯ ಅನುಕರಿಸಿ ಪ್ರಶ್ನೆ ಕೇಳುವಿಕೆ)

ಅ: ಇಲ್ ಬ್ಯಾಡ್ಸಾಮಿ ಬಿಸ್ಲು ದೆಗ್ ಸುರ್ರುಗ್ಟ್ಯಾಂಗ್ ವಡಿತದಾ.

ಕ: ಕತೆಯಂತ್ ಯೇಳಾ, ಏ ಹೈರಂಡೆ ಯೇಳೇ, ಯೇನ್ ಬೇತುರಿ ತರ ಆಡ್ತಾö, ನೀಲಮ್ನು ಒಂದ್ ಕಾಲ್ದಾಗ್ ಈ ಯಮ್ನು ಬಂದೀರೋದ್ ಅದ್ರ ಸ್ಟೋರಿನ ಎಲ್ ಏಳ್ತಾಳ. ತಪ್ಪೀರಾ ಯೇಳಾ ಅವ್ರ ಸಂದಾಕ್ ಏಳ್ದ್ರ ಪ್ರೇಸ್ ಕೋಡ್ತಾರಾ. ಯೇ ಯೇಳೇ ಮುಶ್ಲಿ, ಏನ್ ಬರ್ದ್ಬಂದಾಗ್ ಆಡ್ತಾಳ್ ಚೂಡ್ರ. ಯೇ ಕಂಡಿವ್ನೀ ನಿನ್ ದಿಮಾಕ್ನ ಯೇಳೆ.

ಅ: ಅನ್ನೇಲ್ದಾಳ್ ಅಕ್ದೇವ್ತಗ್ಳು ಹೋಯದ್ಸಿಂತ ಎಲ್ಲಾ ಏಟಿ(ತೊರೆ) ನೋಡಿ ನೀಲಮ್ನು ಹೋಗ್ಲಾರ್ದೆ ಕಾಡ್ನಾಗ್ ಮರ್ರುಗ್ಳ್ನ ಮದ್ಕ ಅವ್ಳ್ ಕುತ್ಕೊಳ್ಯಾಕೆ ನೋಡಡ್ ನೋಡ್ ಗಡ್ಯ್ಯಾಗ್ ಕುಂತ್ಕಂಡ್ವಳೆ. ಕುತ್ಕಂಡೋಳ್ ಅನೆ ಗಡ್ಯಾಗ ಮಿಕ್ನೋರ್ ದಾಟ್ಕೊಂಡು ವೊದಂತೆ ನೀಲಮ್ನ ಅಕ್ದೇವ್ತ್ಗ್ಳು ಕೇಳ್ದ್ವಂತೆ. ಯಾಕ ನೀಲೀ ಕುಂತ್ಕೊಂಬಿಡ್ಟೆ ಅಂತ ಕೇಳ್ದಾಗ್ ನೀಲಮ್ನು ನನ್ ಬರಲ್ಲ ಅಂದ್ಲಂತೆ. ಆ ಅಕ್ಕದೇವ್ತ್ಗ್ಳು ಯೀಕೇನ್ ಇಲ್ ಬಿಟ್ಟ್ ಅವ್ರ್ ಹೋಗ್ಬುಟ್ರಂತೆ.

ಬ: ಈ ಮುಶ್ಲಿ ಇಲ್ ಯೇಳಾಕ್ ಬಾರ. ಯಂಗೇ ಸಾಯ್ತದೆ, ದೇವುಸ್ತಾನ್ ತಾವ ಶಾನೋತ್ ಯೇಳ್ತಾಳ್. ಆದ್ರ ಇಲ್ ಆಡಾಗ್ ಯೇನ್ ಬಂತಾನ್ ಅಂದ್ರು ಬಿಡ್ಲು ಬಾಯ್ನ. ಎಕ್ ಮ್ಯಾಕ ನಿನ್ ಮಗ್ ಬಂದೋನ್ ಯೇತ್ ಬತ್ಯಾನ್ ಬಿಡ್ಲಾ ಅಂದನ್ನೂ ಬಿಡ್ನು. ಅಂಗಾಡ್ಬುಟ್ನೋನ್ ವೊಲ್ಡು, ಆ ಅಸ್ಕ ನೀರ ಅಟ್ ಬೇಕೇನೋ ಅಟ್ ಬಾ. ಅಂಗಾ ಮುಂದ್ಕ ಕಟ್ ಬಾ.

ಅನೌಪಚಾರಿಕ ಸಂಭಾಷಣೆ – ೨

ಗ್ರಾಮ: ಶಾನುಭೋಗನಹಳ್ಳಿ, ವಲಯ: ಸಾರ್ವಜನಿಕ ಅಂಗಡಿ, ಬಸ್ ನಿಲ್ದಾಣ.

(ಪೃ– ಪೃಚ್ಛಕ: ಅ–ಪ್ರತಿವಕ್ತ: (ಗಂಡು, ವಯಸ್ಸು: ೬೨ ವರ್ಷ, ಜಾತಿ–ನಾಯಕ, ವಿದ್ಯೆ–ಅವಿದ್ಯಾವಂತ, ಉದ್ಯೋಗ–ವ್ಯವಸಾಯ) ಬ: ಪ್ರತಿವಕ್ತ (ವಯಸ್ಸು– ಸು, ೫೨ ವರ್ಷ, ಜಾತಿ–ವಕ್ಕಲಿಗ, ವಿದ್ಯೆ–

ಅವಿದ್ಯಾವಂತ, ಉದ್ಯೋಗ–ವ್ಯವಸಾಯ. ಕ– ವಯಸ್ಸು: ೫೮ ವರ್ಷ, ಜಾತಿ–ವಕ್ಕಲಿಗ, ವಿದ್ಯೆ–ಅವಿದ್ಯಾವಂತೆ, ಉದ್ಯೋಗ– ಹೈನುಗಾರಿಕೆ)

ಪೃ: ಯೇನ್ ಯೀಗ್ಲೂ ನಿಮ್ಮೂರ್ನಾಗ್ ಜಾತ್ರೆ ಜೋರಾ,

ಅ: ಈ ವೊರ್ಸ ಯಿಲ್ಲಾ ಸಾಮಿ. ಯಿಗೆಲ್ಲಾ ಎಲ್ ಎಲ್ಲಾ ವೂರ್ನಾಗ್ ಎಲ್ಡ್ ಎಲ್ಡ್ ಪಕ್ಷ್ ಹಾಗ್ ಬಿಟ್ ಮೊನ್ ಮೊನ್ ರಾಜಿ ಮಾಡ್ಕಂಡವ್ರೆ ಯೀಗ್ ಎಲ್ಲಾ ವೋಗೊದ್ ಬರೋದ್ ಮಾಡ್ಕಂಡವ್ರೆ, ಈಗ್ ಎಲ್ಲೋ ಓಗೋದ್ ಕೂಟ್ಲೆ, ಬರೋದ್ ಕೂಟ್ಲೇ, ಅನ್ಕ ಸಂದಾಕ್ ವಾಡಾಡ್ಕಂಡವ್ರೆ.

ಬ: ಅಯ್ಯಾ ಆ ಬೋಳ್ಮುಂಡ್ ಮಕ್ಳ ಮಾತ್ಯಾಕ ನಿಂಕ. ಬಿಟ್ಬಿಡು ಆ ವಲ್ಸ ನನ್‌ಮಕ್ಳ್ ಸುದ್ದೀನ್.

ಕ: ಸ್ವಾಮ್ಗುಳ್ ನಿಮ್ದು ಯಾವುರ್, ಯಿಗ್ ವಂಡಿರೆಲ್ಲ,

ಪೃ: ನವ್ ಇಲ್ಲೇ ಸೀತೆಕೆಂಪನಳ್ಳಿಗ್ ಬಂದಿದ್ವು ಯಜಮಾನ್ರೇ ಅಂಗೇ ನಿಮ್ಮುನ್ ಮಾತಾಡ್ಸೋದ್ವೇ.

ಬ: ಓ ಅಲ್ ಯಾರ್ ಮನ್ಗ್ವಪ್ಪ

ಪೃ; ಅಲ್ ನಮ್ಮೋರ್ ಯಾರೋ ದೂರ್ದ ಸಂಬಂದಿಕ್ರು ಮನೆಗ್ ಬಂದಿದ್ದೋ. ನಿಮ್ದ್ ಯಾವೂರ್ ತಾತ

ಅ: ಅವ್ದೇನ್ ಅಯ್ಯೋ ನಮ್ಮೂರ್ ಇಸ್ಯ ಎನ್ ಕೇಳ್ತ್ಯ ಬಿಡಪ್ಪೋ ಇಲ್ ಸಾನ್‌ಬೊಗ್ನಳ್ಳಿ ಕುಂದಾಣ್ಕ ಹೋಗ್ಯೋ ದಾರೀಕ ನಾವ್ ನೋಡ್ಕಂ ಯಾರ್ಕೋ ಕಾಯ್ಕಂಡ್ ಕುಂತೀನ್.....

ನೀವ್ ಯಿಂಗ್ ವೊಗ್ಬೇಕು, ಆ ಟಾವ್ಕ ಮುಂದೋಗ್ ಒಂದ್ ಹಾದಿ ಸಿಕ್ತಯ್ತು. ಅಲ್ಲೋಗ್ ನೀವ್ ತಿರ್ಕಂಬೇಕ್. ಮುಂದ್ಕೊದ್ರ ಅಂಗಾಸಿದ್ಕ ವೋದ್ರ ಸಾನ್ಬೊಗ್ನಳ್ಳಿಕಾ ವೋಗ್ಬೋದು.

ಏನ್ ಬೀರಪ್ಪೋ ಎನ್ ಇಲ್ಕ್ ಬಂದ್ ಬಿಟ್ಬಿದ್ಯಾ.

ಕ: ಏ ಸುಮ್ಕೆ ಬಂದ್ನಪ್ಪೂ ಗಂಗಪ್ಪೋ

ಅ: ಏನ್ ವಲ್ಕೋಗಿದ್ಯಾ. ಯೇ ಇಲ್ಲಾ, ನಮ್ ವುಡ್ಗ್ನ ಅಸ್ಕುಳ್ ಮೇಸ್ಕಳ್ಳಿಕ್ ಹೋದ್ನು, ನಾನು ಗದ್ಕ್ ಬಿಟ್ ಬಿಡ್ತಾನೋ ಅಂತ್ ಯೇಳ್ ಅಂತ್ ವಂಡ್ಕೋಡಕ್ಕ ವೋಗಿದ್ನಿ.

ಕ: ನಾವ್ ಈ ಕಡೆ ಒಂದ್ ವಷದ್ ಮ್ಯಾಲ್ ಬಂದ್ರೆ ನಮ್ಮೂರ್ ಯೇಳಾಕಾಂಗ್ದಿರಂಗೆ ಅದ್ವಾನ್ ಗೆಟ್ಟೋಗಯ್ತೆ, ಈ ಕಡ್ಯೋರ್ ಆ ಕಡ್ ಇಲ್ಲ ಆಕಡ್ಲೋರ್ ಈಕಡ್ ಇಲ್ಲ ಎಲ್ಲಾ ಗಬ್ಬಾಗ್ಬುಟ್ಟವು. ಕಾಲ ಎಲ್ನೂ ಬದ್ಲಾಗೋಯ್ತ್ ನೋಡ್ರ.

ಬ: ಏನ್ ಆ ಉಡುಗ್ರು ಯಿಗ್ ತಲ್ಕೆ ಕೇಳ್ತವೆ.

ಅ: ಅಯ್ಯೋ ಬಿಡ್ಬಿಡ್ ಅದೇನಂತಾರಲ್ಲಾ ಆಟೇಕೋದ್ರು ಕಾಟೆ ಶಾಟ ಕೀಳಕಾಗಲ್ಲ ಅನ್ನಂಗವೆ ಅವು.

ಇನ್ ನಮ್ಮ್ ಮಾತುಗ್ಳ ಕೇಳ್ತವ್ರ. ನಮ್ಮೂರ್ನಾಗ ದೊಡ್ಡೋರ್, ಶಿಕ್ಕೋರ್, ಅಂತ ಮುಶ್ಲೋರ್, ಮುಟ್ದೋರ್, ಮುಟ್ಟೋರ್ ಏನ್ ನೋಡ್ದೆ ಎಲ್ಲರೂನು ಒಂದ್ ಮಾಡ್ಕಂಡವೆ. ದೊಡ್ಡೋರ್ ಎಲ್ಲೂ ವೋಗಿ ಅವ್ರ ಗುಂಜ್ ಅರಿಬೇಕ್ ಅಷ್ಟೇ. ಒಂದೀಸ್ ಮರ್ವಾದ್ನೇ ಕೊಡಲ್ರು. ಇಲ್ಲಿ ಎಲ್ಲಾ ಏಕಾಬೇಕಿ ಮಾಡ್ಕಂಡವೆ. ಎಲ್ವು ಒಂದ್ ಮಾಡಾಕ್ ಬುಟ್ವು. ಮ್ಯಾಕ್ ಎಕ್ ಬುಟ್ರೆ ಸಾಕು ಶೀದಾ ಒಳ್ಕ ಬರೋದೆ ಎಲ್ವು. ಎಲ್ಲೂ ಇಳೀತಾ ಇರ್ಲಾ ಮನಿಕ್ಯೆಯೆಲ್ಲಾ ಬದ್ ಅಸ್ನುಗೆಟ್ ಬಿಟ್ಟವೆ. ಮನೆಗ್ಳೆಲ್ಲಾ ಇಕ್ಕಟ್ಟು ಅಂತ್ ನಮ್ಮೂರ್ನಾಗ್ ಹೊಲ್ಗು, ಮಾದ್ಗು ಅಂದೆ ಶಿದ್ ಒಳಿಕ್ಯೇ ಕರ್ಕಂಬಂದಾವು,

ಅಯ್ಯೋ ಎಲ್ಕಡೆಯ್ಯು ಇದೆ ಗಬ್ಬ್ ತಗಳಯ್ಯೋ.

ಅಯ್ಯೋ ಅದೇನ್ಕೇಳ್ತಿ ತಕೋ, ನಮ್ಮನೆಗ್ ಯಾವ್ದಾದ್ರು ಸಂದಾಕ್ ಇರೋ ಮನೆಗ್ ಯೆಣ್ ತರಾನ ಅಂದ್ರೆ, ನಮ್ಮವ್ ಯಾವ್ದೋ ಗಾರ್ಮೆಂಟ್ಗೊಗ್ತಿನಂತ್ ವೋಗ್ ಯಾವೋ ಜಾತಲ್ದ ಜಾತಿ ಹೆಣ್ಮಕ್ಳುನ್ನ ತಂದ್ ಲಗ್ನನಾಗವೆ.

ಪ್ರ: ಈಗೂ ಗಾರ್ಮೆಂಟ್ ಇಲ್ಲೆ ಇದ್ದಾವಾ?

ಅ: ಅಯ್ಯೋ ಅಂಗನ್ಕಂಡ್ ವೋತವ್, ಅದೇನ್ ಅದ್ಗೆಟ್ಟೋವ್ ಏನ್ ಮಾಡ್ಕಂಬತ್ತವೋ ಯಾರ್ಕೊತ್ತಯ್ಯ. ಅದೇನ್ಕತ್ಯೋ ಯಾರ್ ಕಂಡವ್ರೆ, ಏನ್ ಮಾಡ್ತಿ ನಮ್ಮೋವ್ ದತ್ತುರ್ಬೀಜ್ನವು ಕೇಳ್ವು. ಆ ನಮ್ಮ ಮಗ್ನು ಬಂದ್ನು ಅಲ್ಕ ಬೇಗ್ ವೊಗಾನ....

ಪ್ರ: ಏನ್ ತಾತ ನಿಮ್ಮೂರ್ನಾಗ್ ನಾಟ್ಕ ನಡಿತಾವ.

ಬ:ಅಯ್ಯೋ ಅದ್ರ ಕತ್ಯ, ಏನ್ ಅಲ್ಲೆಲ್ ನಮ್ಮೊಂಥೊರ್ಕ ಮರ್ವಾದೆ ಕೊಡ್ತಾರ್ ಯೇಳ್, ಅಲ್ಲಿ ದೊಡ್ಡೋರ್ ಕರ್ದ್ ಕಳ್ಸಕ್ ಕಳ್ ನೆಪ್ಪಮಾಡ್ಕಂಡ್ ನಾಟುಕ್ ಮಾಡ್ತಾರ್ ನೋಡ್. ಅವ್ ಆಟ್ ಕೇಳ್ದ್ರೇ ಈ ಕಡೆಯಿಂದ ಮಿಂದ್ದೋ ಆ ಕಡೆಗೆ ಎದ್ ಬರ್ತ್ತಾರ್ ಅವ್ರು.

ಪ್ರ: ಎನ್ ನಿಮ್ ಮನೆ ಇಲ್ಲೇನಾ?

ಬ: ಏನ್ ನಮ್ಮನೆನಾ ಈ ಇಲ್ಲೇ ಅಗೋ ಆ ಸಂದ್ ಕಾಣ್ತದಲ್ ಆ ಕಡ್ಕ ಚರಂಡಿಗ್ಳು ಕೆಲ್ಸ ಮಾಡ್ತವ್ರೆಲ್ಲಾ ಅದ್ ಪಕ್ಕ್ನಲ್ ಅದ. ಏನೋ ಇಲ್ಲೂ ಕಿತ್ತ್ ಅದ್ವಾನ್ ಗೆಡ್ಸವೆ. ಗೆದ್ದೋವ್ ಸೇರ್ಕಂಡ್ ಈ ಅನಾಚಾರ್ ಮಾಡಿಕ್ಕವೆ.

ಪ್ರ: ನಿಮ್ದ್ ಯಾವ್ ಜಾತಿಯವ್ರು ತಾತ.

ಬ: ಆ ಯಾವ್ ಜ್ಯಾತ್ಯೋರ್ ಅಂತ್ ಕೇಳ್ದ್ರ, ನಾವ್ ವಕ್ಕೊಗೌಡ. ಅವಾಗ್ ವೋದೋವ್ ನಾಯ್ಕೋನ್, ಇವಯ್ಯ್ನು ನಮ್ಮೋನ್ಯೇ. ಅತ್ತಕಡೆ ಕೊಲ್ಮೇರು, ವಲುಗ್ರು, ಬ್ಯಾಡ್ರು, ಎಲ್ವು ಅವ್ಕಣಪ್ಪೊ....

ಅನೌಪಚಾರಿಕ ಸಂಭಾಷಣೆ – ೩

ಗ್ರಾಮ: ಬೆಟ್ಟಹಲಸೂರು, ವಲಯ: ದನ ಮೇಯಿಸುವಾಗ.

(ಪೃ– ಪೃಚ್ಚಕ: ಅ–ಪ್ರತಿವಕ್ತಳು: (ವಯಸ್ಸು: ೩೨ ವರ್ಷ, ಜಾತಿ–ವಾಲ್ಮೀಕೀ ನಾಯಕ , ವಿದ್ಯೆ–ವಿದ್ಯಾವಂತೆ, ಉದ್ಯೋಗ–ವ್ಯವಸಾಯ) ಬ: ಪ್ರತಿವಕ್ತಳು(ವಯಸ್ಸು– ಸು, ೬೨ ವರ್ಷ, ಜಾತಿ–ವಾಲ್ಮೀಕಿ ನಾಯಕ , ವಿದ್ಯೆ–ಅವಿದ್ಯಾವಂತೆ, ಉದ್ಯೋಗ–ಹೈನುಗಾರಿಕೆ.) ಕ– ವಯಸ್ಸು: ೫೮ ವರ್ಷ, ಜಾತಿ–ವಕ್ಕಲಿಗ, ವಿದ್ಯೆ–ಅವಿದ್ಯಾವಂತೆ, ಉದ್ಯೋಗ– ಹೈನುಗಾರಿಕೆ)

ಕ: ಈಸೋತ್ ಕುಂತೀದ್ಲು. ಆಗ್ ನಮ್ಮೇಕ್ ಬಂದ್ ಕುತ್ತವ್ಳೆ. ಅವ್ಳ್ ಬಾಯ್ನ ನೋಡ್ ಯ್ಯಂಗ್ ಅಗೀತಾವ್ಳ ಕಡ್ಡ್ಯಪುಡಿ ಕಟ್ಬಾಯ್ಕ ಬರಂಗ್

ಅ: ನಮ್ಗೀ ಆ ಕರ್ಮ ಬ್ಯಾಡ. ಆ ಮುಶ್ಲೀಯೊಳ್ಳಲ್ಲಾ

ಕ: ಯ್ಯಾ, ಅವ್ಳ್ಯಾರೇಳ್ ನಿಮ್ಮಮ್ನಿ

ಅ: ದೋ ಯಾಕ್ ಅಂಗ್ ಒಯ್ತೀಯ್, ಯೀ ಕಡ್ಕ ಬಾ.

ಬ: ಏ ಆ ಅಸ್ನ ಕಟ್ ಬರಾಕ

ಕ: ಒ ಎನ್ ಅರೇ ಕೆಯ್ತಾತ್ ಅಮತ್ ಒಗ್ತ್ಯೀ, ಏ ಮುಶ್ಲೀ ಇಲ್ ಕುಕ್ಕುರ್ಸ್ಕೋ

ಬ: ಓ ಯೇನ್ ಸೆಕ್ಯೋ, ಇವಾತ್ ಏಸ್ ಸರ್ತ್ಯೀ ಗೊತ್ತಿಲ್ಲ. ಏ ಯೀರಿ ತುಸ್ ಎಲೆಡ್ಕೆ ಕೊಡ್ಲೆ.

ಅ: ಏ ಗೋಟ್ ಅಡ್ಕೆ ಅಯ್ತೆ, ಕೊಡ್ಲಾ.

ಬ: ಯತ್ರುದೋ ಒಂಚೂರ್ ಕೊಡಾ

ಅ: ಅವ್ನ್ ಮೇಸ್ರಂಗ್ಡೀವ್ನು ಒಳ್ ಬಂಕ್ ರೋಗ್ದೋನ್ ಇದ್ದಾಂಗ್. ಆ ಬೋಳಿಮಗ್ನು ಒಳ್ಳೇ ಅಡುಕ್ಲ್ ತರೋದೀ ಇಲ್ಲಾ

ಕ: ಒ ಯೀ ವೂರ್ನಾಗ್ ತಕ್ಕೋಳ್ಳಯೋ ಪಾಸಾಲ್ಕ

ಪೃ: ಎನ್ ಅದ್ ಗೋಟ್ ಅಡ್ಕೀನಾ?

ಬ: ಇವ್ಕ ಸರೀಗಾ ಬ್ಯಾಸಿಲ್ರ. ಪೋಡ್ ಅಡ್ಕೆ ಆಕ್ತ್ಯಾ

ಅ: ಬಗ್ನೀ ಅಡ್ಡಿಗ್ಳ್ನ ಬೆರ್ಕ್ ಮಾಡ್ತಾರಾ.

ಕ: ಸಂತ್ಯಾಗ್ ತಂದ್ ಮಡಿಕ್ಯಂಬೇಕಿತ್ತ್

ಬ: ಯೇ ನಮನೇರ್ಕ ಹೇಳ್ದ್ನ. ಆ ವಯ್ಸ್ನ ತರಾಕ್ ಪಂಗಾ

ಅ: ಯಾವಾಕ್ಕಾದ್ರೂ ನಾವಾ ವೋಗ್ ಕಡ್ಡ್ಯಮಡ್ಸ್ನಾನಾ ತರಾಕ.

ಬ; ಏನ್ ಅಂಗಾಯ್ತ್. ಆಸೊಂದ ಆಕಣಾದು. ಎಂಗಾತ್ ನೋಡಮ್ಮೋ ಅವ್ಳ ಬಾಯ್ನ

ಅ: ಯ್ಯಾ ನೋಡಮ್ಮಾ ನೀ ಕುಕ್ಕುರ್ಸೀ. ನಮ್ ದನ್ ವೋದ್ವು ಆ ತೋಪ್ಗ...

ಅನೌಪಚಾರಿಕ ಸಂಭಾಷಣೆ – ೪

ಗ್ರಾಮ: ಬೆಟ್ಟಹಲಸೂರು, ವಲಯ: ಮನೆ ಬೀದಿ. ಮಕ್ಕಳೊಡನೆ ಮಾತನಾಡುವ ಸಂದರ್ಭ.

(ಪೃ– ಪೃಚ್ಛಕ: ಅ–ಪ್ರತಿವಕ್ತ: (ವಯಸ್ಸು: ೬೨ ವರ್ಷ, ಜಾತಿ–ಕೊರಮ , ವಿದ್ಯೆ–ಅವಿದ್ಯಾವಂತೆ, ಉದ್ಯೋಗ–ವ್ಯವಸಾಯ) ಬ: ಪ್ರತಿವಕ್ತಳು(ವಯಸ್ಸು– ೦೯ ವರ್ಷ, ಜಾತಿ–ಕೊರಮ , ವಿದ್ಯೆ– ವಿದ್ಯಾವಂತ,) ಕ– ವಯಸ್ಸು: ೫೮ ವರ್ಷ, ಜಾತಿ–ಕೊರಮ, ವಿದ್ಯೆ–ಅವಿದ್ಯಾವಂತೆ, ಉದ್ಯೋಗ– ಕಾರ್ಖಾನೆಯಲ್ಲಿ)

ಅ: ಏನೋ ನಿಂದ ಕತೆ, ಇದೇನಾ ನೀನ್ ಸ್ಕೂಲ್ಕ ವೋಗ್ ಕಲ್ಯಾದು

ಬ: ಏನ್ ಮಾಡ್ನಿ, ನಿನ್ಕ.

ಅ: ನಿಮ್ ತಂದ್ಗಾರ್ ಅನ್ಕೋಂಡೋನ್ಕ ಏನ್ ಜಬಾದಾರಿ ಅಯ್ತ್ಯೋ.

ಕ: ಏನ್ ಮಾಡ್ದ್ದ್ನ್ಯ ಅವ್ನು

ಅ: ಒಂಚೂರ್ ನೀರಟ್ಟ್ ಅಂದ್ರ ಇವ್ನ್ ಬಗ್ಲಿಕ್ಕಿಲ್ವಲ್ಲ ಏನ್ ಚರ್ಬು ಇವುಂಕ

ಕ: ಅಂಗೇ ದುರಾಂಕಾರ್ ಬೀಳ್ತಾನ್ ಬಿಡಾ

ಬ: ನಂಕೇನ್ ಗೊತ್ತ್ ಈ ತಾತ್ನು ಒಳ್ಳೇ ಕಾಕ್ ಆಡ್ದಂಗ್ ಆಡ್ತಾನಾ

ಕ: ಆದ್ರ್ ಎನಾಗೋಯ್ತು

ಬ: ಆ ಗೌರತ್‌ಗೆ ಹೇಳ್ದ್ನ

ಅ: ಇವ್ಕ ಏನ್ ಆಗ್ಯೋಯ್ತೋ

ಬ: ನಂಕ ಅದೆಲ್ವು ತಿಕ್ ನೀರಟ್ಟಕ್ ಬರಂಗಿಲ್ಲ

ಕ: ಎಲ್ಕೋತ್ಯೋ

ಬ: ನಾನ್ ಆಡಕ್ ವಂಡೀನೀ ವೊತೀನ್. ಅವುನ್ಕ ಯೇಳ್, ಆಡುಗ್ಲು ಎಲ್ವೂ ಅಲ್ಕೋದೋ.

ಮಂದ್ಲೀಕ್ ಯೆಲ್ನು ಸುತ್ತೀಕ್ ಬಂದ್ಯೀನ್ ನಾನು....

ಜಾಲ ಭಾಗದಲ್ಲಿ ವ್ಯಕ್ತವಾದಂತಹ ಈ ಉದಾಹರಣೆಗಳಿಂದ ಕೂಡಿದ ವಾಕ್ಯಗಳಲ್ಲಿ ಪ್ರಮುಖವಾಗಿ ಎರಡು ಅವತರಣಿಕೆಯನ್ನು ಒಳಗೊಂಡಿದೆ. ಮೊದಲ ಮತ್ತು ಮೂರನೇ ಅನೌಪಚಾರಿಕ ಸಂಭಾಷಣೆಯು ಕನ್ನಡ ಭಾಷಿಕರ ಸಂಭಾಷಣೆಗಳು, ಎರಡನೆಯದು ತೆಲುಗು ಭಾಷಿಕರು ನಡೆಸುವ ಸಂಭಾಷಣೆಯಾಗಿದೆ. ನಾಲ್ಕನೆಯದು ಮಕ್ಕಳೊಡನೆ ವ್ಯವಹರಿಸುವುದನ್ನು ಒಳಗೊಂಡಿದೆ. ಇಲ್ಲಿ ಕನ್ನಡ ಮತ್ತು ತೆಲುಗು ಭಾಷಿಕರಲ್ಲಿ ವ್ಯಕ್ತವಾದ ಗಾದೆಯ ಮಾತು ಮತ್ತು ಜನಪ್ರಿಯ ಹೇಳಿಕೆಯನ್ನು ಹಾಗೇಯೆ ದಾಖಲಿಸಿ ಕೊಡುವುದರ ಮೂಲಕ ಕನ್ನಡ ಮಾತೃಭಾಷಿಕರು ಮತ್ತು ತೆಲುಗು ಮಾತೃಭಾಷಿಕರ ಮಧ್ಯೆ ನಡೆಯುವ ಸಂಭಾಷಣೆಗಳ ಭಿನ್ನತೆಯನ್ನು ಗುರುತಿಸಲಾಗಿದೆ. ಮತ್ತು ಈ ಸಂಭಾಷಣೆಯನ್ನು ವಿವಿಧ ಭಿನ್ನ ಭಾಷಿಕ ವಲಯಗಳಿಂದ ಪಡೆಯಲಾಗಿದೆ. ಇಲ್ಲಿ ವಕ್ತೃಗಳು ಕನ್ನಡದ ಜೊತೆಜೊತೆಯಲ್ಲಿ ತೆಲುಗು ಭಾಷೆಯ ಪದಗಳನ್ನು ಬಳಸುವುದು ಅವರು ತೆಲುಗು ಬಲ್ಲರೆಂಬುದನ್ನು ಮನದಟ್ಟು ಮಾಡಿಕೊಡುತ್ತದೆ. ಇವುಗಳು ಪೂರ್ವನಿರ್ಧಾರಿತವಾಗಿ ಬಳಕೆಯಾಗದೆ ಅಪ್ರಜ್ಞಾಪೂರ್ವಕವಾಗಿ ಬಳಕೆ ಮಾಡಿರುವುದನ್ನು ತೋರಿಸುತ್ತದೆ. ಸಂದರ್ಭದ ಅನುಸಾರವಾಗಿ ಭಾಷಿಕರು ಕನ್ನಡದ ಜೊತೆಗೆ ತೆಲುಗು ರೂಪಗಳು ಮತ್ತು ತೆಲುಗಿನ ಜೊತೆ ಕನ್ನಡದ ರೂಪಗಳನ್ನು ಬಳಸುತ್ತಿದ್ದಾರೆ. ಈ ಮಾತುಗಳಲ್ಲಿ ಕನ್ನಡದೊಡನೆ ತೆಲುಗು ಬಳಕೆಯ ಸನ್ನಿವೇಶಗಳು ಮತ್ತು ಸಂದರ್ಭಗಳು ಹೆಚ್ಚು ಖಚಿತವಾಗಿಲ್ಲದಿರುವುದನ್ನು ತೋರಿಸುತ್ತವೆ. ಕಿರಿಯರು ಬಳಸುವ ಪದಗಳಿಗಿಂತ ಹೆಚ್ಚು ಭಿನ್ನವಾದ ರಚನೆಗಳು ಹಿರಿಯರಲ್ಲಿ ಕಾಣಿಸುತ್ತವೆ ಎಂಬುದು ಪ್ರಸ್ತುತ ಪಡಿಸಿರುವ ಅವತರಣಿಕೆಗಳಿಂದ ವ್ಯಕ್ತವಾಗುತ್ತದೆ.

೮.೨ ಕಥೆಗಳು.

ಬೆಂಗಳೂರು ಗ್ರಾಮೀಣ ಭಾಗದಲ್ಲಿ ಕ್ಷೇತ್ರಾಧ್ಯಯನದ ಮೂಲಕ ಸಂಕಲಿಸಿದ ಹಲವು ಕಥೆಗಳನ್ನು ಇಲ್ಲಿ ನೀಡಲಾಗಿದೆ. ಅದರ ಮೂಲಕ ಭಿನ್ನ ಭಾಷಾವಲಯದಲ್ಲಿ ಜನರು ಹೇಗೆ ಮಾತಿನ ಮೂಲಕ ಕಥೆಯನ್ನು ಕಟ್ಟುತ್ತಾರೆ ಎಂಬುದು ಮುಖ್ಯವಾಗುತ್ತದೆ. ಕನ್ನಡದಲ್ಲಿನ ಭಾಷಿಕಾಂಶಗಳನ್ನು ತೆಲುಗು ಭಾಷಿಕರು ಮತ್ತು ಕನ್ನಡ

ಭಾಷಿಕರು ಹೇಗೆ ಬಳಸುತ್ತಾರೆ ಎಂಬುದನ್ನು ತಿಳಿಯಬಹುದಾಗಿದೆ. ಸಾರ್ವಜನಿಕ ವಲಯಗಳಲ್ಲಿ ಜಮೀನಿನಲ್ಲಿ ಕೆಲಸ ಮಾಡುವಾಗ, ಅಂಗಡಿಯ ಹತ್ತಿರ ಹೀಗೆ ಹಲವು ವಲಯಗಳಲ್ಲಿ ಕ್ಷೇತ್ರಾಧ್ಯಯನದ ಮೂಲಕ ಕಥೆಯ ಮಾದರಿಗಳನ್ನು ಕಲೆಹಾಕಿದ್ದೇನೆ. ಮೊದಲನೆ ಕಥೆಯು ತೆಲುಗು ಭಾಷಿಕರಿಂದ ಪಡೆದದ್ದಾಗಿದೆ. ಎರಡನೆಯದು ಕನ್ನಡ ಭಾಷಿಕರಿಂದ ಬಂದ ಕಥೆಯಾಗಿದೆ.

೧. ಕುಕ್ಕಾ ಬಂಗಾರ್ಮ ಆಯ್ನ ಕತಾ (ನಾಯಿ ಬಂಗಾರವಾದ ಕಥೆ): ತೆಲುಗು ಭಾಷಿಕನು ಹೇಳಿದ ಕಥೆ.

ಒಂದ್ ಊರ್ನಾಗ ಒಗ್ ರಾಜ್ಸು ಉಂಡೇವಾಡು. ವಾಡ್ಕು ಒಕ ರಾಜ್ಸು ಉಂಡೇದೀ. ಇದ್ರೀಕೀ ಪೆಳ್ಳೈ ಎಂತೋ ಎಂಡ್ಲಾಯಿಂದಿ. ವಾರ್ಕೀ ಪಿಲ್ಲಲುಂಡೇದು. ಒಕ ದಿವ್ಸ್ಮು ರಾಜ್ಸು ಕಾಡ್ಕೆಲಾರಿ ಕಾಡ್ಕೆಲ್ಲಿ ಬೇಟ್ಯಾಡ್ಲ್ ವೆಳ್ಳಾಧಿ ಪೋಯಾಡು. ಅಕಡ್ ಒಕ್ ಮಾರ್ಕಿಂದ ಒಕ ಸ್ವಾಮೀಜ್ಯು ಉನ್ನಾಡು ಕೋಚೇನಿ ತಪ್ಪಸ್ ಚೇಸ್ತಾವುಂಟಾಡು. ರಾಜ್ಸು ವಾಡೀನಿ ತಪಸ್ಸ್ ಸೂಸೀ ದಿಗರ್ನಲ್ಲಿ ಸ್ಯಾಮಿ ನಾಕು ಬಿಡ್ಲ್ಲೇದು ನಾಕಿ ಬಿಡ್ಲೈಯಲಾಗ ಲೇದಾನೇ ಬರಮ್ಯೆಯಾಡಿ ಕನಿ ಅಡಗುವಾಡು. ಅವಾಗ್ಲು ಅವದು ಸಾಮೀ ರಾಜುಂಕೀ ಮಾವುಂಕೀ ಪೂನ್ನಾಕ್ಕೀ ದಾನೀನೀ ಪೆಳ್ಳಂಕಿಂಚಿ ವಾಟಾ ಸಮೇತ್ಮು ತಿನ್ನದಾನ್ಕೀ ಚೆಪ್ಪು ಆನೇ ಚೆಪ್ಪಿ ಮಳ್ಳಿ ತಬಸ್ಕ ಕೂತ್ನು. ಮಳ್ಳೀ ರಾಜ್ಸು ತನ್ನ ಪೆಳ್ಳ ದೆಗರವಳ್ಳಿ ಮಾಮಿಟ್ಕಾಯ್ ವಿಚ್ಚಿ ದೀನಿ ಮವು ವಾಟ್ ಸಮೇತ್ಮು ತಿನ್ನಾಲೀ ಆನಿ ಚೆಪ್ಪಾಡ್ತು. ಆಯ್ತ್ ಏ ರಾಣೀ ಪೊಂಡು ಮಾತ್ರ ತಿನ್ಕೋ ವಾಟೇಮು ಪಾರೇಸಿಂದಿ. ಆ ವಾಟ್ಲ್ ನೀ ಕುಕ್ಕ್ ತಿನೇಸಿಂದೀ ಆಮೇಕಾ ಕೂನ್ನಿ ತಿಂಗ್ಲು ತರ್ವಾತ ಇದ್ರು ತೆಲಲ್ ನಿಂತಾರು. ಅಬ್ಬುಡಿ ರಾಸೀಕಿ ಕೋರಿಕ್ಲು ಪುಡ್ತುಂದಿ. ತನ್ಕೆ ಏಂ ಕಾವಾತ್ನೋ ತಾನಿ ಚೇಸ್ಕೋ ತಿಂತುಂದಿ. ಕಾನೀ ನಿಂದ್ ಮನುಷ್ಯನ್ ಕುಕ್ಕಂಕೀ ಏಮೇನ್ ತಿನೇದಾನ್ಕಿ ಪೇಸೇದು. ವಕ್ ದಿನ್ವು ವೊಬ್ಬೋಟ್ ಚೇಸ್ಕೋನಿ ತೀನೇದ್ ತಪ್ಡು ಕುಕ್ಕ ಆಸ್ಗ ನಾಕಿ ಕೊಡೇಸ್ತುಂದಿ ಯೇನಿ ಕಾಸ್ತುವುಂಟುಂದಿ, ಕಾನೀ ರಾಣೀ ಒಬ್ಬೊಟ್ ತಿನ್ನೇಸಿ ಚೆಯ್ ಕಡಿಲೇನ ನೀಳ್ಳೂನೂ ಮೇನ್ ಪೈನಾ ಪೋಸಿಸ್ತುಂದಿ. ಅಪ್ಪುಡು ಕುಕ್ಕ ಚೆಯ್ ಕಡೀಲೇನಾ. ನೀಣ್ಣ್ಲು ನಾಕೊಂದಾಮ್ ಅನ್ಕೊಂಡ್ ಏ ಇದಕೊಯ್ಯಿ ಮೊಣ್ ಪೂಯ್ ಪೋಸಿಂದೆ. ಆನಿ ಬಾಧ್ಪಡಿ ಕದ್ವು ಮೆಟ್ಟಾದೋ, ರಾಣೀ ಶಾಪ್ಮು ಏಸ್ತುಂದಿ. ಅದೇಂ ಅಂಟೇ ನೀ ಕಡ್ಯೆಲೋನ್ ರಾನೀ ಆನೀ ಚೆಪ್ಪಿ ಕಾಡ್ಲು ಎಲ್ಲಿಡ್ತುಂದೀ ತೊವಾ ನೆಲ್ಲು ತುಂಬೀದೀನ್ ತರ್ವಾತಾ ಕೊಕ್ಕಿರೆಂಡ್ ಮೈತೈನಾ. ಆಡ್ ಪಿಳ್ಳಲು ಪುಟ್ಟಾರು, ದಾನಿ ಇಕ್ಡ ದಾನೀಕೀ ರೈನೀಕೀ ಕುಕ್ಕಲು ಪುಡ್ತಾಯೀ. ದಾನ್ ಚೋಸೀನಾ ರಾಜ್ಸು ಅಯ್ ಇದು ಕುಕ್ಕಲೀ ಜನ್ಮ್ ಇಚ್ಚಿಂದೆ. ಆನೇದಾನಿ ಧರ್ಮೇಸ್ತಾಡು ಇಕ್ಕಡ್ ಕುಕ್ಕ್ ಆಡು ಪಿಲ್ಲನ್ ಇ ಬಾಗ್ಮು ಚೂಸ್ಕೊಂಟುಂದೀ. ಒಬ್ ಬಿಡ್ಲೂಕೀ ಕಾವಲ್ಸೀನ ಒಬ್ಲು ನಗ್ಲು ಅನ್ನೀ ಕಿಸ್ಕೂನ್‌ಪೋಯ್ ಇಸ್ತಾವುಂಡಾದೀ.ಅಲಾಗೇ ತಿನ್ನಲ್ ಪೆರ್ಗೀ ಪೆದ್ದೋಳ್ ಅವತಾರ್ಮು ಅಲಾಗಿ

ಒಕ್ ದಿನ್ಮು ಕುಕ್ಕಾ ಏಕ್ಕಡಕೋ ವೆಲ್ಲಿನ್ ಆಟ್ಲು ಬಿದ್ದಾರು. ಯುವರಾಜ್ಲು ಆಕಡ್ಕೀ ವಸ್ತಾರು. ಈ ಆಡ್ ಪಿಲ್ಲುಲ್ ನೀಳ್ಲು ತೀಸ್ಕೋರ್ ವಚ್ಚೇರಾನ್ಕೀ ಬಾಯ್ದೇಗ್ರ ವಸ್ತಾರು. ಅಕ್ಡಾ ಇಕ್ಲು ಆಡ್ ತೆಲ್ಲೋನಾ ಚೂಸ್ತೀನಾ ರಾಜ್ಕುಮಾರ್ಲು ಪೆಳ್ಳಿ ಚೇಸ್ಕುಂಟೇ ಈ ಇದ್ದರ್ನೇ ಚೇಸ್ಕೋ ವಾಲೀಗೆ ನಿರ್ದಾರಿಸ್ತಾರು. ಅನೇಕಾ ಒಳ್ ದೆಗ್ರತ್ಯೆಯ್ ಅಡಗ್ತಾರು. ನಿಮ್ಮಲ್ಲಿ ನೇಮು ಭಾಗ ಚೇಸ್ಕೂಂಟಾಮು. ಮಮ್ಮಲ್ಲಿ ಪೆಲ್ಲಿ ಚೇಸ್ಕೋಂಡಿ. ಆನೀ ಆಂಗೀ ಮೀರು ಮಾ ಜೊತುಗ್ಲು ರಾಮಡಿ ಅಂಗ್ ಅಡುಗ್ತಾರು. ದಾನ್ ಕೀ ಪೆದ್ದಪಿಲ್ಲ ಒಪ್ಕೊಂತ್ತುಂದೀ. ಚಿನ್ನ ಪಿಲ್ಲರ್ ಒಪ್ಕೋನೆಲ್ದು ಆ ಮಿಟ್ಕೀ ಪೆದ್ ಪಿಲ್ಲುಚಿನ್ನ ಮಗ್ನ ಒಪ್ಪಸ್ಕಿ ತೊಡ್ಕೋನೆಲ್ತುಂದಿ. ಆದ್ರೇ ಚಿನ್ ಪಿಲ್ಲ ಅಮ್ಮನೇ ವದೇಸ್ಲೀ ವೆಳ್ಳೇರಾನ್ಕೀ ಇಷ್ಟಮು ಲೇದು. ಖಾನೀ ಅಕ್ಕ ಜೊತ್ಲು ವೆಳ್ಳೇ ತಪ್ಪು ತಾನೀ ಗೊತ್ಲು ಉನ್ನ ನಲ್ಲ ಪೊಸ್ಲು ಆರಾನೀ ಪೆರ್ಕೀ ಒಡೋ ಕಾ ಪೂಸ್ಲೇ ದಾರ್ಕು ಏಸ್ತೋನ್ ನಿಲ್ತುಂದೀ. ರಾಜ್ ಜೊತ್ಕ ಅಟ್ರೇ ಎಲ್ಲೀಡಸ್ತಾರು. ಪಪ ಇಕ್ಕಡೆ ಕುಕ್ ಮರ್ಗ್ಲು ಲೇದಾನೀ ಎಡ್ತು ಕೊಚಾವುಂಟುಂದೀ. ಕಾಡಂತ ವೇದಕುಂಟದೀ ಎಕ್ಕಡ್ ಲ್ಯಾಕ್ ಪೋತೆ ದಾರೀಲೀ ಪೆಚ್ಚ್ ಎಡುಸ್ತಾನ್ ಕುಚ್ಚೇಲೇದಿ. ದಾನ್ಕೇ ಒಕಟೇ ಒಕ್ಟೇನೇ ಚೋಸ್ಕೊಂದಿ ಎಲ್ತುಂದೀ. ಪಿಲ್ಲೇ ಲೋಗವಾಳರೇ ಕೂತುಕ್ಲೂಕೀ ಪೆಳ್ಳೆ ಪೋಯುಂತಿದಿ. ಮೊದುಕ್ಲಾ ಕೂತ್ರು ಅತ್ರುಕಾ ಪೋತುಂದೀ. ಅಬುಡು ಕೂತ್ರ ಅಯ್ಯೋ ಈ ಕುಕ್ಕ ಮಳ್ಳೀ ವಂಚ್ಚೇಂದೇ ನಮ್ಮೊಗುಡು ಚೂಸ್ಲೇ ಇದಿ. ಕುಕ್ಕ ಹುಟ್ಟೇಂದೆ ಎಂದ್ ತೇಲ್ಸ್ ಪೊಯ್ಚೀ . ನನ್ ಬಿಟ್ಲೇಸ್ತಾನು ಅಂತಾನೀ ವನ್ಕತೋ ದಾನ್ಕೋ ಕಾಲ್ ಇರ್ಕೋಟ್ರಿ ತರ್ಮೇಸ್ತುಂದಿ. ಕುಕ್ಕಾ ಏಡೋಸ್ಕೊಂನಿ ಚಿನ್‌ಕೂತ್ರು ದಿಗ್ರುಕೀ ಅಲ್ತುಂದೀ. ಅದು ತಲ್ಲೀನಾ ಸೂಸೀ ಏಡ್ಸ್ಕೋನಿ ದಾನ್ಕೀ ಪೆಟ್ಟುಗ್ಲಾ ಏನೀ ಪೂಜೀಸ್ತುಂದೀ. ಅದು ಒಕ್ ದಿನ್ಮು ಬಂಗಾರ್ ನಲ್ಪೋತುಂದೀ. ದಾನೀ ಮೊಗ್ದೀ ಚೂಸೀ ಏಮೀದತಾನ್ ಅಡುಗ್ತಾಡು. ಅದೀ ಅಯಿಂಡೇ ಕತಾಂತ ಚೇಸ್ತುಂದೀ. ಆಮೇಕಾ ವಾಡು ಅಕ್ದಿಗ್ರ ತೋಯಿ ಸೇರ್ ತಿಸ್ಕೋರಾ ಎಂಡಾಡು ಅದೀ ಸೇರ್ಕ ಚಿಂತ್ಪೊಣ್ಣ ಮೇತ್ತೀಂಚಿ ಪೊಂಪೇಸ್ತುಂದಿ. ಮಳ್ಳಿ ಅದ್ ಸೇರ್ಲು ಬಂಗಾರಂತ ಅಲ್ಲೇಸಿ ಎತ್‌ಕ್ಕೊಂ ಪೋಯ್ ವಾಪಸ್ ಇಚ್ಚೇಸ್ತುಂದೀ. ಚಿಂತ್ಪೊಣ್ಣ ಮೆತ್ತೀಸೀ ಪೊಂಪೇಸ್ತುಂದಿ. ಮಳ್ಳಿ ಅದ್ ಸೇರ್ಲು ಬಂಗಾರಂತ ಅಲ್ಲೇಸಿ ಎತ್ಕೊಂ ಪೋಯ್ ವಾಪ್ಸು ಇಚ್ಚೇಸ್ತುಂದೀ. ಚಿಂತ್ಪಣ್ಣು ಮೆತ್ಕೊನ್ನ ಬಂಗಾರ್ನ ಚೂಸಿ ಎಕೆವೇ ಬಂಗಾರ ಆನೇ ಅಡಕ್ತುಂದೀ. ಇದಿ ದಾನ್ಕಿ ಆಸ್ ಪುದ್ಕಿ ಬೀದೀಲ್ಪೋಯ್ತಾರ್ ಕುಕ್ಕ್ ನೀ ಸಾಯ್ಚೀ ದಾನ್ಮಿ ಪೆಟ್ಟುಗ್ಲು ಪೆಟ್ಟ ಪೂಜೀಸ್ತುಂದೀ ದಾನ್ ಚೂಸೀನಾ ಮಗ್ಡು ಪೆಟ್ಟಿಗೇನೀ ತೆರ್ಚಿ ಚೂಸ್ತಾನು. ಕುಲ್ಲಿಪೋಯಿನ. ಕುಕ್ಕನೀ ಚೂಸೀ ಇದೀ ತರ ಪೆಳ್ಳಾಮು ಪಿಚ್ಲೇಯಾನೀ ತರ್ವೇಸ್ತಾಡು. ಅತ್ಗೇರ್ಕ ಅನ್ಕ ಯಾವತ್ ವೋಗ್ಲೋ ಗೋತ್ತಾಗ್ಲಿಲ್ಲ. “ಏಮ್ರಾ ಅದೀ ತಲ್‌ಪುಡ್ಕಿತ್ತು ಬಂದ್‌ನಾ. ಯಾಡೀ ಯಿರ್ಲೇ ರೊಕ್ನ ಕೂಡ್ಯೆಂಡಾವು” ಅಂದಾಗ್ ಹೋಗ್ಲೇ ಪೋತ್ನೀ ರೋಕ್ ಬಂದ್ ಕೇಳೋದ್ ಮರ್ತ

ಪೋಯ್ನು. ಶರ್ಮ ಕಿತ್ತೋಗಂಗ್ ಅಲ್ಲೋಗ್ ಬಿದ್ ವಚ್ಚೇಸೇದಿ. ಆ ಆಡ್ಗುಳ್ನ ವಡ್ಕೋಡ್ ಹೋದ್ನು, ಆ ಐದ್ಲು ನ್ನನೋಡ್ ಕೇಶಿಂದೆ ನಗ್ ಪೋಯಿಟ್ಲು. ಮೇಮ್ ಆಟ್ಪ್ ಆಡ್ತಾತ್ಮೇತ್ಮಾ ಎಮ್ರಾ, ಶೆಪ್ಪ್ರಾ.

ಆ ಕಾಯ್ಗ್ಳ ಮಾರೋಕ್ ಪೋದ್ ಮ್ಯಾಕ ಮೂಡ್ ಕಾಸ್ ಇಸ್ತಾಮು, ಕಾಯಿಗ್ಳು ಎಂದ್ ಕೂಗ್ ಪೋತೀನ್ದ್ರೇ ಮೂವತ್ ಇಸ್ತಾವ್. ಇಸ್ಕೊಂಡ್ ಪೋತೇನು. ನನ್ ಬಿಟ್ಲೇಸ್ತಾನು ಅಂತಾನೀ ವನ್ನತೋ ದಾನ್ಕೋ ಕಾಲ್ ಇರ್ಕೋಟ್ರ ತರ್ಮೇಸ್ತುಂದಿ. ಕುಕ್ಕಾ ಏಡೋಸ್ಕೊಂನಿ ಚಿನ್‌ಕೂತ್ರು ದಿಗ್ರುಕೀ ಅಲ್ತುಂದೀ. ಅದು ತಲ್ಲೀನಾ ಸೂಸೀ ಏಡ್ಸೊಕೀನಿ ದಾನ್ಕೀ ಪೆಟ್ಟುಗ್ಲಾ ಏನೀ ಪೂಜೀಸ್ತುಂದೀ. ಅದು ಒಕ್ ದಿನ್ಮ ಬಂಗಾರ್ ನಲ್ಪೋತುಂದೀ. ದಾನೀ ಮೊಗ್ದೀ ಚೂಸೀ ಏಮೀದತಾನ್ ಅಡುಗ್ತಾಡು. ಅದೀ ಅಯಿಂಡೇ ಕತಾಂತ ಚೇಸ್ತುಂದೀ. ಆಮೇಕಾ ವಾಡು ಅಕ್ದಿಗ್ರ ತೋಯಿ ಸೇರ್ ತಿಸ್ಕೋರಾ ಎಂಡಾಡು ಅದೀ ಸೇರ್ಕ ಚಿಂತ್ಪೊಣ್ಣಿ ಮೇತ್ತೀಂಚಿ ಪೊಂಪೇಸ್ತುಂದಿ....

೨. ಮುತ್ತಿನ್ ಶೆಟ್ಟೀನ್ ಮುತ್ನಕ್ಕೀ ಕಾಪಾಡ್ದ್ ಕತೆ: (ಕನ್ನಡ ಭಾಷಿಕನು ಹೇಳಿದ ಕಥೆ.)

ಬಂದೂರ್ನಾಗ್ ಮುತ್ತೀನ್ ಶೆಟ್ಟಿಗ್ನು ಇದ್ನು, ಅವ್ನು ಒಂಜೀನ ಮುತ್ತ್ ಮಾರ್ಕಂಡ್ ಹೋಗ್ತಿದ್ದ್ನು. ಮುತ್ತ್ ಮಾರ್ಕಂಡ್ ಊರ್ ಊರ್ ಸುತ್ಕೋಂಡ್ ತಿರಿಕಂಡ್ ಬಂದ್ನು. ತನ್ನತ್ರ ಇದ್ ಮುತ್ತುಗ್ಳ್ನ ಸರ್ನ ಮಾಡ್ಕಂಡು ಎಲ್ಲೂಕ್ಕ ಕೊಟ್ಕಂಡ್ ಬಂದ್ನು. ಎಲ್ಕಡೆ ತಿರಿಕಂಡ್ ಬಂದ್ ಮ್ಯಾಕ ಒಂದ್ ಮರ್ ಕೆಳ್ಗ ಕೂತ್ಗಂಡ್ ಸುದಾಸ್ಕಂಡ್ ತಿದ್ನು. ಅಂಗೇ ನಿದ್ ಮಪ್ರು ಬಂತ್ ಆಗ್ ಸೆಂದಾಗ್ ಗಾಳೀ ಬೀಸ್ತಾ ಯಿತ್ತು, ಅದ್ಕೂ ಇದ್ಕೂ ಚೆಂದಾಗ್ ನಿದ್ದ್ ಬಂದ್ ಮಲಕಂಡ್ನು. ಅದು ಹಳ್ಳುದ್ ಮಗ್ಲಾಗ್ ಮಲೀಕಂಡ್ಯೇದ್ನು. ಅಂದ್ರೇ ಆ ಕತ್ಯಾ ಏನ್ ಕೇಳ್ತ್ಯಾ ಏಟ್ ಗಾಳ್ಗುಳ್ ಮಳ್ಗುಳ್ ಬರಂಗ ಮೋಡ್ನೆಲ್ಲಾ ಗುಭ್ರಾಕಂಡ್ ಮ್ವಾಡ ಮುಚ್ಕಂಡಿತ್ತು. ಅವುನ್ಕ ಅದೇನೂ ಗೊತ್ತಾಗ್ಲಿಲ್ಲ. ಎಲ್ಲೋ ಯಾವ್ದೋ ಊರ್ನಾಗ್ ಆಗ್ಲೇ ಮಳ್ಯ ಚೆಂದಾಗ್ ಬಿದ್ದ್‌ಬುಟ್ಟಿತ್ತು. ಅದ್ರಿಂದ ನೀರ್ ಹಳ್ದಾಗ್ ಮರ್ರೋ ಅಂತ್ ಬರ್ತಾಯ್ತು. ಅದ್ ಬರ್ತೀರೂ ರಬುಸ್ಕ ಊರೆಲ್ಲಾ ದೂರದ್ದಾಗ್ ಹಳ್ಕೊಳ್ನ ಎಲ್ವನ್ನ ಎಳ್ಕಂಡ್ ತುಂಬ್ಕಂಡ್ ಬರ್ತಿತ್ತು. ಇತ್ ಮುತ್ ಮಾರ್ ತಿರ್ಗ್ ಸಾಕಾಗ್ ಮಲ್ಕಂಡಿದ್ ಶೆಟ್ಟಿಗ್ ಒಂಚೂರ್ ಎಚ್ಚಕ್ಕೇನೂ ಆಗ್ದೇ ಅಂಗೇ ಮಲ್ಕಂಡಿದ್ನು. ಅತ್ಲಾಗ್ ಅಳ್ದಾಗ್ ನೀರ್ ಎಲ್ಲಾ ಕೊಚ್ಕೋಂಡ್ ಬತ್ತಿತ್ತು. ಇ ರೀತ್ ಬರ್ತೀದ್ ತೊರ್‍ಯ ಒಂದ್ ಅಕ್ಕ್ಯ ನೋಡ್ತು. ಆ ಅಕ್ಕಿ ಗಡಾತ್ತಾಗ್ ನಿದ್ಪೊಯ್ತಿರೀ ಶೆಟ್ಟಿಗ್ನ ನೋಡಿ ಈ ಮುಸ್ಲ ಶೆಟ್ಟಿಗ್ನು ಏನ್ ಗರ್ಬಂಡ್ದಂಗೆ ಗೊರ್ಗೆ ಹೊಡ್ಕಾಂತಿದ್ದಾನೆ ಎಂದ್ ಅನ್ಕಂಡ್ ಕುಂತಿತ್ತು. ಅಲ್ಲೇ ಕಾನ್ಮರ್ದಾ ಕೆಳ್ಗ ಮಲ್ಗಿದ್ ಮುತ್ತೀನ್ ಶೆಡ್ಡಿನ್ ಕೂಗಾಕ್ ಸುರು ಮಾಡ್ತದಾ ಅದು. ಪಾಪ್ ಅದ್ಕೇನ್ ಅನ್ಸ್ತೋ **'ಮುತ್ತಿನ್ ಶೆಟ್ಟೀ ತೊರೆ ತೊರೆ, ಮುತ್ತಿನ್ ಶೆಟ್ಟಿ ತೊರೆ ತೊರೆ'** ಎನ್ದ್ ಜೋರ್ಕ ಬಡ್ಕಂಣ್ನಾಕ್ ಸುರ್ ಮಾಡ್ತು. ಆ ಅಕ್ಕಿ ಒಂದೇ ಸಮ್ಕ ಬಂಡ್ಕಂತಿತ್ತು. ಅದ್ ಬಡ್ಕಂಡ್ ಸದ್ದ್‌ಗಾ ಮುತ್ತ್ಯೇನ್ ಶೆಟ್ಟಿ ಎದ್

ನೋಡ್ತಾನೆ. ಮೇಲ್ಕ ಕತ್ತ್ಯೇತ್ ನೋಡ್ತಾನಾ ಅಲ್ಲಿಂದ ತೊರೆ ಮನ್ ಮಟ್ಗಳನ್ನೆಲ್ಲಾ ದಬ್ಕಂಡ್ ಬರ್ತಾಯ್ತು. ಆಗ್ ಅಲ್ಲಿದ್ ಅತ್ತ್ ಮರ್ನ ಬ್ಯಗ್ ದಡ್ಡಡ್ ಎಕ್ನು. ಆಗ್ ಎಕ್ ತನ್ ಜೀವ್ನ ಉಳಿಸ್ಕಾಂತಾನೆ. ಆಮೇಕಾ ತೊರ್ ಕಡ್ಮ್ ಆದ್ಮೇಕಾ ಇಳ್ದ್ ಬಂದ್ ನನ್ ಜೀಯ್ನ ಕಾಪಾಡ್ದವ್ಳ್ ನೀನಮ್ಮ. ನನ್ ಯೆಣ್ತಿ ಮಕ್ಕುಳ್ಕ ಗಂಡುನ್ ತಂದೇನ್ ನೋಡಂಗ್ ಮಾಡ್ದೇ. ನಿನ್ ರುಣ್ವ ಯೆಂಗ್ ತೀರ್ಸ್ಲವ್ವ. ನನ್ ಜೀವ್ನ ಕಾಪಾಡ್ದ್ ನಿನ್ಕ ಯೇನ್ ಕೊಟ್ರು ಕಮ್ಮೀನೇ ಎಂದ ಆ ಮುತ್ತೀನ್ ಶೆಟ್ಟೀಗ್ನು ಆ ಅಕ್ಕೀನ್ ಕೊಂಡ್ಯಾಡ್ ತನ್ ಬ್ಯಾಗ್ನಾಗ್ ಮುತ್ತೀನ್ ಸೀಲ ತೆಗ್ದ್ ಮುತ್ತೀನ್ ಸರ್ವ ಎರ್ಸೀ ಆ ಹಕ್ಕೀಗ್ ಆಕ್ದ್ನಂತೆ. ಅವಾಕ್ಲಿಂದ್ಲು ಆ ಅಕ್ಕೀಗ್ ಮುತ್ತೀನ್ ಅಕ್ಕೀ ಎಂದ್ ಯೆಸ್ರಾಗ್ತು. ಆ ಅಕ್ಕೀಗ್ ಮುತ್ತ್ನಕ್ಕಿ ಯಾಗ್ ಅದ್ ಇಗ್ ಕೋತ್ಗಾ ಯೀರೋದ್ ಕೋಡಾ ಅಂಗೇನೇ ನೋಡ್.

೮.೩ ಕ್ಷೇತ್ರ ಕಾರ್ಯದಲ್ಲಿ ಕಲೆ ಹಾಕಿದ ಹಾಡುಗಳು

ಬೆಂಗಳೂರು ಗ್ರಾಮೀಣ ಜನರಲ್ಲಿ ಬಳಕೆಯಾಗುವ ಕೆಲವು ವಿಶೇಷ ಸಂದರ್ಭದಲ್ಲಿ ಕೆಲವು ಹಾಡಗಳನ್ನು ಕಲೆಹಾಕಿದ್ದೇನೆ. ಈ ಹಾಡುಗಳು ದೇವರ ಸ್ತುತಿಯನ್ನು, ಅತ್ತೆ ಸೊಸೆಯನ್ನು ನೀರಿಗೆ ಕಳುಹಿಸಿದಾಗ ಮಡಿಕೆ ಒಡೆದ ಸನ್ನಿವೇಶ, ಅಣ್ಣತಂಗಿಯರ ಬಾಂಧವ್ಯವನ್ನು ಕುರಿತಾದ ವಿಷಯವನ್ನು ಒಳಗೊಂಡಿವೆ. ಇವು ಭಾಷಿಕ ಹಿನ್ನೆಲೆಯಿಂದಲೂ ಮುಖ್ಯವಾಗುತ್ತವೆ. ಬೆಂಗಳೂರು ಗ್ರಾಮೀಣ ಜನರಲ್ಲಿ ಬಳಕೆಯಾಗುವ ಭಾಷೆಯು ಎರಡು ರೀತಿಯಲ್ಲಿದೆ. ಸಾಮಾಜಿಕವಾಗಿ ಸಂಭಾಷಣೆಯಲ್ಲಿ ಬಳಸುವ ಆಡುಮಾತಿನ ಸ್ವರೂಪಕ್ಕೂ, ಹಾಡಿನ ಮೂಲಕ ವ್ಯಕ್ತವಾದ ಸ್ವರೂಪಕ್ಕೂ ವ್ಯತ್ಯಾಸವಿದೆ. ಹಾಡಿನ ಸ್ವರೂಪದಲ್ಲಿ ವ್ಯಕ್ತವಾದ ಭಾಷೆಯು ಹೆಚ್ಚು ಸರಳವಾಗಿ ಬಳಕೆಯಾಗುತ್ತಿವೆ. ದ್ವಿತ್ವಗಳೆಲ್ಲಾ ದ್ವಿತ್ವರಹಿತವಾಗಿ ಮತ್ತು ಸರಳವಾಗಿ ಹೆಚ್ಚು ಸ್ವರಗಳಿಂದ ಕೂಡಿವೆ. ಆದರೆ ಆಡುಮಾತಿನಲ್ಲಿ ಈ ಬಗೆಯು ಸಹಜವಾಗಿ ಕಾಣುವುದಿಲ್ಲ. ಈ ಕೆಳಗೆ ನಾನು ಕ್ಷೇತ್ರಾಧ್ಯಯನದಲ್ಲಿ ಸಂಗ್ರಹಿಸಿದ ಹಾಡಿನ ಮಾದರಿಗಳನ್ನು ನೀಡಿದ್ದೇನೆ.

೧. ಪೂಜಾ ಹಾಡು

ಪುಜ್ಯಾ ಮಾಡವಯ್ಯಾ
ಅಣ್ಮಂತಂಗೆ ಅರ್ವಟ್ಗೆ ಪೂಜೆ ಮಾಡವಯ್ಯೋ
ಆಡ್ನೋಂದು ಆಡುತಾನೇ
ಆಡದಗಾ ಬಂದ್ಊ ಆಡುತಾಗ
ಒಡೋಡೊ ಕುಣಿತಾನಾ(ಪಲ್ಲವಿ)

ನಮ್ಮಪ್ನ ಅನ್ಮಂತ್ನೇ ಕುನ್ಯೋದು ನೋಡಾ

ಕುಣ್ದು ಕುಣ್ದು ಸಾಕಾಗ್ ಕುತ್ಕೊಂಡವ್ನೇ

ಆಡೊಂದಾ ಆಡುತೀನೀ

ಆಡ ಕೇಳೀ ಕಾಪಾಡೋ ನನ್ನಪ್ಪ

ಕಾಪಾಡೋ ನನ್ನಪ್ನೇ ನಾ ಆಡ ಕೇಳುತಾ.

ಆಡೊಂದಾ ಆಡೇನಾ.

೨. ನೀಲಮ್ಮನ ಹಾಡು

ಕಂಚೀಲೋ ವೆಲೆಸಾವಮ್ಮ

ಅಮ್ಮ ನೀಲಮ್ಮ

ಕಂಚಿ ಕಾಯಕ್ಕೆ ನೀಲಮ್ಮ (ಅಂದ್ ಯೇಳಿ)

ಗುಡಿಗೆಯ ಕಡಿಸಾರೆ

ನೀಲಮ್ನ ಗುಟ್ಯಾನ್ನ ಕಡಿಸ್ಯಾರ.

ಕಡಿಸೇರೆ ಗುಡಿವೆನೊಳಗೆ

ನೀಲಮ್ನ ದ್ಯಾವ್ರ ಆಗುವಳೇ

ಸಾರಿ ಬರುತಾವ್ನೆ

ನೀಲಮ್ಮ್ನ ಸಾರಿ ಬರ್ತಾವ್ನೆ

ನಮ್ಮಮ್ಮ ಸ್ಯಾರಿಬಿಟ್ ಬರ್ತಾವ್ನ

ಸಾರಿಬಂತು ತಂದ್ಯೇ ಅವ್ನೆ

ಪಾರುಜಾತವ್ನ ಮುಟ್ಟಿ ಬಂದಾವ್ನೆ.

೩. ಅಣ್ಣ ತಂಗಿಯರ ಹಾಡು

ಅಳಬ್ಯಾಡ ತಂಗೀ ಅಳಬ್ಯಾಡ ಅಳಬೇಡ

ಅಳದಂಗೆ ನಾನೂ ಯೆಂಗಾ ಇರುಲಣ್ಣಾ

ಅಣ್ಣನ್ನ ಮನ್ಯಾ ಮರಿಬೇಡಾ

ಮಲ್ಲಿಗೆ ಹೂವ ತಂದೀರುವೆನವ್ವಾ

ಮುಡಿಯಲೇ ಮುಡಿಬ್ಯಾರೆ

ತಂಗೀ ಬಡಿದು ಮುಕ್ಕುವ ಕಲೀಬಾರೇ

ಅಳಬೇಡ ತಂಗೀ ಅಳಬ್ಯಾಡ

ಅಣ್ಣನ ಮನೆಯ ಮರೀಬ್ಯಾಡ

ಅಳದಂಗೆ ನಾನೂ ಯೆಂಗಾ ಇರುಲಣ್ಣಾ

ಅಡ್ಡವ್ವ ನಿಂಕ ಮರಿಲಣ್ಣಾ (ಅಳಬೇಡ..)

ಪಟ್ಟೇಯ ಸೀರೆ ತಂದಿರೆವುನೆವ್ವ

ನೆರದಲ್ಲೇ ನೀನು ಉಡುಬಾರೆ

ತಂಗೀ ನೆರದಲ್ಲೇ ನೀನು ಉಡುಬಾರೆ (ಅಳಬೇಡ..)

ತಾಯಿ ತಂದ ಕನಸು ತಬ್ಬಲಿಯು ನಾನಯ್ಯ

ಅಣ್ಣಯ್ಯ ನನ್ನ ಮರೀಬೇಡ ಅಣ್ಣಯ್ಯ

ಮಗುವಾಗಿ ಇರುವಾಗ ತೊಟಿಲಲ್ಲಿ ತೂಗಿದೆ

ಮಾತು ಬಂದು ನಡಿವಾಗ ಬಿಕ್ಸೆ ತಂದು ಸಾಕಿದೆ

ಅಣ್ಣಯ್ಯ ನನ್ನ ಮರಿಬೇಡ ಅಣ್ಣಯ್ಯ

ತೌರಿಂದ ಕಳಿಸಿ ಮರೆಬೇಡ ಅಣ್ಣಯ್ಯ

ತಾಯ್ದಂದೆ ತಬ್ಲೀಯು ನಾನಯ್ಯ

ಅಣ್ಣಯ್ಯ ನನ್ ಮರೀಬೇಡ್ ಅಣ್ಣಯ್ಯ

೪. ಚೆನ್ನಮ್ಮ್ನ ನೀರ್ಕೋದ್ ಆಡು

ವನ್ನಮ್ಮ ಚಾನ್ನಮ್ಮ

ನೀರೀಗೇ ಒದರಮ್ಮ

ಅಣ್ಣಮ್ಮ ಮೋಡೇಗಾಡಿ ಚನ್ನಮ್ಮ

ಚನ್ನಮ್ಮ ಚೋಂಡಿಗಾಡಿ ನಮ್ಮಮ್ಮ

ಚೆನ್ನಮ್ಮ ನೀ ನಗಾಡೆ

ಕೊಡಗಾನ ಕೇಳದವರೇ

ನೀರ್ನ ತುಂಬುಗಂಡು

ಸಿಂಬೇಯ ನೋಡುಗಂಡೇ

ಮುಂದುಕೇ ಮೂರು ಎಜ್ಜೆ

ಕಾಲನ್ನ ಜಾರೀದಮ್ಮ

ಕಯನ್ನ ಬಿಟಾಲಮ್ಮ

ವನ್ನೀಯ ಕೊಳಾಗ

ಒಡಾದೋಯ್ತು ವಾಡೆದೊಯ್ತು

ಕೈಯನ್ನ ಜಾರೀತಮ್ಮ ಕಾಲನ್ನ ಜಾರೀತಮ್ಮ

ಅತಗಂಡು ಸೂರೀಗಂಡು

ಅಲ್ಲೇಯ ನೀಂತಿದಾಳೇ

ಚೆನ್ನೀಯ ಬಂದಾಳಮ್ಮ

ಅವಳೊಲ್ಲೇ ಒಲೀಯಲ್ಲೇ

ಕಾಲನ್ನ ಜಾರೀಳತ್ತೆ

ಕೈಯನ್ನು ಬಿಟ್ಟಳತ್ತೆ,

ಕೊಡಿಗಾನ ಒಡಿದೊಯ್ತು

ಅಂಗಂತಾ ಹೇಳಿದಾಳೆ

ಕುಂಬಾರು ಅಣ್ಣ್ಯಯ್ಯಾ

ಗಂಡನೀನೇ, ಮ್ಯಿಂಡನೀನೇ

ಮಂಡುಪರ್ಕೆ ತಂಗಂಡಿ

ಒಡದಾಳು ಒಡಿದಾಳು,

ಮೂಗಂಡ ಸ್ಯಾವಿಗೆ

ಮುಗುಸೇರೋ ಅಳ್ಳೇಣ್ಣೆ

ಬೆರಿಸ್ಯಾವ್ಲೆ. ಬೇರಿಸ್ಯಾವ್ಲೆ

ಗುಟುಬಾರೆ, ಗೂಟುಬಾರೆ

ಮದುಗಂಡು ಸೂರುಗಂಡು

ಹತುಗಂಡು ಸೂರಿಗಂಡು

ಯೆಜ್ಜೆಯ ಗೂಟಮ್ಮ

ಒಟ್ಟೆಯ ಆಸಿದಾತೆ ಇಟ್ಟದ್ದೋ ಇಕ್ಕಾತೆ
ನಿನಗಾಕ ಈಕ ಬದಲು
ಯೆಮ್ಮಿಗೆ ಆಕಿದಾರೆ
ಬತ್ತಾದ ಲೀಟಾರೂ
ಆಲಣ್ಣ ಕೊಡುತಾದೆ.
ಹೊಟ್ಟಾಗೆ ಕೊಡಾತ್ತೆ ತಿನ್ದು ನೀರು ಕುಡೀತೀನೂ
ಕೊಟಾರೆ ಕೊಡಾತೆ ತಿಂದು ನೀರು ಕುಡೀತೀನು
ನಿನಗಾದ್ರೂ ಕೊಡ ಬದಲು ಕೋಳಿಗಾ ಹಾಕಿದಾರೆ
ಮತಾಂದು ಮಟ್ಟಾಯೇ ಇಕುತಾದೇ ಇಕ್ಕುತ್ತಾದೆ.
ಎಂದೋದಾಳು ನಮ್ಮತೆ.

೮.೪ ಬೆಂಗಳೂರು ಗ್ರಾಮೀಣ ಜನರಲ್ಲಿನ ವ್ಯವಸಾಯ ಸಂಬಂಧಿ ವಿಚಾರಗಳು:

ಬೆಂಗಳೂರು ಗ್ರಾಮೀಣ ಜನರಲ್ಲಿ ಮಳೆಗಳ ಆಚರಣೆ : ಬೆಂಗಳೂರು ಗ್ರಾಮೀಣ ಜನರು ಪ್ರಮುಖವಾಗಿ ಕೃಷಿ ಪ್ರಧಾನರಾಗಿದ್ದು, ಮಳೆಯನ್ನೇ ಆಧರಿಸಿದ್ದಾರೆ. ಸುಮಾರು ಎಂಟು ತಿಂಗಳಲ್ಲಿ ಸುರಿಯುವ ಮಳೆಯನ್ನೇ ಆಧರಿಸಿ ವ್ಯವಸಾಯ ಮಾಡುತ್ತಿದ್ದಾರೆ. ೧೯೮೭–೮೮ ರಲ್ಲಿ ಮಳೆಯಾಧರಿಸಿ ಶೇ ೫೪% ರಷ್ಟು ರಾಗಿಯನ್ನು ಬೆಳೆದಿರುವರು. ೩೫ ಜಾತೀಯ ರಾಗಿಯನ್ನು ಬೆಳೆಯುವರು ಅದರ ಹೀಗೆ ವಿವಿಧ ಬಗೆಯ ರಾಗಿ ಬೆಳೆಯುವವರ ಸಂಖ್ಯೆ ಈಗ ಗಣನೀಯವಾಗಿ ಕಡಿಮೆಯಾಗಿದೆ. ಈ ನನ್ನ ಬರಹವು ರಾಗಿ ಬೆಳೆಗೆ ಅನುಗುಣವಾಗಿ ಬೀಳುವ ಮಳೆಯನ್ನು ಬೆಂಗಳೂರಿನ ಗ್ರಾಮೀಣ ಪರಿಸರದಲ್ಲಿ ಹೇಗೆ ಬಳಕೆಯಾಗಿದೆ ಎಂದು ತಿಳಿಯುವ ಮಳೆ ಪದಗಳ ಅಧ್ಯಯನಕ್ಕೆ ಸಂಬಂಧಿಸಿದ್ದಾಗಿದೆ.

ಬೆಂಗಳೂರು ಗ್ರಾಮೀಣ ಭಾಗದ ಜನರ ಆಡುಮಾತಿನಲ್ಲಿ ಬಳಕೆಯಾದ ಮಳೆಯ ಪದಗಳು ಈ ರೀತಿಯಲ್ಲಿವೆ. ಇವುಗಳನ್ನು ಸಂಸ್ಕೃತ ಶಿಷ್ಟಪದಗಳನ್ನು ದಾಸನಪುರ, ಹೆಸರಘಟ್ಟ, ಯಶವಂತಪುರ ಭಾಗದಲ್ಲಿ ಸಾಮ್ಯವಾಗಿದ್ದರಿಂದ ಒಂದು ಗುಂಪಾಗಿ, ಜಾಲ ಮತ್ತು ಯಲಹಂಕ ಜನರ ಪದಗಳನ್ನು ಒಂದು ಗುಂಪಾಗಿ ಗುರುತಿಸಿದ್ದೇನೆ. ಯಲಹಂಕ ಮತ್ತು ಜಾಲ ಭಾಗಗಳಲ್ಲಿ ಬಳಕೆಯಲ್ಲಿರುವ ತೆಲುಗು ಆಡುಮಾತಿನ ಪದಗಳಲ್ಲಿನ ವ್ಯತ್ಯಾಸಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಶಿಷ್ಟನಾಮ	**ದಾ, ಹೆ, ಯಶ**	**ಜಾ. ಯಲ**	**ತೆಲುಗು**
ರೇವತಿ	ರೇವ್ತಿ	ರೇವ್ತಿ	ರೇವ್ತಾನ
ಅಶ್ವಿನಿ	ಅಸುನಿ/ಅಶ್ನಿ	ಅಸ್ತಿನಿ	ಅಸ್ತಾನ
ಭರಣಿ	ಬರ್ಣಿ	ಬಯ್ಣಿ	ಭರುಣಿ
ಕೃತ್ತಿಕಾ	ಕಿರ್ತ್ಕ	ಕಿರ್ತಿಕಿ	ಕಿರ್ತಿಕಾನ
ರೋಹಿಣಿ	ರೋಯ್ಣಿ	ರೋನಿ	ರೋಣಿ
ಮೃಗಶಿರಾ	ಮಿಸ್ಕಿರಿ/ ಮಿಗ್ಸಿರಿ	ಮಿಕ್ಸಿರಿ	ಮಿಗ್ಸಿರಾನ/ನಿಸಿಲಿ
ಆರಿದ್ರಾ	ಆದ್ರಿ	ಆಜ್ರಿ	ಆಜ್ರುವಾನ
ಪುನರ್ವಸು	ಚಿಕ್ಕುಸ್ಲೆ	ಸಿಕ್ಕುಸ್ಲೆ	ಚಿನ್ಸುಲಾನ
ಪುಷ್ಯ	ದೊಡ್ಡುಸ್ಲೆ	ಪೆದ್ದುಸ್ಲೆ	ಪೆದ್ಸುಲಾನ
ಆಶ್ಲೇಷ	ಅಸ್ಲೆ	ನಿಸ್ಲಿ	ನಿಸಿಲಿ
ಮಖಾ	ಮಗೆ	ಮಗಿ	ಮಗ್ವಾನ
ಪುಬ್ಬಾ	ಉಬ್ಬೆ	ಪುಬ್ಬೆ	ಪುಬ್ಬಾನ
ಉತ್ತರಾ	ಉತ್ರೆ	ಉತ್ರಾನ	ಉತ್ರಾನ
ಹಸ್ತ	ಅತ್ತೆ	ಅತ್ತೆ	ಅತ್ತಾನ
ಚಿತ್ತಾ	ಚಿತ್ತೆ	ಸಿತ್ತೆ	ಸಿತ್ತಾನ
ಸ್ವಾತಿ	ಸಾತಿ	ಸಾಕಿ	ಸಾಕಾನ
ವಿಶಾಖ	ವಿಸಾತಿ	ಇಸಾತಿ	ಇಸ್ಸಾನ
ಅನುರಾಧ	ಅನಾರಾಗಿ	ಅಂದ್ರಾಗಿ	ಅಂದ್ರಾಗಿವಾನ

ಈ ಮಳೆಗಳು ವ್ಯವಸಾಯ ಪ್ರಧಾನರಿಗೆ ಮುಖ್ಯವಾದ ಮಳೆಗಳಾಗಿವೆ. ಇಲ್ಲಿ ಮಳೆಗಳನ್ನು ಆ ಪ್ರಕ್ರಿಯೆಯ ವಿಶಿಷ್ಟತೆಗೆ ಅನುಗುಣವಾಗಿ ಹೆಸರಿಸುವುದನ್ನು ಕಾಣಬಹುದಾಗಿದೆ. ಬೆಂಗಳೂರು ಗ್ರಾಮೀಣ ಜನರು ಮಳೆಯ ಹೆಸರನ್ನು ಬೇಸಾಯದ ಕಾಲಕ್ಕನುಗುಣವಾಗಿ ಕಟ್ಟಿಕೊಂಡಿದ್ದಾರೆ. ಆ ಜನರ ಬೇಸಾಯದ ಕ್ರಮ ಮತ್ತು ಅವರ ಮಳೆಗೆ ಕಟ್ಟಿಕೊಂಡ ವಿಚಾರಗಳು ಪರಸ್ಪರ ಪೂರಕವಾಗಿವೆ. ಅವುಗಳ ಮಾಹಿತಿಯು ಇಂತಿದೆ;

ರೇವತಿ : ರೇವತಿ ಮಳೆಯು ಮಳೆಯನ್ನೇ ಅವಲಂಭಿಸಿ ವ್ಯವಸಾಯ ಮಾಡುವವರಿಗೆ ಮೊದಲ ಮಳೆಯಾಗಿದೆ. ರೇವತಿಯು **'ರೇವ್ತಿ'** ಎಂದು ಸೌಲಭ್ಯಾಕಾಂಕ್ಷೆಯಿಂದ ಬದಲಾಗಿದೆ. ಇದು ಉಳುಮೆಗೆ ಸಂಬಂಧಿಸಿದ ಮಳೆಯಾಗಿದೆ.

ಅಶ್ವಿನಿ : ಈ ಮಳೆಯು ಎರಡನೇ ಮಳೆಯಾಗಿದೆ. ಬೆಂಗಳೂರು ಗ್ರಾಮೀಣ ಜನರಲ್ಲಿ ಈ ಮಳೆಯು ಬಿದ್ದರೆ ಈ ಮಳೆಯ ನೀರೆಲ್ಲಾ ಇಂಗುವವರೆಗೂ ಬೇರೆ ಮಳೆಯಾಗುವುದಿಲ್ಲ ಎಂಬ ನಂಬಿಕೆಯಿದೆ. ಆದ್ದರಿಂದ **ದರಿದ್ರ** ಎಂದು ಅರ್ಥ ಬರುವ **ಅಸ್ತಿನಿ** ಅಥವಾ **ಅಸ್ನಿ** ಎಂಬ ಪದದಿಂದ ಇದು ಹೆಸರಾಗಿದೆ. ಈ ಮಳೆಯು ಬಿದ್ದರೆ ಅಡಿಕೆ ಫಸಲು ಹಾಳಾಗುವುದು.

ಕೃತ್ತಿಕಾ : ಈ ಮಳೆಯು ಕಿರಿದಾಗಿ ಅಂದರೆ ಸಣ್ಣ ಹನಿಯಲ್ಲಿ ಆಷಾಢದ ಗಾಳಿಯಲ್ಲಿ ಬರುವುದರಿಂದ ಇದನ್ನು **ಕಿರ್ತಿಕೆ** ಎಂದು ಬಳಸುತ್ತಾರೆ. ಇದನ್ನು **ಬಿತ್ತನೆ ಸೂರಿನ ಮಳೆ** (ಬಿತ್ತನೆ ಶುರುವಿನ ಮಳೆ), **ಬಿತ್ನೆಮಳೆ** ಎಂದೂ ಕರೆಯುತ್ತಾರೆ.

ಭರಣಿ : **'ಬರ್ಣಿ ಮಳೆ ಉಯ್ದಿದ್ರೆ ದರ್ಣಿ ಮೇಲ್ ಬೆಳೆಯಿಲ್ಲ'** ಎಂದು ಬೆಂಗಳೂರು ಗ್ರಾಮೀಣ ಜನರ ನಂಬಿಕೆ. ಈ ಪದವು **'ಬರ್ಣಿಮಳೆ ಉಯ್ದು ಬರ ಅರ್ಸ್ತು'**. ಎಂದು ಬರ ನೀಗಿಸಲು ಬರುವ ಮಳೆ ಎಂಬರ್ಥದಲ್ಲಿ ಬಳಸುತ್ತಾರೆ.

ರೋಹಿಣಿ : ಈ ಮಳೆ ಪದದಲ್ಲಿರುವ **ಹ್** ಕಾರವನ್ನು **ಯ** ಕಾರವನ್ನಾಗಿಸಿ ಕೆಲವು ಕಡೆ **ಹ್** ಕಾರವನ್ನು ಲೋಪವಾಗಿಸಿ **(ರೋಹಿಣಿ>ರೋಯ್ಣಿ>ರೋಣಿ)** ಸಂಬೋಧಿಸುತ್ತಿದ್ದಾರೆ.

ಮೃಗಶಿರಾ : ಈ ಮಳೆಪದವು **ಮಿಗ್ಸಿರಿ** ಎಂದು ಬಳಕೆಯಲ್ಲಿದೆ. **ಮಿಗ್ಸಿರಿ** ಎಂಬುದನ್ನು ಮಿಕ್ಕಂತಹ ಭೂಭಾಗವನ್ನು ಬಿತ್ತನೆಗೆ ಹದಗೊಳಿಸಿ ಬಿತ್ತುವುದರ ಗುರುತಾಗಿ ಇಟ್ಟುಕೊಂಡ ಹೆಸರಾಗಿದೆ. ಈ ಮಳೆ ಪದವನ್ನು **ಮಿಕ್ಸಿರಿ (ಮಿಗಿಸದಿರಿ)** ಎಂದು ನಿಷೇಧಾರ್ಥದಲ್ಲಿ ಬಳಕೆ ಮಾಡುತ್ತಾರೆ.

ಆರಿದ್ರಾ : ಈ ಮಳೆಯನ್ನು **ಆದ್ರಿ** ಮತ್ತು **ಆಜ್ರಿ** ಮಳೆಯೆಂದು ಕರೆಯುತ್ತಾರೆ. ಈ ಮಳೆಯಲ್ಲಿ ಆರಂಭ(ಬಿತ್ತನೆ) ಮಾಡುವವರು ಸಂಪೂರ್ಣವಾಗಿ ವ್ಯವಸಾಯ ಬೀಜ ಬಿತ್ತನೆ ಮಾಡಿರುತ್ತಾರೆ. ಕೆಲವರು ಈ ಮಳೆಯನ್ನು **ಆರ್ದೆ ಮಳೆ**ಯೆಂದು ಕರೆಯುತ್ತಾರೆ. ಆರಿದೆ, ಅಣಿಯಾಗಿದೆ ಎಂಬರ್ಥವನ್ನು ಈ ಭಾಗದ ಜನರು ನೀಡುತ್ತಾರೆ. ಈ ಮಳೆ ಸುರಿಯುವ ದಿನದಲ್ಲಿ ಪೈರುಗಳೆಲ್ಲಾ ಹುಟ್ಟಿದ್ದು ಕುಂಟೆ ಮತ್ತು ಸಾಲಾಕುವುದಕ್ಕೆ ನೆಲವು ಹಸನಾಗಿದೆ ಎಂಬರ್ಥದಲ್ಲಿ ಬಳಸುತ್ತಿದ್ದಾರೆ. ಮಳೆಯು ಹೆಚ್ಚು ತೇವಾಂಶವಿಲ್ಲದೆ ಒಣಗದೆ **(ಆರ್ವಾಗಿ=ಹದವಾಗಿ)** ಆರ್ವಾಗಿರುತ್ತದೆ ಎಂಬ ಅರ್ಥದಲ್ಲಿ ಬಳಕೆಯಾಗುತ್ತಿದೆ.

ಪುನರ್ವಸು ಮತ್ತು **ಪುಷ್ಯ** : ಮಳೆಯನ್ನು **ಚಿಕ್ಕುಸ್ಲೆ/** ಸಿಕ್ಕುಸ್ಲೆ ಮತ್ತು **ದೊಡ್ಡುಸ್ಲೆ/ದೊಡ್ಸುಲಾನ** ಎಂದು ಕರೆಯುತ್ತಾರೆ. ಅಂದರೆ ಬೆಳೆಗಳಿಗೆ **ಚಿಕ್ಕುಸ್ಲೆ** ಮಳೆಯಲ್ಲಿ ಪೈರುಗಳು ಹದವಾಗಿರುವಂತೆ ಕುಂಟೆಯನ್ನು ಹೊಡೆಯುತ್ತಾರೆ. ದೊಡ್ಡುಸ್ಲೆಯಲ್ಲಿ ಬೇರಾಗುವಂತೆ ಸಾಲುಗಳನ್ನು, ಕಳೆ ತೆಗೆಯಲು **ದರಲೆ**(ಕಳೆತೆಗೆಯುವ ಸಾಧನ)ಯನ್ನು ಹೊಡೆಯುತ್ತಾರೆ. ಆ ಅರ್ಥದಂತೆ ಚಿಕ್ಕುಚ್ಲೆಯಲ್ಲಿ ಚಿಕ್ಕದಾದ ಪೈರುಗಳಿಗೆ, ದೊಡ್ಡುಚ್ಲೆಯಲ್ಲಿ ದೊಡ್ಡದಾದ ಪೈರುಗಳಿಗೆ ಬೆಳೆಯಲು ಹದ ಮಾಡುವ ಕ್ರಿಯಾರ್ಥವಾಗಿ ಸಂಸ್ಕೃತ ಮಳೆ ನಾಮಪದಗಳನ್ನೇ ಪದಶಃ ಬದಲಾಯಿಸಿ ಬಳಸುತ್ತಿದ್ದಾರೆ.

ಆಶ್ಲೇಷ : ದಾಸನಪುರ ಭಾಗದಲ್ಲಿ **ಅಸ್ಲೆ** ಎಂದು ಜಾಲ ಭಾಗಗಳಲ್ಲಿ ನಿಸ್ಲಿ/ **ಉಸ್ಲೆ** ಎಂದು ಪ್ರಯೋಗವಾಗಿದೆ. **"ಅಸೆ ಹಾಸ್ಕೊಂಡು ಮಗೆ ಹೊತ್ಕೊಂಡು ಉಬ್ಬುಬ್ಕೊಂಡು ಗವರಮ್ಮ ಬಂದವ್ಳೆ"** ಎಂಬ ನುಡಿಯಂತೆ ಅಸೆ ಎಂದರೆ ಹಾಸುವಿಕೆ. ಹಸಿರಿನ ವಾತಾವರಣವನ್ನು ತಿಳಿಸುವ ಪದವಾಗಿ ಪ್ರಯೋಗವಾಗುತ್ತಿದೆ. ಇಲ್ಲಿ ಅಸೆಯೆಂಬುದು ಅಸ್ಲೆಮಳೆ, ಮಗೆಯೆಂಬುದು ಮಗೆಮಳೆ, ಉಬ್ಬೆ ಮಳೆಗಳನ್ನು ಪರ್ಯಾಯವಾಗಿ ಬಳಸುತ್ತಿದ್ದಾರೆ.

ಮಖಾ : ಈ ಪದವನ್ನು **ಖ್** ಮಹಾಪ್ರಾಣ ಘೋಷವರ್ಣವನ್ನು ಅಘೋಷವರ್ಣ **ಗ್** ಕಾರವಾಗಿ ಬೆಂಗಳೂರು ಗ್ರಾಮೀಣ ಜನರು ಬಳಸುತ್ತಿದ್ದಾರೆ. ಜಾಲದಲ್ಲಿ **ಮಗೆ** ಎಂದು ಬಳಕೆಯಾಗುತ್ತಿದೆ. **ಮಗೆ** ಎಂದರೆ ತುಂಬಿದ **ಮಡಿಕೆ** ಎಂದರ್ಥ. ಮೊಗೆ ಎಂದರೆ ತುಂಬು ಎಂಬುದಾಗಿದೆ. ಕೆರೆ ಕಟ್ಟೆಗಳಲ್ಲಿ ನೀರು ತುಂಬಿದ್ದು **ಮೊಗೆಬಾನಿ**ಯಲ್ಲಿ ನೀರನ್ನು ಮೊಗೆದು ಬೆಳೆಗೆ ಹಾಯಿಸಿ ಬೆಳೆಯುವುದು ಎಂಬರ್ಥವಿದೆ.

ಪುಬ್ಬಾ : **ಪ್** ಕಾರವು ಲೋಪವಾಗಿ **ಉ** ಕಾರವಾಗಿ, ಅದರಲ್ಲಿರುವ **ಉ** ಕಾರವು ಉಳಿದುಕೊಂಡು (ಪ್>ಉ) **ಉಬ್ಬೆ** ಎಂದು ಈ ಮಳೆಯನ್ನು ಬಳಸುತ್ತಿದ್ದಾರೆ. ಈ ಮಳೆಯಲ್ಲಿ ನೆಲವು ಬೀಳು ಬಿಟ್ಟು ಅಣಬೆಗಳು ಏಳುವುದನ್ನು ಗುರುತಿಸುತ್ತಾರೆ. **"ಉಬ್ಬುಬ್ಗೊಂಡ್ ಉಬ್ಬೆಮಳೆಗ್ ಅಣ್ವೆ ಯದ್ದೋಳ್ತವೆ. ಎದ್ದೋಳ್ಬೇಕಾದ್ರೆ ಬೂಮೆಲ್ಲಾ ಬೀಟ್ಲು ಬಿಟ್ಟಿರ್ತವೆ"** ಎಂದು ಅವರ ಆಡುಮಾತಿನಲ್ಲಿ ವ್ಯಕ್ತವಾಗಿವೆ.

ಉತ್ತರಾ: ಉತ್ರೆ ಮಳೆಯನ್ನು ಹುರುಳಿ ಚೆಲ್ಲುವ ಮಳೆಯ ಸಮಯವಾಗಿ ಗುರುತಿಸಲಾಗಿದೆ. **'ಉತ್ರೆ ಅತ್ರೆ ಇಳೆ–ಬೆಳೆ ತಂಪು'** ಎಂದು ಈ ಮಳೆಯನ್ನು ಗುರುತಿಸಲಾಗಿದೆ. ಇಲ್ಲಿ **ಆ** ಕಾರವು **ಎ** ಕಾರವಾಗಿ ಬಳಕೆಯಾಗುತ್ತಿದೆ.

ಹಸ್ತ : ಅತ್ತೆ ಮಳೆಯನ್ನು **ಸ** ಕಾರವಾಗಿ ಬದಲಾಯಿಸಿ **ತ** ಕಾರವು ದ್ವಿತ್ವವಾಗಿ ಬಳಕೆಯಲ್ಲಿದೆ. ಈ ಮಳೆಯು ಬೆಳೆಯು ತೆನೆಯೊಡೆಯುವ ಸಮಯದಲ್ಲಿ ಬರುತ್ತದೆ. ಆದ್ದರಿಂದ ಅತ್ತೆ ಮಳೆಯು ಸುರಿಯದಿದ್ದರೆ ಬೆಳೆ ಫಸಲಿನಲ್ಲಿ ಏರು ಪೇರಾಗುವುದು. **'ಅತ್ತೆ ಮಳೆ ಉಯ್ದಿದ್ರ ಹೆತ್ತಾಯಿಗೂ ಇಟ್ಟಾಕ್ಕಲ್ಲ'** ಎಂದು ಭೀಕರ ಬರವಾಗುವ ಸೂಚನೆಯನ್ನು ಈ ಗಾದೆ ಕೊಡುತ್ತದೆ.

ಸ್ವಾತಿ : ಪದಾರಂಭ ವಿಜಾತೀಯ **ದ್ವಿತ್ವವು** ಲೋಪಗೊಂಡು **ಸಾತಿ (ಸ್ವಾತಿ>ಸಾತಿ>ಸಾಕಿ)** ಯಾಗಿ ಬಳಕೆಯಾಗುತ್ತಿದೆ. ಹಾಗೆಯೇ ತ ಕಾರವು ಸ ಕಾರವಾಗಿ ಬಳಕೆಯಾಗುತ್ತದೆ. ಸಾತಿ ಮಳೆಯು ಹುಳು ಹುಪ್ಪಟೆಗಳು, ಬೆಳೆಗಳನ್ನು ಚೆನ್ನಾಗಿ ಸೊಂಪಾಗಿ ಬೆಳೆಸುತ್ತದೆ ಎಂಬುದು ಆ ಜನರ ನಂಬಿಕೆಯಾಗಿದೆ. **'ಮುತ್ತಿನ್ ಸಾತಿ ಮುತ್ತಂಗ್ ಮುದ್ದಾಗ್ ಸಾಕ್ತದೆ.'** ಎಂಬುವ ನುಡಿಯನ್ನು ಆ ಜನರಲ್ಲಿ ಕೇಳಬಹುದು. **ಸಾತಿ**ಯನ್ನು **ಸಾಕಿ** ಎಂಬರ್ಥದಲ್ಲಿ ಜಾಲ ಜನರಲ್ಲಿ ಬಳಕೆಯಾಗಿದೆ.

ವಿಶಾಖ : ವಿಸಾತಿ ಎಂದು ದಾಸನಪುರ ಭಾಗದಲ್ಲಿ ಬಳಕೆಯಾದರೆ, ಜಾಲ ಭಾಗದ ಜನರು **ಇಸಾತಿ** ಎಂದು ಬಳಸುತ್ತಿದ್ದಾರೆ. ತೆಲುಗಿನ ಆಡುಮಾತಿನಲ್ಲಿ **ಇಸ್ಸಾನ** ಎಂದು ಬಳಕೆಯಲ್ಲಿದೆ. ಈ ಮಳೆಯಲ್ಲಿ ಹುಳುಗಳು, ಕ್ರಿಮಿಗಳು ನೆನೆದರೆ ಸಾಯುತ್ತವೆ. ಹಾವುಗಳು. ಕಂಬಳಿಹುಳುಗಳು ಸಾಯುತ್ತವೆ. ಜನರು ಈ ಮಳೆಯಲ್ಲಿ ಹೆಚ್ಚು ನೆನೆಯುವುದಿಲ್ಲ. ಮತ್ತು ದನ, ಕುರಿ, ಮೇಕೆಯಂತಹ ಪ್ರಾಣಿಗಳನ್ನು ಹೆಚ್ಚು ನೆನೆಯದಂತೆ ನೋಡಿಕೊಳ್ಳುತ್ತಾರೆ. ಆ ಜನರ ಹೇಳಿಕೆಯಂತೆ **'ಮುತ್ತಿನ್ ಸಾತಿ ಮುತ್ತಂತೆ ಮುದ್ದಾಗ್ ಬೆಳ್ಸಿದ್ರೆ, ವಿಸಾತಿ ಇಸ ಹಾಕ್ ಸಾಯ್ಸುದೆ'** ಎಂಬ ಅಭಿಪ್ರಾಯವನ್ನು ಆ ಭಾಗದ ಜನರು ಹೊಂದಿದ್ದಾರೆ. ಹೆಸರೆ ಸೂಚಿಸುವಂತೆ ವಿಷವನ್ನು ಬಳಸಿ **ಇಸ, ವಿಸ ಹಾಕ್ತಿ** (ವಿಷ ಹಾಕುವ ಮಳೆ) ಎಂದು ಹೇಳುತ್ತಾರೆ. ಕುಯ್ಲಿಗೆ ಮುನ್ನ ಸುರಿಯುವ ಮಳೆಯಿದು. ಈ ಮಳೆ ಸುರಿಯದಿದ್ದಾಗ ಕಂಬಳಿಹುಳ. ಹಾವು. ಮಂಡ್ರುಗಪ್ಪೆ ಗಳ ಹಾವಳಿ ಹೆಚ್ಚಾಗುತ್ತವೆ ಎಂದು ಈ ಭಾಗದ ಜನರ ನಂಬಿಕೆಯಾಗಿದೆ.

ಅನುರಾಧ – ಅನಾರಾಗಿ ಪದದಲ್ಲಿರುವ ಅಂತ್ಯವರ್ಣ **ಧ್** ಕಾರವು **ಗ್** ಕಾರವಾಗಿ ಬಳಕೆಯಾಗುತ್ತಿದೆ. ಈ ಮಳೆಯು ಕುಯ್ಲಿನ ಸಂದರ್ಭದಲ್ಲಿ ಸುರಿಯುವುದು. **'ಅಂದ್ರಾಗಿ (ಅನಾರಾಗಿ) ಬಂದ್ ತಿನ್ನೋ ರಾಗಿನ ಹೋತ್ಕೊಂಡೊಯ್ತು.'** ಎಂದು ಆ ಸಂದರ್ಭದಲ್ಲಿ ಮಳೆ ಬಂದಾಗ ಉಂಟಾಗುವ ಅನಾವೃಷ್ಟಿಯ ಬಗ್ಗೆ

ತಿಳಿಸುತ್ತಾರೆ. ಹೀಗೆ ಹೆಚ್ಚು ರಾಗಿ ಬೆಳೆಯುವ ಬೆಂಗಳೂರು ಗ್ರಾಮೀಣ ಜನರಾದರಿಂದ ಆ ಮಳೆಗೆ **ಅನಾರಾಗಿ** ಎಂತಲೆ ಗುರುತಿಸುತ್ತಿದ್ದಾರೆ.

ಹೀಗೆ ಬೆಂಗಳೂರು ಗ್ರಾಮೀಣ ಜನರಲ್ಲಿ ಮಳೆಪದಗಳ ವಿಚಾರವು ಒಳಗೊಂಡಿವೆ. ಇವುಗಳು ಬೇಸಾಯಕ್ಕೆ ಅತ್ಯಗತ್ಯವಾದ ಮಳೆಗಳಾಗಿವೆ. ಮುಂದಿನ ಮೂಲ, ಪೂಪ ಮುಂತಾದ ಐದಾರು ಮಳೆಗಳನ್ನು ದಾಸನಪುರದ ಭಾಗಗಳಲ್ಲಿ ಲೆಕ್ಕಕ್ಕಿಲ್ಲದೆ **ಅರಗಡ್ಕ, ಮರಗಡ್ಕ** ಎಂದು ಹೆಸರಿಸಿದರೆ, ಜಾಲ ಭಾಗಗಳಲ್ಲಿ **ದೇವತಾನ, ಮಂದ್ರಗಾನ** ಎಂದು ಬಳಸುತ್ತಾರೆ. ಇವು ಬೇಸಾಯಕ್ಕೆ ಅಮುಖ್ಯವಾದವುಗಳಾಗಿವೆ. ಈ ಮಳೆಗಳು ಅನಿಶ್ಚಿತವಾಗಿ ಯಾವಾಗಲು ಮನೆ ಮಠಗಳು ಹಾಳಾಗುವಂತೆ ಉಯ್ಯುತ್ತಿದ್ದವು ಅದಕ್ಕೆ ಅವುಗಳನ್ನು ಅರೆಗಟ್ಟಿ ಮತ್ತು ಮರೆಗಟ್ಟಿದ್ದೇವೆ(ಕಟ್ಟಿಹಾಕಿದೆ ಎಂಬ ನಂಬಿಕೆಯಿಂದ) ಎಂಬುದಾಗಿ ತಿಳಿಸುತ್ತಾರೆ. ಹೀಗೆ ಆ ಭಾಗದಲ್ಲಿ ವಿಭಿನ್ನವಾದ ರೀತಿಯಲ್ಲಿ ವಿಚಾರಗಳು ವ್ಯಕ್ತವಾಗಿವೆ.

ಹೀಗೆ ಬೆಂಗಳೂರು ಗ್ರಾಮೀಣ ಜನರಲ್ಲಿ ಬಳಕೆಯಾಗುತ್ತಿರುವ ಮಳೆ ಕುರಿತಾಗಿರುವ ಪದಗಳ ಹೆಸರು ಮತ್ತು ವ್ಯವಸಾಯದ ಮೇಲೆ ಬೀರುವ ಪರಿಣಾಮದ ಹಿನ್ನಲೆಯಲ್ಲಿ ಮಳೆ ಪದಗಳ ಹೆಸರುಗಳು ಬದಲಾಗುತ್ತಾ ಬಂದಿರುವುದನ್ನು ಕಾಣಬಹುದು. ಸಂಸ್ಕೃತದಲ್ಲಿರುವ ಈ ಹೆಸರುಗಳನ್ನು ಆಡುಮಾತಿನ ಉಚ್ಚಾರಕ್ಕೆ ಅನುಗುಣವಾಗಿ ಬದಲಾಯಿಸಿಕೊಂಡು ಅನೇಕ ಗಾದೆಗಳನ್ನು ಕಟ್ಟಿದ್ದಾರೆ.

೮.೫ ಬೈಗುಳ ಮತ್ತು ಗಾದೆಗಳು.

ಬೆಂಗಳೂರು ಗ್ರಾಮೀಣ ಜನರ ಆಡುಮಾತಿನಲ್ಲಿ ಬಳಸಿದ ಕೆಲವು ಬೈಗುಳಗಳು, ಗಾದೆಗಳನ್ನು ಕಲೆಹಾಕಿದ್ದೇನೆ. ಅವುಗಳು ಈ ಕೆಳಗಿನಂತಿವೆ:

- ಅವಳ್ ಗೇದ್ ಗೇದ್ ಸುಸ್ತಾಗವ್ಳೆ
- ಬಾರಲೆ ಚಂಬರ್ಗುಗ್ಟಿದ ನನ್ ಮಗ್ನೆ.(ಚಂಬರ್ಗುಟ್ಟಿದ್)
- ಮಾಡಕ್ಕೇನ್ ಕ್ಯಾಮಿಲ್ಲ/ಕೃಮೆಯಿಲ್ಲ.
- ಎನ್ ವ್ಯಾಪುಲಿ ಮಡಕೋಗಿದ್ಲೋ.
- ಎಣ್ಣೆ ಕುಡಿತಾನೆ ಗಂಡು ಮಗ ಹೇರ್ತಾರೇ.
- ಅವ್ಳ ಯಂಜ್ಲು ಕೈನಾಗೇ ಕಾಗೇ ಹೊಡ್ಯಾಲ್ಲ ಬಿಡು.

- ಅಟ್ಟಿಕ್ಕುದ್ ಮೇಲೆ ಬಟ್ಟಿಕ್ಕಾಕ್ ಬಂದವ್ಳೆ.
- ಅಲ ಅಲ ಅನ್ನೋ ಗಂಡ್ಸುಗ್ನ್ ನಂಬೋದ್ ಕುಳ್ ನಂಗಿರೋ ಕಳ್ಳನ್ ನಂಬಾರ್ದು.
- ಮಾತಿಗ್ ಮುಂಚೆ ಅಳೋ ಹೆಣ್ಣನ್ ನಂಬಾದ್ರು, ಮೀಸೆ ಮರೆಗ್ ನಗೋ ಗಂಡ್‌ನ್ ನಂಬಾರ್ದು.
- ನೀನು ಅರೆ ಹೊಡ್ಡ್ ಬೀರೇಸೋದ್ ನನ್ಗೊತ್ತು.
- ಒಡೋಗೋ ಮುಂಡೆ ಹಾಲಿಗ್ ಹೆಪ್ಪಾಕ್ತಾಳ.
- ತೋಳ ಹಳ್ಳ್‌ಕ್ ಬಿದ್ರೆ ಆಳ್ಗೊಂದೊಂದು ಕಲ್ಲೆಸ್ತಾಗಾಯ್ತು. ನಮ್ ಬದ್ಕು.
- ಬೆಟ್ರುಗೆ ನಾಲ್ಕುಕೂರ್‍ಲ್ಲ ಕಟ್ಟಿದ್ದೇವಿ ಬಂದ್ರೆ ಬಿಟ್ರ ಬರ್ಲಿ ಇಲ್ದಿದ್ರೆ ೨ ಕೂರ್‍ಲ್ಲ ಕಿತ್ತೊಗ್ಲಿ ಹೋಗೋ.
- ನಿನ್ ಮಕ್ಕ್ ನನ್ ಜೋಡಾಕ.
- ತಾನ್ ಹೆಂಗ್ಸಾಗಿ ಪಕ್ಕದ್ ಮನೆ ರೊಟ್ಟಿ ಬಾವ್‌ಸ್ಕೊಂಡ್ಲಂತೆ.
- ಅವನ್ ಗಂಟ್ಲಾಗೆ ಗಂಡಮಾಲೆ ಎದ್ ಒದ್ಕಾಳ
- ನೆರ್‍ಯೂರು ನ್ಯಾಸ್ಗಾರುಂಗಿನ್ನ ಇದ್ದೂರ್ ಅಗೆಕಾರ ಮೇಲ್.
- ಪಕ್ಕದ್ಮಲೆ ಸಂಕ್ರು ಸಾವ್ಗೆ ಒತ್ತದ್ರೆ, ಇವಳ್ ಬೆಲ್‌ದ್ನಿರ್ ಕಾಸಿದ್ಲಂತೆ.
- ಅವಳು ಉಣ್ಣಕ್ ಇಕ್ತಾಳಂತಾ ಹಲ್ಲು ಬಾಯಿ ತೊಳ್ಕಂದಿರ್ಬೇಕು.
- ಉಂ ಅವನ್ ಬಾಡ್ ತರ್‍ತಾನಂತಾ ಕಾಯ್ಕಂಡಿದ್ರೆ, ಕಾರ ಅರ್‍ದು ಕಪ್ಪ್‌ಗಾಕಂಬೇಕ್ ಅಷ್ಟೆ.
- ಉ ಅವ್ನು ಬಾಡ್ ತರ್‍ತಾನಂತ ಕಾಯ್ಕೋಂಡಿದ್ರೆ ಕಾರ ಅರ್ದು ಕಪ್ಪಾಗಾಕಂಬೇಕಿತ್ತು ಅಷ್ಟೆ.
- ಗಂಡ್ಸಗೇನ್ ಗೊತ್ ಗೌರಿ ದುಃಖ
- ಅವ್ನ ಮಖ್ ನನ್ ಜೋಡಕ್.
- ಅವ್ನ ಗಂಟ್ಲಾಗ್ ಗಂಡಾಮಲೆ ಎದ್ ಹೊಡ್ಕಾಳಾ
- (ಹೊಡ್ಕಾಳ–ಹೊಡೆದುಕೊಳ್ಳಲಿ, ಹೊಡೆದುಕೊಳ್ಳ ಎಂಬ ಕ್ರಿಯಾಪದ ಎದೆ.)
- ಅವನ್ ನೆಗದ್‌ಬಿದ್ದ್ ನಿಗರ್ ಸಾಯಾ.
- ಅವನ್ ಅಣೇಗ್ ಅಕ್ಕಿಯಿಕ್ಕ.

- ಅವ್ನಮೂರ್ದಾರಿ ಕೂಡಿತ್ತಾಗ್ ಕೂಳಿನ್ ಮಡ್ಕೆ ಚಚ್ಚ
- ಅವ್ನ ಅಣೇಗ್ ಬಾಚಿಂಗ ಕಟ್ದಂಗ್ ನೆಗರ್ ಬೀಳ.
- ಅವನ್ ಮಕ್ಕ ಮುಚ್ಚ್ ಮೂರ್ದಾರಿ ಕೂಡಿತ್ತಾಗ್ ಇಕ್ಕ.
- ಆವ್ನಿಗೆ ಆಪತ್ ಬಂದ್ ಚಾಪೆ ಸುತ್ಕೊಂಡೋಗ.
- ಅವ್ನೊ ಹುಟ್ಟಿಸ್ತೋನ್‌ಗೇ ಬಟ್ಟೆ ಬೀಳ ಅವ್ನ ಮನಿಗೆಮುಳ್ಳಾಕ
- ಅವ್ನ್ ಮೀಸೆಗ್ ನನ್ ಮೂಸಾಕಾ
- ಕಾಗೆ ಹಾರ್ಬೇಕಾದ್ರೆ ಕಾಣೋದ್ ಅಲ್ವಾ ತೊಲ್ಡು,
- ಹೊಟ್ಟೆಗ್ ಇಟ್ಟಿಲ್ಲಾದ್ರು ಜುಟ್ಟಗ್ ಮಲ್ಲಿಗೆ ಕೇಳ್ತಾಳೆ
- ಮೀಸೆ ಬಂದೋನ್‌ಗೆ ದೇಸಕಾಣಲ್ಲ ಮಲೆ ಬಂದೋಳ್ಗೆ ನೆಲ ಕಾಣಲ್ಲ
- ಚೋಪರ್ಲ್ ಎತ್ತಾಕೋಗೋ ನನ್ಮಗ್ ನನ್ ಮಾತ್ಕೇಳ್ತಿ
- ಚೋಪರ್ಲ್ ಬಿದ್ದೋಗವನೇ
- ಅವನ್ಗೆ ಬರ್‌ಸಿಡ್ಲು ಬಂದ್ ಹೋಗ
- ಅವನ್ ಹೋದ್ದಾರಿಗೇ ಸಗ್ಣೀರ್ ಹಾಕ
- ಅವನ್ ಹೋಗಿದ್ ದಾರಿಗೆ ಮುಳ್ಳಾಕ
- ಅವನ್ ಹೊದಿದ್ ದಾರಿಯಿಂದರ್ಗ್ ಬರ್ದಂಗ್ ಹೋಗ
- ಗಂಡಿರೋನ್ ಗಂಡಮಗ ಯೆತ್ತೆ ಮುಂಡೆಗ್ ಬಂತು ಮುಲ್ನಾಟ.

ಹೀಗೆ ಬೆಂಗಳೂರು ಗ್ರಾಮೀಣ ಜನರಲ್ಲಿ ಗಾದೆಗಳು ಮತ್ತು ಬೈಗುಳಗಳು ಬಳಕೆಯಾಗುತ್ತವೆ. ಇವು ಆ ಜನರ ಆಚರಣೆ ಮತ್ತು ಪದ್ದತಿಗಳ ಬಗ್ಗೆ ಮಾಹಿತಿಯನ್ನು ನೀಡುತ್ತವೆ.

೮.೬ ವಕ್ತೃಗಳ ವಿವರ

ಬೆಂಗಳೂರು ಗ್ರಾಮೀಣ ಪರಿಸರದಲ್ಲಿ ನೆಲೆಸುತ್ತಿರುವ ಈ ವ್ಯಕ್ತಿಗಳು ನನ್ನ ಈ ಅಧ್ಯಯನಕ್ಕೆ ಮಾಹಿತಿಯನ್ನು ಒದಗಿಸಿ ಸಹಾಯಕರಾಗಿದ್ದಾರೆ.

೧. ವೆಂಕಟಪ್ಪ – ಮತ್ತಹಳ್ಳಿ – ೭೦ವರ್ಷ – ವಕ್ಕಲಿಗ –ಮಧ್ಯಮವರ್ಗ – ಅವಿದ್ಯಾವಂತ.

೨. ವೆಂಕಟರಮಣಪ್ಪ – ಕಮ್ಮಸಂದ್ರ – ೬೫ ವರ್ಷ – ಕುರುಬ – ಮಧ್ಯಮವರ್ಗ–ಅವಿದ್ಯಾವಂತ

೩. ಸಾಕಮ್ಮ –ಕಮ್ಮಸಂದ್ರ – ೬೫ ವರ್ಷ – ಕುರುಬ – ಮಧ್ಯಮ–ಅವಿದ್ಯಾವಂತ.

೪. ಗಂಗಮ್ಮ – ಕನ್ನಲ್ಲಿ –೬೦ ವರ್ಷ – ತಿಗಳ – ಮಧ್ಯಮ – ಅವಿದ್ಯಾವಂತೆ.

೫. ಲಕ್ಷ್ಮಣ – ಕನ್ನಲ್ಲಿ – ೨೬ ವರ್ಷ – ತಿಗಳ – ಕೆಳಮಧ್ಯಮ– ವಿದ್ಯಾವಂತ.

೬. ಶಶಮ್ಮ – ಕಡತಿನಮಲೆ – ೩೦ ವರ್ಷ – ವಕ್ಕಲಿಗ – ಕೆಳಮಧ್ಯಮ–ವಿದ್ಯಾವಂತೆ.

೭. ಗಂಗಮ್ಮ – ಹೊನ್ನಸಂದ್ರ – ೫೦ ವರ್ಷ – ಮಾದಿಗ – ಕೆಳವರ್ಗ–ಅವಿದ್ಯಾವಂತ.

೮. ಕೆಂಪಯ್ಯ – ನರಸೀಪುರ – ೬೫ ವರ್ಷ – ತಿಗಳ – ಮಧ್ಯಮ–ಅವಿದ್ಯಾವಂತ.

೯. ಕೆಂಪಮ್ಮ – ತಿರುಮಲಾಪುರ – ೫೫ ವರ್ಷ – ತಿಗಳ – ಕೆಳಸ್ಥಿತಿ–ಅವಿದ್ಯಾವಂತ.

೧೦. ಶಂಕರ – ಅರದೇಶನಹಳ್ಳಿ – ೪೦ ವರ್ಷ – ತಿಗಳ – ಮಧ್ಯಮ –ವಿದ್ಯಾವಂತ.

೧೧. ರಾಮಣ್ಣ – ಸಿಂಗನಾಯಕನಹಳ್ಳಿ – ೫೦ ವರ್ಷ – ಲಿಂಗಾಯತ – ಮಧ್ಯಮ.

೧೨. ಮುನಿಯಪ್ಪ – ವಡೇರಹಳ್ಳಿ – ೩೦ ವರ್ಷ – ಮಾದಿಗ– ಮಧ್ಯಮ– ವಿದ್ಯಾವಂತ.

೧೩. ಮುನಿರಾಜು – ಮತ್ತಹಳ್ಳಿ – ೩೨ ವರ್ಷ – ಮಾದಿಗ– ಕೆಳಸ್ಥಿತಿ– ವಿದ್ಯಾವಂತ.

೧೪. ಪುಟ್ಟಲಕ್ಕಮ್ಮ – ಬಸವಪುರ – ೫೪ ವರ್ಷ – ತಿಗಳ – ಮಧ್ಯಮವರ್ಗ–ಅವಿದ್ಯಾವಂತ.

೧೫. ಸೀನಪ್ಪ – ಕಾಕೋಳು – ೫೩ ವರ್ಷ – ಕೊರಮ – ಮಧ್ಯಮವರ್ಗ–ಅವಿದ್ಯಾವಂತ.

೧೬. ಬೈರೇಗೌಡ – ಸೀತಕೆಂಪನಹಳ್ಳಿ –೫೬ ವರ್ಷ – ವಕ್ಕಲಿಗ– ಕೆಳವರ್ಗ–ಅವಿದ್ಯಾವಂತ.

೧೭. ಈರಮ್ಮ – ಕೊಂಡಸೆಟ್ಟಹಳ್ಳಿ – ೪೬ವರ್ಷ – ನಾಯಕ– ಕೆಳವರ್ಗ– ಅವಿದ್ಯಾವಂತೆ.

೧೮. ರೇಣುಕಪ್ಪ – ಬೆಟ್ಟಹಲಸೂರು – ೫೧ ವರ್ಷ – ಲಿಂಗಾಯತ– ಮೇಲ್ವರ್ಗ – ವಿದ್ಯಾವಂತ

೧೯. ಪಿಳ್ಳಾಂಜಿನಪ್ಪ – ವಡೇರಹಳ್ಳಿ – ೪೮ ವರ್ಷ – ಬಸವೆತ್ತಿನವರು–ಕೆಳವರ್ಗ– ಅವಿದ್ಯಾವಂತ

೨೦. ರವಿಕುಮಾರ – ಒಡ್ಡರಪಾಳ್ಯ – ೩೮ ವರ್ಷ – ವಡ್ಡರು– ಮಧ್ಯಮವರ್ಗ–ಅವಿದ್ಯಾವಂತ

೨೧. ಮಂಜಮ್ಮ – ಬೈರಾಪುರ – ೩೮ – ತಿಗಳರು – ಕೆಳವರ್ಗ–ವಿದ್ಯಾವಂತೆ.

೨೨. ಬಂಡೆಮ್ಮ – ವಡ್ಡರಪಾಳ್ಯ – ೪೮ – ವಡ್ಡರು – ಕೆಳ ಮಧ್ಯಮವರ್ಗ–ಅವಿದ್ಯಾವಂತ.

೨೩. ಕಾಶಪ್ಪ – ಶಾನುಬೋಗನಹಳ್ಳಿ – ೫೨ – ವಕ್ಕಲಿಗ – ಮಧ್ಯಮವರ್ಗ–ಅವಿದ್ಯಾವಂತ.

೨೪. ಮುನಿವೆಂಕಟಪ್ಪ – ಸೊಣ್ಣೇನಹಳ್ಳಿ – ೫೮ – ಕುಂಚಿಟಿಗ ವಕ್ಕಲಿಗ – ಮಧ್ಯಮವರ್ಗ–ಅವಿದ್ಯಾವಂತ.

೨೫. ಮುನಿರಾಜು –ಕುಲುವೆನಾರಾಯಣಪುರ– ೬೦– ವಕ್ಕಲಿಗ– ಮಧ್ಯಮವರ್ಗ– ಅವಿದ್ಯಾವಂತ.

೨೬. ರಾಮೇಗೌಡ –ಕುಲುವೆನಾರಾಯಣಪುರ– ೫೮– ವಕ್ಕಲಿಗ– ಮಧ್ಯಮವರ್ಗ– ಅವಿದ್ಯಾವಂತ.

೨೭. ಸೀನಪ್ಪ – ಕಾಕೋಳು – ೫೬ – ಮಾದಿಗ– ಕೆಳವರ್ಗ – ಅವಿದ್ಯಾವಂತ.

೨೮. ನಾಗರಾಜಚಾರಿ – ತಿರುಮಲಪುರ – ೫೮ – ಕಮ್ಮಾರ – ಕೆಳವರ್ಗ – ಅವಿದ್ಯಾವಂತ.

ಹೀಗೆ ವಕ್ತೃಗಳ ಭೇಟಿಯನ್ನು ಅವರು ಮಾಡುವ ವೃತ್ತಿಗನುಗುಣವಾಗಿ, ಸಾಮಾಜಿಕ ಅಂತರವನ್ನು ಗುರುತಿಸುತ್ತಾ ಮಾಹಿತಿಯನ್ನು ಪಡೆಯಲಾಗಿದೆ. ವಿವಿಧ ಸ್ತರಗಳಲ್ಲಿ ವತ್ತು ವಿವಿಧ ವಲಯಗಳಲ್ಲಿ ಪ್ರಶ್ನೋತ್ತರ ಮಾಲೆ ಮತ್ತು ಸಂಭಾಷಣೆಯ ಮೂಲಕ ವಿವರಗಳನ್ನು ಈ ವಕ್ತೃಗಳನ್ನು ಭೇಟಿಮಾಡುವುದರ ಮೂಲಕ ಪಡೆದಿದ್ದೇನೆ. ಇವರು ನನ್ನ ಅಧ್ಯಯನಕ್ಕೆ ಸಾಕಷ್ಟು ಮಾಹಿತಿಯನ್ನು ಒದಗಿಸಿದ್ದಾರೆ.

೮.೭. ಕ್ಷೇತ್ರಕಾರ್ಯದ ಮಾಹಿತಿ ಚಿತ್ರಗಳು

ಬೆಂಗಳೂರು ಗ್ರಾಮೀಣ ಪ್ರದೇಶದಲ್ಲಿ ಅಧ್ಯಯನಕ್ಕೆ ಅವಶ್ಯಕವಾದ ಕೆಲವು ಚಿತ್ರಗಳನ್ನು ಸೆರೆಹಿಡಿಯಲಾಗಿದೆ. ಇವುಗಳು ನನ್ನ ಅಧ್ಯಯನಕ್ಕೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಮಾಹಿತಿಯನ್ನು ಒದಗಿಸಲು ಸಹಕಾರಿಯಾಗಿವೆ. ಅಂತಹ ಕೆಲವು ಉಪಯುಕ್ತ ಮಾಹಿತಿ ಒದಗಿಸುವ ಚಿತ್ರವನ್ನು ನಮೂದು ಮಾಡಿದ್ದೇನೆ.

ಅಧ್ಯಯನಕ್ಕೆ ಅಗತ್ಯ ಮಾಹಿತಿಯನ್ನು ಕೊಟ್ಟ ಡಾ.ಕೃಷ್ಣ ಪರಮೇಶ್ವರ ಭಟ್ಟರ ಜೊತೆಯಲ್ಲಿ

ಜಾಲ ಭಾಗ ಬಸವನಪುರ ಗ್ರಾಮದ ಶ್ರೀಮತಿ ಪುಟ್ಟಲಕ್ಕಮ್ಮರೊಂದಿಗೆ ಸಂದರ್ಶನ

ದಾಸನಪುರ ಭಾಗದ ವಡ್ಡರಪಾಳ್ಯ ಗ್ರಾಮದ ಶ್ರೀಮತಿ ಬಂಡೆಮ್ಮರವರೊಂದಿಗೆ ಸಂದರ್ಶನ

ಕ್ಷೇತ್ರಕಾರ್ಯದಲ್ಲಿ ಶ್ರೀಯುತ ಗಂಗಯ್ಯನವರೊಂದಿಗೆ ಸಂದರ್ಶನ, ಮತ್ತಹಳ್ಳಿ, ದಾಸನಪುರ.

ಯಲಹಂಕದ ಸಿಂಗನಾಯಕನಹಳ್ಳಿಯ ಹಬ್ಬದಲ್ಲಿ ಕಡಲೇಪುರಿಯನ್ನು ಹಂಚುತ್ತಿರುವ ಆಚರಣೆಯ ದೃಶ್ಯ

ಯಲಹಂಕ ಭಾಗದಲ್ಲಿ ಕರಗದ ಆಚರಣೆಯಲ್ಲಿ ಕರಗವನ್ನು ಹೊರುವ ಶ್ರೀಯುತ ಧ್ರುವಕುಮಾರ್ ಅವರೊಂದಿಗೆ

ಯಲಹಂಕ ಭಾಗದ ಬೆಟ್ಟಹಲಸೂರಿನಲ್ಲಿ ನಡೆದ ಕರಗದ ಸಂದರ್ಭದಲ್ಲಿ ಶ್ರೀಯುತ ಶ್ರೀಧರ್ ಅವರೊಂದಿಗೆ

ದಾಸನಪುರದ ತಿಗಳ ಸಂಪ್ರದಾಯದ ವಿವಾಹದಲ್ಲಿ ಹಸೆ ಬರೆಯುವ ಅಣಕಾರ ಶ್ರೀಯುತ ಲಕ್ಷ್ಮಯ್ಯನವರು.

ವಡೇರಹಳ್ಳಿ ಗ್ರಾಮದಲ್ಲಿ ಶ್ರೀ ಗೋಪಾಲಯ್ಯ ಅವರೊಂದಿಗೆ ಸಂದರ್ಶನ.

ಕ್ಷೇತ್ರ ಕಾರ್ಯದಲ್ಲಿ ಹೆಸರಘಟ್ಟದ ವಡ್ಡರಹಳ್ಳಿ ಶ್ರೀಮತಿ ವೆಂಕಟಮ್ಮ, ಶ್ರೀಮತಿ ಜಯಮ್ಮ ಹಾಗೂ ಶ್ರೀಮತಿ ಬಂಡೆಮ್ಮ ಅವರೊಂದಿಗೆ ಮಾಹಿತಿಯನ್ನು ಪಡೆಯುತ್ತಿರುವ ಸಂದರ್ಭ

ಗಂಗೆಪೂಜೆ ಮಾಡುವ ಸಂದರ್ಭದಲ್ಲಿ ದೇವರ ಆಚರಣೆ, ಕೊಲವೆನಾರಾಯಣಪುರ, ರಾಜನಗುಂಟೆ

ಕಮ್ಮಾರಿಕೆಯ ವೃತ್ತಿಯಲ್ಲಿರುವ ನಾಗರಾಜಾಚಾರಿಯವರೊಂದಿಗೆ ಮಾಹಿತಿ ಸಂಗ್ರಹಣೆ

ಜಾಲಭಾಗದ ಶಾನುಭೋಗನಹಳ್ಳಿಯ ಸಂಕ್ರಾಂತಿ ಹಬ್ಬದ ಆಚರಣೆ

ಶಾನುಭೋಗನಹಳ್ಳಿಯಲ್ಲಿ ವಕ್ತೃ ಶ್ರೀಯುತ ರಾಮಣ್ಣನವರು ಮಾಹಿತಿ ನೀಡುತ್ತಿರುವ ದೃಶ್ಯ

ಯಲಹಂಕದ ಕೊಂಡಶೆಟ್ಟಹಳ್ಳಿಯಲ್ಲಿ ಘಟೆ ಸಾಗಹಾಕುವ ಆಚರಣೆಯ ಸಂದರ್ಭ

ಕಮ್ಮಾರರಾದ ಶ್ರೀ. ಮುನಿರಾಜು ಹಾಗೂ ಶ್ರೀಯುತ ಮುನಿಯಪ್ಪನವರೊಂದಿಗೆ ಸಂದರ್ಶನ, ವಡೇರಹಳ್ಳಿ ದಾಸನಪುರ ಭಾಗ

ರಾಗಿ ಕಣದ ರಾಶಿ ಪೂಜೆ, ಅರದೇಶನಹಳ್ಳಿ, ಯಲಹಂಕ ಭಾಗ

ಒನಕೆ ಕರಗ ಹೊರುತ್ತಿರುವ ದೃಶ್ಯ, ಬೆಟ್ಟಹಲಸೂರು

ಜಾಲಭಾಗದ ಸೀತಕೆಂಪನಹಳ್ಳಿ, ವರ್ಕ್ತ್ಯದಾರರಾದ ಶ್ರೀಯುತ ಬೈರೇಗೌಡ ಅವರೊಂದಿಗೆ ಸಂದರ್ಶನ

ಅಧ್ಯಾಯ ೭

ಉಪಸಂಹಾರ

ಬೆಂಗಳೂರು ಉತ್ತರ ತಾಲ್ಲೂಕಿನ ಗ್ರಾಮೀಣ ಭಾಗದ ಭಾಷೆಯನ್ನು ಗಮನಿಸಿದಾಗ ಈ ಕೆಳಕಂಡ ಅಂಶಗಳು ಕಂಡು ಬರುತ್ತವೆ:

ಮೊದಲನೆಯದಾಗಿ, ವಿಜಯನಗರ ಮತ್ತು ಕೆಂಪೇಗೌಡರ ಕಾಲದಲ್ಲಿ ಬೆಂಗಳೂರು ನಗರ ಭಾಗಕ್ಕೆ ವಿವಿಧ ವೃತ್ತಿಯನ್ನು ಮಾಡುವ ಜನರನ್ನು ಕರೆತರಲಾಗಿತ್ತು. ಅದರಲ್ಲಿ ತೆಲುಗು ಮತ್ತು ತಮಿಳು ಜನರು ಬಹುಸಂಖ್ಯೆಯಲ್ಲಿ ಇದ್ದರು. ೧೮೭೬ ರಲ್ಲಿ ಬೆಂಗಳೂರು ಹೊಸ ನಗರವಾದ ಮಾರುಕಟ್ಟೆ ಪ್ರದೇಶದಲ್ಲಿ ಸಂಭವಿಸಿದ ಈಶ್ವರಧಾತು ಕ್ಷಾಮ ಬಂದು ಪ್ಲೇಗ್ ಪಿಡುಗಿನಿಂದ ಜನರು ತತ್ತರಿಸಿ ಬೆಂಗಳೂರಿನ ಗ್ರಾಮೀಣ ಭಾಗಗಳಿಗೆ ಬಂದು ನೆಲೆಸಿದರು. ಅದೇ ಕಾಲಘಟ್ಟ ದಲ್ಲಿ ಬೆಂಗಳೂರು ಉತ್ತರ ತಾಲ್ಲೂಕಿನ ದೇವನಹಳ್ಳಿ ನೆಲಮಂಗಲ ದೊಡ್ಡಬಳ್ಳಾಪುರವು ಪ್ರಮುಖ ವ್ಯಾಪಾರ ಕೇಂದ್ರವಾಗಿ ಬೆಳೆದಿತ್ತು. ಬೆಂಗಳೂರಿನ ಯಲಹಂಕ ಭಾಗದಲ್ಲಿ ಅನೇಕ ಕೈಗಾರಿಕೆಗಳು ಸರಿಸುಮಾರಿನಲ್ಲಿ ಅಭಿವೃದ್ಧಿಯಾಗಿದ್ದವು. ಇಂತಹ ಕಾರಣಗಳಿಂದ ಬೆಂಗಳೂರಿನ ನಗರ ಭಾಗದಲ್ಲಿದ್ದ ತೆಲುಗು ಮತ್ತು ತಮಿಳು ಭಾಷಿಕರು ಬೆಂಗಳೂರು ನಗರ ಭಾಗದಿಂದ ಗ್ರಾಮೀಣ ಪ್ರದೇಶಗಳಿಗೆ ವಲಸೆ ಬರುವುದು ಹೆಚ್ಚಾಯಿತು. ತೆಲುಗಿನವರು ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರ ಪ್ರದೇಶಗಳತ್ತ ವಲಸೆ ಬಂದರೆ, ತಮಿಳರು ಆನೇಕಲ್ ಮತ್ತು ಹೊಸೂರು ಭಾಗಗಳಿಗೆ ವಲಸೆ ಹೋದರು. ಇದು ಬೆಂಗಳೂರಿನ ಉತ್ತರ ತಾಲ್ಲೂಕಿನ ಗ್ರಾಮೀಣ ಪ್ರದೇಶದ ಕನ್ನಡ ಭಾಷೆಯ ಬದಲಾವಣೆಗೆ ಕಾರಣವಾಯಿತು. ಇದನ್ನು ಸಾಮಾಜಿಕ ಭಾಷಾಹಿನ್ನಲೆಯಲ್ಲಿ ವಲಸೆಯನ್ನು ತಳ್ಳುವ ಪ್ರಕ್ರಿಯೆಯಾಗಿ ನೋಡುತ್ತೇವೆ. ಬದುಕುವ ಅವಕಾಶಗಳು ಇರುವ ಸ್ಥಳಗಳಿಗೆ ಜನರ ವಲಸೆಯು ಸಾಗಿಬರುತ್ತದೆ. ಈಗಲೂ ಇಂತಹ ವಲಸೆಯ ಪ್ರಕ್ರಿಯೆ ಮುಂದುವರಿದಿದೆ. ಅದರಲ್ಲೂ ಮುಖ್ಯವಾಗಿ ಜಾಲ ಮತ್ತು ಯಲಹಂಕದ ಪೂರ್ವ ಗ್ರಾಮೀಣ ಭಾಗಗಳಲ್ಲಿ ಈ ವಲಸೆಯ ಪ್ರಯುಕ್ತ ಕನ್ನಡದ ಕೆಲವು ಪದಗಳಲ್ಲಿ ಧ್ವನಿ ಬದಲಾವಣೆ ಕಾಣಿಸಿಕೊಂಡಿದೆ.

ಎರಡನೆಯದಾಗಿ, ಹೀಗೆ ಕಂಡು ಬರುವ ಧ್ವನಿ ಬದಲಾವಣೆಗಳೆಂದರೆ ಸರ್ವನಾಮಗಳಲ್ಲಿ ಕಂಡುಬರುವ ಬದಲಾವಣೆಗಳಾಗಿವೆ. ಉದಾಹರಣೆಗೆ– ಅವನು > ಆತ್ನು. ಯಾರಿಗೆ>ಯಾರ್ಕ. ಕೆಲವು ನಾಮಪದಗಳಲ್ಲೂ ಬದಲಾವಣೆಗಳಾಗಿವೆ. ಉದಾಹರಣೆಗೆ– ಬೆಕ್ಕು>ಊನೆ, ಮುದುಕಿ>ಮುಶ್ಲಿ, ಇಲಿ>ತ್ವಾಡ, ಜಿಪುಣ>ಬಂಕ, ಗಿಳಿ>ಶಿಲುಕ, ಹಿತ್ತಾಳೆ>ಇತ್ತಾಡೆ, ಬೆಂಕಿಪೆಟ್ಟಿಗೆ>ಕಿಸ್ಪೆಟ್ಟಿ, ನೇಗಿಲು>ಮಡ್ಕ, ಚಿಕ್ಕಪ್ಪ>ಚಿಚ್ಚ– ಹೀಗೆ ಸಾಕಷ್ಟು

ಪದಗಳು ಕಂಡು ಬರುತ್ತವೆ. ಇವುಗಳಲ್ಲಿ ಕೆಲವು ತೆಲುಗು ಭಾಷೆಯ ಪ್ರಭಾವದಿ ಂದಾದರೆ ಇನ್ನು ಕೆಲವು ತಮಿಳು ಭಾಷೆಯ ಪ್ರಭಾವದಿಂದಾಗಿವೆ. ಆದರೆ ಈ ಎರಡು ಭಾಷೆಗಳಲ್ಲಿ ಜಾಲ ಮತ್ತು ಯಲಹಂಹ ಪೂರ್ವ ಭಾಗದ ಪ್ರದೇಶಗಳಲ್ಲಿ ತೆಲುಗಿನ ಪ್ರಭಾವ ಅಧಿಕವಾಗಿದೆ. ಗಮನಾರ್ಹವಾದ ಪ್ರಮುಖ ಅಂಶವೆಂದರೆ ಹೀಗೆ ಬದಲಾಗುತ್ತಿರುವ ಪದಗಳು ತಮಿಳಿನಲ್ಲೂ ಇಲ್ಲದ ತೆಲುಗಿನಲ್ಲೂ ಇಲ್ಲದ ಪದಗಳಾಗಿವೆ. ಕನ್ನಡ ತೆಲುಗು ತಮಿಳು ಮೂರು ಭಾಷೆಗಳು ಬೆರೆತು ವಿಭಿನ್ನ ಪದಗಳು ಆಡುಮಾತಿನಲ್ಲಿ ಬಳಕೆಯಾಗುತ್ತಿವೆ. ಉದಾಹರಣೆಗೆ ಬೆಕ್ಕು ತೆಲುಗಿನಲ್ಲಿ 'ಪಿಲ್ಲಿ'ಯಾದರೆ, ತಮಿಳಿನಲ್ಲಿ 'ಪೂಣೆ' ಯಾಗಿದೆ. ಆದರೆ ಜಾಲ ಮತ್ತು ಯಲಹಂಕ ಭಾಗದಲ್ಲಿ 'ಊನೆ'ಯಾಗಿ ಪರಿವರ್ತನೆಯಾಗಿದೆ.

ಮೂರನೆಯದಾಗಿ, ಈ ಅಧ್ಯಯನದಿಂದ ಭಾಷೆಗಳ ಪರಸ್ಪರ ಸಂಪರ್ಕವು ಎಂತಹ ಬದಲಾವಣೆಗೆ ಕಾರಣವಾಗುತ್ತದೆ ಎಂಬುದನ್ನು ಗುರಿತಿಸಿಕೊಳ್ಳಲು ಸಾಧ್ಯವಾಗುತ್ತಿದೆ. ಕನ್ನಡ ತೆಲುಗು ತಮಿಳು ಭಾಷೆಗಳಿಗೆ ಹೊರತಾದ ಪದಗಳ ಸೃಷ್ಟಿಯು, ಮೊದಲು ಪದಗಳಲ್ಲಿನ ಧ್ವನಿ ವ್ಯತ್ಯಾಸದಲ್ಲಿ ಕಂಡು ಬರುತ್ತಿದೆ. ಹೊಸ ಪದಗಳನ್ನು ಸೃಷ್ಟಿ ಮಾಡಿಕೊಳ್ಳುವ ಹಂತದಲ್ಲಿ ಹೆಚ್ಚು ತೆಲುಗು ಭಾಷೆಯ ಸಂಪರ್ಕವು ಈ ಭಾಗದಲ್ಲಿದ್ದರೂ, ತಮಿಳಿನ ಉಚ್ಚಾರಣೆಯೂ ಪ್ರಭಾವ ಬೀರುತ್ತಿರುವುದನ್ನು ಕಾಣಬಹುದಾಗಿದೆ. ಉದಾಹರಣೆಗೆ ಕನ್ನಡದಲ್ಲಿ 'ಇಲಿ' ಎಂಬುದು ತೆಲುಗಿನಲ್ಲಿ 'ಎಲುಕ' ತಮಿಳಿನಲ್ಲಿ 'ಎಲಿ' ಎಂಬುದಾಗಿದೆ. ಆದರೆ ಜಾಲ ಮತ್ತು ಯಲಹಂಕ ಭಾಗದಲ್ಲಿ 'ಇಲ್ಕ' ಅಥವಾ 'ತ್ವಾಡ' ಎಂಬುದಾಗಿ ಬದಲಾಗಿರುವುದು ಕಂಡು ಬರುತ್ತದೆ. ತೆಲುಗಿನ ಎಲುಕ ತಮಿಳಿನ 'ಎಲಿ' ಎಂಬುದು ಈ ಭಾಗದ ಆಡುಮಾತಿನಲ್ಲಿ 'ಇಲ್ಕ' ಎಂಬ ಈ ಪದದಲ್ಲಿ ಕನ್ನಡದ 'ಇ' ಕಾರವನ್ನು ಆಯ್ಕೆ ಮಾಡಿಕೊಂಡು ತೆಲುಗಿನ ಮತ್ತು ಕನ್ನಡ ಎರಡನ್ನು 'ಲು' ಸೇರಿಸಿ 'ಉ' ಸ್ವರವನ್ನು ಲೋಪ ಮಾಡಿಕೊಂಡು ಎರಡು ಧ್ವನಿಯನ್ನು ಒಟ್ಟಿಗೆ ಸೇರಿಸಿಕೊಳ್ಳುತ್ತಿರುವುದು ಕಾಣಿಸುತ್ತದೆ. ಈ ರೀತೀಯ ಧ್ವನಿ ಬದಲಾವಣೆ ಹೊಸದಾಗಿ ಉಂಟಾಗುತ್ತಿದೆ.

ಸಾಮಾಜಿಕ ಭಾಷಾಸಂಪರ್ಕದಲ್ಲಿ ಹಲವು ಕಾರಣಗಳಿಂದ ಉಂಟಾಗುವ ಸಂಪರ್ಕದಲ್ಲಿ ಆರ್ಥಿಕತೆ ಪ್ರಮುಖ ಪಾತ್ರವನ್ನು ವಹಿಸುತ್ತಿದೆ. ವಲಸೆಯ ಕಾರಣವಾಗಿ ಇಲ್ಲಿಗೆ ಬಂದ ಅನ್ಯ ಭಾಷೆಯ ಜನ ಕನ್ನಡ ಭಾಷೆಯನ್ನಾಡುವ ಜನರೊಡನೆ ಸೇರುತ್ತಿದ್ದರೂ ದ್ರಾವಿಡದ ಮೂರು ಭಾಷೆಯ (ಕನ್ನಡ, ತೆಲುಗು ಮತ್ತು ತಮಿಳು) ಸಂಪರ್ಕವು ಹೊಸ ಪದಗಳನ್ನು ಸೃಷ್ಟಿಸುತ್ತಿರುವುದು ಕುತೂಹಲದಾಯಕವಾಗಿವೆ. ಇಂತಹ ಹಂತವನ್ನು 'ಪಿಜನ್' ಎಂದು ಕರೆಯಲಾಗುತ್ತದೆ. ಆಡುಮಾತಿನಲ್ಲಿ 'ಬೆರ್ಕೆಮಾತು', 'ಯಾಚುಭಾಷೆ' ಎಂದು ಕರೆದರೂ ಇಂತಹದೊಂದು ಹಂತವು ಒಂದು ಭಾಷಾವರ್ಗದ ಪ್ರಭೇದದ ಸೃಷ್ಟಿಯ ಆರಂಭಿಕ ಹಂತವಾಗಿದೆ.

ಈ ಹಂತದಿಂದ ಮುಂದುವರೆದ ಭಾಗವೇ ಕ್ರಯೋಲ್ ಹಂತ. ಆದರೆ ಪ್ರಸ್ತುತ ಜಾಲ ಮತ್ತು ಯಲಹಂಕದ ಆಡುನುಡಿಯಲ್ಲಿ ಒಂದು ಹೊಸ ಪ್ರಭೇದದ ಆರಂಭದ ಹಂತದ ಕುರುಹುಗಳನ್ನ ಗುರುತಿಸಲು ಸಾಧ್ಯವಾಗಿದೆ. ಇದು ನನ್ನ ಅಧ್ಯಯನದ ಫಲಿತವಾಗಿದೆ.

****

ಅಧ್ಯಾಯ – ೮

ಅನುಬಂಧ

೮.೧ ವಕ್ತೃಗಳ ಸಂಭಾಷಣೆ.

ಬೆಂಗಳೂರು ಗ್ರಾಮೀಣ ಭಾಗದಲ್ಲಿ ಕ್ಷೇತ್ರಾಧ್ಯಯನದ ಮೂಲಕ ಸಂಕಲಿಸಿದ ಹಲವು ಸಂಭಾಷಣೆಯನ್ನು ಇಲ್ಲಿ ನೀಡಲಾಗಿದೆ. ಅದರ ಮೂಲಕ ಭಿನ್ನ ಭಾಷಾವಲಯದಲ್ಲಿ ಜನರು ಭಿನ್ನ ವರ್ಗದವರು ಹೇಗೆ ಮಾತಿನ ಮೂಲಕ ವ್ಯವಹರಿಸುತ್ತಾರೆ ಎಂಬ ವಿಷಯವು ತಿಳಿಯಬಹುದಾಗಿದೆ. ಸಾರ್ವಜನಿಕ ವಲಯಗಳಾದ ಕೆರೆ, ಜಮೀನಿನಲ್ಲಿ ಕೆಲಸ ಮಾಡುವಾಗ, ಅಂಗಡಿಯ ಹತ್ತಿರ ಹೀಗೆ ಹಲವು ಹಲವು ವಲಯಗಳಲ್ಲಿ ಸಂಭಾಷಣೆಯ ಮಾದರಿಗಳನ್ನು ಕಲೆಹಾಕಿದ್ದೇನೆ. ಅವುಗಳು ಈ ರೀತಿಯಲ್ಲಿವೆ.

ಬೆಂಗಳೂರು ಗ್ರಾಮೀಣ ಭಾಗದ ಆಡುಮಾತಿನ ಮಾದರಿಗಳು:

ಅನೌಪಚಾರಿಕ ಸಂದರ್ಭದ ಸಂಭಾಷಣೆ – ೧

ಗ್ರಾಮ: ಕುಲುಮೆ ನಾರಾಯಣಪುರ, ವಲಯ: ದನ ಮೇಯಿಸುವಾಗ.

(ಪೃ– ಪೃಚ್ಛಕ: ಅ–ಪ್ರತಿವಕ್ತಳು: (ವಯಸ್ಸು: ೬೦ ವರ್ಷ, ಜಾತಿ–ವಕ್ಕಲಿಗ, ವಿದ್ಯೆ–ಅವಿದ್ಯಾವಂತೆ, ಉದ್ಯೋಗ–ವ್ಯವಸಾಯ) ಬ: ಪ್ರತಿವಕ್ತಳು(ವಯಸ್ಸು– ಸು, ೪೨ ವರ್ಷ, ಜಾತಿ–ವಕ್ಕಲಿಗ, ವಿದ್ಯೆ–ಅವಿದ್ಯಾವಂತೆ, ಉದ್ಯೋಗ–ಹೈನುಗಾರಿಕೆ. ಕ– ವಯಸ್ಸು: ೫೮ ವರ್ಷ, ಜಾತಿ–ವಕ್ಕಲಿಗ, ವಿದ್ಯೆ–ಅವಿದ್ಯಾವಂತೆ, ಉದ್ಯೋಗ– ಹೈನುಗಾರಿಕೆ)

ಪೃ: ಅಜ್ಜಿ ಏನ್ ಊಟ ಆಯ್ತಾ, ಎನ್ ಸಮಾಚಾರ, ಏನ್ ನೀವು ದೇವ್ರಾಡುಗಳನ್ನು ಚೆಂದಾಕ್ ಆಡ್ತಿರಂತೆ. ಕತೆ ಗಿತೆಯೆಲ್ಲಾ ಚೆನ್ನಾಗ್ ಹೇಳ್ತೀರಂತೆ.

ಕ: ಇಲ್ಲಾಮಿ, ನಮ್ ಮಕ್ ಅದೆಲ್ ಬರ್ಬೇಕ್ ಯೇಳಿ. ಏನ್ ಸೆಂದನೋ, ಯಾ ಕತ್ಗುಳ್ನ ಕೇಳ್ತಿರ್ ಸಾಮೀ ನಮ್ದೇಯಾ ದೊಡ್ ಕತೆಯಾಗ್ಬುಟ್ಟದೆ. ಆ ಯಮ್ ಹೇಳ್ತಾಳ್ ಕೇಳ್, ಆಯಮ್ನು ಮತ್ ಇಯಮ್ನು ಹೇಳ್ತಾಳ್ ಕೇಳ್ರ. ನೀಲಮ್ಮ ದೇವ್ರ್ ಕೂಟ್ಲೆ ಮೈಮೇಲ್ ಬಂದಾಂಗ್ ಸೆಂದಾಕ್ ಆಡ್ತಾಳೆ. ಈ ಯಮ್ಮುನ್ನ ಕೇಳಪ್ಪೋ, ಏ

ಒಂಚೂರ್ ನೀಲಮ್ಮುನ್ ಪಾಟ್ ಹೇಳ ಅವುರ್ಕ.

ಅ: ಯೀ ನನ್ನ ಏನ್ ತೆಲಿದು ಸಾಮೀ, ಅವ್ಳ್ ಯೇಳ್ತಾಳಂತಾ ಕೇಳ್ಬೇಡ್ ಪೋ,

ಬ: ದೋಸ್ಕಾಯ್ ಯೆಸ್ಟ್ ಕೆಜಿಕ್ಯ, ಎನ್ ಅಂಗ್ ವಂಟೋತಿದ್ದಿ ಬಾಯಿಲ್ಕ ನಾವ್ ಯಂಗವಂತಾ ನೋಡಾನಾ.

ಪೃ: ಏ ಹೇಳಮ್ಮ ಒಂದ್ ಕತೆನೋ ಆಡ್ನೋ(ವಕ್ತೃಗಳ ಭಾಷೆಯ ಅನುಕರಿಸಿ ಪ್ರಶ್ನೆ ಕೇಳುವಿಕೆ)

ಅ: ಇಲ್ ಬ್ಯಾಡ್ಸಾಮಿ ಬಿಸ್ಲು ದೆಗ್ ಸುರ್ಗುಟ್ಯಾಂಗ್ ವಡಿತದಾ.

ಕ: ಕತೆಯಂತ್ ಯೇಳಾ, ಏ ಹೈರಂಡೆ ಯೇಳೇ, ಯೇನ್ ಬೇತುರಿ ತರ ಆಡ್ತಾ್ಯ, ನೀಲಮ್ನು ಒಂದ್ ಕಾಲ್ದಾಗ್ ಈ ಯಮ್ನು ಬಂದೀರೋದ್ ಅದ್ರ ಸ್ಟೋರಿನ ಎಲ್ ಏಳ್ತಾಳ. ತಪ್ದೀರಾ ಯೇಳಾ ಅವ್ರ ಸಂದಾಕ್ ಏಳ್ದ್ರ ಪ್ರೇಸ್ ಕೋಡ್ತಾರಾ. ಯೇ ಯೇಳೇ ಮುಕ್ಶಿ, ಏನ್ ಬರ್ದ್ಬಂದಾಗ್ ಆಡ್ತಾಳ್ ಚೂಡ್ರ. ಯೇ ಕಂಡಿವ್ನೀ ನಿನ್ ದಿಮಾಕ್ನ ಯೇಳೆ.

ಅ: ಅನ್ನೇಲ್ಡಾಳ್ ಅಕ್ದೇವ್ತಗ್ಳು ಹೋಯದ್ರಿಂತ ಎಲ್ಲಾ ಏಟಿ(ತೊರೆ) ನೋಡಿ ನೀಲಮ್ನು ಹೋಗ್ಲಾರ್ದೆ ಕಾಡ್ನಾಗ್ ಮರ್ಗುಳ್ನ ಮದ್ಕ ಅವ್ಳ್ ಕುತ್ಕೊಳ್ಯಾಕೆ ನೋಡಡ್ ನೋಡ್ ಗಡ್ಯಾಗ್ ಕುಂತ್ಕಂಡ್ವಳೆ. ಕುತ್ಕಂಡೋಳ್ ಅನೆ ಗಡ್ಯಾಗ ಮಿಕ್ನೋರ್ ದಾಟ್ಕೊಂಡು ವೊದಂತೆ ನೀಲಮ್ನ ಅಕ್ದೇವ್ತ್ಗ್ಳು ಕೇಳ್ದ್ವಂತೆ. ಯಾಕ ನೀಲೀ ಕುಂತ್ಕೊಂಬಿಡ್ತೆ ಅಂತ ಕೇಳ್ದಾಗ್ ನೀಲಮ್ನು ನನ್ ಬರಲ್ಲ ಅಂದ್ಲಂತೆ. ಆ ಅಕ್ಕದೇವ್ತ್ಗ್ಳು ಯೀಕೇನ್ ಇಲ್ ಬಿಟ್ಟ್ ಅವ್ರ್ ಹೋಗ್ಬುಟ್ರಂತೆ.

ಬ: ಈ ಮುಕ್ಶಿ ಇಲ್ ಯೇಳಾಕ್ ಬಾರ. ಯಂಗೇ ಸಾಯ್ತದೆ, ದೇವುಸ್ತಾನ್ ತಾವ ಶಾನೋತ್ ಯೇಳ್ತಾಳ್. ಆದ್ರ ಇಲ್ ಆಡಾಗ್ ಯೇನ್ ಬಂತಾನ್ ಅಂದ್ರು ಬಿಡ್ಲು ಬಾಯ್ನು. ಎಕ್ ಮ್ಯಾಕ ನಿನ್ ಮಗ್ ಬಂದೋನ್ ಯೇತ್ ಬತ್ಯಾನ್ ಬಿಡ್ಲಾ ಅಂದನ್ಕೂ ಬಿಡ್ನು. ಅಂಗಾಡ್ಬುಟ್ನೋನ್ ವೊಲ್ಡು, ಆ ಅಸ್ಕ ನೀರ ಅಟ್ ಬೇಕೇನೋ ಅಟ್ ಬಾ. ಅಂಗಾ ಮುಂದ್ಕ ಕಟ್ ಬಾ.

ಅನೌಪಚಾರಿಕ ಸಂಭಾಷಣೆ – ೨

ಗ್ರಾಮ: ಶಾನುಭೋಗನಹಳ್ಳಿ, ವಲಯ: ಸಾರ್ವಜನಿಕ ಅಂಗಡಿ, ಬಸ್ ನಿಲ್ದಾಣ.

(ಪೃ– ಪೃಚ್ಛಕ: ಅ–ಪ್ರತಿವಕ್ತ: (ಗಂಡು, ವಯಸ್ಸು: ೬೨ ವರ್ಷ, ಜಾತಿ–ನಾಯಕ, ವಿದ್ಯೆ–ಅವಿದ್ಯಾವಂತ, ಉದ್ಯೋಗ–ವ್ಯವಸಾಯ) ಬ: ಪ್ರತಿವಕ್ತ (ವಯಸ್ಸು– ಸು, ೫೨ ವರ್ಷ, ಜಾತಿ–ವಕ್ಕಲಿಗ, ವಿದ್ಯೆ–